ಕೃಷ್ಣಾ ಪ್ರವಾಹ : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಅಭಿವೃದ್ಧಿ ಅಧ್ಯಯನ (ಸಮಾಜಶಾಸ್ತ್ರ) ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ಸಂಶೋಧಕರು
ಶ್ರೀ ಹಣಮಂತ. ಶಿ. ಬಿಸ್ವಾಗರ
ಸಹಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಎಸ್. ವ್ಹಿ. ಇ. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ
ತಾ. ರಾಯಬಾಗ ಜಿ. ಬೆಳಗಾವಿ

ನೋಂದಣಿ ಸಂಖ್ಯೆ : BRDSH/00110

ಮಾರ್ಗದರ್ಶಕರು
ಡಾ. ಶಾಮಲಾ. ಭೀ. ದಾಸೋಗ
ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ
ಎಮ್. ಎಮ್. ಎಸ್. ಶಿಕ್ಷಣ ಸಂಸ್ಥೆಯ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಖಾನಾಪೂರ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಕೃಷ್ಣಾ ಪ್ರವಾಹ : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಅಭಿವೃದ್ಧಿ ಅಧ್ಯಯನ (ಸಮಾಜಶಾಸ್ತ್ರ) ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ಸಂಶೋಧಕರು
ಶ್ರೀ ಹಣಮಂತ. ಶಿ. ಬಿಸ್ವಾಗರ
ಸಹಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಎಸ್. ವ್ಹಿ. ಇ. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ
ತಾ. ರಾಯಬಾಗ ಜಿ. ಬೆಳಗಾವಿ

ಮಾರ್ಗದರ್ಶಕರು
ಡಾ. ಶಾಮಲಾ. ಭೀ. ದಾಸೋಗ
ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ
ಎಮ್. ಎಮ್. ಎಸ್. ಶಿಕ್ಷಣ ಸಂಸ್ಥೆಯ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಖಾನಾಪೂರ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಪ್ರಮಾಣ ಪತ್ರ

ಕೃಷ್ಣಾ ಪ್ರವಾಹ : ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು **ಡಾ. ಶಾಮಲಾ. ಭೀ. ದಾಸೋಗ** ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದೇನೆ. ಅಭಿವೃದ್ಧಿ ಅಧ್ಯಯನ ವಿಭಾಗದ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ, ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇನೆ. ಈ ಪ್ರಬಂಧವನ್ನು ನಾನು ಈ ಮೊದಲು ಇಡೀಯಾಗಿ ಅಥವಾ ಬಿಡಿಯಾಗಿ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ಹಾರೂಗೇರಿ

ದಿನಾಂಕ: 25/6 /೨೦೧೨

ಶ್ರೀ ಹಣಮಂತ. ಶಿ. ಬಿಸ್ವಾಗರ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ/

ದೃಢೀಕರಣ ಪತ್ರ

ಶ್ರೀ ಹಣಮಂತ. ಶಿ. ಬಿಸ್ವಾಗರ ಇವರು **ಕೃಷ್ಣಾ ಪ್ರವಾಹ : ಒಂದು ಸಮಾಜಶಾಸ್ತ್ರೀಯ ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಅಭಿವೃದ್ಧಿ ಅಧ್ಯಯನದ ವಿಭಾಗದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವರು. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡೀಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ:25/06/೨೦೧೨

ಡಾ. ಶಾಮಲಾ. ಜೀ. ದಾಸೋಗ

ಮಾರ್ಗದರ್ಶಕರು
ಎಮ್. ಎಮ್. ಎಸ್. ಶಿಕ್ಷಣ ಸಂಸ್ಥೆಯ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಖಾನಾಪೂರ

ಪರಿವಿಡಿ

* ಕೋಷ್ಟಕಗಳ ಪಟ್ಟಿ

ಕೋಷ್ಟಕಗಳ ಪಟ್ಟಿ

ಅಧ್ಯಾಯ : ಒಂದು

ವಿಷಯ ಪ್ರವೇಶ

ಅಧ್ಯಾಯ : ಒಂದು

ವಿಷಯ ಪ್ರವೇಶ

೧.೧ ಪ್ರಸ್ತಾವನೆ

ನದಿಗಳು ನಾಗರಿಕತೆ ವಿಕಾಸದ ಕಮ್ಮಟಗಳು. ನದಿ ದಡಗಳಲ್ಲಿ ಅನೇಕ ನಾಗರಿಕತೆಗಳು ಹುಟ್ಟಿ ಬೆಳೆದವು. ಪ್ರಪಂಚದ ಪ್ರಾಚೀನ ನಾಗರಿಕತೆ ಮೆಸೋಪೋಟೆಮಿಯಾ, ಬೆಬಿಲೋನಿಯಾ ನಾಗರಿಕತೆಗಳು ಯುಪ್ರೇಟಿಸ್, ಟೈಗ್ರೀಸ್ ನದಿ ದಡಗಳಲ್ಲಿ, ಈಜಿಪ್ತ್ ನಾಗರಿಕತೆ ನೈಲ ನದಿಗಳ ತೀರದಲ್ಲಿ ಉಗಮಗೊಂಡಿತು. ಯಾಂಜೆಕ್ಟ್ ಮತ್ತು ಎಲೋ ಕೊಳ್ಳದಲ್ಲಿ ಚೈನಾ, ಸಿಂಧೂ ತೀರದಲ್ಲಿ ಸಿಂಧೂ ಸಂಸ್ಕೃತಿಗಳು ನಿರ್ಮಾಣಗೊಂಡವು.

ಕರ್ನಾಟಕದ ಕೃಷ್ಣಾ, ಕಾವೇರಿ, ತುಂಗಭದ್ರಾ, ಮಲಪ್ರಭಾ, ಘಟಪ್ರಭಾ ಮೊದಲಾದ ನದಿದಡಗಳಲ್ಲಿ ಮಾನವ ವಿಕಾಸದ ಮೂಲ ನೆಲೆಗಳನ್ನು ಚರಿತ್ರೆಕಾರರು ಗುರುತಿಸಿದ್ದಾರೆ. ಕೃಷ್ಣಾ, ಕಾವೇರಿ ತುಂಗಭದ್ರಾ ಕರ್ನಾಟಕದ ಪ್ರಮುಖ ನದಿಗಳು. ಕೃಷ್ಣೆ ದಕ್ಷಿಣದ ದೇವಗಂಗೆ. ದಕ್ಷಿಣ ಭಾರತದ ಅತ್ಯಂತ ಪ್ರಮುಖ ನದಿ. ಆದ್ದರಿಂದ ಅದನ್ನು ಜನ 'ಹಿರಿಹೊಳೆ' ಎಂದು ಕರೆಯುವರು. ಕೃಷ್ಣೆಯ ದಡದಲ್ಲಿ ಅನೇಕ ಪ್ರಾಚ್ಯ ನೆಲೆಗಳ ಅವಶೇಷಗಳು ಈಗಲೂ ಕಾಣಸಿಗುತ್ತವೆ. ಆ ಕಾಲದಲ್ಲಿ ಈ ನೆಲೆಗಳೇ ಒಂದು ಸಂಸ್ಕೃತಿಯನ್ನು ನಿರ್ಮಿಸಿದವು. ಅದು ಆ ನದಿಯ ಹೆಸರಿನಿಂದಲೇ ಪ್ರಚಲಿತ. ಸಿಂಧೂ ನದಿಯ ದಡದಲ್ಲಿ ಸಿಂಧೂ ಸಂಸ್ಕೃತಿ ಬೆಳೆದಂತೆ ಕೃಷ್ಣೆಯ ದಡದಲ್ಲಿ ಕೃಷ್ಣಾ ಸಂಸ್ಕೃತಿ ಬೆಳೆಯಿತು. ನದಿಗಳು ಮತ್ತು ಸಂಸ್ಕೃತಿ ಸದಾ ಚಲನಶೀಲ. ಅವುಗಳಿಗೆ ಜಡತ್ವವಿಲ್ಲ. ನದಿಗಳಲ್ಲಿ ನೀರು ಹರಿಯುವಂತೆ ಸಮುದಾಯದಲ್ಲಿ ಸಂಸ್ಕೃತಿ ಪ್ರವಹಿಸುತ್ತದೆ. ಆದರೆ ನಾಗರಿಕತೆಯನ್ನು ರೂಪಿಸಿ, ಸಂಸ್ಕೃತಿಯನ್ನು ಬೆಳೆಸಿದ ಈ ನದಿಗಳೇ ಅವುಗಳನ್ನು ನಿರ್ನಾಮಗೊಳಿಸುವುದು ವಿಪರ್ಯಾಸ. ಸೃಷ್ಟಿ ಮತ್ತು ಪ್ರಳಯ ನದಿಗಳಿಗೆ ಚೆಲ್ಲಾಟಗಳು. ನೀರು ಇಲ್ಲದಿದ್ದರೆ ಬದುಕಲು ಸಾಧ್ಯವೇ ಇಲ್ಲ. ಆದರೆ ನೆಲವೇ ನೀರಾದಾಗ ಕುಡಿಯಲು ಹನಿ ನೀರು

ಸಿಗುವುದಿಲ್ಲ. ನೀರಿನ ನಡುವೆ ನಿಂತಿದ್ದರೂ ಕುಡಿಯಲು ನೀರಿಲ್ಲದ ಪರಿಸ್ಥಿತಿ. ತಾನೇ ಸೃಷ್ಟಿಸಿದ ಸಂಪತ್ತನ್ನೆಲ್ಲ ನದಿ ಕೊಚ್ಚಿ ಹಾಕುವ ಪ್ರಳಯವೇ ಪ್ರವಾಹ.

ನದಿಗಳಿಗೆ ಪ್ರವಾಹಗಳು ಹೊಸತಲ್ಲ. ಅತಿವೃಷ್ಟಿಯಿಂದ ಪ್ರವಾಹಗಳು ಉಂಟಾಗುವುದು ಸ್ವಾಭಾವಿಕ. ಇತ್ತೀಚಿಗೆ ತಂತ್ರಜ್ಞಾನ ಬೆಳೆದಂತೆ, ಅಭಿವೃದ್ಧಿಯ ವೇಗ ಹೆಚ್ಚಿದಂತೆ ನದಿ ನೀರಿನ ಬಳಕೆ ಹಾಗೂ ನದಿ ದಡದ ಜನರ ಸುರಕ್ಷತೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗುತ್ತದೆ. ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ, ಸಮುದ್ರ ಸೇರುವ ನೀರನ್ನು ತಡೆದು ವ್ಯವಸಾಯಕ್ಕೆ ಉಪಯೋಗಿಸುವ ಅನೇಕ ಬೃಹತ್, ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳು ಅನುಷ್ಠಾನಗೊಂಡವು. ನದಿದಡಗಳು ಹಸಿರು ಸಂಪತ್ತಿನಿಂದ ಸಮೃದ್ಧಗೊಳಿಸಿರುವಂತೆ ಜನಸಂಖ್ಯೆ ಅಗಾಧ ಪ್ರಮಾಣದಲ್ಲಿ ಬೆಳೆಯತೊಡಗಿತು. ಸುರಕ್ಷತೆಯನ್ನು ಮರೆತು ಜನ ನೆಲೆ ಹುಡುಕಾಡತೊಡಗಿದರು. ಇಂಥ ಪರಿಸ್ಥಿತಿಯಲ್ಲಿ ಪ್ರವಾಹಗಳು ಹೆಚ್ಚು ಹಾನಿಯುಂಟುಮಾಡುತ್ತಿರುವುದು ಸಹಜ. ಜೀವ ಹಾಗೂ ವಿತ್ತ ಹಾನಿಗಳನ್ನುಂಟು ಮಾಡುವ ಪ್ರವಾಹಗಳ ಕುರಿತು ಸರಕಾರ ಚಿಂತಿತಗೊಂಡಿದೆ. ಭಾರತ ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದಿದೆ.

೧.೨ ಅಧ್ಯಯನ ವಿಷಯದ ಸಮಸ್ಯೀಕರಣ :

ಖವಟಕೊಪ್ಪ ಗ್ರಾಮದ ಸ್ಥಳಾಂತರದ ಹಾಗೂ ಅಲ್ಲಿಯ ಸಂತ್ರಸ್ತರ ಪುನರ್ವಸತಿ ಸಮಸ್ಯೆ ಆಲಮಟ್ಟಿ ಅಣೆಕಟ್ಟು ನಿರ್ಮಾಣ ಯೋಜನೆಯ ಜೊತೆಯಲ್ಲಿ ಹುಟ್ಟಿಕೊಂಡಿದ್ದು ಆಲಮಟ್ಟಿ ಯೋಜನೆಯಲ್ಲಿ ಮುಳುಗಡೆಯಾಗುವ ಗ್ರಾಮಗಳ ಸಮೀಕ್ಷೆಯನ್ನು ಸರಕಾರ ಕೈಗೊಂಡಿತು. ಅದರ ಹಿನ್ನೀರಿನಲ್ಲಿ ಬಾಗಲಕೋಟ, ಬೀಳಗಿ, ಜಮಖಂಡಿ ಹಾಗೂ ಅಥಣಿ ತಾಲೂಕುಗಳ ಕೃಷ್ಣಾ ತೀರದ ಮುಳುಗಡೆಯಾಗುವ ಗ್ರಾಮಗಳ ವೈಜ್ಞಾನಿಕ ವರದಿಯನ್ನು ತಯಾರಿಸಲಾಯಿತು. ಅಣೆಕಟ್ಟು ನಿರ್ಮಾಣ ಯೋಜನೆಯ ಮೊದಲ ಹಂತದಲ್ಲಿ ಅಣೆಕಟ್ಟೆಯ ಎತ್ತರ ೫೨೪ ಮೀಟರ್ ಎಂದು ನಿರ್ಧರಿಸಲಾಗಿತ್ತು. ಆದರೆ ಅಂತರ್‌ರಾಜ್ಯ ಜಲವಿವಾದದ ಹಿನ್ನೆಲೆಯಲ್ಲಿ ಅಣೆಕಟ್ಟಿನಲ್ಲಿ ೫೧೯ ಮೀಟರ್ ಮಾತ್ರ ನೀರು ಹಿಡಿಯಲು ಅನುಮತಿ ಸಿಕ್ಕೀತು. ಈ ಸಮಸ್ಯೆ ಮತ್ತೊಂದು ಮಹತ್ ಸಮಸ್ಯೆಯೊಂದನ್ನು ಸೃಷ್ಟಿಸಿತು. ಸರಕಾರ ಇದರಿಂದ ಮುಳಗಡೆ ಗ್ರಾಮಗಳ ಸ್ಥಳಾಂತರ ಮತ್ತು ಸಂತ್ರಸ್ತರ ಪುನರ್ವಸತಿ ಯೋಜನೆಗಳನ್ನು ಅಲಕ್ಷಿಸಿತು. ಪೂರ್ಣ ಪ್ರಮಾಣದಲ್ಲಿ ಅಣೆಕಟ್ಟೆನಲ್ಲಿ ನೀರು ಸಂಗ್ರಹಿತಗೊಂಡಾಗ ಅಥಣಿ ತಾಲೂಕಿನ ಹಲವು ಗ್ರಾಮಗಳು ಮುಳುಗಡೆಯಾಗುವುದು ಖಚಿತವಾಗಿತ್ತು. ಆದರೆ ಅಣೆಕಟ್ಟೆಯ ಎತ್ತರ ೫೧೯ ಮೀಟರ್‌ಗೆ ಸಿಮೀತಗೊಂಡಾಗ ಸರಕಾರ ಈ ಗ್ರಾಮಗಳ ಸ್ಥಳಾಂತರವನ್ನು ನಿರ್ಲಕ್ಷಿಸಿತು.

ಹಿಪ್ಪರಗಿ ಅಣೆಕಟ್ಟು ಯೋಜನೆಯ ಹಿನ್ನೀರಿನಿಂದ ಅಥಣಿ ತಾಲೂಕಿನ ಬಹುಪಾಲು ಹಳ್ಳಿಗಳು ಮುಳುಗಡೆಯಾಗುವುದು ಖಚಿತವಾಗಿತ್ತು. ಆದರೆ ಸರಕಾರ ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರ ಕಾರ್ಯವನ್ನು ನಿರ್ವಹಿಸಲಿಲ್ಲ. ಹಲವು ಕಾರಣಗಳಿಂದ ಸ್ಥಳಾಂತರ ಯೋಜನೆ ನೆನೆಗುದಿಗೆ ಬಿದ್ದಿತು. ಇದರಲ್ಲಿ ಸಂತ್ರಸ್ತರ ಪಾತ್ರವು ಇಲ್ಲದಿಲ್ಲ. ಹಿಪ್ಪರಗಿ ಅಣೆಕಟ್ಟು ಯೋಜನೆ ಪೂರ್ಣಗೊಂಡ ನಂತರವೂ ಸಂತ್ರಸ್ತರಿಗೆ ಪುನರ್ವಸತಿಯ ಅಗತ್ಯ ಕಾಡಲಿಲ್ಲ. ತಾವು ಸುರಕ್ಷಿತವಾಗಿ ಇರಬಹುದೆಂಬ ಲೆಕ್ಕಾಚಾರ ಅವರದ್ದಾಗಿತ್ತು. ಆದರೆ ೨೦೦೫ ಮತ್ತು ೨೦೦೬ರಲ್ಲಿಯ ಕೃಷ್ಣೆಯ ಪ್ರವಾಹಗಳು ಸಂತ್ರಸ್ತರಲ್ಲಿ ಬಹುದೊಡ್ಡ ಆತಂಕ ಹುಟ್ಟುಹಾಕಿತು.

ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಹತ್ತಿರ ಅಣೆಕಟ್ಟು ನಿರ್ಮಾಣವಾದ ನಂತರ ಖವಟಕೊಪ್ಪ ಸಮಸ್ಯೆಯ ಸುಳಿಗೆ ಸಿಕ್ಕು ಹಾಕಿಕೊಂಡಿತು. ಈ ಅಣೆಕಟ್ಟಿನ ಹಿನ್ನೀರು ವ್ಯಾಪ್ತಿ ೧೦೦ ಕಿ.ಮೀ.ವರೆಗೆ ಪರಿಣಾಮ ಬೀರುತ್ತದೆ. ಅಥಣಿ ತಾಲೂಕಿನ ಏಳು ಗ್ರಾಮಗಳು ಸಂಪೂರ್ಣವಾಗಿ ಜಲಾವೃತವಾಗುತ್ತವೆ. ಅವುಗಳಲ್ಲಿ ಖವಟಕೊಪ್ಪ ಗ್ರಾಮವು ಒಂದು. ಈ ಗ್ರಾಮವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

೧.೩ ಅಧ್ಯಯನದ ಉದ್ದೇಶಗಳು :

ಕೃಷ್ಣೆಯ ದಡದಲ್ಲಿ ನಿರಾತಂಕವಾಗಿ ಬದುಕು ಕಟ್ಟಿಕೊಂಡು ನೆಮ್ಮದಿಯ ಬದುಕು ಸಾಗಿಸುತ್ತಿದ್ದ 'ಹೊಳೆಸಾಲ'ದ ಜನಸಾಮಾನ್ಯರಿಗೆ ಕೃಷ್ಣೆಯ ಭಯಂಕರ ರೂಪ ಕಂಡಿದ್ದು ೨೦೦೫ರಲ್ಲಿ. ನದಿ ದಡದ ಪ್ರತಿಯೊಂದು ಗ್ರಾಮಗಳಲ್ಲಿಯೂ ಆ ನದಿಯ ಕುರಿತು ಅನೇಕ ದಂತ ಕತೆ, ಐತಿಹ್ಯ, ನಂಬಿಕೆ, ಆಚರಣೆಗಳು ಪ್ರಚಲಿತದಲ್ಲಿರುತ್ತವೆ. ದೋಣಿ ದುರಂತಗಳು, ಶತಮಾನದಲ್ಲಿ ಒಂದೆರಡು ಬಾರಿ ಬಂದ ಹೋದ ಭಯಂಕರ ಪ್ರವಾಹಗಳು ಅವರ ನೆನಪಿನಲ್ಲಿ ಸದಾ ಜೀವಂತವಾಗಿರುತ್ತವೆ. ಅಥಣಿ ತಾಲೂಕಿನ ನದಿ ತೀರದ ಹಳ್ಳಿಗಳನ್ನು ನೋಡಿದಾಗ ಎಲ್ಲ ಗ್ರಾಮಗಳಲ್ಲಿಯೂ ೧೯೧೬ರಲ್ಲಿ ಬಂದಿದ್ದ ಭೀಕರ ಪ್ರವಾಹದ ಮೇರೆಗಳನ್ನು ಗುರುತಿಸುವ ಕಲ್ಲುಗಳಿವೆ. ಇಂಥ ಗುರುತುಗಳು ವಿವಿಧ ನದಿ ದಡದ ಊರುಗಳಲ್ಲಿ ಇದ್ದೇ ಇರುತ್ತವೆ. ಅವು ಪ್ರವಾಹದ ಅಂದಿನ ದಾಖಲೆಗಳು. ಒಂದರ್ಥದಲ್ಲಿ ಎಚ್ಚರಿಕೆಯ ಅಲಿಖಿತ ಶಾಸನಗಳು. ೧೯೧೬ರ ಪ್ರವಾಹದ ಬಗ್ಗೆ ಅನೇಕ ಕಥೆಗಳು ಈಗಲೂ ಜನಮನದಲ್ಲಿ ಜೀವಂತವಾಗಿವೆ. ಆಗಿನ ಕಾಲದಲ್ಲಿ ಕೃಷ್ಣೆ ಕಂಡ ಅತ್ಯಂತ ಭೀಕರ ಪ್ರವಾಹವದು. ಅದೊಂದು ದಾಖಲೆ. ಆದರೆ ಈ ದಾಖಲೆಯನ್ನು ಹುಸಿಗೊಳಿಸಿ ಕೃಷ್ಣಾ ಪ್ರವಾಹದ ಹೊಸ ದಾಖಲೆ ನಿರ್ಮಾಣವಾದದ್ದು ೨೦೦೫ರಲ್ಲಿ. ಅದು ಶತಮಾನ ಕಂಡರಿಯದ ಪ್ರವಾಹವೆಂದು ನಾವು ಭಾವಿಸಿದ್ದರೂ ಅಸಲು ಕೃಷ್ಣೆ ಕಂಡರಿಯದ ಪ್ರವಾಹವೇ. ಏಕೆಂದರೆ ನದಿ ತೀರದ ಬದುಕೇ ಉದ್ವಸ್ಥವಾಯಿತು. ಅನೇಕ ಗ್ರಾಮಗಳು ಸಂಪೂರ್ಣ

ಜಲಾವೃತಗೊಂಡು ನಡುಗಡ್ಡೆಗಳಾದವು. ಬೆಳೆದು ನಿಂತ ಫಸಲು ಕೊಳೆತು ಹೋಯಿತು. ಜಾನುವಾರುಗಳು ನೀರಿನಲ್ಲಿ ಕೊಚ್ಚಿ ಹೋದವು. ಮನೆಗಳು ಮುಳುಗಿದವು. ಗ್ರಾಮಗಳಲ್ಲಿ ಸಿಕ್ಕಿಹಾಕಿಕೊಂಡ ಜನರನ್ನು ಬದುಕಿಸಲು ಸೇನೆ ಬಂತು. ಯಾಂತ್ರಿಕ ದೋಣಿಗಳು ಬಂದವು. ಸಂತ್ರಸ್ತರ ಗೋಳು ವರ್ಣಿಸಲು ಅಸಾಧ್ಯವಾಗಿತ್ತು. ಸಂತ್ರಸ್ತರಿಗಾಗಿ ಸರಕಾರ ನಾಗರಿಕರ ನೆರವುಗಳಿಂದ ಗಂಜಿ ಕೇಂದ್ರಗಳನ್ನು ತೆರೆಯಿತು. ಲಕ್ಷಾಧೀಶರಾಗಿದ್ದ ರೈತರು, ತಮ್ಮೂರಿನ ಬಡಕೂಲಿಕಾರ್ಮಿಕರೊಂದಿಗೆ ಸರಕಾರಿ ಗಂಜಿ ಕೇಂದ್ರದಲ್ಲಿ ಆಶ್ರಯ ಪಡೆದು, ಗಂಜಿಗಾಗಿ ತಟ್ಟೆಯನ್ನು ಕೈಯಲ್ಲಿ ಹಿಡಿದು ಸಾಲಿನಲ್ಲಿ ನಿಂತಿದ್ದು ನೋಡಿದರೆ ಪ್ರಳಯದ ಭೀಕರತೆ ತಿಳಿಯುತ್ತಿತ್ತು. ವಿವಿಧ ಸಂಘಟನೆಗಳು, ದಾನಿಗಳು ಅನ್ನ, ವಸ್ತ್ರ, ಔಷಧ, ಹಾಸಿಗೆ–ಹೊದಿಕೆ ಹಂಚುತ್ತಿದ್ದರು. ವಿಚಿತ್ರವೆಂದರೆ ದನಗಳು ಊರಲ್ಲಿ ಜನರು ಗಂಜಿಕೇಂದ್ರಗಳಲ್ಲಿ. ಆ ಸಂದರ್ಭದಲ್ಲಿ ಪತ್ರಿಕಾ ವರದಿಗಳನ್ನು ಗಮನಿಸಿದರೆ ಆ ಪ್ರವಾಹ ಪರಿಸ್ಥಿತಿ ನೈಜ ಕಲ್ಪನೆ ಮೂಡಬಹುದು.

'ಹೊಳೆಸಾಲ' ಜನರಿಗೆ ಗೊತ್ತಿದ್ದುದು ಪ್ರವಾಹವೆಂದರೆ ಮೂರು ದಿನಗಳ ತಾಪತ್ರಯ. ಆದರೆ ೨೦೦೫ರಲ್ಲಿ ಅವರ ಕಲ್ಪನೆ ಹುಸಿಯಾಯಿತು. ಮೊದಲ ಎಂಟು ದಿನ ನೀರಿನ ಹರಿವು ಹೆಚ್ಚುತ್ತಲೇ ಹೋಯಿತು. ಆಗ ಜನ ಭಯಭೀತರಾದರು. ಕೆಲವರು ಮಾಳಿಗೆ ಏರಿದರು, ಮತ್ತೆ ಕೆಲವರು ಮೇವಿನ ಬಣವೆ ಹತ್ತಿದರು. ಮರ, ಗಿಡ ಮೊದಲಾದ ಎತ್ತರದ ಸ್ಥಳಗಳನ್ನು ಏರಿ ಕುಳಿತರು. ಹ್ಯಾಲಿಕ್ಯಾಪ್ಟರ್ ಕಾರ್ಯಾಚರಣೆ ನಡೆಸಿ ಜನರನ್ನು ಬದುಕಿಸಲಾಯಿತು. ನಂತರದ ಐದು ದಿನ ನೀರಿನ ಹರಿವು ಸ್ಥಿರವಾಗಿ ಉಳಿಯಿತು. ೨೦೦೫ ಅಗಸ್ಟ ೧ರ ರಾತ್ರಿ ನೆರೆಯ ಪ್ರವೇಶವಾಯಿತು. ದಿ. ೮ರಂದು ಪ್ರವಾಹದ ಹೊಸ ದಾಖಲೆ ನಿರ್ಮಾಣವಾಯಿತು. ದಿ. ೧೨ರಿಂದ ನೀರು ಕಡಿಮೆಯಾಗತೊಡಗಿತು. ಅಗಸ್ಟ್ ೨೫ರಂದು ಪ್ರವಾಹ ಹತೋಟಿಗೆ ಬಂತು. ಮುಂದೆ ಪರಿಸ್ಥಿತಿ ಸಹಜ ಸ್ಥಿತಿಗೆ ಬಂದರೂ ಜನಸಾಮಾನ್ಯರು ತಮ್ಮ ಊರಿಗೆ ಮರಳಲು ಹಿಂದೇಟು ಹಾಕತೊಡಗಿದರು. ನಿವಾರಿಸಲಾಗದ ಭಯ ಅವರೆದೆಯಲ್ಲಿ ಮನೆಮಾಡಿತ್ತು. ೨೧ನೇ ಶತಮಾನದ ಜನರಿಗೆ ಪ್ರವಾಹ ಎಂದರೆ ಹೇಗಿರುತ್ತದೆಯೆಂಬುದು ಆಗ ತಿಳಿಯಿತು. ನೀರಿನೊಂದಿಗಿನ ಒಡನಾಟ ಅದೆಷ್ಟು ಅಪಾಯವೆಂದು ಮನವರಿಕೆಯಾಯಿತು.

ನದಿತೀರದ ಜನ ಕೊನೆಗೆ ತಮ್ಮ ನೆಲೆಗಳಿಗೆ ಮರಳಿದರು. ಮುಂದೆಂದೂ ಹೀಗಾಗಲಿಕ್ಕಿಲ್ಲವೆಂದು ಅಂದುಕೊಂಡಿದ್ದರು. ಆದರೆ ೨೦೦೬ರಲ್ಲಿ ಮತ್ತೆ ಅಂಥದೇ ಅಪಾಯದ ನೆರೆ ಕೃಷ್ಣೆಗೆ ಕಳೆದ ವರ್ಷದ ಅನುಭವ ನೆನಪಾಯಿತು. ಜನ ಜಾಗರೂಕರಾಗಿದ್ದರು. ಅಂಥದೇ, ಅಷ್ಟೇ ಪ್ರಮಾಣದ ಪ್ರವಾಹ ಬಂದರೂ ೨೦೦೫ರಲ್ಲಿ ಸಂಭವಿಸಿದಷ್ಟು ಹಾನಿ ಸಂಭವಿಸಲಿಲ್ಲ. ಆದರೆ ಉಳಿದೆಲ್ಲ ವಿಷಯಗಳಲ್ಲಿ ೨೦೦೬ರ ಪ್ರವಾಹ ೨೦೦೫ರ ಪ್ರವಾಹಕ್ಕಿಂತ ಭಿನ್ನವಾಗಿರಲಿಲ್ಲ.

ಮತ್ತೊಮ್ಮೆ ಜನರ ಕನಸುಗಳು ನೀರಿನಲ್ಲಿ ಕೊಚ್ಚಿಹೋಗಿದ್ದವು. ಅದೇ ಗಂಜಿಕೇಂದ್ರ, ಅದೇ ತಟ್ಟೆ, ಸರಕಾರದ ಸಹಾಯಧನಕ್ಕೆ ಕಾಯುವುದು ಇತ್ಯಾದಿ ಇತ್ಯಾದಿ. ಹದಿನೈದು ದಿನ ಇದೇ ಪರಿಸ್ಥಿತಿ ಮುಂದುವರೆಯಿತು. ಆಗ ಜನರಲ್ಲಿ ಬದುಕಿನ ಒಳ ಭೀತಿ ಹೆಡೆಯೆತ್ತಿತ್ತು. ಸರಕಾರದ ಕ್ರಮಗಳ ಕುರಿತು ಆಕ್ರೋಶ ವ್ಯಕ್ತವಾಯಿತು. ಸಂತ್ರಸ್ತರಿಗೆ ನೀಡುತ್ತಿದ್ದ ಪರಿಹಾರದಲ್ಲಿಯ ಲೋಪ-ದೋಷಗಳು ಬಯಲಾಗತೊಡಗಿದವು. ನದಿ ನೀರು ನಿರ್ವಹಣೆಯಲ್ಲಿ ಅಜಾಗರೂಕತೆ, ಕರ್ನಾಟಕ-ಮಹಾರಾಷ್ಟ್ರ ಸರಕಾರಗಳ ನಡುವಿನ ಸಂಬಂಧದಲ್ಲಿ ಬಿರುಕು ಮೂಡಿಸಿತು. ಮಹಾರಾಷ್ಟ್ರ ತನ್ನ ಅಣೆಕಟ್ಟುಗಳಿಂದ ಹರಿಬಿಡುವ ನೀರಿನ ಪ್ರಮಾಣವನ್ನು ಖಚಿತವಾಗಿ ತನಗೆ ತಿಳಿಸುತ್ತಿಲ್ಲವೆಂದು ಕರ್ನಾಟಕ ಆಪಾದಿಸಿತು. ಕರ್ನಾಟಕದ ಅಣೆಕಟ್ಟುಗಳ ಹಿನ್ನೀರಿನಿಂದಾಗಿ ಮಹಾರಾಷ್ಟ್ರದ ಕೃಷ್ಣಾ ತೀರದ ಗ್ರಾಮಗಳು ತೊಂದರೆಗೆ ಸಿಲುಕಿದವೆಂದು ಮಹಾರಾಷ್ಟ್ರವು ಕರ್ನಾಟಕದ ಮೇಲೆ ದೂರಿತು. ಈ ನಡುವೆ ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ, ಚಿಕ್ಕೋಡಿ ಹಾಗೂ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕುಗಳ ನದಿತೀರದ ರೈತರು ಹಿಪ್ಪರಗಿ ಅಣೆಕಟ್ಟು ಯೋಜನೆಯಲ್ಲಿ ಮುಳುಗಡೆಯಾಗುವ ಕ್ಷೇತ್ರದ ಸರಿಯಾಗಿ ಸಮೀಕ್ಷೆಯಾಗಿಲ್ಲವೆಂದು ಕೂಗತೊಡಗಿದರು. ಹೀಗೆ ಪ್ರವಾಹ ಹತ್ತು ಹಲವು ಸಮಸ್ಯೆಗಳನ್ನು ಸೃಷ್ಟಿಸಿತು. ಜನಸಾಮಾನ್ಯರಿಂದ ಮೊದಲುಗೊಂಡು ಸರಕಾರಿ ತಜ್ಞರವರೆಗೆ ಪ್ರವಾಹದ ನೈಜ ಕಾರಣಗಳನ್ನು ಕಂಡು ಹಿಡಿಯಲು ಯತ್ನಿಸತೊಡಗಿದರು. ಈ ಕಾರಣಗಳನ್ನು ಶೋಧಿಸುವುದಕ್ಕಿಂತ ಮೊದಲು ಕೃಷ್ಣಾ ತೀರದಲ್ಲಿ ಹಾಳಾದ ಬದುಕನ್ನು ಕಟ್ಟುವ ಬಹುದೊಡ್ಡ ಜವಾಬ್ದಾರಿ ಸರಕಾರದ ಮೇಲಿತ್ತು. ಮನೆಗಳೆಲ್ಲ ಕುಸಿದಿದ್ದವು, ರಸ್ತೆಗಳೆಲ್ಲ ಸಂಪೂರ್ಣ ಹಾಳಾಗಿದ್ದವು. ಫಸಲು ಕೃಷ್ಣಾರ್ಪಣವಾಗಿತ್ತು. ಬಹುಪಾಲು ಜನರ ಬದುಕೆಲ್ಲ ನೀರು ಪಾಲಾಗಿತ್ತು. ಕೆಲವರ ಮನೆಯಲ್ಲಿ ಗಂಜಿಗೂ ಗತಿ ಇರಲಿಲ್ಲ. ನದಿ ತೀರದ ಇಕ್ಕೆಲ ಕೊಳೆತ ಮೀನಿನಂತೆ ಹೊಲಸು ನಾರುತ್ತಿತ್ತು. ಭಯಂಕರ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು ಮೊದಲು ಕ್ರಮ ಕೈಗೊಳ್ಳಬೇಕಿತ್ತು. ಈ ಎಲ್ಲ ಸವಾಲುಗಳು ಸರಕಾರದ ಹಾಗೂ ಆ ಜನರ ಮುಂದಿದ್ದಾಗ ಆ ಕುರಿತು ಸಮಾಜಶಾಸ್ತ್ರಜ್ಞರು, ಬುದ್ಧಿಜೀವಿಗಳು ಗಮನ ಹರಿಸುವುದು ಅವಶ್ಯವಾಗಿತ್ತು.

ಸಂತ್ರಸ್ತಕ್ಕೆ ಒಳಗಾದ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದವನಾದ ನಾನು ಇಂತಹ ಸಂದರ್ಭದಲ್ಲಿ ಅನುಭವಿಸಿದ ಯಾತನೆ ನನ್ನನ್ನು ಪ್ರಸ್ತುತ ಅಧ್ಯಯನಕ್ಕೆ ಪ್ರೇರೆಪಿಸಿತು. ಸಮಾಜಶಾಸ್ತ್ರದ ವಿದ್ಯಾರ್ಥಿಯಾದ ನನಗೆ ಪ್ರವಾಹ ಮತ್ತು ಅಲ್ಲಿಯ ಜನರ ಸಮಸ್ಯೆ ಮತ್ತು ಪರಿಹಾರೋಪಾಯಗಳ ಬಗ್ಗೆ ಅರಿತುಕೊಳ್ಳುವ ಆಸಕ್ತಿ ಮೂಡಿದುದು ಸಹಜ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಯಿತು.

ನಿರ್ದಿಷ್ಟ ಉದ್ದೇಶಗಳು :

೧) ೨೦೦೫ ಮತ್ತು ೨೦೦೬ರ ಪ್ರವಾಹದ ಕಾರಣಗಳನ್ನು ಮತ್ತು ದುಷ್ಪರಿಣಾಮಗಳನ್ನು ಪರಿಶೀಲಿಸುವುದು.

೨) ಕೃಷ್ಣಾ ನದಿ ಪ್ರವಾಹ ಪೀಡಿತ ಮಾಹಿತಿದಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರಿಯುವುದು.

೩) ಪ್ರವಾಹ ಬಾಧಿತ ಜನರ ಸಮಸ್ಯೆ, ಪರಿಹಾರ, ಪುನರ್ವಸತಿ ಮತ್ತು ಮುಖಂಡರ ಪಾತ್ರ ತಿಳಿಯುವುದು.

೪) ಸ್ಥಳಾಂತರ ಮತ್ತು ಶಾಶ್ವತ ಪುನರ್ವಸತಿ ಬಗೆಗೆ ಜನರ ಮತ್ತು ಸರ್ಕಾರದ ಕ್ರಮಗಳನ್ನು ಅವಲೋಕಿಸುವುದು.

ಪ್ರಾಕಲ್ಪನೆಗಳು :

೧) ಪ್ರವಾಹವು ಬಾಧಿತ ಪ್ರದೇಶದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಮೇಲೆ ಪರಿಣಾಮ ಬೀರಿದೆ.

೨) ಪ್ರವಾಹದಿಂದ ಶೈಕ್ಷಣಿಕ ಮತ್ತು ಧಾರ್ಮಿಕ ಕಾರ್ಯಗಳು ಕುಂಠಿತಗೊಂಡವು.

೩) ಗ್ರಾಮದ ಮುಖಂಡರು/ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಪರಿಹಾರ ಮತ್ತು ಪುನರ್ವಸತಿ ಒದಗಿಸುವಲ್ಲಿ ಯಾವುದೇ ಪಾತ್ರ ನಿರ್ವಹಿಸಿಲ್ಲ.

೪) ಪ್ರವಾಹ ಪೀಡಿತ ಜನರಿಗೆ ಸರಕಾರದ ಶಾಶ್ವತ ಪರಿಹಾರ ಧನ ಇನ್ನೂ ಸರಿಯಾಗಿ ದೊರೆತಿಲ್ಲ.

೫) ಪ್ರವಾಹ ಪೀಡಿತ ಜನರಿಗೆ ಸರಕಾರವು ಶಾಶ್ವತ ಪುನರ್ವಸತಿ ಕೇಂದ್ರಗಳನ್ನು ಗುರುತಿಸಿರುವುದಿಲ್ಲ.

೬) ಪ್ರವಾಹ ಸಂಬಂಧಿತ ಸಮಸ್ಯೆಗಳಿಗೆಲ್ಲ ಸರಕಾರವೇ ಪರಿಹಾರ ದೊರಕಿಸಬೇಕೆಂಬ ಜನಸಾಮಾನ್ಯರ ಮನೋಭಾವ.

೭) ಸರಕಾರ ಸಮೀಕ್ಷೆ ಮಾಡಿದಷ್ಟು ಕ್ಷೇತ್ರ ಮುಳುಗಡೆಯಾಗುವುದಿಲ್ಲವೆಂಬ ರೈತರ ಸರಕಾರದ ನಂಬಿಕೆ.

ಅಧ್ಯಯನ ಹಿನ್ನೆಲೆ :

೨೦೦೫ರ ನಂತರದ ದಿನಗಳಲ್ಲಿ ಅಥಣಿ, ಚಿಕ್ಕೋಡಿ, ರಾಯಬಾಗ ತಾಲೂಕಿನಲ್ಲಿಯ ಕೆಲವೊಂದು ಗ್ರಾಮಗಳು ಪ್ರವಾಹದಿಂದ ಭಾದಿತವಾಗಿದ್ದು ಇದರ ಕುರಿತು ಅಧ್ಯಯನ ಮಾಡಬೇಕೆಂಬ ಇಚ್ಚೆ ನನ್ನದಾಗಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯ ನನ್ನ ಆಶೆಯನ್ನು ಸಾಕಾರಗೊಳಿಸಿತು. 'ಕೃಷ್ಣಾ ಪ್ರವಾಹಃ ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಶಿರ್ಷಿಕೆ ಅಡಿಯಲ್ಲಿ ಅಧ್ಯಯನ ಮಾಡಲು ಅನುಮೋದನೆ ದೊರೆಯಿತು. ವಿಷಯಕ್ಕೆ ಸಂಬಂಧಿಸಿದಂತೆ ಪುಸ್ತಕಗಳನ್ನು, ಲೇಖನಗಳನ್ನು ದಿನ ಪತ್ರಿಕೆಗಳು, ನಿಯತಕಾಲಿಕೆಗಳು, ಸಂಶೋಧನ ಪ್ರಬಂಧಗಳನ್ನು ಅವಲೋಕಿಸಿದೆ. ಕೃಷ್ಣಾ ಪ್ರವಾಹದ ಮಾಹಿತಿ ಪಡೆದುಕೊಳ್ಳಲು ತಾಲೂಕಿನ ತಹಶೀಲ್ದರ ಕಛೇರಿಗೆ ಭೇಟಿ ನೀಡಿದೆ.

ಪುನರ್ವಸತಿ ಯೋಜನೆಗಾಗಿ ಸರಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿದುಕೊಳ್ಳಲು ಹಿಪ್ಪರಗಿ ಯೋಜನೆಯಿಂದ ಬಾಧಿತವಾಗಿರುವ ಗ್ರಾಮಗಳ ಪುನರ್ವಸತಿ ಒದಗಿಸುವ ಉದ್ದೇಶಕ್ಕೆ ಅಥಣಿಯಲ್ಲಿ ಸರಕಾರ ಕಚೇರಿಯನ್ನು ಪ್ರಾರಂಭಿಸಿದೆ. ಅಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಭೆಟ್ಟಿಯಾದೆ. ಎಲ್ಲ ಅಧಿಕಾರಿಗಗಳು ಬೇಕಾದ ಮಾಹಿತಿ ಒದಗಿಸಿದರಲ್ಲದೆ ಬೇಕಾದ ಸಹಾಯ ಮಾಡುವುದಾಗಿ ತಿಳಿಸಿದರು.

೨೦೦೫ ಮತ್ತು ೨೦೦೬ರ ಪ್ರವಾಹಗಳು ಶತಮಾನ ಕಂಡರಿಯದ ಭಯಂಕರ ಪ್ರವಾಹಗಳು ಇದರಿಂದ ಅನೇಕ ಗ್ರಾಮಗಳು ಪ್ರವಾಹದಿಂದ ಬಾಧಿತವಾದವು. ಪ್ರವಾಹದಿಂದ ಬಾಧಿತವಾಗುವ ಗ್ರಾಮಗಳನ್ನು ಸಮೀಕ್ಷೆ ಮಾಡಲಾಗಿದೆ. ಜೂನ್‌ದಿಂದ ಡಿಸೆಂಬರ್ ೨೦೧೦ರ ವರೆಗೆ ಸಮೀಕ್ಷೆ ಕಾರ್ಯ ಕೈಕೊಂಡು ಅಂಕಿ, ಅಂಶಗಳ ವಿಶ್ಲೇಷಣೆ ಮಾಡಿ ವರದಿ ತಯಾರಿಸಿದ್ದೇನೆ.

೧.೪ ಅಧ್ಯಯನ ವಿಧಾನ :

ಇದು ಸಮಾಜಶಾಸ್ತ್ರೀಯ ಅಧ್ಯಯನ. ಒಂದು ಗ್ರಾಮದ ಜನ ಸಮುದಾಯದ ಪ್ರಮುಖ ಸಮಸ್ಯೆಯೊಂದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವುದು ಅಧ್ಯಯನದ ಮುಖ್ಯ ಉದ್ಧೇಶವಾಗಿರುವುದರಿಂದ ಈ ಕ್ಷೇತ್ರವನ್ನು ಸಮಾಜ ವಿಜ್ಞಾನದ ಮಾನದಂಡ ದೃಷ್ಟಿಕೋನವನ್ನು ಅಳವಡಿಸಲಾಗಿದೆ.

ಇದಕ್ಕಾಗಿ ಕ್ಷೇತ್ರಕಾರ್ಯ ಆಧಾರಿತ ಆಕರಗಳನ್ನು ಮೂಲ ಮಾನವಾಗಿ ಬಳಸಲಾಗಿದೆ. ಅವುಗಳನ್ನು ಅಲ್ಲಿಯ ಸಮುದಾಯದ ವಿವಿಧ ಜನರಿಂದ ಸಂಗ್ರಹಿಸಲಾಗಿದೆ. ಖವಟಕೊಪ್ಪ

ಗ್ರಾಮದ ಒಟ್ಟು ಕುಟುಂಬಗಳ ಸಂಖ್ಯೆಯನ್ನು ಗಮನಿಸಿ ಅವುಗಳನ್ನು ವಿವಿಧ ಅಂಶಗಳನ್ನು ಆಧರಿಸಿ ವರ್ಗೀಕರಿಸಲಾಗಿದೆ. ಅಲ್ಲಿ ಈ ಕುಟುಂಬಗಳನ್ನು ಗುರುತಿಸಲು ಪಡಿತರ ಚೀಟಿಗಳನ್ನು ಅವಲಂಬಿಸಲಾಗಿದೆ. ಅಲ್ಲಿಯ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ೭೪೩. ಆದರೆ ಅಷ್ಟು ಕುಟುಂಬಗಳಿಲ್ಲ. ಇದರಲ್ಲಿ ೨೩ ಕುಟುಂಬಗಳು ತಲಾ ಎರಡೆರಡು ಪಡಿತರ ಚೀಟಿ ಹೊಂದಿವೆ. ಆ ಇಪ್ಪತ್ಮೂರು ಪಡಿತರ ಚೀಟಿಗಳನ್ನು ಹೊರತುಪಡಿಸಿದರೆ ಒಟ್ಟು ಕುಟುಂಬಗಳ ಸಂಖ್ಯೆ ೭೨೦. ಪ್ರವಾಹದ ಅವಧಿಯಲ್ಲಿ ಸಮುದಾಯದ ೬೩೨ ಕುಟುಂಬಗಳು ಮಾತ್ರ ರೇಶನ್ ಕಾರ್ಡ್ ಹೊಂದಿದ್ದವು. ಕಾರಣ ಇವುಗಳಲ್ಲಿ ಪ್ರತಿಶತ ೮೦ರಷ್ಟು ಕುಟುಂಬಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದರಲ್ಲಿಯ ವಿವಿಧ ಸಮುದಾಯದ ಕುಟುಂಬಗಳನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ಕ್ಷೇತ್ರ ಕಾರ್ಯ ನಡೆಸಲಾಗಿದೆ.

೫೮೦ ಕುಟುಂಬಗಳಲ್ಲಿಯ ತಲಾ ಒಬ್ಬರಂತೆ ಸಂದರ್ಶನ ಪಡೆದು ದತ್ತಾಂಶಗಳನ್ನು ಸ್ವೀಕರಿಸಲಾಗಿದೆ. ಇವರಲ್ಲಿ ೫೧೦ ಪುರುಷರು, ೭೦ ಮಹಿಳೆಯರು, ೫೮ ಯುವಕರು, ೪೧೮ ಜನ ಮೇಲ್ವರ್ಗದವರು, ೧೬೨ ಜನ ಕೆಳವರ್ಗದವರು. ಈ ಎಲ್ಲ ಅಳತೆಗೋಲನ್ನು ಇಟ್ಟುಕೊಂಡು ಅಧ್ಯಯನದ ದತ್ತಾಂಶಗಳನ್ನು ಕ್ರೋಢಿಕರಿಸಲಾಗಿದೆ. ಇದರಿಂದಲೆ ಅಧ್ಯಯನದ ಫಲಿತ ನಿಖರವಾಗಿ ಸಿಗುವುದು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಏಕಮುಖವಾಗಿ ಪ್ರತಿಬಿಂಬಿತವಾಗುವ ಅಪಾಯವಿರುತ್ತದೆ. ಇವರ ಸಂದರ್ಶನಕ್ಕೆ ಸಿದ್ಧಪಡಿಸಲಾದ ಪ್ರಶ್ನಾವಳಿ ೧೮೧ ಪ್ರಶ್ನೆಗಳನ್ನು ಹೊಂದಿದ್ದು ಅದರ ಮಾದರಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ದತ್ತಾಂಶಗಳನ್ನು ಸಂಗ್ರಹಿಸುವಾಗ ನನ್ನ ಅನನ್ಯ ಅನುಭವವನ್ನು ಇಲ್ಲಿ ಹೇಳಲೇಬೇಕು. ಅದು ಜನ ಸಮುದಾಯದ ಮನೋಭಾವನೆಯನ್ನು ಪ್ರತಿಬಿಂಬಿಸುತ್ತದೆ. ಮೊದಮೊದಲು ನನಗೆ ಅಲ್ಲಿಯ ಜನ ಸಂಪೂರ್ಣವಾಗಿ ಸಹಕರಿಸುತ್ತಾ ತಾಳ್ಮೆಯಿಂದ ಮಾಹಿತಿಗಳನ್ನು ನೀಡುತ್ತಿದ್ದರು. ನನ್ನೆಲ್ಲ ಪ್ರಶ್ನೆಗಳಿಗೂ ಸಮಾಧಾನ ಚಿತ್ತದಿಂದ ಉತ್ತರಿಸುತ್ತಿದ್ದರು. ಅವರಿಗೆ ನಾನು ಪರಿಹಾರ ದೊರಕಿಸಿಕೊಡಲು ಸಹಾಯಕನಾಗಬಹುದೆಂಬ ಭಾವನೆ ಇತ್ತು. ಅದಕ್ಕಾಗಿ ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ ಸುತ್ತೆಲ್ಲ ಜನ ಸೇರುತ್ತಿದ್ದರು. ಹುಸಿ ನಂಬಿಗೆಯಿಂದ ಸೇರುತ್ತಿದ್ದ ಆ ಜನರಿಗೆ ನನ್ನ ಉದ್ದೇಶವನ್ನು ವಿವರಿಸಿದ ಮೇಲೆ ಅವರು ಮಾಹಿತಿ ನೀಡುವುದರಲ್ಲಿ ಆಸಕ್ತಿ ಕಳೆದುಕೊಂಡರು. ಈ ಅಧ್ಯಯನ ತಮಗೆ ಪರಿಹಾರ ದೊರಕಿಸಿಕೊಡಲಾರದೆಂಬ ಭಾವ ಅವರಲ್ಲಿ ಮೂಡಿತು. ಇದು ನಮ್ಮ ಅಧ್ಯಯನಗಳ ವೈಫಲ್ಯ. ಪದವಿಗಳಿಗಾಗಿ ಕೈಕೊಳ್ಳುವ ಅಧ್ಯಯನಗಳು ಇಂತಹ ಮಿತಿಯನ್ನು ಹೊಂದುತ್ತವೆ. ಇವುಗಳ ಹುಸಿಕತೆ ಹಾಗೂ ಸಿನಿಕತೆಗಳ ಜನಸಾಮಾನ್ಯರಿಗೂ ತಿಳಿದಿದೆ. ನಿಜವಾದ ಅಧ್ಯಯನ ಸಮಾಜಮುಖಿಯಾಗಬೇಕು. ಅಂದರೆ ಅಧ್ಯಯನದ ಫಲಿತಗಳು ಪರಿಹಾರವನ್ನು

ರೂಪಿಸುವಂತಿರಬೇಕು. ಆ ಪರಿಹಾರೋಪಾಯಗಳು ಅನುಷ್ಠಾನಗೊಳ್ಳುವಂತಿರಬೇಕು. ಆಗ ಮಾತ್ರ ಇಂತಹ ಅಧ್ಯಯನಗಳು ಅರ್ಥಪೂರ್ಣವಾಗಬಲ್ಲವು. ಅದರಲ್ಲಿಯೂ ಇಂತಹ ಸಮಾಜಶಾಸ್ತ್ರೀಯ ಅಧ್ಯಯನಗಳ ಫಲ ಸಮಾಜಕ್ಕೆ ಮುಟ್ಟಬೇಕೆಂಬ ಕಳಕಳಿಯಿಂದಲೇ ಈ ಅಧ್ಯಯನವನ್ನು ಬಿಂಬಿಸಲಾಗಿದೆ.

ಸಂಶೋಧನೆಯ ಫಲಿತವು ಅಧ್ಯಯನ ವಿಧಾನವನ್ನು ಅವಲಂಭಿಸಿರುತ್ತದೆ. ಸಂಶೋಧನೆಯು ಹೆಚ್ಚು ವ್ಯಾಪಕಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಹೊಸ, ಹೊಸ ಅಧ್ಯಯನ ವಿಧಗಳು ಪ್ರಚಲಿತಗೊಳ್ಳುತ್ತಿವೆ. ಸಮಸ್ಯೆಯ ಸ್ವರೂಪವನ್ನು ಅವಲಂಭಿಸಿ ಅವುಗಳನ್ನು ಬಳಸಬೇಕಾಗುತ್ತದೆ.

ಪ್ರಸ್ತುತ ಅಧ್ಯಯನವು ಸಮಾಜಶಾಸ್ತ್ರೀಯ ಸ್ವರೂಪದ್ದಾಗಿರುವುದರಿಂದ ಹಾಗೂ ಅಧ್ಯಯನ ಸಮಸ್ಯೆಯ ನಿರ್ದಿಷ್ಟ ಯೋಜನೆಯೊಂದರ ಅನುಷ್ಠಾನದಿಂದ ಉದ್ಭವಿಸುವುದರಿಂದ ಇಲ್ಲಿ ಹೊರಗಿನ ಅಧ್ಯಯನ ವಿಧಾನಗಳಿಗಿಂತ ಭಿನ್ನವಾದ ಬಹುಶಿಸ್ತೀಯ ನೆಲೆಯ ಅಂತರ್‌ಶಿಸ್ತೀಯ ಅಧ್ಯಯನ ವಿಧಾನವನ್ನು ಬಳಸಬೇಕಾಗುತ್ತದೆ. ಅಧ್ಯಯನ ಕೇಂದ್ರದ ವ್ಯಾಪ್ತಿ ಚಿಕ್ಕದಾಗಿರುವುದರಿಂದ ಸ್ಥೂಲ ವಿಧಾನವನ್ನು ಅನುಸರಿಸದೆ, ಸೂಕ್ಷ್ಮವಾಗಿ ಸಮಸ್ಯೆ ಮತ್ತು ಫಲಿತಗಳನ್ನು ಅಭ್ಯಸಿಸಲಾಗಿದೆ.

ಇದು ಕ್ಷೇತ್ರ ಕಾರ್ಯ ಆಧಾರಿತ ಅಧ್ಯಯನ. ಮಹಾಪ್ರಬಂಧದ ಮೊದಲ ಅಧ್ಯಾಯದಲ್ಲಿ ಕ್ಷೇತ್ರ ಕಾರ್ಯದ ಸ್ವರೂಪ, ವ್ಯಾಪ್ತಿ ಹಾಗೂ ವಿಧಾನದ ಕುರಿತು ವಿವರವಾಗಿ ಪರಿಚಯಿಸಲಾಗಿದೆ. ಇದಕ್ಕೆ ಪೂರಕವಾಗಿ ಹಿಪ್ಪರಗಿ ಅಣೆಕಟ್ಟು ಯೋಜನೆಯ ವೈಜ್ಞಾನಿಕ ವಿವರಗಳನ್ನು ಸಂಗ್ರಹಿಸಿ ಅಂದಿನ ತಜ್ಞರ ವರದಿಗಳೊಂದಿಗೆ ಇಂದಿನ ಸಮಸ್ಯೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಫಲಿತಗಳನ್ನು ದಾಖಲಿಸಿ ಸಮಸ್ಯೆಗೆ ಪರಿಹಾರಗಳನ್ನು ಸೂಚಿಸುವುದು ಈ ಅಧ್ಯಯನ ವಿಧಾನದ ಸ್ಥೂಲ ಸಮೀಕ್ಷೆ. ಇದಕ್ಕೆ ಪೂರಕವಾಗಿ ಇಂತಹ ಅನೇಕ ಅಧ್ಯಯನಗಳನ್ನು ಪರಿಶೀಲಿಸಲಾಗಿದೆ.

ಅಧ್ಯಯನ ಕ್ಷೇತ್ರ :

ಹಿಪ್ಪರಗಿ ಅಣೆಕಟ್ಟು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಯೋಜನೆ ವರದಿ ಪ್ರಕಾರ ಅಥಣಿ ತಾಲೂಕಿನ ಐದು ಜಮಖಂಡಿ ತಾಲೂಕಿನ ಎರಡು ಗ್ರಾಮಗಳು ಸಂಪೂರ್ಣವಾಗಿ ಜಲಾವೃತವಾಗುತ್ತವೆ. ಇವುಗಳಿಗೆ ಸರಕಾರ ಕಟ್ಟಡಕ್ಕಾಗಿ ೯೩೫೨.೬೫ ಲಕ್ಷ, ಬಯಲು ಪ್ರದೇಶಕ್ಕೆ ೭.೫೨ ಲಕ್ಷ ಪುನರ್ ವಸತಿ ಕೇಂದ್ರಕ್ಕೆ ಭೂಮಿ ೬೧೩.೦೦ ಲಕ್ಷ, ಮೂಲ ಸೌಕರ್ಯಕ್ಕೆ ೨೦೬೭.೭೦ ಲಕ್ಷ, ಇತರೆ ಸೌಲಭ್ಯಗಳಿಗೆ ೪೩೫೫.೭೪ ಲಕ್ಷ ಹೀಗೆ ಒಟ್ಟು ೧೬೪೨೬.೬೧ ಲಕ್ಷ ರೂಪಾಯಿಗಳೆಂದು ಅಂದಾಜಿಸಲಾಗಿದೆ. ಇವುಗಳನ್ನು ಸಂಪೂರ್ಣವಾಗಿ ಅಂದರೆ ಇಡೀ ಗ್ರಾಮಗಳನ್ನು ಸ್ಥಳಾಂತರಿಸುವ ಯೋಜನೆ ಇದೆ.

ಪ್ರವಾಹದಿಂದ ಶೇಕಡಾ ೭೫ಕ್ಕಿಂತಲೂ ಕಡಿಮೆ ಪ್ರಭಾವಿತವಾಗುವ ಅಥಣಿ ತಾಲೂಕಿನ ಹನ್ನೆರಡು, ರಾಯಬಾಗ ತಾಲೂಕಿನ ಎರಡು ಗ್ರಾಮಗಳಿವೆ. ಇವುಗಳನ್ನು ಇಡೀ ಗ್ರಾಮಗಳನ್ನು ಸ್ಥಳಾಂತರಿಸುವ ಯೋಜನೆ ಇದೆ. ಇದಕ್ಕಾಗಿ ಕಟ್ಟಡಕ್ಕಾಗಿ ೨೦೭೪೫.೨೯ ಲಕ್ಷ, ಬಯಲು ಪ್ರದೇಶಕ್ಕೆ ೨೦.೬೬ ಲಕ್ಷ ಪುನರ್ವಸತಿ ಕೇಂದ್ರಕ್ಕೆ ಭೂಮಿ ೧೩.೯೯ ಲಕ್ಷ, ಮೂಲ ಸೌಕರ್ಯಕ್ಕೆ ೪೪೧೫.೬೦ ಲಕ್ಷ, ಇತರೆ ಸೌಲಭ್ಯಗಳಿಗೆ ೯೩೮೨.೮೭ ಲಕ್ಷ ಹೀಗೆ ಒಟ್ಟು ೩೫೯೬೩.೪೨ ಲಕ್ಷ ಖರ್ಚಿನ ವರದಿ ತಯಾರಿಸಿದೆ.

ಇನ್ನು ಅಥಣಿ ತಾಲೂಕಿನ ಮೂರು, ಜಮಖಂಡಿ ತಾಲೂಕಿನ ಎರಡು ಗ್ರಾಮಗಳು ಪ್ರವಾಹದಿಂದ ಭಾಗಶಃ ಪ್ರಭಾವಿತವಾಗುವ ಗ್ರಾಮಗಳು. ಇವುಗಳಿಗೂ ಮೇಲಿನ ಸೌಕರ್ಯಗಳಿಗೆ ೨೭೨೩.೯೦ ಲಕ್ಷ ರೂಪಾಯಿಗಳ ವರದಿ ತಯಾರಿಸಿದೆ ಅಲ್ಲದೆ ಅತೀ ಕಡಿಮೆ ಪ್ರಭಾವಿತವಾಗುವ ಅಥಣಿ ತಾಲೂಕಿನ ಒಂದು ಮತ್ತು ರಾಯಬಾಗ ತಾಲೂಕಿನ ಮೂರು ಗ್ರಾಮಗಳ ಪ್ರವಾಹದಿಂದ ಬಾಧಿತವಾಗುವ ಕುಟುಂಬಗಳಿಗೆ ಮಾತ್ರ ಪುನರ್ವಸತಿ ಒದಗಿಸಲು ಯೋಜಿಸಿದೆ. ಒಟ್ಟು ಇಡೀ ಯೋಜನೆಗೆ ೫೫೫.೦೦ ಕೋಟಿ ಹಣದ ವರದಿ ತಯಾರಿಸಿದೆ.

ಪ್ರವಾಹದಿಂದ ಬಾಧಿತವಾಗುವ ಜಮಖಂಡಿ ಮತ್ತು ಅಥಣಿ ತಾಲೂಕಿನ ಬಾಧಿತ ಕುಟುಂಬಗಳು ಮತ್ತು ಜನಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಿಂದ ಕಂಡುಕೊಳ್ಳಬಹುದು.

ಕೋಷ್ಟಕ ೧.೧

ಪ್ರವಾಹದಿಂದ ಬಾಧಿತವಾಗುವ ಗ್ರಾಮಗಳು ಮತ್ತು ಕುಟುಂಬಗಳು

ಕ್ರ.ಸಂ	ಗ್ರಾಮಗಳ ಹೆಸರು	ಬಾಧಿತ ಜನಸಂಖ್ಯೆ	ಬಾಧಿತ ಕುಟುಂಬಗಳು
೧	ಜನವಾಡ	೩೨೧೮	೬೪೪
೨	ಮಹೀಷವಾಡಗಿ	೩೩೭೭	೬೭೬
೩	ದೊಡವಾಡ	೯೯೬	೧೪೦
೪	ಖವಟಕೊಪ್ಪ	೩೪೮೩	೯೯೭
೫	ಶೇಗುಣಸಿ	೩೫೯೯	೭೧೪
೬	ಅಸ್ಕಿ	೫೩೮೩	೧೦೭೭
೭	ತಮದಡ್ಡಿ	೩೧೩೨	೬೨೭
೮	ನಂದೇಶ್ವರ	೩೭೬೦	೭೫೨
೯	ನಾಗನೂರ (ಪಿ.ಕೆ)	೨೬೨೨	೫೨೫
೧೦	ಅವರಖೋಡ	೨೮೮೯	೫೭೮
೧೧	ಹುಲಗಬಾಳಿ	೭೪೪೭	೧೪೮೯
೧೨	ಬಣಜವಾಡ	೧೩೫೪	೨೭೧
೧೩	ಕುಸನಾಳ	೨೮೨೩	೫೬೫
೧೪	ಮಳವಾಡ	೩೨೨೩	೬೪೫
೧೫	ಕಾತ್ರಾಳ	೧೩೪೩	೨೬೯
೧೬	ದರೂರ	೫೨೪೧	೧೦೪೮
೧೭	ನದಿ ಇಂಗಳಗಾಂವ	೪೫೯೭	೯೧೯
೧೮	ತೀರ್ಥ	೧೬೪೦	೩೨೮
೧೯	ಸಪ್ತಸಾಗರ	೫೪೩೧	೧೦೮೬
೨೦	ಸಿದ್ದಾಪೂರ	೩೦೦೩	೬೦೧
೨೧	ಖೆಮಲಾಪೂರ	೪೩೦೫	೮೬೧
೨೨	ಹಲ್ಯಾಳ	೧೨೫	೨೫
೨೩	ತಂಗಡಿ	೧೫೯	೪೫
೨೪	ಸತ್ತಿ	೧೪೦೧	೨೪೦
೨೫	ಕುಲಹಳ್ಳಿ	೯೯೬	೨೨೯
೨೬	ಹಿಪ್ಪರಗಿ	೬೨೨	೨೪೦
	ಒಟ್ಟು	**೭೫೫೫೯**	**೧೫೨೯೧**

ಮೂಲ : ಹಿಪ್ಪರಗಿ ಯೋಜನೆಯ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಪ್ಯಾಕೇಜ್‌ನ ಕುರಿತ ಸಾಮಾನ್ಯ ವರದಿ.

ಕೃಷ್ಣಾ ಪ್ರವಾಹದಿಂದ ಏಳು ಗ್ರಾಮಗಳು ಶೇಕಡಾ ೭೫ಕ್ಕಿಂತಲೂ ಹೆಚ್ಚು ಬಾಧಿತವಾಗುತ್ತಿದ್ದು ಇವುಗಳಲ್ಲಿ ಒಟ್ಟು ೫೬೪೭ ಕಟ್ಟಡ/ನಿವೇಶನಗಳನ್ನು ಸ್ವಾಧೀನಪಡಿಸಿಕೊಂಡು ಸಂಪೂರ್ಣವಾಗಿ ಪುನರ್ವಸತಿ ಕಲ್ಪಿಸಲು ಹಾಗೂ ಹದಿನಾಲ್ಕು ಗ್ರಾಮಗಳು ಶೇಕಡಾ ೭೫ಕ್ಕಿಂತಲೂ ಕಡಿಮೆ ಬಾಧಿತವಾಗುತ್ತಿದ್ದು ಇಲ್ಲಿ ಒಟ್ಟು ೧೧೭೮೯ ಕಟ್ಟಡ/ನಿವೇಶನಗಳನ್ನು ಸ್ವಾಧೀನಪಡಿಸಿಕೊಂಡು

ಸಂಪೂರ್ಣವಾಗಿ ಪುನರ್ವಸತಿ ಒದಗಿಸಲು ಐದು ಗ್ರಾಮಗಳು ಭಾಗಶಃ ಪ್ರಭಾವಿತವಾಗುತ್ತಿದ್ದು ಈ ಗ್ರಾಮಗಳಲ್ಲಿ ಒಟ್ಟು ೭೭೯ ಕಟ್ಟಡ/ನಿವೇಶನಗಳನ್ನು ಸ್ವಾಧೀನಪಡಿಸಿಕೊಂಡು ಪ್ರಭಾವಿತವಾಗುವ ಕುಟುಂಬಗಳಿಗೆ ಮಾತ್ರ ಪುನರ್ವಸತಿ ಒದಗಿಸಲು ಹಾಗೂ ಇನ್ನೂ ನಾಲ್ಕು ಗ್ರಾಮಗಳಲ್ಲಿ ಗ್ರಾಮದ ಕೆಲವೊಂದು ಕುಟುಂಬಗಳಿಗೆ ಮಾತ್ರ ತೊಂದರೆಯಾಗುತ್ತಿದ್ದು ಅಂತಹ ಕುಟುಂಬಗಳಿಗೆ ವಾಸಸ್ಥಳಗಳನ್ನು ಒದಗಿಸಿ ಈ ಗ್ರಾಮಗಳ ದಾರಿಗಳನ್ನು ಎತ್ತರಿಸಿ ಸರಕಾರ ಪರಿಹಾರ ಕಂಡುಕೊಳ್ಳಲು ಯೋಜಿಸಿದೆ.

ಶೇಕಡಾ ೭೫ಕ್ಕಿಂತಲೂ ಹೆಚ್ಚು ಪ್ರವಾಹದಿಂದ ಬಾಧಿತವಾಗುವ, ಸಂಪೂರ್ಣವಾಗಿ ಪುನರ್ವಸತಿ ಒದಗಿಸಲು, ಯೋಜಿಸಿದ ಅಥಣಿ ತಾಲೂಕಿನ ಗ್ರಾಮಗಳನ್ನು ಕುರಿತು ಅಧ್ಯಯನ ಮಾಡಬೇಕೆಂದು ಯೋಚಿಸಲಾಯಿತು.

ಮೇಲಿನ ವಿಚಾರಗಳ ಆಧಾರದ ಮೇಲೆ ಶೇಕಡಾ ೭೫ಕ್ಕಿಂತಲೂ ಪ್ರವಾಹದಿಂದ ಬಾದಿತವಾಗುವ ಕೃಷ್ಣಾ ನದಿ ಪಶ್ಚಿಮ ದಡ್ಡಕಿರುವ ನಮಗೆ ಅಧ್ಯಯನಕ್ಕೆ ಸರಳವಾಗುವ ಗ್ರಾಮಗಳೆಂದರೆ ಸಪ್ತಸಾಗರ, ತೀರ್ಥ, ನದಿ ಇಂಗಳಗಾಂವ, ದರೂರ ಮತ್ತು ಖವಟಕೊಪ್ಪ ಗ್ರಾಮಗಳು. ಖವಟಕೊಪ್ಪ ಗ್ರಾಮವನ್ನು ಹೊರತುಪಡಿಸಿ ಎಲ್ಲ ಗ್ರಾಮಗಳ ಸ್ಥಳಾಂತರದ ಪ್ರದೇಶಗಳು ನಿಗದಿಯಾಗಿದ್ದು ಕಾರ್ಯ ಪ್ರಗತಿಯಲ್ಲಿದೆ. ಆದರೆ ಖವಟಕೊಪ್ಪ ಗ್ರಾಮದ ಸ್ಥಳಾಂತರ ಸ್ಥಳದ ಬಗೆಗೆ ಇನ್ನೂ ಯಾವ ನಿರ್ಧಾರಗಳಾಗಿಲ್ಲ. ಜನರಲ್ಲಿ ಒಟ್ಟಾಭಿಪ್ರಾಯದ ಕೊರತೆ ಮತ್ತು ಪುನರ್ವಸತಿ ಒದಗಿಸಲು ನಿರ್ಧರಿಸಿದ ಗ್ರಾಮಗಳ ಜನರ ಕಾನೂನಿನ ಹೋರಾಟದ ಕಾರಣ ಪುನರ್ವಸತಿ ಕೇಂದ್ರದ ಸ್ಥಳ ಇನ್ನೂ ನಿರ್ಧಾರವಾಗಿಲ್ಲ. ಗ್ರಾಮಸ್ತರು, ಗ್ರಾಮ ಮುಖಂಡರು, ಅಧಿಕಾರಿಗಳು, ಸರಕಾರ ಸ್ಥಳಾಂತರದ ವಿಷಯದಲ್ಲಿ ಯಾವುದೇ ವಿಶೇಷ ಆಸಕ್ತಿ ವಹಿಸುತ್ತಿಲ್ಲ. ಗ್ರಾಮದ ಜನತೆಗೆ ಪುನರ್ವಸತಿ ಕುರಿತು ವಿಚಾರಿಸುತ್ತಿಲ್ಲ ಎಂಬುದನ್ನು ತಿಳಿದುಕೊಂಡು ಇದೆ ಗ್ರಾಮವನ್ನು ಅಧ್ಯಯನ ಮಾಡಬೇಕೆಂದು ತೀರ್ಮಾನಿಸಿದೆ.

ಅಧ್ಯಯನದ ಪರಿವೀಕ್ಷಣೆ :

ಕೃಷ್ಣಾ ಪ್ರವಾಹದಿಂದ ಅಥಣಿ, ಚಿಕ್ಕೋಡಿ ಮತ್ತು ಜಮಖಂಡಿ ತಾಲೂಕುಗಳ ಮೂವತ್ತು ಗ್ರಾಮಗಳು ಪ್ರಭಾವಿತವಾಗುತ್ತವೆ. ಪ್ರವಾಹದಿಂದ ಸಂಪೂರ್ಣವಾಗಿ ಬಾಧಿತವಾಗುವ ಮತ್ತು ಸಂಪೂರ್ಣವಾಗಿ ಪುನರ್ವಸತಿ ಕಲ್ಪಿಸಲು ಯೋಜಿಸಿರುವ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ೨೦೦೫ ಮತ್ತು ೨೦೦೬ರಲ್ಲಿ ಗ್ರಾಮದ ಮೇಲಾದ ಪ್ರವಾಹದ ದುಷ್ಪರಿಣಾಮಗಳನ್ನು ಅವಲೋಕಿಸಿ ಪುನರ್ವಸತಿ ಕುರಿತು ಜನರ ವಿಚಾರಗಳು ಮತ್ತು ಸರಕಾರದ ಕ್ರಮಗಳ ಕುರಿತು ತಿಳಿದುಕೊಳ್ಳಲಾಗಿದೆ.

ಖವಟಕೊಪ್ಪ ಗ್ರಾಮವು ೨೦೦೧ರ ಜನಗಣತಿ ವರದಿ ಪ್ರಕಾರ ೭೧೫ ಕುಟುಂಬಗಳನ್ನು ಹೊಂದಿದ್ದು ೩೪೮೪ ಜನಸಂಖ್ಯೆ ಇದೆ. ನ್ಯಾಯಬೆಲೆ ಅಂಗಡಿಯಿಂದ ವಿತರಿಸಿದ ಪಡಿತರ ಚೀಟಿಗಳ ಆಧಾರದ ಮೇಲೆ ಕುಟುಂಬಗಳ ವಿವರ ಪಡೆದುಕೊಂಡು ಅವುಗಳಲ್ಲಿ ೭೧೫ ಕುಟುಂಬಗಳನ್ನು ಆಯ್ದುಕೊಳ್ಳಲು ನಿರ್ಧರಿಸಿದೆ. ಈಗ ನ್ಯಾಯ ಬೆಲೆ ಅಂಗಡಿಯಲ್ಲಿ ೭೪೩ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಇವುಗಳಿಂದ ೭೧೫ ಕುಟುಂಬಗಳನ್ನು ಆಯ್ಕೆ ಮಾಡಲು ನಿರ್ಧರಿಸಿದೆ. ಆದರೆ ಕ್ಷೇತ್ರ ಕಾರ್ಯದಲ್ಲಿ ಎದುರಿಸಿದ ಹಲವು ಸಮಸ್ಯೆಗಳ ಕಾರಣ ಕುಟುಂಬಗಳ ಸಂಖ್ಯೆಯನ್ನು ಮಿತಗೊಳಿಸಬೇಕೆಂದು ವಿಚಾರಿಸಿದೆ ಏಕೆಂದರೆ,

೧) ಒಂದೇ ಮನೆಯಲ್ಲಿ ತಂದೆ, ತಾಯಿ ಮತ್ತು ಮಕ್ಕಳ ರೇಶನ್ ಕಾರ್ಡಗಳಿರುವುದು.

೨) ತೀರಿಕೊಂಡವರ ಹೆಸರಿನಲ್ಲಿ ರೇಶನ್ ಕಾರ್ಡಗಳಿರುವುದು.

೩) ಊರು ಬಿಟ್ಟು ಹೋದವರ ಹೆಸರಿನಲ್ಲಿ ರೇಶನ ಕಾರ್ಡಗಳಿರುವುದು.

೪) ರೇಶನ್ ಕಾರ್ಡ ಹೊಂದಿ ಬೇರೆ ಕಡೆ ವಾಸಿಸುವುದು.

೫) ೨೦೦೫ರಲ್ಲಿ ೬೩೨ ರೇಶನ್ ಕಾರ್ಡುಗಳನ್ನು ಮಾತ್ರ ವಿತರಿಸಲಾಗಿತ್ತು.

ಈ ಎಲ್ಲ ಸಮಸ್ಯೆಗಳ ಕಾರಣ ಕುಟುಂಬಗಳ ಸಂಖ್ಯೆಯನ್ನು ಪ್ರತಿಶತ ೮೦ಕ್ಕೆ ಇಳಿಸಲು ಯೋಚಿಸಿದೆ. ಇವುಗಳಲ್ಲಿ ವಿವಿಧ ಧರ್ಮ, ಜಾತಿ, ಉದ್ಯೋಗ, ಭೂಮಿ ಹೊಂದಿದವರು, ಭೂಮಿ ಹೊಂದದೆ ಇರುವವರು, ಒಕ್ಕಲುತನ, ಕೂಲಿಕಾರ್ಮಿಕರು, ವ್ಯಾಪಾರಸ್ಥರು, ಕುಶಲಕರ್ಮಿಗಳು ಮುಂತಾದ ಎಲ್ಲ ಕುಟುಂಬಗಳಿಗೆ ಪ್ರಾತಿನಿಧ್ಯ ನೀಡಲಾಯಿತು. ಹದಿನೈದು ಕುಟುಂಬಗಳಿಗಿಂತ ಕಡಿಮೆ ಇರುವ ಗ್ರಾಮದ ವಿವಿಧ ಸಮುದಾಯಗಳ ಎಲ್ಲ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಯಿತು. ನ್ಯಾಯಬೆಲೆ ಅಂಗಡಿಯಲ್ಲಿ ವಿತರಿಸಿದ ೭೪೩ ಪಡಿತರ ಚೀಟಿಗಳಲ್ಲಿ ೨೩ ಕಾರ್ಡುಗಳನ್ನು ಮೇಲೆ ತಿಳಿಸಿದ ಕಾರಣಗಳಿಂದ ತೆಗೆದುಹಾಕಿ ೭೨೦ ಕುಟುಂಬಗಳಲ್ಲಿಯ ಪ್ರತಿಶತ ೮೦ ರಂತೆ ೫೭೬ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ.

ಕೋಷ್ಟಕ ೧.೨

ಕುಟುಂಬಗಳ ಆಯ್ಕೆ ವಿಧಾನ

ಅ.ನಂ		ಒಟ್ಟು ಕುಟುಂಬಗಳು	ಅಧ್ಯಯನಕ್ಕೆ ಆಯ್ದುಕೊಂಡ ಕುಟುಂಬಗಳು
೧	ಬ್ರಾಹ್ಮಣರು	೦೨	೦೨
೨	ಜೈನ	೨೧೩	೧೭೦
೩	ಲಿಂಗಾಯತರು	೧೩೬	೧೦೮
೪	ಮಾಳಿ	೨೩	೧೮
೫	ಗಾಣಿಗರು	೦೨	೦೨
೬	ನಾವಿ	೧೯	೧೫
೭	ಕುರುಬರು	೨೫	೨೦
೮	ಗುರವ	೦೮	೦೮
೯	ಬಡಿಗರು	೧೮	೧೪
೧೦	ಪತ್ತಾರ	೦೨	೦೨
೧೧	ಮರಾಠರು	೦೧	೦೧
೧೨	ಅಗಸರು	೦೩	೦೩
೧೩	ತಳವಾರ	೫೦	೪೦
೧೪	ಮುಸ್ಲಿಂ	೧೫	೫
೧೫	ಹೊಲೇರ ಮಾದರ/ದಾಸರ	೨೦೩	೧೬೨
	ಒಟ್ಟು	**೭೨೦**	**೫೮೦**

ಹೀಗೆ ಪ್ರತಿನಿಧಿತ ೫೮೦ ಕುಟುಂಬಗಳನ್ನು ಆಯ್ದುಕೊಂಡು ಅಧ್ಯಯನ ಕೈಗೊಂಡಿದ್ದೇನೆ.

ನಮೂನೆಯ ಆಯ್ಕೆ :

ನಮೂನೆಯ ಆಯ್ಕೆ ವಿಧಾನದಲ್ಲಿ ಸಗಟು ನಮೂನೆ ಪದ್ಧತಿ ಅಳವಡಿಸಿ ೫೮೦ ಪ್ರತಿನಿಧಿತ ಜನರನ್ನು ವಿವಿಧ ಜಾತಿ, ಉದ್ಯೋಗಗಳನ್ನು ನಿರ್ವಹಿಸುವ ಕುಟುಂಬಗಳನ್ನಾಗಿ ವಿಂಗಡಿಸಿ ಅವುಗಳಿಂದ ಲಾಟರಿ ವಿಧಾನದ ಮೂಲಕ ೫೮೦ ಮಾಹಿತಿದಾರರನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಅಧ್ಯಯನದ ಮೂಲಗಳು :

ಪ್ರಸ್ತುತ ಅಧ್ಯಯನವು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳನ್ನು ಅವಲಂಭಿಸಿದೆ.

ಪ್ರಾಥಮಿಕ ಮೂಲಗಳು :

ಪ್ರವಾಹದ ಸಮಯದಲ್ಲಿ ಮತ್ತು ಪ್ರವಾಹದ ನಂತರ ಗ್ರಾಮದ ಜನರು ಯಾವ ಸಮಸ್ಯೆಗಳನ್ನು ಎದುರಿಸಿದರು ಮತ್ತು ಸ್ಥಳಾಂತರದ ಬಗೆಗೆ ಅವರ ವಿಚಾರಗಳೇನು? ಪುನರ್ವಸತಿ ಯಾವ ರೀತಿ ಇರಬೇಕೆಂದು ಜನರು ಬಯಸುತ್ತಾರೆ. ಮುಂತಾದ ವಿಚಾರಗಳನ್ನು ತಿಳಿದುಕೊಳ್ಳಲು ಸವಿವರವಾದ ಪ್ರಶ್ನಾವಳಿ ತಯಾರಿಸಿದೆ. ಸಮಗ್ರ ಮಾಹಿತಿ ಕಲೆ ಹಾಕಲು ಕ್ರಮಬದ್ಧವಾದ ಪ್ರಶ್ನಾವಳಿ ಸಿದ್ಧಪಡಿಸಲಾಯಿತು. ಪ್ರಶ್ನಾವಳಿ ಬಹಳ ಸರಳವಾಗಿದ್ದು ಅಶಿಕ್ಷಿತರು ಸಹಿತ ಉತ್ತರಿಸಲು ಸಹಾಯಕವಾಗುವಂತೆ ತಯಾರಿಸಲಾಗಿದೆ. ಪ್ರಶ್ನಾವಳಿಯಲ್ಲಿಯ ಹೆಚ್ಚಿನ ಪ್ರಶ್ನೆಗಳು ನಿರ್ಭಂದಿತ ರಚನಾತ್ಮಕ ಪ್ರಶ್ನೆಗಳಾಗಿದ್ದು ಹೌದು ಅಥವಾ ಇಲ್ಲ ಎಂಬ ಮಾದರಿಯಲ್ಲಿ ಉತ್ತರಿಸಲು ಕೇಳಲಾಗಿದೆ. ಕೆಲವೊಂದು ಪ್ರಶ್ನೆಗಳು ಮುಕ್ತ ಅಥವಾ ಅನಿರ್ಬಂಧಿತ ರಚನಾತ್ಮಕ ಪ್ರಶ್ನೆಗಳಿವೆ. ಇಂತಹ ಕೆಲವೊಂದು ವಿಚಾರಗಳಲ್ಲಿ ಮಾಹಿತಿದಾರರಿಗೆ ತಮ್ಮ ವಿಚಾರಗಳನ್ನು ತಿಳಿಸಲು ಮುಕ್ತ ಅವಕಾಶ ನೀಡಲಾಗಿದೆ. ಊರ ಪ್ರಮುಖರ ಜೊತೆ ವೈಯಕ್ತಿಕ ಸಂದರ್ಶನಗಳನ್ನು ಮಾಡಲಾಗಿದೆ. ಎಲ್ಲ ಜಾತಿಯ ವರ್ಗದ ಜನರನ್ನು ಪ್ರಶ್ನಾವಳಿ ಮುಖಾಂತರ ಸಂದರ್ಶಿಸಿ ಪ್ರಾಥಮಿಕ ಮಾಹಿತಿ ಪಡೆದುಕೊಳ್ಳಲಾಗಿದೆ..

ಅನುಷಂಗಿಕ ಮೂಲಗಳು :

ಗೆಜೆಟಿಯರುಗಳು, ವಿಶ್ವಕೋಶಗಳು, ಸಂವಹನ ಮಾಧ್ಯಮ, ಅಂತರ್ಜಾಲ ಮತ್ತು ಪ್ರವಾಹದ ದುಷ್ಪರಿಣಾಮ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಕುರಿತಾದ ಸಂಶೋಧನಾ ಗ್ರಂಥಗಳು, ನಿಯತಕಾಲಿಕೆಗಳು, ದಿನ ಪತ್ರಿಕೆಗಳು, ವಿವಿಧ ಸಭೆ ಸಮಾರಂಭ, ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ವಿವಿಧ ಪರಿಣತರು ಮಂಡಿಸಿದ ಲೇಖನಗಳು, ಸರಕಾರದ ಯೋಜನಾ ವರದಿಗಳು, ಅನುಷ್ಠಾನ ಸಮೀಕ್ಷಾ ಮತ್ತು ಪುನರ್ವಸತಿ ಕೇಂದ್ರಗಳಲ್ಲಿರುವ ಅಧಿಕಾರಿಗಳು ಕೊಡುವ ಮಾಹಿತಿಗಳು ಅಧ್ಯಯನಕ್ಕೆ ಪೂರಕ ಆಕರ ಸಾಮಗ್ರಿಗಳಾಗಿವೆ.

ಪ್ರಶ್ನಾವಳಿ ವಿವರ :

ಪ್ರಶ್ನಾವಳಿ ಎರಡು ಸಂದರ್ಶನ ಮಾದರಿಗಳನ್ನು ಹೊಂದಿದ್ದು ಮೊದಲನೆಯ ಸಂದರ್ಶನ ಮಾದರಿಯಲ್ಲಿ ಮಾಹಿತಿದಾರರ ವೈಯಕ್ತಿಕ ಮತ್ತು ಕೌಟುಂಬಿಕ ಮಾಹಿತಿಗಳನ್ನು ಒದಗಿಸುತ್ತದೆ. ಮಾಹಿತಿದಾರರ ಕುಟುಂಬದ ಹೆಸರು, ವಯಸ್ಸು, ಜಾತಿ, ವೈವಾಹಿಕ ಅಂತಸ್ತು, ಶಿಕ್ಷಣ, ಉದ್ಯೋಗ, ವಾರ್ಷಿಕ ಆದಾಯ, ಕುಟುಂಬದ ಸ್ವರೂಪ, ಮನೆಯ ಸ್ವರೂಪ, ಕೋಣೆಗಳ ಸಂಖ್ಯೆ,

ಮನೋರಂಜನಾ ಸಾಧನಗಳು, ಪ್ರತ್ಯೇಕವಾದ ಅಡುಗೆ ಮನೆ, ಅಡುಗೆಗೆ ಬಳಸುವ ಇಂಧನ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸೌಕರ್ಯ, ಭೂ ಹಿಡುವಳಿ, ಹಣದ ಉಳಿತಾಯ, ಸಾಲದ ಪ್ರಮಾಣ, ಸಾಲದ ಮೂಲಗಳು, ಸಾಲದ ಕಾರಣಗಳು ಹೀಗೆ ಕುಟುಂಬದ ವೈಯಕ್ತಿಕವಾದ ವಿಸ್ತೃತವಾದ ಮಾಹಿತಿ ಒದಗಿಸುತ್ತದೆ. ಮಾದರಿ ಪ್ರಶ್ನಾವಳಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂದರ್ಶನ ಮಾಹಿತಿ ಎರಡರಲ್ಲಿ ಪ್ರವಾಹದ ಸಮಯದಲ್ಲಿ ಮತ್ತು ನಂತರದ ದಿನಗಳಲ್ಲಿ ವ್ಯಕ್ತಿಗಳು ಎದುರಿಸಿದ ಸಾಮಾಜಿಕ, ಆರ್ಥಿಕ, ಪರಿಸರಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟವು ನಂತರದ ಪ್ರಶ್ನೆಗಳು ಪರಿಹಾರ ಮತ್ತು ಪುನರ್ವಸತಿಗೆ ಸಂಬಂಧಿಸಿದವುಗಳಾಗಿವೆ.

ಸಾಮಾಜಿಕ ಕ್ಷೇತ್ರದ ಮೇಲೆ ಪ್ರವಾಹದ ಪರಿಣಾಮವೆಂದರೆ ಪ್ರವಾಹದಿಂದಾದ ಸಾಮಾನ್ಯ ಜನಜೀವನದ ಮೇಲಾದ ಪರಿಣಾಮ. ಇದರಲ್ಲಿ ಪ್ರವಾಹದ ಸಮಯದಲ್ಲಿ ಗ್ರಾಮದ ಜನರ ವಾಸ್ತವ್ಯ, ಸರಕಾರದ ಸಹಾಯ, ಪ್ರವಾಹದಿಂದ ವಿವಾಹ, ಆರೋಗ್ಯ, ಮಕ್ಕಳು, ಮಹಿಳೆಯರು, ಹಿರಿಯರು, ಧಾರ್ಮಿಕ ಕ್ಷೇತ್ರದ ಮೇಲಾದ ಪರಿಣಾಮಗಳ ಕುರಿತು ಮಾಹಿತಿ ಪಡೆಯಲಾಗಿದೆ. ಇದರಲ್ಲಿ ಮೇಲಿನ ವಿಷಯಗಳಿಗೆ ಸಂಬಂಧಿಸಿದ ೩೯ ಪ್ರಶ್ನೆಗಳಿವೆ.

ಪ್ರವಾಹದಿಂದಾದ ಆರ್ಥಿಕ ಕ್ಷೇತ್ರದ ಪರಿಣಾಮ ತಿಳಿಯಲು ೩೮ ಪ್ರಶ್ನೆಗಳಿವೆ. ಇದರಲ್ಲಿ ಭೂಮಿ, ಬೆಳೆ, ಉದ್ಯೋಗ, ಆದಾಯಗಳ ಮೇಲೆ ಪ್ರವಾಹದ ಪರಿಣಾಮ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪಶು ಸಂಗೋಪನೆ ಪ್ರಮುಖ ಕಾರಣ. ಪ್ರವಾಹದ ಸಮಯದಲ್ಲಿ ಇವುಗಳ ಸ್ಥಿತಿ ತಿಳಿದುಕೊಳ್ಳಲು ಜಾನುವಾರುಗಳಿಗೆ ಸಂಬಂಧಿಸಿದ ೧೨ ಪ್ರಶ್ನೆಗಳಿವೆ.

ನದಿ ಪಾತ್ರದ ಬದಲಾವಣೆ, ಗ್ರಾಮದ ಸುತ್ತಮುತ್ತಲಿನ ಗುಂಡಿಗಳಲ್ಲಿ ನೀರು ತುಂಬಿರುವುದು, ಮನೆಗಳಿಗೆ ಹಾನಿ ಮುಂತಾದ ಪರಿಸರ ಸಂಬಂಧಿತ ಪ್ರವಾಹದ ಪರಿಣಾಮ ತಿಳಿಯಲು ೨೪ ಪ್ರಶ್ನೆಗಳ ಮುಖಾಂತರ ಮಾಹಿತಿ ಪಡೆಯಲಾಗಿದೆ.

ಪ್ರವಾಹದಿಂದ ಬಾಧಿತ ಜನರಿಗೆ ಸರಕಾರ ಪರಿಹಾರ ನೀಡಿತು. ಪರಿಹಾರ ಕ್ರಮ, ಪರಿಹಾರದ ಮೊತ್ತ, ಪರಿಹಾರಕ್ಕೆ ಸಂಬಂಧಿಸಿದಂತೆ ಜನರ ಪ್ರತಿಕ್ರಿಯೆ ಮುಂತಾದ ಅಂಶಗಳಿಗೆ ಸಂಬಂಧಿಸಿದ ೧೭ ಪ್ರಶ್ನೆಗಳ ಮುಖಾಂತರ ಪರಿಹಾರಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಅಥಣಿ ತಾಲೂಕಿನ ಅನೇಕ ಗ್ರಾಮಗಳು ಪ್ರತಿವರ್ಷ ಪ್ರವಾಹ ಭೀತಿ ಎದುರಿಸುತ್ತಿರುವುದರಿಂದ ಸರಕಾರ ಶಾಶ್ವತ ಪುನರ್ವಸತಿ ಯೋಜನೆ ಹಾಕಿಕೊಂಡಿದೆ. ಖವಟಕೊಪ್ಪ ಗ್ರಾಮವು ಶಾಶ್ವತ ಪುನರ್ವಸತಿ ಯೋಜನೆಯಲ್ಲಿದೆ. ಸ್ಥಳಾಂತರ ಮತ್ತು ಶಾಶ್ವತ ಪುನರ್ವಸತಿ

ಯೋಜನೆ ಹೇಗಿರಬೇಕೆಂದು ತಿಳಿಯಲು ೩೫ ಪ್ರಶ್ನೆಗಳ ಮುಖಾಂತರ ಜನರ ವಿಚಾರಗಳನ್ನು ಸಂಗ್ರಹಿಸಲಾಗಿದೆ. ಇದರ ಮಾದರಿ ಪ್ರಶ್ನಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಹೀಗೆ ಪ್ರವಾಹದಿಂದ ವಿವಿಧ ಕ್ಷೇತ್ರಗಳ ಮೇಲಾದ ಪರಿಣಾಮ ತಿಳಿಯಲು ವಿಸ್ತೃತವಾದ ಪ್ರಶ್ನಾವಳಿ ಸಿದ್ಧಪಡಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನದ ಅವಧಿ :

ನನ್ನ ಮಾಹಿತಿ ಸಂಗ್ರಹಣೆಯ ಪ್ರಕ್ರಿಯೆಯು ಜೂನ್ ೨೦೧೦ರಿಂದ ಡಿಸೆಂಬರ್ ೨೦೧೦ರ ವರೆಗೆ ಮುಂದುವರೆಯಿತು. ಇದೊಂದು ವಿಸ್ತೃತ ಪ್ರಶ್ನಾವಳಿಯಾಗಿರುವುದರಿಂದ ದಿನಕ್ಕೆ ೮ರಿಂದ ೧೦ ಕುಟುಂಬಗಳನ್ನು ಮಾತ್ರ ಸಂದರ್ಶನ ಮಾಡಲು ಸಾಧ್ಯವಾಗುತ್ತಿತ್ತು. ಕುಟುಂಬದಲ್ಲಿ ೧೮ ವರ್ಷಗಳಿಗಿಂತ ಮೇಲ್ಪಟ್ಟ ವ್ಯಕ್ತಿಗಳನ್ನು ಸಂದರ್ಶಿಸಲು ನಿರ್ಧರಿಸಲಾಯಿತು.

೧.೫ ಅಧ್ಯಯನ ಕ್ಷೇತ್ರದ ಭೌಗೋಳಿಕ ಹಿನ್ನೆಲೆ

ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮವನ್ನು ಆಯ್ದುಕೊಳ್ಳಲಾಗಿದೆ. ಖವಟಕೊಪ್ಪ ಗ್ರಾಮದ ಭೌಗೋಳಿಕ ಕ್ಷೇತ್ರದ ಪರಿಚಯ ನೀಡಲಾಗಿದೆ.

ಭೌಗೋಳಿಕ ಸಂಗತಿಗಳು :

ಮಾನವ ಜೀವನದ ಮೇಲೆ ಭೌಗೋಳಿಕ ಅಂಶಗಳು ಪ್ರಭಾವ ಬೀರುತ್ತವೆ. ಕಾರಣ ಜೀವನ ಶೈಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಪ್ರಾಥಮಿಕ ಅವಶ್ಯಕತೆಗಳಾದ ಆಹಾರ, ಉಡುಪು, ವಸತಿ ಅಲ್ಲದೆ ಮಾನವನ ಉತ್ಕೃಷ್ಟ ಸೃಷ್ಟಿಗಳಾದ ಕಲೆ, ವಿಜ್ಞಾನ, ಸಾಹಿತ್ಯ ಮತ್ತಿತರ ಸಾಂಸ್ಕೃತಿಕ ಅಂಶಗಳ ಮೇಲೂ ಆಯಾ ಪ್ರದೇಶದ ಪರಿಸರ ಪ್ರಭಾವ ಬೀರುತ್ತದೆ.

ಒಂದು ಪ್ರದೇಶದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನು ಅಧ್ಯಯನ ಮಾಡುವಾಗ ಅಲ್ಲಿನ ಭೌಗೋಳಿಕ ಹಿನ್ನೆಲೆ ಗಮನಿಸುವುದು ಅವಶ್ಯ. ಭಾರತ ದೇಶವನ್ನು ಸ್ಥೂಲವಾಗಿ ಮೂರು ಭೌಗೋಳಿಕ ವಿಭಾಗಗಳಲ್ಲಿ ವರ್ಗೀಕರಿಸಲಾಗುತ್ತದೆ.

೧) ಉತ್ತರ ಭಾರತ

೨) ಮಧ್ಯ ಭಾರತ

೩) ದಕ್ಷಿಣ ಭಾರತ

ಉತ್ತರ ಹಾಗೂ ದಕ್ಷಿಣ ಭಾರತದ ಜನರ ಸಾಮಾನ್ಯ ಭಾಷೆ ಹಿಂದಿ ಅಥವಾ ಸಂಸ್ಕೃತದ ಉಪಭಾಷೆಗಳು. ದಕ್ಷಿಣ ಭಾರತವೆಂದರೆ ದ್ರಾವಿಡ ಭಾರತ. ದ್ರಾವಿಡ ಭಾರತದ ಪ್ರಮುಖ ರಾಜ್ಯಗಳು ನಾಲ್ಕು ಅವುಗಳೆಂದರೆ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ. ಈ ರಾಜ್ಯಗಳ ಜನರಾಡುವ ಕನ್ನಡ, ತಮಿಳು, ತೆಲುಗು ಹಾಗೂ ಮಲೆಯಾಳಂ ಭಾಷೆಗಳು ದ್ರಾವಿಡ ಮೂಲದ ಭಾಷೆಗಳು.

ಕರ್ನಾಟಕ ರಾಜ್ಯದ ಭೌಗೋಳಿಕ ಪರಿಸರ :

೧೯೫೬ರಲ್ಲಿ ಭಾಷಾವಾರು ಪ್ರಾಂತಗಳ ವಿಂಗಡಣೆಯ ಸಂದರ್ಭದಲ್ಲಿ ಕನ್ನಡ ಮಾತನಾಡುವ ಜನರ ಭೌಗೋಳಿಕ ಪರಿಸರವನ್ನು ಕರ್ನಾಟಕವೆಂದು ಗುರುತಿಸಲಾಯಿತು.

ಸನ್ನಿವೇಶ ಮತ್ತು ವಿಸ್ತೀರ್ಣ :

ಕರ್ನಾಟಕವು ಭಾರತದ ಪರ್ಯಾಯ ದ್ವೀಪದ ಪಶ್ಚಿಮದ ಭಾಗದಲ್ಲಿದ್ದು ೧೧° ೩೫' ಪೂರ್ವದಿಂದ ೧೮° ೩೦' ಉತ್ತರ ಅಕ್ಷಾಂಶ ಮತ್ತು ೭೪° ೧೨' ದಿಂದ ೭೮° ೪೦' ಪೂರ್ವ ರೇಖಾಂಶಗಳ ಮಧ್ಯದಲ್ಲಿದ್ದು ಪೂರ್ವ ಪಶ್ಚಿಮವಾಗಿ ೪೦೦ ಕಿ.ಮೀ ಅಗಲ ಹಾಗೂ ದಕ್ಷಿಣೋತ್ತರವಾಗಿ ೭೫೦ ಕಿ.ಮೀ ಉದ್ದವಾಗಿದೆ. ಕರ್ನಾಟಕದ ಉತ್ತರಕ್ಕೆ ಮಹಾರಾಷ್ಟ್ರ, ವಾಯುವ್ಯಕ್ಕೆ ಗೋವಾ, ಪೂರ್ವಕ್ಕೆ ಆಂಧ್ರಪ್ರದೇಶ, ದಕ್ಷಿಣ ಮತ್ತು ಆಗ್ನೇಯಕ್ಕೆ ತಮಿಳುನಾಡು, ನೈರುತ್ಯಕ್ಕೆ ಕೇರಳ ಮತ್ತು ಪಶ್ಚಿಮಕ್ಕೆ ಅರಬ್ಬಿ ಸಮುದ್ರವಿದೆ.

ಹಿನ್ನೆಲೆ :

೧೯೫೬ರ ಭಾಷಾವಾರು ರಾಜ್ಯ ಪುನರ್ವಿಂಗಡಣಾ ಶಾಸನದ ಪ್ರಕಾರ ಮುಂಬೈ ಪ್ರಾಂತದಿಂದ ೪ ಜಿಲ್ಲೆಗಳು (ಬೆಳಗಾವಿ, ಧಾರವಾಡ, ವಿಜಾಪೂರ, ಉತ್ತರಕನ್ನಡ ಜಿಲ್ಲೆಗಳು) ಹೈದ್ರಾಬಾದ ಪ್ರಾಂತದಿಂದ (ಗುಲಬರ್ಗಾ, ರಾಯಚೂರ, ಬೀದರ), ಮದ್ರಾಸ ಪ್ರಾಂತದಿಂದ (ದಕ್ಷಿಣ ಕನ್ನಡ ಮತ್ತು ಕೊಳ್ಳೆಗಾಲ ತಾಲೂಕು, ಕೊಡಗು ರಾಜ್ಯ ಸೇರಿ) ಮೈಸೂರು ಪ್ರದೇಶವನ್ನೊಳಗೊಂಡು ೧೯೫೬ ನವ್ಹೆಂಬರ ೧ರಂದು "ವಿಶಾಲ ಮೈಸೂರು" ರಾಜ್ಯ ಉದಯವಾಯಿತು. ನಂತರ ೧೯೭೩ ನವ್ಹೆಂಬರ್ ೧ರಂದು ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣ ಮಾಡಲಾಯಿತು.

ಪ್ರಾಕೃತಿಕ ವಿಭಾಗಗಳು :

ಭೂಸ್ವರೂಪ, ಮಳೆಯ ಪ್ರಮಾಣ ಮತ್ತು ಸಸ್ಯವರ್ಗ ಆಧರಿಸಿ ಕರ್ನಾಟಕವನ್ನು ಕರಾವಳಿ, ಮಲೆನಾಡು ಮತ್ತು ಮೈದಾನ ಪ್ರದೇಶಗಳೆಂದು ಮೂರು ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು.

ಭೂಪ್ರದೇಶ :

ಕರ್ನಾಟಕವು ೧,೯೧,೭೯೧ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು ರಾಷ್ಟ್ರದ ಒಟ್ಟು ವಿಸ್ತೀರ್ಣದ ಶೇಕಡಾ ೫.೮೩ ರಷ್ಟನ್ನು ಹೊಂದಿದೆ. ರಾಜ್ಯವನ್ನು ಬೆಳಗಾವಿ, ಗುಲ್ಬರ್ಗ, ಮೈಸೂರು, ಬೆಂಗಳೂರು ಎಂದು ನಾಲ್ಕು ಕಂದಾಯ ವಿಭಾಗಗಳಾಗಿ ವಿಭಜಿಸಲಾಗಿ, ರಾಜ್ಯದಲ್ಲಿ ೩೦ ಜಿಲ್ಲೆಗಳಿವೆ. ಕರ್ನಾಟಕವು ೧೭೬ ತಾಲೂಕುಗಳು, ೭೪೫ ಹೋಬಳಿಗಳು, ೨೭೪೮೧ ವಸತಿ ಗ್ರಾಮಗಳನ್ನು ಹೊಂದಿದೆ. ಬೆಂಗಳೂರು ರಾಜ್ಯದ ರಾಜಧಾನಿಯಾಗಿದ್ದು ರಾಜ್ಯದ ಆಗ್ನೇಯ ಭಾಗದಲ್ಲಿದೆ.

ಆಡಳಿತ ವಿಭಾಗಗಳು :

ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕ ರಾಜ್ಯವನ್ನು ೪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಬೆಳಗಾವಿ, ಬೆಂಗಳೂರು, ಗುಲ್ಬರ್ಗಾ ಹಾಗೂ ಮೈಸೂರು ವಿಭಾಗಗಳು.

ಜನಸಂಖ್ಯೆ :

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ ೬೧,೧೩೦,೭೦೪. ಇದರಲ್ಲಿ ೩,೧೦,೫೭,೭೪೨ ಪುರುಷರು, ೩,೦೦,೭೨,೬೬೨ ಸ್ತ್ರೀಯರಿದ್ದಾರೆ. ಸಾಕ್ಷರತೆ ಪ್ರಮಾಣ ೭೫.೬ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ೮೨.೯, ಸ್ತ್ರೀಯರದ್ದು ೬೮.೧ ರಷ್ಟಿದೆ. ಲಿಂಗಾನುಪಾತ ೧೦೦೦ ಪುರುಷರಿಗೆ ೯೬೮ ಸ್ತ್ರೀಯರ ಸಂಖ್ಯೆ ಇದೆ. ಜನಸಂಖ್ಯಾ ಬೆಳವಣಿಗೆ ದರ ೧೫.೬೨ ರಷ್ಟಿದೆ.

ಬೆಳಗಾವಿ ಜಿಲ್ಲೆಯ ಭೌಗೋಳಿಕ ಪರಿಸರ :

ಸ್ಥಾನ ಮತ್ತು ಸನ್ನಿವೇಶ :

೧) ಸಕ್ಕರೆ ಜಿಲ್ಲೆಯೆಂದು ಹೆಸರು ಗಳಿಸಿದ ಬೆಳಗಾವಿ ಜಿಲ್ಲೆ ಕರ್ನಾಟಕ ರಾಜ್ಯದ ವಾಯುವ್ಯ ಭಾಗದಲ್ಲಿದ್ದು ೧೫೦-೫೮' ರಿಂದ ೧೬೦೫೮' ಉತ್ತರ ಅಕ್ಷಾಂಶ ಮತ್ತು ೭೪೦-೦೫' ರಿಂದ ೭೫೦-೨೮' ಪೂರ್ವ ರೇಖಾಂಶಗಳ ಮಧ್ಯದಲ್ಲಿ ಹರಡಿದೆ. ಈ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ವಿಜಾಪೂರ, ಬಾಗಲಕೋಟ, ಹಾಗೂ ದಕ್ಷಿಣದಲ್ಲಿ ಧಾರವಾಡ ಜಿಲ್ಲೆ, ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪೂರ ಹಾಗೂ ರತ್ನಾಗಿರಿ ಜಿಲ್ಲೆಗಳಿವೆ.

ವಿಸ್ತೀರ್ಣ :

ಜಿಲ್ಲೆಯ ಒಟ್ಟು ವಿಸ್ತೀರ್ಣ ೧೩೪೧೫ ಚ.ಕಿ.ಮೀ, ರಾಜ್ಯದಲ್ಲಿ ೫ನೇ ಸ್ಥಾನ ಪಡೆದಿದೆ. ಜಿಲ್ಲೆಯಲ್ಲಿ ೧೦ ತಾಲೂಕುಗಳು, ೩೫ ಹೋಬಳಿಗಳು, ೧೨೫೫ ಜನವಸತಿ ಗ್ರಾಮಗಳು, ೧೫ ಜನವಸತಿ ಇಲ್ಲದ ಗ್ರಾಮಗಳಿದ್ದು, ೨೨ ಪಟ್ಟಣ ಪ್ರದೇಶಗಳನ್ನು ಒಳಗೊಂಡಿದೆ.

ತಾಲೂಕುಗಳು :

ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಹತ್ತು ತಾಲೂಕುಗಳಿವೆ-

೧) ಅಥಣಿ	೨) ಬೈಲಹೊಂಗಲ	೩) ಬೆಳಗಾವಿ	೪) ಚಿಕ್ಕೋಡಿ	೫) ಗೋಕಾಕ
೬) ಹುಕ್ಕೇರಿ	೭) ಖಾನಾಪೂರ	೮) ರಾಯಬಾಗ	೯) ರಾಮದುರ್ಗ	೧೦) ಸವದತ್ತಿ

ಈ ತಾಲೂಕುಗಳನ್ನು ಮೂರು ಕಂದಾಯ ಉಪವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

ಆಡಳಿತ ವಿಭಾಗಗಳು :

ಬೆಳಗಾವಿ ಜಿಲ್ಲಾ ಕೇಂದ್ರ ಸ್ಥಾನವಾಗಿದ್ದು ಆಡಳಿತದ ಅನುಕೂಲಕ್ಕಾಗಿ ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ ಮೂರು ಕಂದಾಯ ಉಪವಿಭಾಗಗಳನ್ನು ರೂಪಿಸಲಾಗಿದೆ. ಜಿಲ್ಲೆಯಲ್ಲಿ ೧ ಮಹಾನಗರಪಾಲಿಕೆ, ೨ ನಗರಸಭೆಗಳು, ೭ ಪುರಸಭೆಗಳು, ೬ ಪಟ್ಟಣ ಪಂಚಾಯತಗಳು ಹಾಗೂ ಗ್ರಾಮ ಪಂಚಾಯತಗಳಿವೆ. ಜಿಲ್ಲೆಯಲ್ಲಿ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ ೪೮೫. ಭೌಗೋಳಿಕವಾಗಿ ಜಿಲ್ಲೆಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಬಹುದು

೧) ಗುಡ್ಡಗಾಡು ವಲಯ - ಖಾನಾಪುರ ತಾಲೂಕ

೨) ಅರೆಮಲೆನಾಡು - ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ ಮತ್ತು ಬೆಳಗಾವಿ ತಾಲೂಕುಗಳು

೩) ಶುಷ್ಕ ವಲಯ – ಅಥಣಿ, ರಾಯಬಾಗ, ಗೋಕಾಕ, ರಾಮದುರ್ಗ ಮತ್ತು ಸೌದತ್ತಿ ತಾಲೂಕುಗಳು ಬರುತ್ತವೆ.

ಮಣ್ಣು :

ಹೆಚ್ಚಿನ ಪ್ರದೇಶದಲ್ಲಿ ಮಣ್ಣು ಮಧ್ಯಮದಿಂದ ಆಳವಾದ ಎರೆಯಿಂದ ಕೂಡಿದ್ದು, ಕೆಲವೆಡೆ ಸಾಧಾರಣ ಕಪ್ಪು ಕೆಂಪು ಮಿಶ್ರಿತ ಭೂಮಿಯಿದೆ. ನೀರಾವರಿಯಾಗುತ್ತಿರುವ ಪ್ರದೇಶಗಳಲ್ಲಿ ಭೂಮಿ ಸವಕಳಿ ಕಡೆ ತಿರುಗುತ್ತಿದೆ.

ನದಿಗಳು ಮತ್ತು ಅಣೆಕಟ್ಟುಗಳು :

ಕೃಷ್ಣಾ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳು ಜಿಲ್ಲೆಯ ಮುಖ್ಯ ನದಿಗಳು. ಮಾರ್ಕಂಡೇಯ, ಹಿರಣ್ಯಕೇಶಿ, ಮಹದಾಯಿ, ವೇದಗಂಗಾ ಮತ್ತು ದೂಧಗಂಗಾ ಉಪನದಿಗಳು. ಮಲಪ್ರಭಾ ನದಿಗೆ ಸವದತ್ತಿ ತಾಲೂಕಿನ ನವಿಲುತೀರ್ಥದ ಹತ್ತಿರ ಹಾಗೂ ಘಟಪ್ರಭಾ ನದಿಗೆ ಹುಕ್ಕೇರಿ ತಾಲೂಕಿನ ಹಿಡಕಲ್ಲ ಹತ್ತಿರ ಬೃಹತ್ ಅಣೆಕಟ್ಟುಗಳನ್ನು ಕಟ್ಟಲಾಗಿದೆ, ಈ ಎರಡು ಬೃಹತ್ ಯೋಜನೆಗಳಿಂದ ಜಿಲ್ಲೆಯ ಒಟ್ಟು ೮ ತಾಲೂಕುಗಳು ಭಾಗಶಃ ನೀರಾವರಿ ಸೌಲಭ್ಯ ಹೊಂದಿವೆ. ಇತ್ತೀಚಿಗೆ ಅಥಣಿ ತಾಲೂಕಿನ ದರ್ಗಾ ಹತ್ತಿರ ಕೃಷ್ಣಾ ನದಿಗೆ ಸಣ್ಣ ಪ್ರಮಾಣದ ಅಣೆಕಟ್ಟು ನಿರ್ಮಿಸಲಾಗಿದೆ.

ಜನಸಂಖ್ಯೆ :

೨೦೧೧ ರಲ್ಲಿ ಜಿಲ್ಲೆಯ ಜನಸಂಖ್ಯೆ ೪೭.೭೮ ಲಕ್ಷ ಇದ್ದು ೨೪.೨೭ ಲಕ್ಷ ಸ್ತ್ರೀಯರು ಮತ್ತು ೨೩.೫೧ ಲಕ್ಷ ಪುರುಷರಿದ್ದಾರೆ. ಸಾಕ್ಷರತಾ ಪ್ರಮಾಣ ೭೩.೯೪% ರಷ್ಟಿದ್ದು, ಇವರಲ್ಲಿ ೮೨.೯೦% ಪುರುಷರು ಹಾಗೂ ೬೪.೭%ರಷ್ಟು ಸ್ತ್ರೀಯರು.

ಬೆಳೆಗಳು :

ಜಿಲ್ಲೆಯಲ್ಲಿ ಜೋಳ, ಸಜ್ಜೆ, ಮುಸುಕಿನ ಜೋಳ, ಭತ್ತ ಮತ್ತು ಗೋಧಿ ಮುಖ್ಯ ಆಹಾರ ಬೆಳೆಗಳು. ಕಬ್ಬು, ಹತ್ತಿ, ತಂಬಾಕು, ಅರಿಶಿಣ ಇವು ಆರ್ಥಿಕ ಬೆಳೆಗಳಾಗಿವೆ.

ಜಾನುವಾರಗಳು :

ಜಿಲ್ಲೆಯಲ್ಲಿ ೨೮.೦೮ ಲಕ್ಷ ಜಾನುವಾರುಗಳು ಮತ್ತು ೮.೪೭ ಲಕ್ಷ ಕುಕ್ಕುಟಗಳಿವೆ ಹಾಗೂ ೨೬೩ ಪಶು ವೈದ್ಯ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ.

ಖನಿಜ :

೨೦೦೭-೦೮ರಲ್ಲಿ ಒಟ್ಟು ಮುಖ್ಯ ಖನಿಜ ಉತ್ಪತ್ತಿ ಪ್ರಮಾಣ ೨.೬೯ ಲಕ್ಷ ಮೆಟ್ರಿಕ್ ಟನ್, ನೊಂದಾಯಿತ ಕಾರ್ಖಾನೆಗಳ ಸಂಖ್ಯೆ ೫೫೮, ೦.೫೭ ಲಕ್ಷ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಒಟ್ಟು ೩೨೨೬೫ ಸಣ್ಣ ಕೈಗಾರಿಕಾ ಘಟಕಗಳಿವೆ.

ಅಥಣಿ ತಾಲೂಕಿನ ಭೌಗೋಳಿಕ ಹಿನ್ನೆಲೆ :

ಅಥಣಿ ತಾಲೂಕು ಕರ್ನಾಟಕ ರಾಜ್ಯದ ವಾಯವ್ಯದಲ್ಲಿರುವ ಬೆಳಗಾವಿ ಜಿಲ್ಲೆಯ ಉತ್ತರಕ್ಕಿದೆ. ಜಿಲ್ಲೆಗೆ ಅಥಣಿ ತಾಲೂಕು ನೀಡಿದ ಆರ್ಥಿಕ ಮತ್ತು ಸಾಂಸ್ಕೃತಿಕ ಕೊಡುಗೆ ಅಪಾರ. ಇದಕ್ಕೆಲ್ಲ ಇಲ್ಲಿ ವಾಸಿಸುವ ವಿವಿಧ ಮತ, ಪಂಥ, ಪಂಗಡ ಭಾಷೆಗಳನ್ನಾಡುವ ಜನಸಮುದಾಯ ಮತ್ತು ತಾಲೂಕಿನಲ್ಲಿ ಹರಿದು ತನ್ನ ಕರುಣೆಯ ಹಸ್ತ ಚಾಚಿದ ಕೃಷ್ಣೆ ಪ್ರಮುಖ ಕಾರಣ.

ಸ್ಥಾನ ಮತ್ತು ಸನ್ನಿವೇಶ :

ಅಥಣಿ ತಾಲೂಕು ೧೬°.೩೦ ಉತ್ತರ ಅಕ್ಷಾಂಶದಿಂದ ೧೬°.೫೮' ಉತ್ತರ ಅಕ್ಷಾಂಶಗಳ ಮಧ್ಯೆ ಹಾಗೂ ೭೪°.೪೦ ಪೂರ್ವ ರೇಖಾಂಶದಿಂದ ೭೫°.೨೧ ಪೂರ್ವ ರೇಖಾಂಶಗಳ ಮಧ್ಯದಲ್ಲಿ ಹರಡಿಕೊಂಡಿದೆ. ಸಮುದ್ರ ಮಟ್ಟದಿಂದ ಸರಾಸರಿ ೪೫೦ ರಿಂದ ೮೫೦ ಮೀ ಎತ್ತರದಲ್ಲಿದೆ.

ವಿಸ್ತೀರ್ಣ :

ಅಥಣಿ ತಾಲೂಕು, ಬೆಳಗಾವಿ ಜಿಲ್ಲೆಯ ೧೦ ತಾಲೂಕುಗಳಲ್ಲಿ ಅತಿ ಹೆಚ್ಚು ವಿಸ್ತೀರ್ಣ ಹೊಂದಿದ ಪ್ರದೇಶ. ಇದರ ಒಟ್ಟು ವಿಸ್ತೀರ್ಣ ೧೯೯೫.೭ ಚ.ಕಿ.ಮೀಟರ ಇದ್ದು ಜಿಲ್ಲೆಯ ಒಟ್ಟು ವಿಸ್ತೀರ್ಣದ ಶೇಕಡಾ ೧೪.೮೭ ರಷ್ಟಿರುತ್ತದೆ.

ತಾಲೂಕಿನ ಗಡಿಗಳು :

ಬೆಳಗಾವಿ ಜಿಲ್ಲೆಯ ಉತ್ತರ ಸೀಮೆಯ ಈ ತಾಲೂಕು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವುದರಿಂದ ಗಡಿ ಜಿಲ್ಲೆಯ ಗಡಿ ತಾಲೂಕಾಗಿದೆ. ಉತ್ತರಕ್ಕೆ ಸಾಂಗ್ಲಿ ಜಿಲ್ಲೆಯ ಜತ್ತ ಮತ್ತು ಮಿರಜ ತಾಲೂಕುಗಳು ಪಶ್ಚಿಮದಲ್ಲಿ ಕೊಲ್ಲಾಪೂರ ಜಿಲ್ಲೆಯ ಶಿರೋಳ, ಈಶಾನ್ಯ ಮತ್ತು ಪೂರ್ವಕ್ಕೆ ವಿಜಾಪೂರ ಜಿಲ್ಲೆ, ಆಗ್ನೇಯದಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕು, ನೈಋತ್ಯದಲ್ಲಿ ಚಿಕ್ಕೋಡಿ ತಾಲೂಕು, ದಕ್ಷಿಣಕ್ಕೆ ರಾಯಬಾಗ ತಾಲೂಕುಗಳು ಸೀಮೆಗಳಾಗಿವೆ.

ಅಥಣಿ ತಾಲೂಕನ್ನು ಪ್ರಾಕೃತಿಕವಾಗಿ ಉತ್ತರ ಮತ್ತು ಈಶಾನ್ಯ ಪ್ರಸ್ತಭೂಮಿ ಮೈದಾನ ಪ್ರದೇಶಗಳೆಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ವಾಯುಗುಣ :

ತಾಲೂಕಿನಲ್ಲಿ ಒಣ ಹಾಗೂ ಆರೋಗ್ಯಕರವಾದ ವಾಯುಗುಣವಿದೆ. ಬೇಸಿಗೆ ಕಾಲ ಫೆಬ್ರುವರಿ ಮಧ್ಯಭಾಗದಿಂದ ಪ್ರಾರಂಭವಾಗಿ ಜೂನ್ ತಿಂಗಳ ಮೊದಲ ವಾರದವರೆಗೂ ಮುಂದುವರೆಯುತ್ತದೆ. ಮಳೆಗಾಲ ಜೂನ್‌ದಿಂದ ಸಪ್ಟೆಂಬರ್‌ದವರೆಗೆ, ಚಳಿಗಾಲ ಡಿಸೆಂಬರ್‌ದಿಂದ ಫೆಬ್ರುವರಿವರೆಗೆ ಇರುತ್ತದೆ. ಇಲ್ಲಿ ಸರಾಸರಿ ಉಷ್ಣಾಂಶ ೧೮.೦ ಸೆಂಟಿಗ್ರೇಡ್‌ದಿಂದ ೩೦.೧ ಸೆಂಟಿಗ್ರೇಡ್ ಇರುತ್ತದೆ. ಬೇಸಿಗೆಯಲ್ಲಿ ಸೆಖೆ, ಚಳಿಗಾಲದಲ್ಲಿ ಚಳಿ, ಮಳೆಗಾಲದಲ್ಲಿ ಸಮಶೀತೋಷ್ಣ ಹವೆ ಕಂಡು ಬರುತ್ತದೆ.

ಮಳೆ :

ತಾಲೂಕು ಜಿಲ್ಲೆಯ ಕಡಿಮೆ ಮಳೆ ಬೀಳುವ ಪ್ರದೇಶ. ಪೂರ್ವ ಹಾಗೂ ಉತ್ತರ ಭಾಗಗಳು ಸದಾ ಬರಗಾಲ ಪೀಡಿತ ಪ್ರದೇಶಗಳು. ಇಲ್ಲಿ ೫೫೫ ಮಿ.ಮಿ ಸರಾಸರಿ ಮಳೆಯಾಗುತ್ತದೆ. ಸಪ್ಟೆಂಬರ್ ತಿಂಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ೧೦ ಮಳೆಮಾಪನ ಕೇಂದ್ರಗಳಿವೆ.

ಜಲಸಂಪತ್ತು :

ಕೃಷ್ಣಾ ನದಿ ತಾಲೂಕಿನ ಜೀವನದಿಯಾಗಿದೆ. ಅಥಣಿ ಈಶಾನ್ಯ ಭಾಗದಲ್ಲಿ ಡೋಣಿ ನದಿ ೧೦ ಕಿ.ಮೀ ಪ್ರವಹಿಸಿದೆ. ಇದು ಅರೆಕಾಲಿಕ ನದಿಯಾಗಿದೆ. ತಾಲೂಕಿನ ದಕ್ಷಿಣ ಭಾಗ ಪ್ರವಾಹದಿಂದ ತತ್ತರಿಸುತ್ತಿದ್ದರೆ ಪೂರ್ವೋತ್ತರ ಭಾಗಗಳು ನೀರಿನ ತೊಂದರೆ ಅನುಭವಿಸುತ್ತವೆ.

ಬೆಳೆಗಳು :

ತಾಲೂಕಿನಲ್ಲಿ ಜೋಳ, ಸಜ್ಜೆ, ಮುಸುಕಿನ ಜೋಳ, ಗೋಧಿ ಪ್ರಮುಖ ಆಹಾರ ಬೆಳೆಗಳು. ಕಬ್ಬು, ಹತ್ತಿ, ಎಣ್ಣೆಕಾಳುಗಳು, ಹಣ್ಣುಗಳು ಪ್ರಮುಖ ವಾಣಿಜ್ಯ ಬೆಳೆಗಳು. ತಾಲೂಕಿನ ಪಶ್ಚಿಮ ಹಾಗೂ ದಕ್ಷಿಣದ ಮೇರೆಯಾಗಿ ಕೃಷ್ಣ ನದಿ ಹರಿಯುತ್ತಿರುವುದರಿಂದ ನದಿ ತೀರದ ಗ್ರಾಮಗಳಲ್ಲಿ ಕಬ್ಬು ಪ್ರಮುಖ ಬೆಳೆಯಾಗಿದೆ. ತಾಲೂಕಿನ ಕಬ್ಬು ಬೆಳೆಯ ಒಟ್ಟು ಅಂದಾಜು ಕ್ಷೇತ್ರ ೧೮೬೪೫ ಹೆಕ್ಟೇರ್. ಹೀಗಾಗಿ ಇಲ್ಲಿ ಒಟ್ಟು ಐದು ಸಕ್ಕರೆ ಕಾರ್ಖಾನೆಗಳಿವೆ. ಕೈಗಾರಿಕೆ ದೃಷ್ಟಿಯಿಂದ ತಾಲೂಕು ಹೆಚ್ಚಿನ ಬೆಳವಣಿಗೆ ಕಂಡಿಲ್ಲ. ಚರ್ಮೋದ್ಯಮ, ಸಕ್ಕರೆ ಉದ್ದಿಮೆಗಳು ಪ್ರಮುಖ. ೮ ಕೈಗಾರಿಕೆಗಳು ಮಾತ್ರ ಇವೆ. ಇಲ್ಲಿ ೪೮೨೫ ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಜನಸಂಖ್ಯೆ :

೨೦೧೧ರ ಜನಗಣತಿ ಪ್ರಕಾರ ೯೫೦೯೨೫ ಜನಸಂಖ್ಯೆಯಿದ್ದು ಇದರಲ್ಲಿ ೪೮೭೦೩೯ ಪುರುಷರು ಮತ್ತು ೪೬೩೮೮೦ ಸ್ತ್ರೀಯರಿದ್ದಾರೆ.

ಸಾಕ್ಷರತೆ :

ತಾಲೂಕಿನಲ್ಲಿ ೫೭೩೧೪೬ ಸಾಕ್ಷರರಿದ್ದು ಇವರಲ್ಲಿ ೩೩೦೭೫೨ ಪುರುಷರು ಮತ್ತು ೨೪೨೪೦೬ ಸ್ತ್ರೀಯರಿದ್ದಾರೆ.

ಖವಟಕೊಪ್ಪ :

ತಾಲೂಕಿನಲ್ಲಿ ಒಟ್ಟು ೫೧ ಗ್ರಾಮ ಪಂಚಾಯತಿಗಳಿದ್ದು ಇವುಗಳಲ್ಲಿ ೮೯ ಗ್ರಾಮಗಳು ಸಮಾವೇಶಗೊಂಡಿವೆ. ಪ್ರಸ್ತುತ ಅಧ್ಯಯನದ ಕೇಂದ್ರವಾಗಿರುವ ಖವಟಕೊಪ್ಪ ಗ್ರಾಮವು ಶಂಕರಹಟ್ಟಿ ಗ್ರಾಮ ಪಂಚಾಯತಿಗೆ ಸೇರಿದೆ.

ಗ್ರಾಮದ ಮೇರೆಗಳು :

ಗ್ರಾಮದ ಪೂರ್ವದಲ್ಲಿ ಕೃಷ್ಣಾ ನದಿಯಿದೆ. ಪಶ್ಚಿಮದಲ್ಲಿ ಶಂಕರಹಟ್ಟಿ, ದಕ್ಷಿಣಕ್ಕೆ ಶೇಗುಣಸಿ, ಉತ್ತರಕ್ಕೆ ದರೂರ ಗ್ರಾಮಗಳಿವೆ. ದರೂರ ಗ್ರಾಮದಿಂದ ಬರುವ ಕೃಷ್ಣೆ ಇಲ್ಲಿ

ದಕ್ಷಿಣಾಭಿಮುಖಿಯಾಗುತ್ತಾಳೆ. ದರೂರದಲ್ಲಿ ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಮುಂದೆ ಬಂದು ಬಲಕ್ಕೆ ತಿರುಗಿ ದಕ್ಷಿಣದೆಡೆಗೆ ಮುಖ ಮಾಡುವುದು.

ಇದು ಕೌಂಡಿಣ್ಯ ಋಷಿಯ ತಪೋಭೂಮಿ ಎಂದು ಹೇಳುತ್ತಾರೆ. ಅಥಣಿಯಿಂದ ದಕ್ಷಿಣಕ್ಕೆ ೨೨ ಕಿ.ಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೧೨೨.೮೦ ಹೆಕ್ಟೇರುಗಳು. ಕೃಷ್ಣಾ ನದಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತಿದ್ದು ಗ್ರಾಮವು ನದಿಯ ಪಶ್ಚಿಮ ದಡದಲ್ಲಿದೆ. ಇಲ್ಲಿ ಹನುಮಾನ ಮಂದಿರ, ಇಂಚಗೇರಿ ಮಠ, ಬಸವಣ್ಣನ ದೇವಾಲಯ, ಕಲ್ಮೇಶ್ವರ ಮಂದಿರ, ಎಲ್ಲಮ್ಮನ ದೇವಾಲಯ, ಬೀರಪ್ಪನ ದೇವಾಲಯ, ಕಾಳಿಕಾ ದೇವಾಲಯ, ಬಸದಿ ಹೀಗೆ ವಿವಿಧ ದೇವಾಲಯಗಳಿದ್ದು, ಹನುಮಾನ ಗ್ರಾಮದ ದೇವರು. ದಸರಾ ಹಬ್ಬ, ಹನುಮಾನ ಜಯಂತಿ, ಓಕಳಿ ಗ್ರಾಮದ ಪ್ರಮುಖ ಆಚರಣೆಗಳು. ದಸರಾ ಸಮಯದಲ್ಲಿ ಹನುಮಾನ ಮಂದಿರದಲ್ಲಿ ೯ ದಿನಗಳ ಕಾಲ ನಂದಾ ದೀಪಗಳನ್ನು ಉರಿಸುತ್ತಾರೆ. ಮುಸ್ಲಿಂ ಕುಟುಂಬಗಳೂ ಇವೆ. ಒಂದು ಮಸೀದಿ ಇದೆ. ಇವರು ಹಿಂದು ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಮುಸ್ಲಿಂ ಆಚರಣೆಗಳಲ್ಲಿ ಹಿಂದುಗಳು ಪಾಲ್ಗೊಳ್ಳುತ್ತಾರೆ.

ಜನಸಂಖ್ಯೆ :

೨೦೧೧ರ ಜನಗಣತಿ ಪ್ರಕಾರ ೮೪೯ ಕುಟುಂಬಗಳಿದ್ದು ೩೨೨೬ ಜನಸಂಖ್ಯೆ ಹೊಂದಿದೆ. ಇದರಲ್ಲಿ ೧೬೭೨ ಪುರುಷರು ಮತ್ತು ೧೬೦೪ ಸ್ತ್ರೀಯರಿದ್ದಾರೆ. ಲಿಂಗಾನುಪಾತ ೯೪೯ ಇರುತ್ತದೆ. ಸಾಕ್ಷರತಾ ಪ್ರಮಾಣ ೮೨.೩೬, ಪುರುಷರು ೮೪.೧೫ ಮತ್ತು ಸ್ತ್ರೀಯರು ೭೮ ಇದ್ದಾರೆ. ಗ್ರಾಮದಲ್ಲಿ ಬ್ರಾಹ್ಮಣರು, ಜೈನರು, ಲಿಂಗಾಯತ, ಮರಾಠಾ, ಮಾಳಿ, ಗಾಣಿಗರು, ನಾವಿ, ಕುರುಬ, ಗುರವ, ಪಂಚಾಳ, ಅಗಸ, ತಳವಾರ, ಮುಸ್ಲಿಂ, ಹೊಲೇಯ, ಮಾದಿಗ, ದಾಸರು ಮುಂತಾದ ಸಮುದಾಯಗಳ ಜನ ವಾಸಿಸುತ್ತಿದ್ದಾರೆ.

ಶಿಕ್ಷಣ :

ಗ್ರಾಮದಲ್ಲಿ ಒಂದು ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳಿವೆ. ೪ ಅಂಗನವಾಡಿ ಕೇಂದ್ರಗಳಿವೆ.

ಪ್ರಮುಖ ಬೆಳೆಗಳು :

ಕೃಷಿಗೆ ಯೋಗ್ಯವಾದ ಭೂಮಿ ೧೦೧೫.೭೪ ಹೆಕ್ಟೇರ್ ಇದ್ದು, ಶೇಕಡಾ ೧೦೦ರಷ್ಟು ನೀರಾವರಿ ಸೌಲಭ್ಯ ಪಡೆದಿದೆ, ೧೯೮ ಪಂಪ್‌ಸೆಟ್‌ಗಳಿವೆ. ಕಬ್ಬು, ಹುರುಳಿ, ಗೋಧಿ ಪ್ರಮುಖ ಬೆಳೆಗಳು. ನೀರಿನ ದುರ್ಬಳಕೆಯ ಕಾರಣ ಭೂಮಿಯ ಸವಳು ಜವಳು ಹೆಚ್ಚಾಗುತ್ತಿದೆ. ಇತ್ತೀಚಿಗೆ ಒಟ್ಟು ಜಮೀನಿನ ಅರ್ಧದಷ್ಟು ಭಾಗ ಜವಳು ಹಿಡಿದಿದ್ದು, ಮುಂಬರುವ ದಿನಗಳಲ್ಲಿ ಸಂಪೂರ್ಣ ಜಮೀನು ಜವಳಾಗುವ ಅಪಾಯವಿದೆ.

ಪಶು ಸಂಗೋಪನೆ :

ಗ್ರಾಮದಲ್ಲಿ ಪಶು ಸಂಗೋಪನೆ ಪ್ರಮುಖ ಪಾತ್ರ ವಹಿಸುತ್ತದೆ. ೫೯೬ ಎಮ್ಮೆಗಳು, ೩೮೦ ಮೇಕೆಗಳು ಇನ್ನುಳಿದ ೧೧೨ ಜಾನುವಾರಗಳಿವೆ. ಪ್ರತಿದಿನ ಸರಾಸರಿ ೮೦೦ ಲೀಟರ್ ಹಾಲು ಉತ್ಪಾದನೆಯಾಗುತ್ತದೆ.

ಆಡಳಿತ :

ಒಂಭತ್ತು ಜನ ಗ್ರಾಮ ಪಂಚಾಯತ ಸದಸ್ಯರನ್ನು ಹೊಂದಿದ್ದು ಶಂಕರಹಟ್ಟಿ ಗ್ರಾಮ ಪಂಚಾಯತದಲ್ಲಿ ವಿಲೀನಗೊಂಡಿದೆ.

ಯೋಜನೆಗಳು :

ಇಂದಿರಾ ಆವಾಸ ಯೋಜನೆ, ಆಶ್ರಯ ಯೋಜನೆ, ಅಂಬೇಡ್ಕರ ಯೋಜನೆ, ಸುವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ, ಭಾಗ್ಯಜ್ಯೋತಿ ಯೋಜನೆ, ಕುಠಿರ ಜ್ಯೋತಿ ಯೋಜನೆಗಳು ಜಾರಿಯಲ್ಲಿವೆ. ಆರು ಸ್ವಸಹಾಯ ಸಂಘಗಳಿವೆ.

೧.೬ ಅಧ್ಯಯನದ ವ್ಯಾಪ್ತಿ

ಸ್ಥೂಲ ನೋಟದಲ್ಲಿ ಇದೊಂದು ವಿಸ್ತೃತ ಅಧ್ಯಯನ. ಪ್ರವಾಹ ನದಿ ತೀರದ ಎಲ್ಲ ಗ್ರಾಮಗಳನ್ನು ಬಾಧಿಸಿದರೂ ಅವೆಲ್ಲವುಗಳ ಸಮಸ್ಯೆ ಒಂದೇಯಾಗಿರುವುದಿಲ್ಲ. ಆಯಾ ಗ್ರಾಮದ ಭೌಗೋಳಿಕ ಹಿನ್ನೆಲೆಗೆ ತಕ್ಕಂತೆ ವಿವಿಧ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಈ ಹಿಂದೆ ಹೇಳಿದಂತೆ ಹತ್ತು ಹಲವು ಅಂಶಗಳು ಪ್ರವಾಹದ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಆದ್ದರಿಂದ ಅಧ್ಯಯನವನ್ನು ವಿಶಾಲವಾದ ಒಂದು ಭೌಗೋಳಿಕ ಪ್ರದೇಶಕ್ಕೆ ವಿಸ್ತೃತಗೊಳಿಸಿದರೆ ಅದರಿಂದ ಕಂಡು ಬರುವ ಫಲಿತಗಳು ಅಷ್ಟು ನಿಖರವಾಗಿರುವುದಿಲ್ಲ. ಈ ಕಾರಣದಿಂದ ಈ ಅಧ್ಯಯನಕ್ಕೆ

ವಿಶಾಲವಾದ ಹಿನ್ನೆಲೆಯನ್ನು ಇಟ್ಟುಕೊಂಡು ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮವೊಂದನ್ನೇ ಯೋಜಿಸಲಾಗಿದೆ. ಈ ದೃಷ್ಟಿಯಿಂದ ಇದೊಂದು ಸೂಕ್ಷ್ಮ ಸಂಶೋಧನೆ. ಇದು ಈ ಅಧ್ಯಯನದ ವ್ಯಾಪ್ತಿಯೂ, ಮಿತಿಯೂ ಹೌದು.

ಕೃಷ್ಣಾ ನದಿ ಕರ್ನಾಟಕದ ಬೆಳಗಾವಿ, ಬಾಗಲಕೋಟ, ವಿಜಾಪುರ ಹಗೂ ರಾಯಚೂರ ಜಿಲ್ಲೆಗಳಲ್ಲಿ ಹರಿಯುತ್ತದೆ. ಆದರೆ ೨೦೦೫ ಮತ್ತು ೨೦೦೬ರ ಪ್ರವಾಹಕ್ಕೆ ತುಂಬಾ ಹಾನಿಗೊಳಗಾದ ಗ್ರಾಮಗಳೆಂದರೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಗ್ರಾಮಗಳು. ಆ ಸಂದರ್ಭದಲ್ಲಿ ಬಾಗಲಕೋಟ ಜಿಲ್ಲೆಯ ಎರಡು ಗ್ರಾಮಗಳು ಸಂಪೂರ್ಣ ಹಾಗೂ ಎರಡು ಅರೆ ಜಲಾವೃತಗೊಂಡಿದ್ದರೆ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಎರಡು ಗ್ರಾಮಗಳು ಸಂಪೂರ್ಣ ಜಲಾವೃತ ಒಂದು ಗ್ರಾಮ ಅರೆ ಜಲಾವೃತ. ಆಗ ಪ್ರವಾಹಕ್ಕೆ ತುತ್ತಾದ ಅಥಣಿ ತಾಲೂಕಿನ ಒಟ್ಟು ಗ್ರಾಮಗಳು ಐದು ಸಂಪೂರ್ಣ ಮತ್ತು ಹನ್ನೆರಡು ಗ್ರಾಮಗಳು ಅರೆ ಜಲಾವೃತ. ಇವುಗಳಲ್ಲಿ ಅತ್ಯಂತ ಹೆಚ್ಚು ಕಷ್ಟವನ್ನು ಅನುಭವಿಸಿದ ಗ್ರಾಮಗಳು ಐದು. ಅವುಗಳಲ್ಲಿ ಖವಟಕೊಪ್ಪ ಒಂದು. ಆದ್ದರಿಂದ ಈ ಗ್ರಾಮವನ್ನು ಅಧ್ಯಯನದ ಕೇಂದ್ರವಾಗಿಸಲಾಗಿದೆ.

ಅಥಣಿ ತಾಲೂಕಿನ ಬಹುತೇಕ ಮುಳಗಡೆ ಗ್ರಾಮಗಳ ಮನೆಗಳ ಸಮೀಕ್ಷೆ ಕಾರ್ಯ ಮುಗಿದು ಪುನರ್ವಸತಿ ನೆಲೆಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಪರಿಹಾರ ಮೊತ್ತವನ್ನು ನಿಗದಿಗೊಳಿಸಲಾಗಿದೆ. ಆದರೆ ಖವಟಕೊಪ್ಪ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರವಾಹ ಹಾನಿಯ ವೈಜ್ಞಾನಿಕ ಸಮೀಕ್ಷೆ ಇವರೆಗೆ ಪೂರ್ಣಗೊಂಡಿಲ್ಲ. ಮನೆಗಳ ಸಮೀಕ್ಷೆ ಹಾಗೂ ಮೌಲ್ಯಮಾಪನ ವಿಳಂಬಗೊಳ್ಳುತ್ತಿದೆ. ಅಧಿಕಾರಿಗಳು ನಿರಾಸಕ್ತಿ ಹಾಗೂ ಚುನಾಯಿತ ಪ್ರತಿನಿಧಿಗಳ ಉಪೇಕ್ಷೆಯಿಂದಾಗಿ ಅಲ್ಲಿಯ ಜನರು ಆತಂಕಕ್ಕೆ ಒಳಗಾಗಿರುವರು. ಸ್ಥಳಾಂತರದ ನೆಲೆ ನಿರ್ಧಾರವಾಗಿಲ್ಲ. ಈ ವಿಳಂಬದಿಂದಾಗಿ ಭ್ರಷ್ಟಾಚಾರಕ್ಕೆ ಆಸ್ಪದ ದೊರೆತಿದ್ದು ಜನ ಪರಿಹಾರ ದೊರಕಿಸಿಕೊಳ್ಳುವಲ್ಲಿ ಅನಗತ್ಯ ಗೊಂದಲಕ್ಕಿಡಾಗುತ್ತಿದ್ದಾರೆ. ಅಲ್ಲಿಯ ನೆಲ, ಜಲ, ಗಾಳಿ, ಜನ ಸಮುದಾಯಗಳೊಂದಿಗೆ ನಿಕಟ ಸಂಬಂಧ ಮತ್ತು ಸಂಪರ್ಕ ಹೊಂದಿರುವುದರಿಂದ ಅಧ್ಯಯನಕ್ಕೆ ಆ ಗ್ರಾಮವನ್ನು ಆಯ್ದುಕೊಳ್ಳಲಾಗಿದೆ.

ಅಧ್ಯಯನದ ಮಹತ್ವ :

ಬದಲಾವಣೆ ನಿಸರ್ಗದ ನಿಯಮವಾಗಿದೆ (Change is law of Nature) ಪ್ರತಿಯೊಂದು ಸಮಾಜವು ಜನರ ಬುದ್ಧಿಶಕ್ತಿ, ಅನ್ಯ ಸಮಾಜಗಳ ಪ್ರಭಾವ ಮತ್ತು ನೈಸರ್ಗಿಕ ವಿಕೋಪಗಳಿಂದ ಬದಲಾವಣೆಗೆ ಒಳಪಡುತ್ತದೆ. ಬದಲಾವಣೆಗಳು ಸಕಾರಾತ್ಮಕವಾಗಿ ಇಲ್ಲವೇ

ನಕಾರಾತ್ಮಕವಾಗಿರಬಹುದು. ನಕಾರಾತ್ಮಕವಾಗಿ ಬದಲಾವಣೆಗೆ ಕಾರಣವಾದಂಥವುಗಳಲ್ಲಿ ಪ್ರವಾಹವೂ ಒಂದು. ಪ್ರವಾಹದಿಂದ ದುಷ್ಪರಿಣಾಮಕ್ಕೆ ಒಳಗಾದ ಗ್ರಾಮದ ಅಧ್ಯಯನವಿದು.

೧) ೨೦೦೫ ಮತ್ತು ೨೦೦೬ರ ಪ್ರವಾಹದಿಂದ ಖವಟಕೊಪ್ಪ ಗ್ರಾಮದ ಮೇಲಾದ ದುಷ್ಪರಿಣಾಮಗಳನ್ನು ತಿಳಿದುಕೊಳ್ಳಲು ಸಹಾಯಕ.

೨) ಗ್ರಾಮಕ್ಕೆ ಶಾಸ್ವತ ಸ್ಥಳ ನಿಗದಿಪಡಿಸಲು ಸಹಾಯಕ

೩) ಖವಟಕೊಪ್ಪ ಗ್ರಾಮದ ಜನರಿಗೆ ಸ್ಥಳಾಂತರ ಮತ್ತು ಶಾಸ್ವತ ಪುನರ್ವಸತಿ ಯೋಜನೆ ಬಗೆಗೆ ಮಾಹಿತಿ ಒದಗಿಸುತ್ತದೆ.

೪) ಸರ್ಕಾರದ ಪರಿಹಾರ ಕ್ರಮಗಳ ಕುರಿತು ತಿಳಿಸುತ್ತದೆ.

೫) ಗ್ರಾಮದ ಪ್ರಮುಖರಿಗೆ ಸ್ಥಳಾಂತರ ಮತ್ತು ಪುನರ್ವಸತಿ ಬಗೆಗೆ ಮಾಹಿತಿ ಒದಗಿಸುತ್ತದೆ.

೬) ತಾಲೂಕಿನ ಇನ್ನುಳಿದ ಪ್ರವಾಹ ಪೀಡಿತ ಗ್ರಾಮಗಳ ಅಧ್ಯಯನ ಮಾಡುವವರಿಗೆ ಸಹಾಯಕ

೭) ಪ್ರವಾಹದ ದುಷ್ಪರಿಣಾಮ ಕುರಿತು ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಅಧ್ಯಯನಗಳಾಗಿವೆ. ಈ ಎಲ್ಲ ಅಧ್ಯಯನಗಳಲ್ಲಿ ಪ್ರವಾಹ ಪೀಡಿತ ಜನರ ಆರ್ಥಿಕ ದುಷ್ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ. ಪ್ರವಾಹ ಪೀಡಿತ ಜನರ ಶಾಶ್ವತ ಪುನರ್ವಸತಿ ಕುರಿತ ಅಧ್ಯಯನಗಳ ಕೊರತೆ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದ ಪ್ರವಾಹ ಪೀಡಿತ ಜನರ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಯಾವ ರೀತಿಯಾದ ಕ್ರಮ ಕೈಕೊಳ್ಳಬೇಕು ಎಂಬುದರ ಕುರಿತು ವಿಶೇಷವಾಗಿ ಬೆಳಕು ಚೆಲ್ಲುತ್ತದೆ.

೮) ಸ್ಥಳಾಂತರದ ನಂತರ ಜನರ ಸಮಸ್ಯೆಗಳನ್ನು ಕುರಿತು ಚರ್ಚಿಸಿದ ಅನೇಕ ಅಧ್ಯಯನಗಳನ್ನು ಕಾಣುತ್ತವೆ. ಪ್ರಸ್ತುತ ಅಧ್ಯಯನವು ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಸ್ಥಳಾಂತರದ ಬಗೆಗೆ ಅನುಸೂಚಿದಾರರ ವಿಚಾರಗಳನ್ನು ಸಂಗ್ರಹಿಸಿ ಸರಕಾರದ ಪುನರ್ವಸತಿ ಯೋಜನೆಗಳ ಕುರಿತು ಚರ್ಚಿಸುತ್ತದೆ. ಇದರಿಂದ ಸರ್ಕಾರಕ್ಕೆ ಗ್ರಾಮದ ಶಾಸ್ವತ ಸ್ಥಳಾಂತರಕ್ಕೆ ಸಹಾಯಕ

೯) ಜನರು ಗ್ರಾಮೀಣ ಸಮುದಾಯದಲ್ಲಿ ವಾಸಿಸುತ್ತಿದ್ದು, ಸರಕಾರದ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸದಿರುವ, ಒಕ್ಕಲುತನ ಆಧಾರಿತ ಉದ್ಯೋಗ ನಿರ್ವಹಿಸುವ ಜನರಾಗಿದ್ದು ಸರಕಾರದ ಯೋಜನೆಗಳ ಬಗೆಗೆ ಮಾಹಿತಿ ಇಲ್ಲದವರಾಗಿದ್ದಾರೆ. ಅಧ್ಯಯನದಿಂದ ಜನರಿಗೆ ಸಹಾಯಕ

೧೦) ಸಂತ್ರಸ್ತರ ಪುನರ್ವಸತಿ ವಿಷಯದಲ್ಲಿ ಸರಕಾರ ದೃಢನಿರ್ಧಾರ ಕೈಗೊಂಡಿಲ್ಲ. ಸಚಿವರು ಸಂತ್ರಸ್ತರ ಪರವಾಗಿ ಮಾತನಾಡುತ್ತಿದ್ದರೆ, ಅಧಿಕಾರಿಗಳು ಅವರ ವಿರುದ್ಧ ಹೇಳಿಕೆ

ನೀಡುತ್ತಿದ್ದಾರೆ. ಹೀಗಾಗಿ ಸಂತ್ರಸ್ತರ ಸ್ಥಿತಿ ಡೋಲಾಯಮಾನವಾಗಿದೆ. ಅವರಿಗೆ ಸರಕಾರದ ನಿರ್ಧಾರ ಏನೆಂಬುದು ತಿಳಿಯುತ್ತಿಲ್ಲ. ಇವರ ನಿಜ ಸ್ಥಿತಿ ಅರಿತುಕೊಂಡು ಸ್ಥಳಾಂತರದ ಅಗತ್ಯವನ್ನು ವೈಜ್ಞಾನಿಕವಾಗಿ ಹಾಗೂ ವಾಸ್ತವಿಕವಾಗಿ ಪುನರ್ ಪರಿಶೀಲನೆ ಮಾಡುವುದು ಅಧ್ಯಯನದ ಆಶಯ.

೧೧) ಪ್ರತಿವರ್ಷ ಸಂಭವಿಸುತ್ತಿರುವ ಪ್ರವಾಹದಿಂದ ಗ್ರಾಮದ ಜನರ ಸಂಬಂಧಿಕರಿಗೂ ಸಮಸ್ಯೆಯಾಗುತ್ತಿದೆ. ಇದರಿಂದ ಈ ಗ್ರಾಮಗಳ ಜೊತೆ ವೈವಾಹಿಕ ಸಂಬಂಧ ಬೆಳೆಸಲು ಇಚ್ಛಿಸುತ್ತಿಲ್ಲ ಸಂಬಂಧ ಬೆಳೆಸಿದವರೂ ಬೇಸರಪಟ್ಟುಕೊಳ್ಳುತ್ತಿದ್ದಾರೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಅಧ್ಯಯನದ ಉದ್ದೇಶ. ಪ್ರವಾಹ ಸಂತ್ರಸ್ತರ ಅಳಲನ್ನು ಕೇಳುವ ತಾಯ್ತನದ ಅಂತಃಕರಣದ ಹೃದಯಗಳು ಇಲ್ಲವಾಗಿವೆ. ಸರಕಾರಗಳಿಗೆ ನಿರ್ದಿಷ್ಟ ಯೋಜನಾ ಉದ್ದೇಶವಿಲ್ಲದಿರುವುದು, ಹಣಕಾಸು ಸಂಪನ್ಮೂಲಗಳ ಕೊರತೆ, ಜನಪ್ರತಿನಿಧಿಗಳ ಜಾರಿಕೊಳ್ಳುವ ಧೋರಣೆ, ಅಧಿಕಾರಿಗಳ ನಿರಾಸಕ್ತಿಗಳಿಂದಾಗಿ ಪುನರ್ವಸತಿ ಸಮಸ್ಯೆಗಳು ಜಟಿಲಗೊಳ್ಳುತ್ತವೆ. ಈ ಎಲ್ಲ ಸಮಸ್ಯೆಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಪ್ರಾತಿನಿಧಿಕವಾಗಬಲ್ಲುದು.

ಸೇರೆನಾ ಮತ್ತು ಕೊಠಾರಿ (೧೯೯೭) ಅಭಿವೃದ್ಧಿ ಯೋಜನೆಗಳಲ್ಲಿ ಸಮಾಜವಿಜ್ಞಾನಿಗಳ ಯೋಜನೆಗಳ ಅವಶ್ಯಕತೆ, ಉದ್ಧೇಶ, ಜಾರಿ, ಜಾರಿಯಿಂದಾದ ಸಮಸ್ಯೆಗಳು ಮುಂತಾದವುಗಳ ಕುರಿತು ಸರಕಾರ ಮತ್ತು ಸಂಘ-ಸಂಸ್ಥೆಗಳಿಗೆ ನೈಜ ಚಿತ್ರಣ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ತಿಳಿಸಿದ್ದಾರೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕ್ಷೇತ್ರ ಅಧ್ಯಯನದ ಇತಿಮಿತಿಗಳು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಸಮಯದ ಮಿತಿ ಮುಂತಾದ ಅಂಶಗಳನ್ನು ಆಧರಿಸಿ ಅಧ್ಯಯನವನ್ನು ಒಂದು ಗ್ರಾಮಕ್ಕೆ ಮಿತಿಗೊಳಿಸಲಾಗಿದೆ. ಪ್ರವಾಹದಿಂದ ಅಥಣಿ, ಚಿಕ್ಕೋಡಿ ಮತ್ತು ಜಮಖಂಡಿ ತಾಲೂಕುಗಳ ೩೦ ಗ್ರಾಮಗಳು ಜಲಾವೃತವಾಗುತ್ತಿದ್ದು. ಇವುಗಳಲ್ಲಿ ಸಂಪೂರ್ಣವಾಗಿ ಪ್ರವಾಹಕ್ಕೆ ಒಳಗಾಗುವ ಮತ್ತು ಸಂಪೂರ್ಣವಾಗಿ ಪುನರ್ವಸತಿಗೊಳ್ಳುವ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮವನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಪುನರ್ವಸತಿಗೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳಾಗಿವೆ. ಅವುಗಳು ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚಿನ

ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ದುಕೊಂಡು ಅಧ್ಯಯನ ಮಾಡಿರುವುದನ್ನು ಕಾಣುತ್ತೇವೆ. ಹೀಗೆ ಮಾಡುವುದರಿಂದ ಸಮುದಾಯಗಳ ಪೂರ್ತಿ ಚಿತ್ರಣ ಪಡೆದುಕೊಳ್ಳಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಒಂದೇ ಗ್ರಾಮವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕೆಂದು ತೀರ್ಮಾನಿಸಲಾಯಿತು. ಕಾರಣ ಇದೊಂದು ಸೂಕ್ಷ್ಮತರದ ಅಧ್ಯಯನವಾಗಿದ್ದು ಇಡಿ ಗ್ರಾಮದ ಸಮಗ್ರ ಅಧ್ಯಯನವಾಗಿದೆ. ಪ್ರವಾಹದಿಂದ ಬಾಧಿತವಾಗುವ ಗ್ರಾಮಗಳು ಬೇರೆ ಬೇರೆ ತೆರನಾದ ಸಮಸ್ಯೆಗಳನ್ನು ಎದುರಿಸುತ್ತಿವೆ. ಕಾರಣ ಖವಟಕೊಪ್ಪ ಗ್ರಾಮದ ಸಮಸ್ಯೆಗಳು ಸಾರ್ವತ್ರಿಕವಾದವುಗಳೆಂದು ಹೇಳಲಾಗದು.

೧) ಕೃಷ್ಣಾ ಪ್ರವಾಹದಿಂದ ಅಥಣಿ ತಾಲೂಕಿನ ಏಳು ಗ್ರಾಮಗಳು ಸಂಪೂರ್ಣವಾಗಿ ಮುಳುಗಡೆಯಾಗುತ್ತಿವೆ. ಆದರೆ ಅವುಗಳಲ್ಲಿ ಒಂದು ಗ್ರಾಮವನ್ನು ಮಾತ್ರ ಅಧ್ಯಯನ ಮಾಡುತ್ತಿದ್ದೇನೆ.

೨) ಖವಟಕೊಪ್ಪ ಗ್ರಾಮದ ಸಮಸ್ಯೆಗಳ ಸಂಪೂರ್ಣವಾಗಿ ಮುಳಗಡೆ ಹೊಂದುತ್ತಿರುವ ಅಥಣಿ ತಾಲೂಕಿನ ೭ ಗ್ರಾಮಗಳ ಸಾರ್ವತ್ರಿಕ ಸಮಸ್ಯೆಗಳೆಂದು ಹೇಳಲಾಗದು

೩) ಅಧ್ಯಯನದಲ್ಲಿ ಶೇಕಡಾವಾರು ಪ್ರಮಾಣವನ್ನು ಮಾತ್ರ ಉಪಯೋಗಿಸಿದ್ದು ಇನ್ನುಳಿದ ಮಾನದಂಡಗಳನ್ನು ಉಪಯೋಗಿಸದೆ ಇರುವುದು.

೪) ಅಧ್ಯಯನಕ್ಕೆ ಶೇಕಡಾ ೮೦ ರಷ್ಟು ಮಾಹಿತಿದಾರರನ್ನು ಮಾತ್ರ ಆಯ್ದುಕೊಂಡಿರವುದು.

೫) ೨೦೦೫ ಮತ್ತು ೨೦೦೬ ಪ್ರವಾಹಗಳ ಕುರಿತು ಅಧ್ಯಯನ ಮಾಡುತ್ತಿರುವುದರಿಂದ ಗ್ರಾಮದ ಜನತೆ ಆ ಅವಧಿಯಲ್ಲಿ ಪ್ರವಾಹದ ಕಠೋರತೆಯನ್ನು ಮರೆತಿರುವಂತಿತ್ತು.

೬) ಸರಕಾರದ ಕಛೇರಿಗಳಲ್ಲಿ ಪ್ರಚಲಿತ ಮಾಹಿತಿ ಕೊಡಲು ಹಿಂದೇಟು ಹಾಕುತ್ತಾರೆ. ಇನ್ನು ಹಿಂದಿನ ಮಾಹಿತಿ ಪಡೆದುಕೊಳ್ಳುವುದು ಹರಸಾಹಸದ ಕೆಲಸ. ಪ್ರವಾಹದಿಂದ ಬಾಧಿತವಾದ ಜನರು ತಮಗೇನು ಇದರಿಂದ ಲಾಭವಿಲ್ಲವೆಂದು ತಿಳಿದು ಮಾಹಿತಿ ಒದಗಿಸಲು ಅಸಹಕರಿಸುವುದು, ಮಾಹಿತಿ ಕೊಟ್ಟರೆ ನನಗೆ ದೊಡ್ಡ ಉಪಕಾರ ಮಾಡಿದಂತೆ ಭಾವಿಸುವುದು

೭) ಇದೊಂದು ಕ್ಷೇತ್ರ ಕಾರ್ಯ ಆಧಾರಿತ ಅಧ್ಯಯನವಾಗಿರುವುದರಿಂದ ಅಧ್ಯಯನ ಕ್ಷೇತ್ರದಲ್ಲಿ ಲಭ್ಯವಾಗುವ ಮಾಹಿತಿಯ ನಿಖರತೆ ಆಧಾರದ ಮೇಲೆ ಸಂಶೋಧನಾ ವಿಷಯದ ಫಲಿತಗಳು ವಿಶ್ಲೇಷಣೆಯಾಗಿವೆ. ಮಾಹಿತಿದಾರರು ವಿಷಯಗಳನ್ನು ಮರೆಮಾಚಿ ಉತ್ತರ ನೀಡಿದರೆ ಅಧ್ಯಯನ ನಿಖರವಾದದ್ದು ಎಂದು ಹೇಳಲಿಕ್ಕಾಗದು.

೧.೭ ಅಧ್ಯಯನ ವಿನ್ಯಾಸ :

ಪ್ರಸ್ತುತ ಅಧ್ಯಯನ ಪ್ರಾಕೃತಿಕ ಪ್ರಕೋಪವೊಂದರ ಕೇಂದ್ರಿತವಾಗಿದ್ದು ಅದರ ಮೂಲ ಅದು ತಂದೊಡ್ಡುವ ಕಷ್ಟನಷ್ಟ, ಸೃಷ್ಟಿಸುವ ಸಮಸ್ಯೆಗಳ ಕುರಿತು ವಿವರಗಳನ್ನು ಕಲೆ ಹಾಕಿ ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಒಟ್ಟು ಹತ್ತು ಅಧ್ಯಾಯಗಳಲ್ಲಿ ವರ್ಗೀಕರಿಸಲಾಗಿದೆ.

ಅಧ್ಯಾಯ ಒಂದು : ವಿಷಯ ಪ್ರವೇಶ

ಪ್ರಸ್ತಾವನೆ, ಅಧ್ಯಯನ ವಿಷಯದ ಸಮಸ್ಯಿಕರಣ, ಅಧ್ಯಯನದ ಉದ್ದೇಶಗಳು, ಅಧ್ಯಯನ ವಿಧಾನ, ಅಧ್ಯಯನ ಕ್ಷೇತ್ರದ ಭೌಗೋಳಿಕ ಹಿನ್ನೆಲೆ, ಅಧ್ಯಯನ ವ್ಯಾಪ್ತಿ, ಮಹತ್ವ, ಮಿತಿಗಳು, ಅಧ್ಯಾಯಗಳ ವಿನ್ಯಾಸ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಾಯ ಎರಡು : ಪ್ರವಾಹ ಸಮಸ್ಯೆಗಳ ಅವಲೋಕನ

ಈ ಅಧ್ಯಾಯದಲ್ಲಿ ಪ್ರವಾಹ ಪುನರಾವಲೋಕನ ಮಾಡಲಾಗಿದೆ. ಅಧ್ಯಾಯವು ಪ್ರಸ್ತಾವನೆ, ವಿಪತ್ತುಗಳು, ಪ್ರವಾಹ ಒಂದು ವಿಪತ್ತು, ಪ್ರವಾಹದ ವ್ಯಾಖ್ಯೆಗಳು, ಪ್ರವಾಹದ ವರ್ಗೀಕರಣ, ಪ್ರವಾಹದ ಕಾರಣಗಳು, ಕೃಷ್ಣಾ ಜಲಾನಯನ ಪ್ರದೇಶ, ಕೃಷ್ಣಾ ಕೊಳದ ಯೊಜನೆಗಳು, ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ಪ್ರವಾಹಗಳು, ಪ್ರವಾಹದಿಂದ ಬೆಳಗಾವಿ ಜಿಲ್ಲೆಯಲ್ಲಿ ೨೦೦೫ ಮತ್ತು ೨೦೦೬ರಲ್ಲಾದ ಹಾನಿ ವಿವರಗಳನ್ನು ಮತ್ತು ಜಾಗತಿಕ ವ್ಯಾಪ್ತಿಯ ಪ್ರವಾಹ ವಿನಾಶದ ಇತಿಹಾಸವನ್ನು ಒಳಗೊಂಡಿದೆ.

ಅಧ್ಯಾಯ ಮೂರು : ಪ್ರವಾಹ ಮತ್ತು ಪುನರ್ವಸತಿ ಅಧ್ಯಯನಗಳ ಸಮೀಕ್ಷೆ

ಪ್ರವಾಹ ಒಂದು ಜಾಗತಿಕ ಸಮಸ್ಯೆ. ಚೈನಾ, ಬಾಂಗ್ಲಾದೇಶ, ಭಾರತದಂತಹ ಕೆಲವು ದೇಶಗಳು ಪ್ರತಿವರ್ಷ ಪ್ರವಾಹದಿಂದ ತತ್ತರಿಸುತ್ತವೆ. ಪ್ರವಾಹದ ಕಾರಣ, ಪರಿಣಾಮ, ಪರಿಹಾರ ಕ್ರಮಗಳು, ಸ್ಥಳಾಂತರ ಮುಂತಾದ ವಿಷಯಗಳ ಕುರಿತು ಸಾಕಷ್ಟು ಅಧ್ಯಯನಗಳಾಗಿವೆ. ಇವುಗಳಲ್ಲಿ ಪ್ರಮುಖ ಅಧ್ಯಯನಗಳ ವಿಶ್ಲೇಷಣೆಯ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ ನಾಲ್ಕು : ಸಂತ್ರಸ್ತರ ಸಾಮಾಜಿಕ ಪರಿಸ್ಥಿತಿ ಹಾಗೂ ಆರ್ಥಿಕ ಸ್ಥಿತಿಗಳ ಅಧ್ಯಯನ

ಪ್ರವಾಹ ಸಂತ್ರಸ್ತರೆಲ್ಲರೂ ಒಂದೇ ಸಮಸ್ಯೆಗೆ ಒಳಗಾಗುವುದಿಲ್ಲ. ಸಂತ್ರಸ್ತರ ವಯಸ್ಸು, ಜಾತಿ, ಲಿಂಗ, ಶಿಕ್ಷಣ, ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿ ಮೊದಲಾದ ಅಂಶಗಳಿಂದ ಪ್ರವಾಹದ

ಸಮಸ್ಯೆಗಳು ಸರಳಗೊಳ್ಳದೆ ಸಂಕೀರ್ಣಗೊಳ್ಳುತ್ತವೆ. ಅವುಗಳನ್ನು ಅರಿತುಕೊಳ್ಳುವುದೇ ಅಧ್ಯಯನದ ಮೊದಲ ಸಮಸ್ಯೆ ಆದ್ದರಿಂದ ಆ ಸಮಸ್ಯೆಗಳನ್ನು ಸೃಷ್ಟಿಸುವ ಸಂತ್ರಸ್ತರ ಹಿನ್ನೆಲೆಯನ್ನು ತಿಳಿದುಕೊಳ್ಳಲು ಪ್ರಸ್ತುತ ಅಧ್ಯಾಯವನ್ನು ಮೀಸಲಿಡಲಾಗಿದೆ.

ಅಧ್ಯಾಯ ಐದು : ಪ್ರವಾಹ ಸೃಷ್ಟಿಸಿದ ಸಾಮಾಜಿಕ ಸಮಸ್ಯೆಗಳು

ಈ ಅಧ್ಯಯನದ ಕೇಂದ್ರ ಸಮಸ್ಯೆ ಅಥಣಿ ತಾಲೂಕಿನ ಕೃಷ್ಣಾ ಪ್ರವಾಹವಾಗಿದ್ದು ಅದರ ಪ್ರಮುಖ ಆಯಾಮ ಎರಡು ಸಾವಿರದ ಐದು ಮತ್ತು ಆರರ ಪ್ರವಾಹಗಳು ಸೃಷ್ಟಿಸಿದ ಸಮಸ್ಯೆಗಳು. ಆ ಸಂದರ್ಭದಲ್ಲಿ ಎಲ್ಲರ ಗಮನಕ್ಕೆ ಬಂದ ಸಾಮಾಜಿಕ ಸಮಸ್ಯೆಗಳನ್ನು ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರು : ಪ್ರವಾಹ ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳು

ಈ ಅಧ್ಯಾಯದಲ್ಲಿ ಪ್ರವಾಹದಿಂದ ಆರ್ಥಿಕ ಕ್ಷೇತ್ರದ ಮೇಲಾದ ಪರಿಣಾಮಗಳನ್ನು ಅವಲೋಕಿಸಲಾಗಿದೆ. ಪ್ರವಾಹ ಜಮೀನು, ಬೇಸಾಯ ಪದ್ಧತಿ, ಬೆಳೆಗಳ ಸ್ವರೂಪ, ಆದಾಯ, ರಸಗೊಬ್ಬರಗಳ ಅತಿಯಾದ ಬಳಕೆ ಮುಂತಾದ ಸಮಸ್ಯೆಗಳಿಗೆ ಕಾರಣವಾಯಿತು. ಇವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳು : ಪ್ರವಾಹ ಸೃಷ್ಟಿಸಿದ ಪರಿಸರ ಸಂಬಂಧಿತ ಸಮಸ್ಯೆಗಳು

ಈ ಅಧ್ಯಾಯದಲ್ಲಿ ಪ್ರವಾಹ ಸೃಷ್ಟಿಸಿದ ಗ್ರಾಮದ ಭೂಪ್ರದೇಶ ಮತ್ತು ಪರಿಸರಗಳ ಮೇಲಿನ ಪರಿಣಾಮಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟು : ಪರಿಹಾರ ಸಂಬಂಧಿತ ಸಮಸ್ಯೆಗಳು

ಪ್ರವಾಹದ ಸಮಯದಲ್ಲಿ ಸರಕಾರ ಕುಟುಂಬಗಳ ಜೀವನೋಪಾಯಕ್ಕೆ, ಮನೆಗಳಿಗೆ ಮತ್ತು ಬೆಳೆಗಳಿಗೆ ತಾತ್ಕಾಲಿಕ ಪರಿಹಾರಗಳನ್ನು ನೀಡಿತು. ಪರಿಹಾರ ಸಮಸ್ಯೆಯಲ್ಲಾದ ಸಮಸ್ಯೆಗಳ ಕುರಿತು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಅಧ್ಯಾಯ ಒಂಬತ್ತು : ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳು

ಖವಟಕೊಪ್ಪ ಗ್ರಾಮ ಪ್ರವಾಹದಿಂದ ಸಂಪೂರ್ಣವಾಗಿ ಬಾದಿತಗೊಳ್ಳುವ ಗ್ರಾಮ. ಈ ಗ್ರಾಮವನ್ನು ಸರಕಾರ ಸಂಪೂರ್ಣವಾಗಿ ಸ್ಥಳಾಂತರಿಸಲು ಯೋಚಿಸುತ್ತಿದೆ. ಸ್ಥಳಾಂತರ ಮತ್ತು ಪುನರ್ವಸತಿ ಕುರಿತು ಜನರ ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಹತ್ತು : ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದ ಫಲಿತಗಳು ಇಲ್ಲಿವೆ. ಒಂದರ್ಥದಲ್ಲಿ ಅಧ್ಯಯನ ಕಂಡುಕೊಂಡ ಫಲಿತಾಂಶಗಳ ದಾಖಲಾತಿ. ಫಲಿತಗಳ ಒಟ್ಟು ಅಧ್ಯಯನದ ಫಲ. ಇವುಗಳನ್ನು ಮುಂದಿಟ್ಟುಕೊಂಡು ಕೃಷ್ಣಾ ಪ್ರವಾಹ ಸಮಸ್ಯೆಗೆ ಅಥಣಿ ತಾಲೂಕಿನ ಗ್ರಾಮಗಳಿಗೆ ಅದರಲ್ಲಿಯೂ ಸೂಕ್ಷ್ಮ ಅಧ್ಯಯನಕ್ಕೆ (Micro View) ಒಳಪಡಿಸಲಾದ ಖವಟಕೊಪ್ಪ ಗ್ರಾಮಕ್ಕೆ ಬೇಕಾದ ಪರಿಹಾರಗಳು ಅವುಗಳನ್ನು ಜಾರಿಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಲಾಗಿದೆ. ಇದರಲ್ಲಿ ಪ್ರಸ್ತಾವನೆ, ಅಧ್ಯಯನದ ಫಲಿತಗಳು, ಪ್ರಾಕಲ್ಪನೆಗಳ ಸತ್ಯಾಸತ್ಯತೆಗಳ ಪರಿಶೀಲನೆ, ಪ್ರಮುಖವಾದ ಸಲಹೆಗಳು, ಖವಟಕೊಪ್ಪ ಗ್ರಾಮದ ಜನರು ಗಮನಿಸಬೇಕಾದ ಅಂಶಗಳನ್ನು ಒಳಗೊಂಡಿದೆ.

ಖವಟಕೊಪ್ಪ ಗ್ರಾಮದ ವಿವಿಧ ವರ್ಗ, ಜಾತಿ, ಲಿಂಗ, ಅಂತಸ್ತುಗಳಿಂದ ಒಡಗೂಡಿದ ಸಮುದಾಯದ ಆಯ್ದ ೫೮೦ ಸಂತ್ರಸ್ತರನ್ನು ಸಂದರ್ಶಿಸಿ ಸಿದ್ಧಪಡಿಸಲಾದ ಅಧ್ಯಯನದಿಂದ ಕಂಡುಕೊಂಡ ವಿವಿಧ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ಕ್ರಮಬದ್ಧಗೊಳಿಸಲಾಗಿದೆ. ಇದು ಅಧ್ಯಯನದ ಸಮಾರೋಪವೂ ಹೌದು.

ಅಧ್ಯಾಯ : ಎರಡು

ಪ್ರವಾಹ ಸಮಸ್ಯೆಗಳ ಅವಲೋಕನ

ಅಧ್ಯಾಯ : ಎರಡು

ಪ್ರವಾಹಃ ಸಮಸ್ಯೆಗಳ ಅವಲೋಕನ

೨.೧ ಪ್ರಸ್ತಾವನೆ :

ಪ್ರವಾಹ ಒಂದು ವಿಪತ್ತು, ಅತಿಯಾದಾಗ ರಾಷ್ಟ್ರೀಯ ವಿಪತ್ತಾಗಿ ಪರಿವರ್ತಿತಗೊಳ್ಳಬಹುದಾದ ಸಾಮಾಜಿಕ ಬಹುಮುಖ್ಯ ಆಪತ್ತು. ೨೦೦೫ ಮತ್ತು ೨೦೦೬ರಲ್ಲಿಯ ಕೃಷ್ಣೆಯ ಪ್ರವಾಹ ರಾಷ್ಟ್ರೀಯ ವಿಪತ್ತಿನ ಸ್ವರೂಪ ಪಡೆದಿರುವುದು ತಿಳಿದ ವಿಷಯ.

ಪ್ರಪಂಚದ ಜನಸಮುದಾಯ ಪ್ರಾಚೀನ ಕಾಲದಿಂದಲೂ ನೂರಾರು ವಿಪತ್ತುಗಳನ್ನು ಎದುರಿಸುತ್ತ ಬಂದಿದೆ. ಪ್ರವಾಹ, ಭೂಕಂಪನ, ಜ್ವಾಲಾಮುಖಿ, ಭೂಕುಸಿತ, ಚಂಡಮಾರುತ ಮೊದಲಾದ ನೈಸರ್ಗಿಕ ವಿಪತ್ತುಗಳೊಂದಿಗೆ ಮಾನವ ಪ್ರೇರಿತ ವಿಪತ್ತುಗಳಾದ ಯುದ್ಧ ವಿಕಿರಣದಂತಹ ಹಲವು ವಿಪತ್ತುಗಳು ಸಮಾವೇಶಗೊಳ್ಳುತ್ತವೆ. ಆದ್ದರಿಂದ ಭಾರತ ಸರಕಾರ ವಿಪತ್ತುಗಳ ಅಧ್ಯಯನಕ್ಕೆಂದೆ ಒಂದು ಇಲಾಖೆಯನ್ನು ನಿರ್ಮಿಸಿದೆ.

೨.೨ ವಿಪತ್ತುಗಳು :

ಪ್ರಾಚೀನ ಕಾಲದಿಂದಲೂ ಮನುಷ್ಯ ವಿಪತ್ತುಗಳ ಬಗೆಗೆ ತಿಳಿದಿದ್ದಾನೆ. ಅನೇಕ ವಿಪತ್ತುಗಳನ್ನು ಅನುಭವಿಸಿದ್ದಾನೆ. ವಿಪತ್ತು ಎಂಬ ಪದವನ್ನು ದಿನ ನಿತ್ಯದ ಜೀವನದಲ್ಲಿ ಸಾಕಷ್ಟು ಬಾರಿ ಬಳಸುತ್ತೇವೆ. ಹಲವು ಬಾರಿ ಸರಿಯಾದ ಅರ್ಥದಲ್ಲಿ ಬಳಸುವುದೂ ಇಲ್ಲ. ಸರಿಯಾಗಿ ಅರ್ಥೈಸುವುದಿಲ್ಲ. ಅಂದರೆ ಈ ಪದ ಅಷ್ಟು ವ್ಯಾಪಕವಾದ ಅರ್ಥ ಪಡೆದಿದೆಯೆಂದರ್ಥ.

ವಿಪತ್ತು ಇಂಗ್ಲೀಷಿನ ಡಿಜಾಸ್ಟರ್‌ನ ಸಮನಾರ್ಥಕ ಪದ. ಡಿಜಾಸ್ಟರ್ ಪದವು ಫ್ರೆಂಚ್ ಭಾಷೆಯ ಡೆಸ್ ಮತ್ತು ಆಸ್ಟರ್ ಪದಗಳಿಂದ ಬಂದಿದ್ದು 'ಡೆಸ್' ಎಂದರೆ ಕೆಟ್ಟ, 'ಆಸ್ಟರ್' ಎಂದರೆ ಚುಕ್ಕೆ ಅಥವಾ ಗುರುತು ಎಂಬ ಅರ್ಥ ಕೊಡುತ್ತದೆ. ಇದರ ಒಟ್ಟಾರೆ ಅರ್ಥವೆಂದರೆ ಆಕಸ್ಮಿಕವಾಗಿ ಸಂಭವಿಸುವ ಜೀವ, ವಿತ್ತ, ಹಾನಿ. 'ವಿಪತ್ತು' ಪದದ ಕುರಿತು ಹಲವರು ಹಲವು ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ.

೧. 'ಆಕಸ್ಮಿಕವಾಗಿ ಸಂಭವಿಸಿ ಮೂಲ ಕಟ್ಟಡ ಸಮಾಜ ಅಥವಾ ಸಮುದಾಯ ಕಾರ್ಯ ವಿಧಾನದ ಮೇಲೆ ದುಷ್ಪರಿಣಾಮ ಬೀರುವ ಕ್ರಿಯೆ' ಸಂಯುಕ್ತ ರಾಷ್ಟ್ರ ಸಂಘ.

೨. 'ಕಡಿಮೆ ಅವಧಿಯಲ್ಲಿ ದೇಶದ ಆಸ್ತಿ, ಮೂಲ ಸೌಕರ್ಯ ಮತ್ತು ಸಾಮಾನ್ಯ ಜನಜೀವನದ ಮೇಲೆ ದುಷ್ಪರಿಣಾಮ ಬೀರಿ ಜನರ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಆಪತ್ತು". – ಜಾಗತಿಕ ಬ್ಯಾಂಕು.

೩. ನೈಸರ್ಗಿಕ ಇಲ್ಲವೆ ಮಾನವ ನಿರ್ಮಿತ ಅತಿರೇಖದ ಸಂಗತಿಗಳು ಜನರ ಜೀವನದ ಮೇಲೆ ದುಷ್ಪರಿಣಾಮ ಬೀರುವುದೇ ವಿಕೋಪ.

೪. ವಿಕೋಪದ ಅತಿರೇಖ ದುಷ್ಪರಿಣಾಮಗಳು.

ಈ ಮೇಲಿನ ಎಲ್ಲ ವಿಚಾರಗಳನ್ನು ಆಧರಿಸಿ 'ವಿಪತ್ತು' ಪದದ ವ್ಯಾಪ್ತಿಯನ್ನು ಹೀಗೆ ನಿರ್ಧರಿಸಬಹುದು. ವಿಪತ್ತು ಎಂದರೆ ಆಕಸ್ಮಿಕ ಆಪತ್ತು.

- ಸಮಾಜದ ಬಹಳಷ್ಟು ಜನರ ಮೇಲೆ ಪರಿಣಾಮ ಬೀರಿ, ಸಾಮಾನ್ಯ ಜನಜೀವನವನ್ನು ತಲೆಕೆಳಗೆ ಮಾಡಬಲ್ಲುದು.
- ವಿಪತ್ತುಗಳಿಂದ ಜೀವ ಮತ್ತು ವಿತ್ತ ಹಾನಿಗಳಾಗುತ್ತವೆ.
- ಸಮುದಾಯಗಳು ವಿಪತ್ತುಗಳಿಂದಾದ ಹಾನಿಯಿಂದ ಸುಧಾರಿಸಿಕೊಳ್ಳಲು ಹೊರಗಿನ ಜನರ ಸಹಾಯದ ನಿರೀಕ್ಷೆಯಲ್ಲಿರುತ್ತವೆ.
- ಇವು ದೀರ್ಘಕಾಲಿನ ಪರಿಣಾಮಗಳಿಗೆ ಕಾರಣವಾಗಬಲ್ಲವು.

ದೇಶದಲ್ಲಿ ವಿಕೋಪಗಳು ಸರ್ವೇಸಾಮಾನ್ಯ. ಪ್ರತಿವರ್ಷ ಒಂದಿಲ್ಲೊಂದು ವಿಪತ್ತುಗಳು ಸಂಭವಿಸುತ್ತವೆ. ಪ್ರತಿವರ್ಷ ಸಂಭವಿಸುವ ವಿಪತ್ತುಗಳನ್ನು ಅವಲೋಕಿಸಿದಾಗ ಈ ಕೆಳಗಿನ ಸಂಗತಿಗಳು ತಿಳಿಯುತ್ತವೆ.

⇨ ದೇಶದ ೬೦% ರಷ್ಟು ಭೂಕಂಪಗ್ರಸ್ತ ಪ್ರದೇಶ.

⇨ ೪೦ ಮಿಲಿಯನ್ ಹೆಕ್ಟೇರಿನಷ್ಟು ಪ್ರವಾಹಕ್ಕೀಡಾಗುವ ಪ್ರದೇಶ.

⇨ ೮೦೦೦ ಕಿ.ಮೀ ನಷ್ಟು ಕರಾವಳಿ ಚಂಡಮಾರುತ ಅಪ್ಪಳಿಸುವ ಪ್ರದೇಶ.

⇨ ಪೂರ್ವ, ಪಶ್ಚಿಮ, ಕರಾವಳಿ ಮತ್ತು ನಡುಗಡ್ಡೆಗಳು ಸುನಾಮಿ ಕೇಂದ್ರಗಳು.

⇨ ಮನುಷ್ಯನಿಂದಾಗುವ ವಿಪತ್ತುಗಳು.

⇨ ಇತರ ಅವಘಡಗಳು.[೧]

ವಿಪತ್ತುಗಳ ಪ್ರಕಾರಗಳು :

ವಿಪತ್ತುಗಳನ್ನು ಸ್ಥೂಲವಾಗಿ ಮೂರು ವಿಧಗಳಲ್ಲಿ ವಿಂಗಡಿಸುತ್ತಾರೆ.

೧) ನೈಸರ್ಗಿಕ ವಿಪತ್ತುಗಳು.

೨) ಮಾನವ ಪ್ರೇರಿತ ವಿಪತ್ತುಗಳು.

೩) ಸಾಮಾಜಿಕ ವಿಪತ್ತುಗಳು.

ನೈಸರ್ಗಿಕ ವಿಪತ್ತುಗಳನ್ನು ಮತ್ತೆ ಮೂರು ವಿಧಗಳಾಗಿ ವಿಂಗಡಿಸಬಹುದು. ಈ ವಿಪತ್ತುಗಳಿಗೆ ಭೂಮಿ, ಜಲ, ಹಾಗೂ ಜೈವಿಕ ಅಂಶಗಳು ಮೂಲ ಕಾರಣಗಳು. ಭೂಕಂಪ, ಭೂಕುಸಿತ, ಜ್ವಾಲಾಮುಖಿ ಭೂಮಿ ಮೂಲದ ನೈಸರ್ಗಿಕ ವಿಪತ್ತುಗಳು. ನೆರೆಹಾವಳಿ, ಬಿರುಗಾಳಿ, ಬರಗಾಲ, ಸಮುದ್ರ ಕೊರೆತ ಮುಂತಾದವು ಜಲ ಅಥವಾ ಹವಾಮಾನ ಸಂಬಂಧಿತ ವಿಪತ್ತುಗಳು. ರೋಗ ರುಜುನಿಗಳು ಜೈವಿಕ ಅಂಶಗಳನ್ನಾಧರಿಸಿದ ನೈಸರ್ಗಿಕ ವಿಪತ್ತುಗಳು.

"ಕಳೆದ ೧೫ ವರ್ಷಗಳಲ್ಲಿ ಏಷಿಯಾ ಉಪಖಂಡದಲ್ಲಿ ಪ್ರಕೃತಿ ವಿಕೋಪಗಳಿಂದ ೧೦ ಲಕ್ಷ ಜನಸಂಖ್ಯೆಯಲ್ಲಿ ೫೭,೩೪೨ ಜನ ತೊಂದರೆಗೆ ಒಳಗಾಗಿದ್ದಾರೆ. ೫೭೭.೪೪ ಬಿಲಿಯನ ಅಮೇರಿಕನ್ ಡಾಲರ್ ನಷ್ಟ ಸಂಭವಿಸಿದೆ. ೨೦೦೪ ಮತ್ತು ೨೦೦೫ನೇ ಸಾಲಿನಲ್ಲಿ ವಿಕೋಪಗಳಿಂದಾದ ಹಾನಿ ೩೫೦ ಶತಕೋಟಿ ಡಾಲರ್. ವಿಶ್ವಬ್ಯಾಂಕ್ ಅಧ್ಯಯನದ ಪ್ರಕಾರ ಪ್ರತಿಶತ ೯೭ರಷ್ಟು ವಿಪತ್ತು ಸಂಬಂಧಿತ ಸಾವುಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಂಭವಿಸಿದೆ."[೨]

ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ೨೦೦೪ರಲ್ಲಿಯ ವರದಿಯೊಂದರ ಪ್ರಕಾರ ವಿಪತ್ತುಗಳಿಂದ ನಷ್ಟದ ಪ್ರಮಾಣ ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲಿದೆ ಎಂಬುದನ್ನು ಕೋಷ್ಟಕ ೨.೧ ರಿಂದ ತಿಳಿಯಬಹುದು.

ಕೋಷ್ಟಕ ೨.೧

ವಿಪತ್ತುಗಳಿಂದಾಗುತ್ತಿರುವ ನಷ್ಟದ ಪ್ರಮಾಣ

ದಶಕಗಳು	ವಾರ್ಷಿಕ ನಷ್ಟ ಸರಾಸರಿ (ಶತ ಕೋಟಿಗಳಲ್ಲಿ)
೧೯೬೦	೭೫.೫
೧೯೭೦	೧೩೮.೪
೧೯೭೦	೧೩೮.೪
೧೯೮೦	೨೧೩.೯
೧೯೯೦	೬೫೪.೯

“೧೯೮೦ ರಿಂದ ೧೯೮೪ರ ವರೆಗೆ ಪ್ರಪಂಚದಲ್ಲಿ ಸುಮಾರು ೮೦೦ ವಿಪತ್ಕಾರಿ ಘಟನೆಗಳು ಸಂಭವಿಸಿ ಸುಮಾರು ೨೦೦ ದಶಲಕ್ಷ ಜೀವಗಳು ತೊಂದರೆಗೆ ಒಳಗಾಗಿವೆ. ೨೦೦೦ ರಿಂದ ೨೦೦೪ರ ಅವಧಿಯಲ್ಲಿ ಸುಮಾರು ೧೩೦೦ ವಿಪತ್ತುಗಳಲ್ಲಿ ೧.೪ ಶತಕೋಟಿ ಜನರು ಸಂತ್ರಸ್ತರಾಗಿದ್ದಾರೆ.

೨೦೦೬ರಲ್ಲಿ ೧೦೮ ರಾಷ್ಟ್ರಗಳಲ್ಲಿ ೪೨೬ ವಿಪತ್ತುಗಳಿಂದ ೧೪೩ ದಶಲಕ್ಷ ಜನ ಸಂಕಟಗ್ರಸ್ತರಾಗಿ ೩೪.೬ ಶತಕೋಟಿ ಡಾಲರುಗಳ ಆರ್ಥಿಕ ನಷ್ಟ ಅನುಭವಿಸಿದ್ದಾರೆ. ೨೦೦೮ರಲ್ಲಿ ೩೦೦ಕ್ಕೂ ಹೆಚ್ಚು ಅನಾಹುತಗಳಲ್ಲಿ ೨,೩೫,೦೦೦ ಜೀವಿಗಳು ಬಲಿಯಾಗಿದ್ದು ೨೦೦ ದಶಲಕ್ಷ ಜನರು ಸಂತ್ರಸ್ತರಾಗಿದ್ದಾರೆ.[೩]

ಕೋಷ್ಟಕ ೨.೨ರಲ್ಲಿ ದೇಶದಲ್ಲಿ ೧೯೮೦ರಿಂದ ೨೦೦೮ರವರೆಗೆ ದೇಶದಲ್ಲಿ ಸಂಭವಿಸಿದ ವಿಕೋಪಗಳು, ಸಾವಿನ ಸಂಖ್ಯೆ, ಪ್ರತಿವರ್ಷ ಸರಾಸರಿ ಸಾವು, ಬಾಧಿತ ಜನಸಂಖ್ಯೆ, ಪ್ರತಿವರ್ಷ ಸರಾಸರಿ ಬಾಧಿತ ಜನಸಂಖ್ಯೆ, ಆರ್ಥಿಕ ಹಾನಿ, ಪ್ರತಿವರ್ಷ ಸರಾಸರಿ ಆರ್ಥಿಕ ಹಾನಿ ಮುಂತಾದವುಗಳ ವಿವರ ನೀಡಲಾಗಿದೆ.

ಕೋಷ್ಟಕ ೨.೨

ದೇಶದಲ್ಲಿ ೧೯೮೦ರಿಂದ ೨೦೦೮ರ ವರೆಗೆ ನೈಸರ್ಗಿಕ ವಿಕೋಪಗಳು ಮತ್ತು ಹಾನಿ

ಅ.ನಂ	ದಶಕಗಳು	ಹಾನಿ
೧	ನೈಸರ್ಗಿಕ ವಿಕೋಪಗಳ ಸಂಖ್ಯೆ	೩೯೫
೨	ಸಾವಿನ ಸಂಖ್ಯೆ	೧೩೯೩೯೩
೩	ಪ್ರತಿವರ್ಷ ಸರಾಸರಿ ಸಾವು	೪೮೦೭
೪	ಬಾಧಿತ ಜನಸಂಖ್ಯೆ	೧,೫೦೬,೭೯೪,೭೪೦
೫	ಪ್ರತಿವರ್ಷ ಸರಾಸರಿ ಬಾಧಿತ ಜನಸಂಖ್ಯೆ	೫೧,೯೫೮,೪೩೯
೬	ಆರ್ಥಿಕ ಹಾನಿ US $X1000	೪೫,೧೮೪,೮೩೦
೭	ಪ್ರತಿವರ್ಷ ಸರಾಸರಿ ಆರ್ಥಿಕ ಹಾನಿ US $X1000	೧,೫೫೮,೦೯೮

ಮೂಲ : E. M. – DAT.

ಕೋಷ್ಟಕ ೨.೩ರಲ್ಲಿ ಜಾಗತಿಕ ಸಮೀಕ್ಷಾ ವರದಿ (೨೦೦೯) ಪ್ರಕಾರ ಭಾರತದಲ್ಲಿ ಸಂಭವಿಸಿದ ವಿವಿಧ ವಿಕೋಪಗಳಿಂದ ಬಾಧಿತ ಜನಸಂಖ್ಯೆ ಮತ್ತು ಜಗತ್ತಿನಲ್ಲಿ ಅವುಗಳ ಶ್ರೇಣಿ ಕುರಿತು ತಿಳಿಸಿದ್ದಾರೆ. ವಾಸ್ತವಿಕವಾಗಿ ಇವುಗಳ ಪ್ರಮಾಣ ಹೆಚ್ಚಿಗೆ ಇರುತ್ತದೆಂದು ಅಂದಾಜಿಸಲಾಗಿದೆ.

ಕೋಷ್ಟಕ ೨.೩

ದೇಶದಲ್ಲಿ ಸಂಭವಿಸಿದ ವಿವಿಧ ವಿಕೋಪಗಳಿಂದ ಜನರ ಮೇಲಿನ ಪರಿಣಾಮಗಳು

ಅ.ನಂ	ನೈಸರ್ಗಿಕ ವಿಕೋಪ	ಬಾಧಿತ ಜನಸಂಖ್ಯೆ	ಶೇಕಡಾ ಪ್ರಮಾಣ	ದೇಶದ ಸ್ಥಾನ
೧	ಸೈಕ್ಲೋನ್	೭,೬೦೭,೮೨೧	೫	೪ (೮೯)
೨	ಬರಗಾಲ	೫೮,೯೧೨,೩೦೦	೧	೨ (೧೮೪)
೩	ಪ್ರವಾಹ	೧೫,೮೫೫,೬೪೦	೧	೨ (೧೬೨)
೪	ಭೂಕುಸಿತ	೧೮೦,೨೫೪	೧	೨ (೧೬೨)
೫	ಭೂಕಂಪ	೩,೩೪೯,೨೩೭	೪	೮ (೧೫೩)
೬	ಸುನಾಮಿ	೧,೧೧೪,೩೮೮	೧	೪ (೨೬೫)

ಮೂಲ : ಜಾಗತಿಕ ಸಮೀಕ್ಷಾ ವರದಿ (೨೦೦೯)

ಪ್ರಪಂಚದ ಪ್ರಮುಖ ವಿಪತ್ತುಗಳಲ್ಲಿ ಪ್ರವಾಹವೂ ಒಂದು ಎಂದು ಎಂದೋ ಪರಿಗಣಿಸಲ್ಪಟ್ಟಿದೆ. ಪ್ರಪಂಚದ ಅದೆಷ್ಟೋ ನಾಗರಿಕತೆಗಳು ಪ್ರವಾಹದಿಂದಾಗಿ ಪ್ರಳಯಗೊಂಡಿವೆ. ಹೀಗಾಗಿ ಪ್ರವಾಹವನ್ನು ವಿಪತ್ತುಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

೨.೩ ಪ್ರವಾಹ : ಒಂದು ವಿಪತ್ತು

ಜಗತ್ತಿನಲ್ಲಿ ಅತಿ ಹೆಚ್ಚು ವಿಪತ್ತುಗಳಿಗೆ ಒಳಗಾಗಬಹುದಾದ ದೇಶಗಳಲ್ಲಿ ಭಾರತವೂ ಒಂದು. ಅನೇಕ ವಿಪತ್ತುಗಳಿಂದ ೨/೩ರಷ್ಟು ಕ್ಷೇತ್ರ ಪ್ರಭಾವಕ್ಕೆ ಒಳಪಡುತ್ತಿದ್ದು, ಈ ವಿಪತ್ತುಗಳಲ್ಲಿ ಪ್ರಮುಖವಾದುದು ಪ್ರವಾಹ. ವಿಶ್ವದಲ್ಲಿ ಪ್ರವಾಹದಿಂದ ಹೆಚ್ಚು ಪ್ರಭಾವಿತವಾಗುವ ಮೊದಲನೆಯ ದೇಶ ಬಾಂಗ್ಲಾ. ಅನಂತರದ್ದು ಭಾರತ. ಜಗತ್ತಿನಲ್ಲಿ ಸಮೀಕ್ಷೆಯಿಂದ ತಿಳಿಯುವುದು ಪ್ರತಿವರ್ಷ ೧/೫ದಷ್ಟು ಸಾವುಗಳು ನೆರೆಹಾವಳಿಯಿಂದ ಸಂಭವಿಸುತ್ತವೆಯೆಂದು. ಮೂವತ್ತು ಮಿಲಿಯನ್ ಜನ ನಿರಾಶ್ರಿತರಾಗುತ್ತಾರೆ. ಜನನಿಬಿಡ ರಾಜ್ಯಗಳಾದ ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಪ್ರವಾಹದ ದುಷ್ಪರಿಣಾಮಗಳು ಹೆಚ್ಚು. ಪ್ರತಿವರ್ಷವೂ ಇದರಿಂದ ಅತಿ ಹೆಚ್ಚು ಹಾನಿಗೊಳಗಾಗುತ್ತವೆ.

ರಾಷ್ಟ್ರೀಯ ಪ್ರವಾಹ ಸಮಿತಿಯ ವರದಿ ಪ್ರಕಾರ ಜೂನ್‌ನಿಂದ ಸೆಪ್ಟೆಂಬರ್‌ದ ನಾಲ್ಕು ತಿಂಗಳಲ್ಲಿ ಶೇಕಡಾ ೭೦ರಷ್ಟು ಮಳೆಯಾಗಿ ಅತಿ ಹೆಚ್ಚಿನ ನೀರಿನ ಹರಿವಿನಿಂದ ೪೦ಮಿಲಿಯನ್

ಹೆಕ್ಟೆರ್ ಭೂಮಿ ನೆರೆಗೆ ಒಳಗಾಗುತ್ತದೆ. ಬೇಸಾಯಕ್ಕೆ ಒಳಪಡುವ ಜಮೀನಿನ ಶೇಕಡಾ ೨೫ರಷ್ಟು ಭಾಗ ಇದರಿಂದ ಪ್ರಭಾವಿತಗೊಳ್ಳುತ್ತದೆ. ಬೆಳೆ ಮತ್ತು ಸಾರ್ವಜನಿಕ ಆಸ್ತಿಗಳ ಹಾನಿಯನ್ನು ಅಂದಾಜಿಸಲಾಗಿ ವರ್ಷಕ್ಕೆ ಸರಾಸರಿ ರೂ. ೧೩೪೭೦ ಮಿಲಿಯನ್ ಅಲ್ಲದೆ ಪ್ರತಿವರ್ಷ ಸುಮಾರು ೧೫೯೫ ಮನುಷ್ಯರು ಹಾಗೂ ೯೪೭೭೨ ಪ್ರಾಣಿಗಳು ಸಾವಿಗೀಡಾಗುತ್ತಾರೆಂದು ಸಮೀಕ್ಷೆ ತಿಳಿಸುತ್ತದೆ.

'ಪ್ರವಾಹ' ಸಂಸ್ಕೃತ ಪದ. ಈ ಪದದ ಸಾಮಾನ್ಯ ಅರ್ಥ ಪ್ರವಹನ. ಪ್ರವಹನ ಎಂದರೆ ಹರಿಯುವುದು. ಸಾಮಾನ್ಯವಾಗಿ ನೀರಿನ ಸಂಚಲನವನ್ನು ಪ್ರವಾಹ ಎಂದು ಕರೆಯುತ್ತಾರೆ. ಆದರೆ ಪ್ರವಾಹ ಪದದ ವ್ಯಾಪ್ತಿ ಇಷ್ಟಕ್ಕೆ ಸೀಮಿತವಾಗಿಲ್ಲ. ಇಂದು ಈ ಪದವನ್ನು ಮಿತಿ ಮೀರಿದ ಜಲ ಪ್ರವಹನಕ್ಕೂ ಬಳಸುತ್ತಿದ್ದೇವೆ. ನದಿಗಳು ಮಳೆಗಾಲವನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ತಾವೇ ನಿರ್ಮಿಸಿಕೊಂಡ ನಿರ್ದಿಷ್ಟ ಮಾರ್ಗದಲ್ಲಿ ಹರಿಯುತ್ತವೆ. ಮಳೆಗಾಲದಲ್ಲಿ ಆ ಪಾತ್ರ ತುಂಬಿ ನೀರು ಹೊರಚೆಲ್ಲುತ್ತದೆ. ಕೆಲವೊಮ್ಮೆ ಆ ನದಿಗಳು ಸಾಗರದ ರೂಪ ತಾಳಿ ಹರಿಯುತ್ತವೆ. ಅದಕ್ಕೆ ಪ್ರವಾಹ ಎನ್ನುತ್ತೇವೆ.

'ಪ್ರವಾಹ' ಎಂಬ ಪದಕ್ಕೆ ಆಂಗ್ಲಭಾಷೆಯ ಸಂವಾದಿರೂಪ Flood. ಇದು ಜರ್ಮನಿಕ್ ಭಾಷೆಗಳಲ್ಲಿಯ ಸಾಮಾನ್ಯ ಪದ. ಈ ಪದದ ಮೂಲ ರೂಪ 'Flow'. 'Flow' ಎಂದರೆ ಹರಿಯುವುದು. Flood ಎಂದರೆ ಪ್ರವಾಹ. Flow ಪದದಿಂದ Flood ಪದ ನಿಷ್ಪನ್ನಗೊಂಡಿದೆ. ಜರ್ಮನಿಯಲ್ಲಿ Float, ಡಚ್ಚದಲ್ಲಿ Vloed ಇದಕ್ಕೆ ಸಂವಾದಿ ಪದಗಳು.

ಪ್ರವಾಹದ ಸುತ್ತ :

ವಿಶ್ವದಲ್ಲಿ ಪ್ರವಾಹ ಕೇಂದ್ರಿತ ಅನೇಕ ಕಥೆ, ನಂಬಿಕೆ, ಐತಿಹ್ಯಗಳಿವೆ. ಹಲವು ಧರ್ಮಗ್ರಂಥಗಳು ಪ್ರವಾಹವನ್ನು ಸೃಷ್ಟಿಯ ಮೂಲ ಮತ್ತು ಲಯಗಳೊಂದಿಗೆ ಸಂಕೇತಿಸುತ್ತವೆ. ಬೈಬಲ್ಲಿನಲ್ಲಿ ಜಲ ಪ್ರಳಯದ ಬಗ್ಗೆ ಹೇಳಲಾಗಿದೆ. ಭಾರತೀಯ ಪುರಾಣಗಳಲ್ಲಿ ಪ್ರವಾಹದಿಂದಲೇ ವಿಶ್ವ ಪ್ರಳಯವಾಗಬಲ್ಲದೆಂಬ ಕಲ್ಪನೆಗಳಿವೆ. ಒಟ್ಟಿನಲ್ಲಿ ಈ ಪ್ರವಾಹ ಆದಿ ಮಾನವನಿಂದ ಮೊದಲುಗೊಂಡು ಆಧುನಿಕ ಮಾನವನವರೆಗೆ ಅನೇಕ ವಿಧದ ಭಯ, ವಿಸ್ಮಯಗಳನ್ನು ಸೃಷ್ಟಿಸಿದೆ.

೨.೪ ಪ್ರವಾಹದ ವ್ಯಾಖ್ಯೆಗಳು :

೧. ಬಾರಿ ಮಳೆ ಅಥವಾ ಹಿಮಪಾತದಿಂದಾಗಿ ಜಲಾಯನ ಪ್ರದೇಶಗಳಿಂದ ಹರಿದ ನೀರು ಸರೋವರಗಳನ್ನು ಸೇರಿ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿ ದಂಡೆಯ ಮೇಲೇರಿ

ಭೂಮಿಯನ್ನು ಆಕ್ರಮಿಸುವಿಕೆ. ನದಿ, ಸರೋವರಗಳ ಪಾತ್ರವನ್ನು ಮೀರಿ ಹರಿಯುವ ಭಾರಿ ಪ್ರಮಾಣದ ನೀರೇ ಪ್ರವಾಹ. – **ಪರಿಸರ ಶಬ್ದಕೋಶ.**

೨. ಕೆರೆ, ಕಟ್ಟೆ, ನದಿ, ಅಣೆಕಟ್ಟು, ಸರೋವರ ಮೊದಲಾದ ಕಡೆ ಶೇಖರವಾಗಿರುವ ನೀರು ರಭಸವಾಗಿ ಉಕ್ಕಿ ಹರಿದು ವಿಶಾಲವಾದ ಭೂಪ್ರದೇಶವನ್ನು ಮುಳುಗಿಸುವುದೇ ಪ್ರವಾಹ. **– ಎನ್ಕಾರ್ಟ್ ವಿಶ್ವಕೋಶ.**

೩. ನದಿ, ಸರೋವರಗಳಂತೆ ನೀರಿನ ಸಂಗ್ರಹಾರಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಜಾಸ್ತಿಯಾಗಿ ಅದು ಉಕ್ಕಿ ಹರಿದಾಗ ಪ್ರವಾಹಗಳು ಉಂಟಾಗಬಹುದು. ಹೀಗೆ ಹರಿಯುವ ನೀರು ಅಣೆಕಟ್ಟುಗಳನ್ನು ಒಡೆದು ಹಾಕಿ ರಭಸವಾಗಿ ನುಗ್ಗುತ್ತದೆ. ಈ ಸಂದರ್ಭದಲ್ಲಿ ಸಾಮಾನ್ಯ ಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರನುಗ್ಗುತ್ತದೆ. – **ಪವನಶಾಸ್ತ್ರದ ಶಬ್ದಕೋಶ.**

೪. **ಭೂವಿಜ್ಞಾನ**ದಲ್ಲಿ ಪ್ರವಾಹವೆಂದರೆ ಚಂಡಮಾರುತ ಅಥವಾ ಅಗ್ನಿ ಪರ್ವತ ಕ್ರಿಯೆಗಳಿಂದ ಸಮುದ್ರ ನೀರು ಸಾಮಾನ್ಯ ಭರತ ಮಟ್ಟಕ್ಕಿಂತ ಮೇಲೆರುವುದು.

೫. ಸಮುದ್ರ, ನದಿ, ಕೊಳ್ಳ, ಹಳ್ಳ, ಮುಂತಾದವುಗಳು ತಮ್ಮ ಎಂದಿನ ಪಾತಳಿಯನ್ನು ಮೀರಿ ಹರಿದು ತಮ್ಮ ಹರಿವಿನ ಪಾತ್ರದ ಸಮೀಪದಲ್ಲಿರುವ ಭೂಮಿ, ಜೀವ, ವಿತ್ತ ಹಾನಿ ಮಾಡುವುದನ್ನು ಪ್ರವಾಹ ಎನ್ನುವರು.

೬. ಅತಿಯಾದ ಮಳೆ, ಹಿಮ ಕರಗುವಿಕೆ ಮುಂತಾದ ಕಾರಣಗಳಿಂದ ನದಿ ಪಾತ್ರದ ಪ್ರದೇಶಗಳಲ್ಲಿ ಅತಿಯಾದ ನೀರು ಹರಿದು ಹತ್ತಿರದ ಭೂ ಪ್ರದೇಶ, ಜನರ ಆಸ್ತಿಗಳಿಗೆ ಹಾನಿ ಮಾಡುವುದನ್ನು ಪ್ರವಾಹ ಎನ್ನುವರು. – **ವಿಕ್ಕಿಪೀಡಿಯಾ**

೨.೫ ಪ್ರವಾಹದ ವರ್ಗೀಕರಣ :

ಪ್ರವಾಹಗಳ ಸ್ವರೂಪ, ರಭಸತೆ, ಪ್ರಮಾಣ, ಸಾಂದ್ರತೆ ಮುಂತಾದ ಅಂಶಗಳನ್ನು ಆಧರಿಸಿ ಪ್ರವಾಹಗಳನ್ನು ವಿವಿಧ ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ.

ವಿಕ್ಕೀಪಿಡಿಯಾದಲ್ಲಿ ಪ್ರವಾಹಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧) ನದಿ ಪ್ರವಾಹಗಳು

ಮಾನ್ಸೂನ್ ಮಾರುತಗಳಿಂದ ಭಾರಿಮಳೆ, ಚಂಡಮಾರುತ, ವಾಯುಭಾರ ಕುಸಿತ, ಹಿಮಗಡ್ಡೆಯ ಮೇಲೆ ಪರಿಣಾಮ ಬೀರುವ ಹೊರಗಿನ ಗಾಳಿ ಮತ್ತು ಬೆಚ್ಚನೆಯ ಮಳೆ,

ನದಿಗಳಲ್ಲಿ ಹೂಳು ತುಂಬುವುದು, ನದಿ ಪಾತ್ರಗಳಲ್ಲಿ ಅವೈಜ್ಞಾನಿಕ ಕೃಷಿ ಪದ್ಧತಿ, ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟುವುದರಿಂದ ನದಿಯಿಂದ ಉಂಟಾಗುವ ಪ್ರವಾಹಗಳನ್ನು ಇದರಲ್ಲಿ ಸೇರಿಸಲಾಗುವುದು.

೨) ಕರಾವಳಿ ಪ್ರವಾಹ

ಸಮುದ್ರದ ಅಲೆಗಳಿಂದ ಕರಾವಳಿಯಲ್ಲಿ ಉಂಟಾಗುವ ಪ್ರವಾಹಗಳನ್ನು ಕರಾವಳಿ ಪ್ರವಾಹಗಳೆಂದು ಕರೆಯುತ್ತಾರೆ. ಪ್ರಬಲವಾದ ಸಮುದ್ರದ ಕರಾವಳಿ ಅಲೆಗಳಿಂದ ಅಥವಾ ಸುನಾಮಿ ಚಂಡಮಾರುತಗಳಿಂದ ಸಂಭವಿಸುತ್ತವೆ.

೩) ಪ್ರಳಯಕಾರಿ ಪ್ರವಾಹ

ಅಣೆಕಟ್ಟುಗಳು ಒಡೆಯುವುದು, ಭೂಕಂಪ, ಜ್ವಾಲಾಮುಖಿ ಸ್ಫೋಟ್‌ದಂತಹ ಮತ್ತಾವುದೇ ಅಪಾಯಕಾರಿ ಅನಿರೀಕ್ಷಿತವಾದ ಘಟನೆಗಳು ಸಂಭವಿಸಿದಾಗ ಇಂತಹ ಪ್ರವಾಹಗಳು ಉಂಟಾಗುತ್ತವೆ.

೪) ಕೆಸರಿನ ಪ್ರವಾಹ

ಪ್ರವಾಹ ಬೆಳೆಗಳಿರುವ ಭೂಪ್ರದೇಶದಲ್ಲಿ ಹರಿದಾಗ ಪ್ರವಾಹ ನೀರಿನಿಂದ ಕೆಸರಿನ ಪ್ರವಾಹ ಉಂಟಾಗುತ್ತದೆ. ಇದನ್ನು ಕೆಸರಿನ ಪ್ರವಾಹ ಎನ್ನುವರು.

೫) ಇತರೆ

ಅಡಿಪಾಯ ಭದ್ರವಿರುವ ಮೇಲ್ಮೈನಾದ್ಯಂತ ನೀರು ಅಪಾರ ಪ್ರಮಾಣದಲ್ಲಿ ಸಂಗ್ರಹಗೊಂಡಾಗ, ಸರಣಿ ಚಂಡಮಾರುತಗಳು ಅದೇ ಪ್ರದೇಶದಲ್ಲಿ ಸಾಗಿ ಹೋದಾಗ ಪ್ರವಾಹಗಳು ಉಂಟಾಗಬಹುದು.

ಆರ್. ಸುರೇಶ ಅವರು "ವಾಟರ್‌ಶೆಡ್ ಹೈಡ್ರಾಲಜಿ" ಎಂಬ ಗ್ರಂಥದಲ್ಲಿ ಪ್ರವಾಹಗಳನ್ನು ಈ ಕೆಳಗಿನಂತೆ ವಿಂಗಡಿಸಿದ್ದಾರೆ.[೪]

೧. ಅಧಿಕ ಸಂಭವ್ಯ ನೆರೆಹಾವಳಿ (Design Flood)

೨. ಅಪಾಯಕಾರಿ ನೆರೆಹಾವಳಿ (Standard project Flood)

೩. ಗರಿಷ್ಠ ಸಂಭವ್ಯ ನೆರೆಹಾವಳಿ (Maximum probable Flood)

೪. ಅತ್ಯಧಿಕ ನೆರೆಹಾವಳಿ (Peak Flood)

೫. ದೀರ್ಘಾವಧಿ ನೆರೆಹಾವಳಿ (Maximum observed Flood)

೬. ಗರಿಷ್ಠ ನೆರೆಹಾವಳಿ (Maximum Flood)

೭. ವಾರ್ಷಿಕ ನೆರೆಹಾವಳಿ (Annual Flood)

೮. ಸಾಮಾನ್ಯ ನೆರೆಹಾವಳಿ (Ordinary Flood)

೨.೬ ಪ್ರವಾಹದ ಕಾರಣಗಳು :

ಅನೇಕ ಪ್ರಕಾರದ ಪ್ರವಾಹಗಳಿವೆ. ಪ್ರತಿಯೊಂದು ಪ್ರವಾಹಕ್ಕೂ ಬೇರೆ ಬೇರೆ ಕಾರಣಗಳನ್ನು ಕಾಣುತ್ತೇವೆ. ಪ್ರವಾಹಕ್ಕೆ ಕಾರಣವಾದ ಕೆಲವೊಂದು ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧) ಜಾಗತಿಕ ತಾಪಮಾನದ ಹೆಚ್ಚಳ :

ಮಾನವನ ಅಭಿವೃದ್ಧಿ ಕಾರ್ಯಗಳು ನಿಸರ್ಗದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಮಾನವನ ಚಟುವಟಿಕೆಗಳಿಂದ ಮಿಥೇನ್, ಇಂಗಾಲದಂತಹ ಅನಿಲಗಳು ನಿರಂತರ ಉತ್ಪಾದನೆಯಾಗಿ 'ಹಸಿರು ಮನೆ' ಪರಿಣಾಮಕ್ಕೆ ದಾರಿ ಮಾಡಿಕೊಟ್ಟಿದೆ. ಇದರಿಂದಾಗಿ ಭೂಮಿಯ ತಾಪಮಾನ ಹೆಚ್ಚಾಗುತ್ತಿದೆ. ಇದೆ ರೀತಿ ಭೂಮಂಡಲದ ಉಷ್ಣಾಂಶ ಹೆಚ್ಚುತ್ತ ಹೋದರೆ ಅಂಟಾರ್ಟಿಕ್ ಮತ್ತು ಗ್ರೀನ್‌ಲ್ಯಾಂಡ್ ಪ್ರದೇಶಗಳ ಹಿಮ ಕರಗಿ ಸಮುದ್ರ ಮಟ್ಟ ಹೆಚ್ಚಾಗುತ್ತದೆ. ನೆರೆಹಾವಳಿ ಸಮಸ್ಯೆ ಎದುರಾಗಬಹುದಾದ ಸಾಧ್ಯತೆಗಳಿವೆ.

೨) ಸಾಗರ ತೀರದ ಹವಾಮಾನ ವೈಪರೀತ್ಯ :

ಸಾಗರ ತೀರದ ಹವಾಮಾನ ವೈಪರೀತ್ಯದಿಂದ 'ಸುನಾಮಿ'ಯಂತಹ ಅವಘಡಗಳು ಸಂಭವಿಸಿ ಪ್ರವಾಹಕ್ಕೆ ಕಾರಣವಾಗುತ್ತವೆ. ದೇಶದ ಉಳಿದೆಡೆ ಬರಗಾಲ, ಭೂಕಂಪನಗಳ ಭೀತಿ ಎದುರಿಸಿದರೆ ಕರಾವಳಿ ಜನರು ಚಂಡಮಾರುತ ಭೀತಿಯನ್ನು ಎದುರಿಸುತ್ತಾರೆ. ಸಮುದ್ರ ಮಟ್ಟ ಪ್ರತಿ ಹತ್ತು ವರ್ಷಕ್ಕೆ ನಾಲ್ಕು ಅಡಿ ಹೆಚ್ಚಾಗುತ್ತಿರುವುದು ವರದಿಯಾಗಿದೆ.

೩) ಜನಸಂಖ್ಯಾ ಹೆಚ್ಚಳ :

ವಿಶ್ವದ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆ ಸಮುದಾಯಗಳ ಹೊರವಲಯದ, ಕೆಳಮಟ್ಟದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರದೇಶಗಳು

ಸುರಕ್ಷಿತ ಸ್ಥಳಗಳಲ್ಲ. ಪ್ರವಾಹಗಳಿಂದ ಈ ಪ್ರದೇಶದ ಜನರು ಹೆಚ್ಚು ಭಾದಿತರಾಗುತ್ತಿರುವುದು ತಿಳಿಯುತ್ತದೆ.

೪) ನಗರೀಕರಣ :

ನಗರದಲ್ಲಿ ದೊರೆಯುವ ವಿವಿಧ ಸೌಲಭ್ಯಗಳು, ಆಕರ್ಷಣೆಗಳ ಕಾರಣ ನಗರಕ್ಕೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕ್ರಿ.ಶ. ೨೦೫೦ರ ಹೊತ್ತಿಗೆ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೨೫ರಷ್ಟು ಜನರು ನಗರವಾಸಿಗಳಾಗುತ್ತಾರೆಂದು ಅಂದಾಜಿಸಲಾಗಿದೆ. ನಗರಗಳಿಗೆ ಬರುವ ಜನರು ವಸತಿ ಸಮಸ್ಯೆ ಎದುರಿಸುತ್ತಿದ್ದಾರೆ. ಇವರು ನಗರಗಳಲ್ಲಿಯ ಪ್ರವಾಹ ಪೀಡಿತ ತಗ್ಗು ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ಇದರಿಂದ ಪ್ರವಾಹಗಳ ತೀವ್ರತೆ ಹೆಚ್ಚಾಗುತ್ತಿದೆ. ಕೆಲವೊಂದು ಜನವಸತಿ ನಗರಗಳು ನದಿ ದಂಡೆಯ ಮೇಲಿರುವುದರಿಂದ ಪ್ರವಾಹದ ತೀವ್ರತೆಗೆ ಕಾರಣವಾಗುತ್ತವೆ.

೫) ಯಾಂತ್ರಿಕರಣ :

ಇಂದಿನ ಸಮಾಜ ಯಾಂತ್ರಿಕ ಸಮಾಜವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಯಂತ್ರಗಳ ಬಳಕೆ ಹೆಚ್ಚುತ್ತಿದೆ. ಇಂಜೀನಿರಿಂಗ್ ಕೇಂದ್ರಿತ ಅಂಶಗಳ ಮುಖಾಂತರ ಪ್ರವಾಹ ನಿಯಂತ್ರಣ ಕ್ರಮಗಳು ಪ್ರವಾಹದ ತೀವ್ರತೆಗೆ ಕಾರಣವಾಗಿವೆ. ಒಡ್ಡುಯೋಜನೆಗಳು, ಅಣೆಕಟ್ಟುಗಳ ನಿರ್ಮಾಣ ಪ್ರವಾಹಕ್ಕೆ ಕಾರಣವಾಗುತ್ತವೆ.

೬) ಆಧುನೀಕರಣ :

ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕೆಂಬ ಹಂಬಲದಿಂದ ಇಂದು ಜಗತ್ತಿನ ಬಹಳಷ್ಟು ರಾಷ್ಟ್ರಗಳು ನೈಸರ್ಗಿಕ ಸಂಪನ್ಮೂಲಗಳನ್ನು ಮಿತಿಮೀರಿ ಶೋಷಿಸುತ್ತಿವೆ. ಅವಶ್ಯಕತೆ ಇಲ್ಲದೆ ವಸ್ತುಗಳ ಬಳಕೆ, ವಿಲೇವಾರಿಗಳಿಗೆ ಗಮನ ಕೊಡದೆ ಇರುವುದು ಮುಂತಾದ ಕಾರಣಗಳಿಂದ ಪ್ರವಾಹಗಳು ಸಂಭವಿಸುತ್ತವೆ.

ನದಿ ಪ್ರವಾಹದ ಕಾರಣಗಳು :

ಕುಂಭ-ದ್ರೋಣ ಮಳೆ, ಬಿರುಗಾಳಿಯಿಂದ ಉದ್ಭವಿಸಿದ ತೆರೆಗಳು, ಮಂಜುಗಡ್ಡೆ ಕರಗುವುದು, ಮೋಡಗಳು ಒಡೆಯುವುದು, ವಿಶಾಲ ನದಿ ಪಾತ್ರ ಪ್ರದೇಶ ಅಥವಾ ಯೋಗ್ಯವಾದ ನದಿ ಪಾತ್ರ ಇಲ್ಲದಿರುವುದು, ಅರಣ್ಯನಾಶ, ನದಿಯಲ್ಲಿ ಕೆಸರು ತುಂಬುವುದು, ಒಳಹರಿವಿನ

ಸಾಮರ್ಥ್ಯಕ್ಕಿಂತ ನೀರಿನ ಹರಿವು, ದೋಷದಿಂದ ಕೂಡಿದ ಒಕ್ಕಲುತನ ಪದ್ಧತಿ, ಅಣೆಕಟ್ಟುಗಳ ನಿರ್ಮಾಣ, ಅಣೆಕಟ್ಟುಗಳು ಒಡೆಯುವುದು, ನದಿ ದಡಗಳ ಸವೆತ, ಒಳಹರಿವಿಗೆ ಅಡಚಣೆಯಾಗಿ ನದಿ ಹರಿವಿನ ದಿಕ್ಕಿನಲ್ಲಿ ಬದಲಾವಣೆ, ನದಿಯ ಉಪನದಿಗಳು ಉಕ್ಕಿ ಹರಿಯುವುದು, ಹಿನ್ನೀರಿನ ಪ್ರಭಾವ, ನೀರಿನ ಒಳಹರಿವಿಗೆ ನೈಸರ್ಗಿಕ ವ್ಯವಸ್ಥೆ ಇಲ್ಲದಿರುವುದು, ಅಂತರಾಷ್ಟ್ರೀಯ ಮತ್ತು ಅಂತರಾಜ್ಯ ನದಿಗಳಾಗಿರುವುದು ನದಿ ಪ್ರವಾಹಕ್ಕೆ ಕಾರಣವಾದ ಪ್ರಮುಖ ಅಂಶಗಳು.

ದೇಶದ ಪ್ರವಾಹ ಪ್ರದೇಶಗಳು :

ದೇಶದಲ್ಲಿ ವರ್ಷದಿಂದ ವರ್ಷಕ್ಕೆ ನೆರೆಹಾವಳಿ ಪ್ರಮಾಣ ಮತ್ತು ದುಷ್ಪರಿಣಾಮಗಳು ಹೆಚ್ಚಾಗುತ್ತಿವೆ. ಭಾರತ ಸರ್ಕಾರ ೧೯೭೬ರಲ್ಲಿ ಪ್ರವಾಹದ ಕುರಿತು ಅಧ್ಯಯನ ಮಾಡಲು ರಾಷ್ಟ್ರೀಯ ಬರ ಆಯೋಗವನ್ನು ನೇಮಿಸಿತು. ಇದು ದೇಶದ ಪ್ರವಾಹದ ಕುರಿತು ಅನೇಕ ಅಂಕಿ–ಅಂಶಗಳನ್ನು ಒದಗಿಸುತ್ತದೆ. ಅದರನ್ವಯ ೧೯೬೦ರಲ್ಲಿ ೨೫ಮಿಲಿಯನ್ ಹೆಕ್ಟೆರ್‌ನಷ್ಟಿದ್ದ ನೆರೆಪೀಡಿತ ಪ್ರದೇಶ ೧೯೭೮ರಲ್ಲಿ ೩೪ ಮಿಲಿಯನ್ ಹೆಕ್ಟೆರ್‌ನಷ್ಟು ಹೆಚ್ಚಳವಾಯಿತಲ್ಲದೆ ಈಗ ಅದರ ಪ್ರಮಾಣ ೪೦ ಮಿಲಿಯನ್ ಹೆಕ್ಟೆರ್, ಅಂದರೆ ದೇಶದ ಒಟ್ಟು ಭೂಮಿಯ ೧/೮ರಷ್ಟು ಭೂಮಿ ನೆರೆಪೀಡಿತವಾಗಿದೆಯೆಂದು ವರದಿ ತಿಳಿಸುತ್ತದೆ.

೨.೬ ದೇಶದ ಪ್ರವಾಹ ಪೀಡಿತ ಪ್ರದೇಶಗಳು (ಪ್ರತಿಶತ ಪ್ರಮಾಣದಲ್ಲಿ)

ಕೋಷ್ಟಕ ೨.೪

ದೇಶದ ಪ್ರವಾಹ ಪೀಡಿತ ಪ್ರದೇಶಗಳು

ಅ.ನಂ	ಪ್ರಮುಖ ಪ್ರದೇಶಗಳು	ಪ್ರತಿಶತ (೧೦೦)
೧)	ಉತ್ತರ ಪ್ರದೇಶ	೨೧.೯
೨)	ಬಿಹಾರ	೧೨.೭೧
೩)	ಅಸ್ಸಾಂ	೯.೪
೪)	ಪಶ್ಚಿಮ ಬಂಗಾಳ	೭.೯೧
೫)	ಓರಿಸ್ಸಾ	೪.೧೮

* ಎನ್.ಡಿ.ಎಮ್. ಡಿವ್ಹಿಜನ್ – ೨೦೦೧

ಪ್ರವಾಹ ಪೀಡಿತ ದೇಶದ ಪ್ರಮುಖ ನಾಲ್ಕು ವಿಭಾಗಗಳು :

೧. ಬ್ರಹ್ಮಪುತ್ರ ಮತ್ತು ಬಾರಕ ಜಲಾನಯನ ರಾಜ್ಯಗಳಾದ ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಮ, ಉತ್ತರ ಮತ್ತು ಪಶ್ಚಿಮ ಬಂಗಾಳ, ಮಣಿಪುರ, ಸಿಕ್ಕಿಂ, ತ್ರಿಪುರಾ ಮತ್ತು ನಾಗಾಲ್ಯಾಂಡ.

೨. ಗಂಗಾ ಮತ್ತು ಅದರ ಉಪನದಿಗಳಾದ ಯಮುನಾ, ಸೋನೆ, ಘಾಗ್ರಾ, ಗಂಡಕ, ಕೋಸಿ, ಮಹಾನಂದಾ, ನದಿಗಳು ಹರಿಯುವ ರಾಜ್ಯಗಳಾದ ಉತ್ತರಾಂಚಲ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಪಶ್ಚಿಮ ಮತ್ತು ಮಧ್ಯ ಹರಿಯಾಣಾ, ಹಿಮಾಚಲ ಪ್ರದೇಶ, ರಾಜಸ್ಥಾನ, ಮಧ್ಯ ಪ್ರದೇಶ ಮತ್ತು ದೆಹಲಿ.

೩. ಸಟ್ಲಜ್, ರವಿ, ಬಿಯಾಸ್, ಝೆಲಮ್ ಮತ್ತು ಗಾಗ್ಗರ ನದಿಗಳು ಪ್ರವಹಿಸುವ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ, ಪಂಜಾಬ, ಹರಿಯಾಣಾದ ಕೆಲವು ಪ್ರದೇಶಗಳು ಮತ್ತು ರಾಜಸ್ಥಾನ.

೪. ನರ್ಮದಾ, ತಾಪಿ, ಮಹಾನಂದಾ, ಗೋಧಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳು ಹರಿಯುವ ಮಧ್ಯ ಮತ್ತು ದಕ್ಷಿಣ ಭಾರತ ಇದರಲ್ಲಿ ಓರಿಸ್ಸಾ ಹೆಚ್ಚು ಪ್ರವಾಹಕ್ಕೆ ಒಳಪಡುವ ರಾಜ್ಯ.

ಮೊದಲನೆಯ ಪ್ರವಾಹ ಪ್ರದೇಶದಲ್ಲಿ ನೆರೆಹಾವಳಿಗಳು ಸರ್ವೆ ಸಾಮಾನ್ಯ ಮತ್ತು ಭಯಂಕರವಾದವುಗಳು. ನದಿ ಪಾತ್ರಗಳಲ್ಲಿ ಹೂಳು ತುಂಬಿರುವುದು ಇದಕ್ಕೆ ಕಾರಣ. ತೀಸ್ತಾ ತ್ಸೋರೆ ಮತ್ತು ಝುಲಂದರಾ ನದಿಗಳು ತಮ್ಮ ಹರಿವಿನ ದಿಕ್ಕನ್ನು ಸಹಿತ ಬದಲಾಯಿಸುತ್ತವೆ.

ಎರಡನೆಯ ಪ್ರವಾಹ ಪ್ರದೇಶಗಳಲ್ಲಿ ಪ್ರವಾಹಗಳು ತೀವ್ರವಾಗಿ ಇಲ್ಲದಿದ್ದರೂ ಪ್ರತಿ ವರ್ಷ ನೆರೆಹಾವಳಿಗಳು ಸಂಭವಿಸುತ್ತವೆ. ಇಲ್ಲಿ ಕಾಲುವೆಗಳೂ ಸರಿಯಾಗಿಲ್ಲದಿರುವುದೇ ಪ್ರವಾಹಗಳಿಗೆ ಕಾರಣ.

ಮೂರನೆಯ ಪ್ರವಾಹ ಪ್ರದೇಶದಲ್ಲಿ ಸರಿಯಾದ ಮೇಲು ಕಾಲುವೆಗಳು ಇಲ್ಲದ ಕಾರಣ ನೀರಿನ ಪ್ರಮಾಣ ಹೆಚ್ಚಾಗಿ ನೆರೆಹಾವಳಿ ಸಂಭವಿಸುತ್ತವೆ.

ನಾಲ್ಕನೆಯ ಪ್ರವಾಹ ಪ್ರದೇಶದಲ್ಲಿ ಕೆಲವೊಂದು ರಾಜ್ಯಗಳಲ್ಲಿ ಹರಿಯುವ ನದಿಗಳನ್ನು ಹೊರತುಪಡಿಸಿ ಪ್ರವಾಹದ ಪ್ರಮಾಣ ಕಡಿಮೆ.

೧. ದೇಶದ ಪ್ರಮುಖ ಪ್ರವಾಹ ರಾಜ್ಯಗಳು

ಉತ್ತರದ ರಾಜ್ಯಗಳಲ್ಲಿ ಪ್ರವಾಹದ ತೀವ್ರತೆ ಹೆಚ್ಚಾಗಿದ್ದರೆ, ದೇಶದ ಇನ್ನುಳಿದ ರಾಜ್ಯಗಳಲ್ಲಿ ಪ್ರವಾಹದ ಪ್ರಮಾಣ ಮತ್ತು ತೀವ್ರತೆ ಕಡಿಮೆ ಕಾಣುತ್ತೇವೆ. ಕೆಳಗಿನ ಕೋಷ್ಟಕ ೨.೫ರಲ್ಲಿ ರಾಜ್ಯಗಳ ಒಟ್ಟು ಭೂಪ್ರದೇಶದಲ್ಲಿ ಪ್ರವಾಹ ಪ್ರದೇಶ ಮತ್ತು ದೇಶದ ಪ್ರವಾಹ ಭೂಪ್ರದೇಶದಲ್ಲಿ ರಾಜ್ಯಗಳ ಪಾಲು ಎಷ್ಟು ಎಂಬುದರ ಮಾಹಿತಿ ಪಡೆಯಬಹುದು.

ಕೋಷ್ಠಕ ೨.೫

ದೇಶದ ಪ್ರಮುಖ ಪ್ರವಾಹ ರಾಜ್ಯಗಳು

ಪ್ರಮುಖ ರಾಜ್ಯಗಳು	ರಾಜ್ಯದ ಒಟ್ಟು ಭೂಪ್ರದೇಶದಲ್ಲಿ ಪ್ರವಾಹ ಪ್ರದೇಶ	ದೇಶದ ಒಟ್ಟು ಪ್ರವಾಹ ಭೂಪ್ರದೇಶದಲ್ಲಿ ರಾಜ್ಯದ ಪಾಲು
ಉತ್ತರ ಪ್ರದೇಶ	೩೨.೬೧	೧೪.೪
ಬಿಹಾರ	೫೫.೨೨	೧೩.೦
ಅಸ್ಸಾಂ	೫೦.೧೪	೯.೮
ಪ.ಬಂಗಾಳ	೩.೭.೪೨	೮.೧
ಒರಿಸ್ಸಾ	೧೦.೩೪	೪.೦
ಇತರೆ ರಾಜ್ಯಗಳು	೬.೯೨	೪೫.೭
ಒಟ್ಟು	೧೨.೧೭	೧೦೦.೦೦

ಆಧಾರ – ಎನ್.ಡಿ.ಎಂ..

೨. ನದಿ ಪಾತ್ರಗಳಲ್ಲಿಯ ಪ್ರವಾಹ ಮುನ್ಸೂಚನಾ ಕೇಂದ್ರಗಳು

ದೇಶದ ವಿವಿಧ ನದಿಗಳಿಗೆ ಪ್ರವಾಹ ಮುನ್ಸೂಚನಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಅವುಗಳ ಮಾಹಿತಿಯನ್ನು ಕೋಷ್ಠಕ ೨.೬ರಲ್ಲಿ ಕಾಣಬಹುದು.

ಕೋಷ್ಠಕ ೨.೬

ನದಿ ಪಾತ್ರಗಳಲ್ಲಿಯ ಪ್ರವಾಹ ಮುನ್ಸೂಚನಾ ಕೇಂದ್ರಗಳು

ಅ.ನಂ	ನದಿಯ ಹೆಸರು	ಮುನ್ಸೂಚನಾ ಕೇಂದ್ರಗಳು		
		ಮಟ್ಟ	ಒಳಹರಿವು	ಒಟ್ಟು
೧	ಗಂಗಾ ಮತ್ತು ಉಪನದಿಗಳು	೭೧	೧೪	೮೫
೨	ಬ್ರಹ್ಮಪುತ್ರಾ ಮತ್ತು ಉಪನದಿಗಳು	೨೭	–	೨೭
೩	ಬರಾಕ	೦೨	–	೦೨
೪	ಪೂರ್ವ ನದಿಗಳು	೦೮	೦೧	೦೯
೫	ಮಹಾನದಿ	೦೨	೦೧	೦೩
೬	ಗೋದಾವರಿ	೧೩	೦೪	೧೭
೭	ಕೃಷ್ಣಾ	೦೨	೦೬	೦೮
೮	ಪಶ್ಚಿಮಕ್ಕೆ ಹರಿಯುವ ನದಿಗಳು	೦೯	೦೬	೧೪
	ಒಟ್ಟು	೧೩೪	೩೨	೧೬೬

ಮೂಲ : ಡೀಜಾಸ್ಟರ್ ಮ್ಯಾನೇಜಮೆಂಟ್ ಇನ್ ಇಂಡಿಯಾ, ಸ್ಟೇಟಸ್ ರಿಪೋರ್ಟ್, ಆಗಸ್ಟ್ –೨೦೦೪

ದಕ್ಷಿಣ ಭಾರತದ ನದಿಗಳು ಮತ್ತು ಪ್ರವಾಹ

ಕೃಷ್ಣಾ ಮತ್ತು ಕಾವೇರಿ ದಕ್ಷಿಣ ಭಾರತದ ಮುಖ್ಯ ನದಿಗಳು. ಮಹಾರಾಷ್ಟ್ರದ ಮಹಾಬಳೇಶ್ವರದಲ್ಲಿ ಹುಟ್ಟಿ ಕರ್ನಾಟಕ, ಆಂದ್ರ ಪ್ರದೇಶಗಳಲ್ಲಿ ಹರಿದು ಬಂಗಾಲ ಉಪಸಾಗರವನ್ನು ಸೇರುತ್ತದೆ. ಕರ್ನಾಟಕದ ತಲಕಾವೇರಿಯಲ್ಲಿ ಜನಿಸಿರುವ ಕಾವೇರಿ ನದಿ ತಮಿಳುನಾಡಿನ ಮೂಲಕ ಹರಿದು ಸಮುದ್ರ ಸೇರುವುದು. ಕಾವೇರಿಗೆ ಹೋಲಿಸಿದರೆ ಕೃಷ್ಣಾ ನದಿ ದೊಡ್ಡದು.

೨.೭ ಕೃಷ್ಣಾ ಜಲಾನಯನ ಪ್ರದೇಶ :

ಕೃಷ್ಣೆ ದೇಶದ ಪ್ರಮುಖ ಮತ್ತು ಜಗತ್ತಿನ ವಿಪತ್ತುಕಾರಕ ನದಿಗಳಲ್ಲಿ ಒಂದು. ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಲೇಶ್ವರದ ಪಶ್ಚಿಮ ಘಟ್ಟ ಪ್ರದೇಶದಲ್ಲಿ, ಸಮುದ್ರ ಮಟ್ಟದಿಂದ ೧೩೩೬.೫೫ಮೀ (೪೩೮೫ ಫೂಟ) ಎತ್ತರದಲ್ಲಿ ಹುಟ್ಟಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರ ರಾಜ್ಯಗಳನ್ನು ಕ್ರಮಿಸುತ್ತದೆ. ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಮಹಾರಾಷ್ಟ್ರದ ಸಾತಾರಾ, ಕರ್ನಾಟಕದ ಬೆಳಗಾವಿ, ಬಿಜಾಪುರ, ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳ ಮೂಲಕ ಹರಿದು ಆಂಧ್ರ ರಾಜ್ಯ ಸೇರಿ ಬಾಪಟ್ಲೆ ಎಂಬಲ್ಲಿ ಬಂಗಾಲ ಉಪಸಾಗರ ಸೇರುತ್ತದೆ.

ಕೃಷ್ಣಾ ನದಿ ಹಾಗೂ ಅದರ ಉಪನದಿಗಳ ನೀರಾವರಿ ಯೋಜನೆಗಳನ್ನು ಒಳಗೊಂಡಂತೆ 'ಕೃಷ್ಣಾ ನದಿ ಕೊಳ್ಳ' ಯೋಜನೆಗಳೆಂದು ಕರೆಯಲಾಗುತ್ತದೆ. ಕೃಷ್ಣೆ ಹತ್ತು ಉಪನದಿಗಳನ್ನು ಹೊಂದಿದೆ. ಭೀಮಾ, ಘಟಪ್ರಭಾ, ಮಲಪ್ರಭಾ, ದೋಣಿ, ತುಂಗಭದ್ರಾ, ಕೊಯ್ನಾ, ಯರಲಾ, ಪಂಚಗಂಗಾ, ದೂಧಗಂಗಾ ಹಾಗೂ ವಣಸಿ ಕೃಷ್ಣೆಯ ಪ್ರಮುಖ ಉಪನದಿಗಳು. ಮಹಾರಾಷ್ಟ್ರದಲ್ಲಿ ೩೦೪ ಕೀ.ಮೀ ಕರ್ನಾಟಕದಲ್ಲಿ ೪೮೦ ಕಿ.ಮೀ ಹಾಗೂ ಆಂಧ್ರ ಪ್ರದೇಶದಲ್ಲಿ ೬೧೬ ಕಿ.ಮೀ ಹೀಗೆ ಒಟ್ಟು ೧೪೦೦ ಕಿ.ಮೀ ಉದ್ದ ಕ್ರಮಿಸಿದೆ. ರಾಜ್ಯದಲ್ಲಿ ಗರಿಷ್ಠವೆಂದರೆ ೫೫ ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತದೆ. ಕೃಷ್ಣಾ ಕಣಿವೆ ಪ್ರದೇಶವೊಂದರಲ್ಲಿಯೇ ೩೦ ಲಕ್ಷ ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸಬಹುದು.

ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣೆ :

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯಿಂದ ಬರುವ ಕೃಷ್ಣೆ ಮಂಗಾವತಿಯಲ್ಲಿ ಕರ್ನಾಟಕ ಗಡಿಯನ್ನು ಪ್ರವೇಶಿಸುವುದು. ಮಂಗಾವತಿ ಅಥಣಿ ತಾಲೂಕಿನ ವ್ಯಾಪ್ತಿಗೆ ಬರುವ ಗ್ರಾಮ. ಬೆಳಗಾವಿ ಜಿಲ್ಲೆಯಲ್ಲಿ ಮಂಗಾವತಿಯಿಂದ ಜುಂಜರವಾಡದವರೆಗೆ ಹರಿದಿದೆ. ತಾಲೂಕಿನಲ್ಲಿ ಸುಮಾರು ೯೬ ಕಿ.ಮೀ ಚಲಿಸುತ್ತದೆ. ನದಿಯ ಎಡಬಲಗಳಲ್ಲಿ ಗ್ರಾಮಗಳಿದ್ದು ಮಳವಾಡ,

ಕುಸನಾಳ, ಉಗಾರ, ಐನಾಪುರ, ಬಣಜವಾಡ, ಕಿತ್ತೂರ, ಹುಲಗಬಾಳಿ, ಹಲ್ಯಾಳ, ಆವರಖೋಡ, ನಾಗನೂರ, ದೊಡವಾಡ, ಸತ್ತಿ, ನಂದೇಶ್ವರ, ಸವದಿ ಜನವಾಡ, ಮಹೀಷವಾಡಗಿ, ಶಿರಹಟ್ಟಿ, ಜುಂಜರವಾಡ ನದಿಯ ಎಡದಂಡೆ ಗ್ರಾಮಗಳು. ಸಪ್ತಸಾಗರ, ಇಂಗಳಗಾಂವ, ತೀರ್ಥ, ದರೂರ, ಖವಟಕೊಪ್ಪ, ಶೇಗುಣಸಿ ನದಿ ತೀರದ ಬಲದಂಡೆ ಗ್ರಾಮಗಳು. ನದಿ ತೀರದ ಬಲದಂಡೆ ಗ್ರಾಮಗಳು ಪ್ರವಾಹದಿಂದ ಹೆಚ್ಚು ಬಾಧಿತವಾಗುತ್ತವೆ.

ನೀರಾವರಿ ದೃಷ್ಟಿಯಿಂದ ಅಥಣಿ ತಾಲೂಕನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಒಂದು ಕೃಷ್ಣಾ ತೀರದ ದಕ್ಷಿಣ ಆಗ್ನೇಯ ಭಾಗ, ಮತ್ತೊಂದು ಬಯಲು ಸೀಮೆಯ ಪಶ್ಚಿಮೋತ್ತರ ಪ್ರದೇಶ. ಇದರ ದಕ್ಷಿಣ ಆಗ್ನೇಯ ಭಾಗ ಹಚ್ಚು ಹಸಿರಿನಿಂದ ಕೂಡಿದ್ದರೆ, ಪೂರ್ವವೋತ್ತರ ಭಾಗವು ಕಡು ಬೇಸಿಗೆ ಭೀಕರ ಬರಗಾಲಕ್ಕೆ ತುತ್ತಾಗುತ್ತವೆ. ತಾಲೂಕಿನ ೮೯ ಹಳ್ಳಿಗಳಲ್ಲಿ ೩೩ ಹಳ್ಳಿಗಳು ಕೃಷ್ಣೆಯ ಕೃಪೆಗೆ ಪಾತ್ರವಾಗಿದ್ದು ಸುಮಾರು ೫೩ ಹಳ್ಳಿಗಳು ಭೀಕರ ಬರಗಾಲಕ್ಕೆ ತುತ್ತಾಗುತ್ತವೆ. ಅಥಣಿ ಪೂರ್ವೋತ್ತರ ಭಾಗದ ಬಡಚಿ, ಯಕ್ಕಂಚಿ, ಚಮಕೇರಿ, ಕೊಕಟನೂರ, ಕೊಟ್ಟಲಗಿ, ಸಂಬರಗಿ, ದೇಸಾರಹಟ್ಟಿ, ಬುರ್ಲಟ್ಟಿ, ಜಂಬಗಿ, ಪಾಂಡೇಗಾಂವ, ಖಿಳೇಗಾಂವ ಮುಂತಾದ ಗ್ರಾಮಗಳು ಖಾಯಂ ಬರಪೀಡಿತ ಗ್ರಾಮಗಳು.

ರಾಜ್ಯದ ಮುಂಬೈ-ಕರ್ನಾಟಕ, ಹೈದ್ರಾಬಾದ-ಕರ್ನಾಟಕ ಪ್ರದೇಶಗಳು ಪದೇ ಪದೇ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳು. ಇದನ್ನು ತಿಳಿದಿದ್ದ ಬ್ರಿಟಿಷ್ ಸರಕಾರ ವಿಜಾಪುರದಲ್ಲಿ ಬರಗಾಲ ನಿವಾರಣ ಸಂಸ್ಥೆ ಸ್ಥಾಪಿಸಿತ್ತು. ಭಾಷಾವಾರು ಪ್ರಾಂತಗಳ ರಚನೆಯವರೆಗೂ ಈ ಭಾಗದಲ್ಲಿ ಅಭಿವೃದ್ಧಿ ಮತ್ತು ನೀರಾವರಿ ಸೌಲಭ್ಯಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿಲ್ಲ. ಹಳೆ ಮೈಸೂರು ಭಾಗದಲ್ಲಿ ಮೈಸೂರು ಮಹಾರಾಜರು ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಿಸಿ ಆ ಭಾಗದಲ್ಲಿ ನೀರಾವರಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಕಾರಣರಾದರು. ಕಾರಣ ಹಳೆ ಮೈಸೂರು ಭಾಗ ರಾಜ್ಯದ ಉಳಿದ ಭಾಗಗಳಿಗಿಂತ ಅರ್ಧಶತಮಾನದಷ್ಟು ಮುಂದೆ ಇದೆಯೆಂದು ತಜ್ಞರ ಅಭಿಪ್ರಾಯ. ಉತ್ತರ ಕರ್ನಾಟಕದ ನದಿಗಳು ಅಂತರಾಜ್ಯ ನದಿಗಳಾಗಿರುವುದರಿಂದಲೂ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅಡಚಣೆಯಾಯಿತು.

೨.೮ ಕೃಷ್ಣಾ ಕೊಳ್ಳದ ಯೋಜನೆಗಳು :

ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಸರಕಾರಗಳು ಕೃಷ್ಣಾ ನದಿ ನೀರನ್ನು ಬಳಸಿಕೊಳ್ಳಲು ಅನೇಕ ಯೋಜನೆಗಳನ್ನು ರೂಪಿಸಿವೆ. ಕೃಷ್ಣೆಗೆ ನಿರ್ಮಿಸಿರುವ ಪ್ರಮುಖ ಅಣೆಕಟ್ಟುಗಳೆಂದರೆ ಧೂಮ, ಬಸವಸಾಗರ, ಆಲಮಟ್ಟಿ, ಶ್ರೀಶೈಲಮ್, ನಾಗಾರ್ಜುನ, ಪ್ರಕಾಶಮ,

ಜುರಾಲಾ, ನಾರಾಯಣಪುರ, ಅಮರ ಪುಲಿಚಿಂತಾಲಾ. ಮಹಾರಾಷ್ಟ್ರದಲ್ಲಿ ಕೃಷ್ಣಾ ನದಿಗೆ ಬೃಹತ್ ಅಣೆಕಟ್ಟನ್ನು ಕಟ್ಟಲಾಗಿಲ್ಲ. ಆದರೆ ಅದರ ಉಪನದಿಗಳಾದ ಪಂಚಗಂಗಾ ಹಾಗೂ ಕೊಯ್ನಾ ನದಿಗಳಿಗೆ ಬೃಹತ್ ಜಲಾಶಯಗಳನ್ನು ನಿರ್ಮಿಸಲಾಗಿದೆ. ಕೃಷ್ಣಾ ನದಿ ನೀರನ್ನು ಅದು ಯಾತ ನೀರಾವರಿ ಯೋಜನೆಗಳಿಗೆ ಬಳಸಿಕೊಂಡಿದೆ. ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸಲಾಗಿದ್ದು ಆಲಮಟ್ಟಿ ಮತ್ತು ನಾರಾಯಣಪುರ ಕರ್ನಾಟಕದ ಪ್ರಮುಖ ಜಲಾಶಯಗಳು. ನಾರಾಯಣಪುರ ಜಲಾಶಯಕ್ಕೆ ಪೂರಕವಾಗಿ ಆಲಮಟ್ಟಿ ಯೋಜನೆಯನ್ನು ರೂಪಿಸಲಾಗಿದೆ. ಆಲಮಟ್ಟಿ ಯೋಜನೆಗೆ ಪೂರಕವಾಗಿ ಹಿಪ್ಪರಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಆಲಮಟ್ಟಿ ಯೋಜನೆಯಿಂದ ಬಾಗಲಕೋಟ ನಗರ ಸೇರಿದಂತೆ ಆ ಜಿಲ್ಲೆಯ ಹಲವು ಗ್ರಾಮಗಳು ಮುಳುಗಡೆಯಾಗುತ್ತವೆ. ಇದು ೫೨೮ ಮೀಟರ್ ಎತ್ತರದಲ್ಲಿದೆ. ಇದರ ಎತ್ತರ ೪೦ ಮೀಟರ್, ಅಗಲ ೧.೬ ಕಿ.ಮೀ ಇದ್ದು, ೬.೫ ಬೆಮ್ ನೀರು ಹಿಡಿದಿರುವ ಸಾಮರ್ಥ್ಯ ಹೊಂದಿದೆ. ಇದಕ್ಕೂ ಮೊದಲು ರಾಯಚೂರ ಜಿಲ್ಲೆಯ ನಾರಾಯಣಪೂರ ಬಳಿಯಲ್ಲಿ ಒಂದು ಅಣೆಕಟ್ಟು ನಿರ್ಮಿಸಲಾಗಿದೆ. ಇದರ ಎತ್ತರ ೨೯ ಮೀಟರ್ ಇದ್ದು ನೀರು ಹಿಡಿಯುವ ಸಾಮರ್ಥ್ಯ ೧.೦೭ ಬೆಮ್ ಇದೆ. ಈ ಎರಡೂ ಯೋಜನೆಗಳಿಂದ ಜಿಲ್ಲಾ ಕೇಂದ್ರವಾದ ಬಾಗಲಕೋಟ ನಗರ ಸೇರಿದಂತೆ ೨೦೭ ಗ್ರಾಮಗಳು ಮುಳುಗಡೆಯಾಗಿವೆ. ಇವುಗಳಲ್ಲಿ ಅತಿ ಹೆಚ್ಚು ಅಂದರೆ ೧೩೫ ಗ್ರಾಮಗಳು ಬಾಗಲಕೋಟ ಜಿಲ್ಲೆ ಒಂದರಲ್ಲಿ ಮುಳುಗಡೆಯಾಗಿವೆ. ಬಿಜಾಪುರ ಜಿಲ್ಲೆಯ ೪೯ ಗ್ರಾಮಗಳು ಬೆಳಗಾವಿ ಜಿಲ್ಲೆಯ ನಾಲ್ಕು ಗ್ರಾಮಗಳು ಯೋಜನೆಯಲ್ಲಿ ಮುಳಗಿದವು. ರಾಯಚೂರ ಹಾಗೂ ಗುಲಬರ್ಗಾ ಜಿಲ್ಲೆಯ ಕ್ರಮವಾಗಿ ೧೨ ಮತ್ತು ಒಂದು ಗ್ರಾಮಗಳು ಮುಳುಗಡೆಗೊಂಡಿದ್ದು, ಈ ಯೋಜನೆಗಳಿಂದ ಸ್ಥಳಾಂತರಗೊಂಡ ಸಂತ್ರಸ್ತರ ಸಂಖ್ಯೆ ನಾಲ್ಕು ಲಕ್ಷ ಮೀರಿದೆ.

ಹಿಪ್ಪರಗಿ ಯೋಜನೆ :

ಇದು ಕೃಷ್ಣಾ ನದಿಗೆ ಆಲಮಟ್ಟಿ ಜಲಾಶಯಕ್ಕೆ ಪೂರಕವಾಗಿ ನಿರ್ಮಿಸಿದ ಪೂರಕ ಯೋಜನೆ. ಹಿಪ್ಪರಗಿ ಗ್ರಾಮದ ಬಳಿ ಸಣ್ಣ ಬ್ಯಾರೇಜ ನಿರ್ಮಿಸಲಾಗಿದೆ. ಇದರ ಎತ್ತರ ೪೨೪.೮೭ ಮೀಟರ್ ಉದ್ದ ೫೯೭೪ ಮೀಟರ್ ಅದರಲ್ಲಿ ನೀರಿನ ಹರಿಯುವ ಅಗಲ ೩೫೨.೬೪ ಮೀಟರ್. ಇದಕ್ಕೆ ೨೨ ಸರ್ವಿಸ್ ಕ್ರೇಸ್ಟ್ ಗೇಟ್‌ಗಳಿವೆ. ನೀರಿನ ಸಂಗ್ರಹ ಸಾಮರ್ಥ್ಯ ೧೨.೫೬ ಟಿ.ಎಮ್.ಸಿ. ಈ ಯೋಜನೆಯ ಮುಖ್ಯ ಉದ್ದೇಶ ಬೆಳಗಾವಿ ಜಿಲ್ಲೆಯ ಅಥಣಿ, ಬಿಜಾಪೂರ ಹಾಗೂ ಬಾಗಲಕೋಟ ಜಿಲ್ಲೆಯ ಕೆಲವು ತಾಲೂಕುಗಳ ಕೃಷಿ ಕ್ಷೇತ್ರಕ್ಕೆ ನೀರು ಒದಗಿಸಬಹುದು.

ಅಥಣಿ ಹಾಗೂ ಬಿಜಾಪೂರ ತಾಲೂಕುಗಳು ಖಾಯಂ ಬರಗಾಲ ಪೀಡಿತ ಪ್ರದೇಶಗಳು. ಈ ಪ್ರದೇಶದ ವಾರ್ಷಿಕ ಮಳೆಯ ಪ್ರಮಾಣ ೨೩ ಇಂಚು. ಫಲವತ್ತಾದ ಕೃಷಿ ಭೂಮಿ ಇದ್ದರೂ ಅನಿಶ್ಚಿತ ಮಳೆಗಾಲದಿಂದಾಗಿ ಬೆಳೆ ಬೆಳೆಯುವುದಿಲ್ಲ. ಈ ಪ್ರದೇಶದ ಜನರ ಮುಖ್ಯ ಉದ್ಯೋಗ ಕೃಷಿ ಆಗಿದ್ದು ಅವರೆಲ್ಲ ಸಂಕಟಕ್ಕೆ ಒಳಗಾಗುತ್ತಿರುವುದನ್ನು ಗಮನಿಸಿದ ಸರಕಾರ ಹಿಪ್ಪರಗಿ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿ ಆ ನೀರನ್ನು ಯಾತ ನೀರಾವರಿ ಯೋಜನೆ ಮೂಲಕ ಕೃಷಿಗೆ ಬಳಸಿಕೊಳ್ಳಲು ಯೋಜಿಸಿ ಇದನ್ನು ಅನುಷ್ಠಾನಗೊಳಿಸಿತು. ೧೯೭೨ರಲ್ಲಿ ಆರಂಭಗೊಂಡ ಈ ಯೋಜನೆಯ ಕಾಮಗಾರಿ ತುಂಬ ನಿಧಾನವಾಗಿ ನಡೆದು ೨೦೦೪ರಲ್ಲಿ ಪೂರ್ಣಗೊಂಡಿತು.

ಹಿಪ್ಪರಗಿ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿಗೆ ಸೇರಿದ ಗ್ರಾಮ. ಇದರ ಭೌಗೋಳಿಕ ಸ್ಥಾನ ೧೬°.೩' ಅಕ್ಷಾಂಶ, ೭೫°.೧೦' ರೇಖಾಂಶ. ನದಿಯ ಪೂರ್ವ ಭಾಗದಲ್ಲಿ ಹಿಪ್ಪರಗಿ ಇದ್ದರೆ ಪಶ್ಚಿಮದ ಬದಿಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿಗೆ ಸೇರಿದ ದರ್ಗಾ ಮಾಜರೆ ಇದೆ. ಇದು ಅಥಣಿ ತಾಲೂಕಿನ ಗ್ರಾಮ.

ಬಚಾವತ್ ತೀರ್ಪಿನ ಮೇರೆಗೆ ೧೨.೫೬ ಟಿ.ಎಮ್.ಸಿ ನೀರಿನ ಹಂಚಿಕೆ ಸರಕಾರದಿಂದ ಮಂಜೂರಾಗಿದ್ದು ಇದರಲ್ಲಿ ೧೦.೦೧ ಟಿ.ಎಮ್.ಸಿ ನೀರನ್ನು ನೀರಾವರಿಗಾಗಿ ಹಾಗೂ ಇನ್ನುಳಿದ ೨.೫೫ ಟಿ.ಎಮ್.ಸಿ ನೀರನ್ನು ಔದ್ಯೋಗೀಕರಣ ಮತ್ತು ಕುಡಿಯುವ ನೀರಿಗಾಗಿ ಬಳಸಲು ಉದ್ದೇಶಿಸಲಾಗಿದ್ದು ಇದರಿಂದ ಅಥಣಿ, ಚಿಕ್ಕೋಡಿ ಮತ್ತು ಜಮಖಂಡಿ ತಾಲೂಕುಗಳ ಒಟ್ಟು ೫೬ ಗ್ರಾಮಗಳ ೫೯,೬೯೨ ಹೆಕ್ಟೇರ್ ಜಮೀನು ನೀರಾವರಿಗೆ ಒಳಪಡಿಸಲು ಹಲ್ಯಾಳ ಮತ್ತು ಐನಾಪೂರ ಏತ ನೀರಾವರಿ ಯೋಜನೆಗಳನ್ನು ಯೋಜಿಸಲಾಗಿದೆ. ಅದರಂತೆ ಸರಕಾರ ರೂ. ೧೮೬.೭೦ ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದೆ.

ಅಥಣಿ, ಜಮಖಂಡಿ ತಾಲೂಕಿನ ರೈತರು ಮತ್ತು ಶಾಸಕರು ತಮ್ಮ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಹಿಪ್ಪರಗಿ ಯೋಜನೆಯಿಂದ ವಿಸ್ತರಿಸಬೇಕೆಂದು ಕೇಳಿಕೊಂಡ ಹಿನ್ನೆಲೆಯಲ್ಲಿ ಸರಕಾರ ಜನರ ಮನವಿಗೆ ಸ್ಪಂದಿಸಿ ಕರಿಮಸೂತಿ ಸಾವಳಗಿ ಹಾಗೂ ತುಂಗಳ ಏತ ನೀರಾವರಿ ಯೋಜನೆಗಳನ್ನು ಅಳವಡಿಸಿ ಒಟ್ಟು ೭೦,೦೭೯ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ವಿಸ್ತರಿಸಲು ಹಿಪ್ಪರಗಿ ಯೋಜನೆ ರೂ. ೯೦೧.೦೦ ಕೋಟಿಗಳ ಪರಿಷ್ಕರಣ ಅಂದಾಜು ಪಟ್ಟಿಗೆ ಸೇರಿಸಿ ೨೦೧೧ರಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯಿತು.

ಹಂಚಿಕೆಯಾದ ೧೨.೧೦ ಟಿ.ಎಂ.ಸಿ ಪ್ರಮಾಣದ ನೀರಿನಲ್ಲಿಯೇ ಹೆಚ್ಚುವರಿ ಕ್ಷೇತ್ರ ಪರಿಗಣಿಸಿ ಒಟ್ಟು ೭೪,೭೪೨ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯಿದೆ. ಒಟ್ಟು ೧೨.೧೦ ಟಿ.ಎಂ.ಸಿ ನೀರಿನ ಹಂಚಿಕೆಯಲ್ಲಿ ೧೧.೬೪ ಟಿ.ಎಮ್.ಸಿ ಪ್ರಮಾಣದ ನೀರನ್ನು ನೀರಾವರಿಗಾಗಿ ಹಾಗೂ ೦.೪೬ ಟಿ.ಎಮ್.ಸಿ ಪ್ರಮಾಣದ ನೀರನ್ನು ಔದ್ಯೋಗೀಕರಣ ಮತ್ತು ಕುಡಿಯುವ ನೀರಿಗಾಗಿ ನಿಗದಿಪಡಿಸಲಾಗಿದೆ.

ಏತ ನೀರಾವರಿ ಯೋಜನೆಗಳು :

೧) ಹಲ್ಯಾಳ ಏತ ನೀರಾವರಿ ಯೋಜನೆ :

ಹಲ್ಯಾಳ ಏತ ನೀರಾವರಿ ಯೋಜನೆಯನ್ನು ಹಲ್ಯಾಳ ಗ್ರಾಮದ ಹತ್ತಿರ ಅನುಷ್ಠಾನಗೊಳಿಸಲಾಗಿದ್ದು ಈ ಯೋಜನೆಗೆ ೩.೨೧ ಟಿ.ಎಮ್.ಸಿ ನೀರು ಹಂಚಿಕೆಯಾಗಿದೆ. ಅಥಣಿ ತಾಲೂಕಿನ ಸುಮಾರು ೨೦,೬೩೫ ಹೆಕ್ಟೇರ್ ಪ್ರದೇಶ ನೀರಾವರಿ ವ್ಯಾಪ್ತಿಗೆ ಒಳಪಡುತ್ತದೆ. ಈ ಯೋಜನೆಯ ಅಂದಾಜು ಮೊತ್ತ ರೂ. ೧೪೨೬೫.೦೦ ಲಕ್ಷ ಇರುತ್ತದೆ.

೨) ಕರಿಮಸೂತಿ ಏತ ನೀರಾವರಿ ಯೋಜನೆ :

ಇದು ಹಲ್ಯಾಳ ಏತ ನೀರಾವರಿ ಯೋಜನೆಯ ೩ನೇ ಹಂತ. ಕರಿಮಸೂತಿ ಏತ ನೀರಾವರಿ ಯೋಜನೆಯನ್ನು ಹಲ್ಯಾಳ ಪೂರ್ವ ಕಾಲುವೆ ಸರಪಳಿ ೧೭.೦೮೧ರಲ್ಲಿ ಅನುಷ್ಠಾನಗೊಳಿಸಲಾಗಿದ್ದು ಇದರಿಂದ ೩.೪೯ ಟಿ.ಎಮ್.ಸಿ ನೀರನ್ನು ಬಳಸಿಕೊಂಡು ಅಥಣಿ ತಾಲೂಕಿನ ೨೨೪೦೦ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡಿಸಲಾಗಿದೆ. ಯೋಜನೆಯ ಅಂದಾಜು ಮೊತ್ತ ೨೮೧೫೩.೦೦ ಲಕ್ಷ ಇರುತ್ತದೆ.

೩) ಸಾವಳಗಿ–ತುಂಗಳ ಏತ ನೀರಾವರಿ ಯೋಜನೆ :

ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯಲ್ಲಿ ಹಲ್ಯಾಳ ಪೂರ್ವ ಕಾಲುವೆ ಸರಪಳಿ ೩೯.೯೮ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದರಿಂದ ೧.೨೮ ಟಿ.ಎಮ್.ಸಿ ನೀರನ್ನು ಬಳಸಿಕೊಂಡು ಅಥಣಿ ಮತ್ತು ಜಮಖಂಡಿ ತಾಲೂಕಿನ ಸುಮಾರು ೯೦೪೫ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸುವ ಯೋಜನೆಯಿದೆ. ಯೋಜನೆ ಅಂದಾಜು ಮೊತ್ತ ೬೨೫೪.೦೦ ಲಕ್ಷ ಇರುತ್ತದೆ.

೪) ಐನಾಪೂರ ಏತ ನೀರಾವರಿ ಯೋಜನೆ :

ಐನಾಪೂರ ಏತ ನೀರಾವರಿ ಯೋಜನೆಯಿಂದ ಅಥಣಿ ತಾಲೂಕಿನ ೨೨,೬೬೨ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯಿದೆ. ಇದಕ್ಕೆ ೮ ಎಂ.ವಿ.ಎ ವಿದ್ಯುತ್

ಅವಶ್ಯಕತೆ ಇದ್ದು ಐನಾಪೂರ ವಿದ್ಯುತ್ ಸ್ಥಾವರ ೧೧೦ಕೆ.ವ್ಹಿ. ಉಪಕೇಂದ್ರದಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯ ಅಂದಾಜು ಮೊತ್ತ ೯೩೪.೦೦ ಲಕ್ಷಗಳಾಗಿದೆ.

ಹಿಪ್ಪರಗಿ ನೀರಾವರಿ ಯೋಜನೆಗೆ ಪ್ರಧಾನ ಮಂತ್ರಿಗಳ ವಿಶೇಷ ಯೋಜನೆ ಅಡಿಯಲ್ಲಿ ರೂ. ೫೫೦.೦೦ ಕೋಟಿ ಮಂಜೂರಾತಿ ದೊರಕಿದೆ. ಮೊದಲನೇ ಕಂತು ರೂ. ೧೧೫.೩೬ ಕೋಟಿ ಅನುದಾನ ಬಿಡುಗಡೆ ಮಾಡಿದೆ ಅಲ್ಲದೆ ೨೦೧೦-೧೧ರೊಳಗಾಗಿ ಯೋಜನೆ ಪೂರ್ಣಗೊಳಿಸಲು ನಿರ್ದೇಶಿಸಿದೆ.

ಕೋಷ್ಟಕ ೨.೭

ಬೆಳಗಾವಿ ಜಿಲ್ಲೆಯಲ್ಲಿ ೨೦೦೫ರ ಪ್ರವಾಹದ ಹಾನಿ

ಅ.ನಂ	ವರ್ಷ	ಯೋಜನೆಗಳಿಗೆ ಒದಗಿಸಲಾದ ಮೊತ್ತ ರೂ.ಕೋಟಿಗಳಲ್ಲಿ	ನೀರಾವರಿಗೆ ಒಳಪಡಿಸುವ ಕ್ಷೇತ್ರ
೧	೨೦೦೮-೦೯	೧೨೮.೧೭	೨೦೦೦ ಹೆಕ್ಟೇರ್
೨	೨೦೦೯-೧೦	೫೭೦.೦೦	೨೫೦೦೦ ಹೆಕ್ಟೇರ್
೩	೨೦೧೦-೧೧	೫೫೬.೮೦	೩೭೭೪೨ ಹೆಕ್ಟೇರ್
	ಒಟ್ಟು	**೧೨೫೪.೯೮**	**೭೪೭೪೨ ಹೆಕ್ಟೇರ್**

ಮೂಲ : ಹಿಪ್ಪರಗಿ ನೀರಾವರಿ ಯೋಜನೆಯ ಸಂಕ್ಷಿಪ್ತ ವರದಿ.

೨.೧೦ ಬೆಳಗಾವಿ ಜಿಲ್ಲೆಯ ಕೃಷ್ಣಾ ಪ್ರವಾಹಗಳು :

ಜಿಲ್ಲೆಯಲ್ಲಿ ಪ್ರವಾಹಗಳು ಸರ್ವೇ ಸಾಮಾನ್ಯ ೧೯೬೨ರಲ್ಲಿ ಭಯಂಕರ ಪ್ರವಾಹ ಬಂದಿತ್ತೆಂದು ತಿಳಿಯುತ್ತದೆ. ನಂತರ ೧೯೮೦ರಲ್ಲಿ ಜಿಲ್ಲೆಯಲ್ಲಿ ಪ್ರವಾಹ ೯.೧೪ ಲಕ್ಷ ಹಾನಿ ಮಾಡಿತು ಇದರಿಂದ ೫೯ ಗ್ರಾಮಗಳ ೨೦,೦೦೦ ಜನಸಂಖ್ಯೆ ಭಾದಿತವಾಗಿತ್ತು ಹಾನಿಗೊಳಗಾದ ಮನೆಗಳಿಗೆ ೬೦೦ರಂತೆ, ಪ್ರತಿ ಕುಟುಂಬಕ್ಕೆ ೪೦೦ ರಿಂದ ೮೦೦ರ ವರೆಗೆ ಪರಿಹಾರವಾಗಿ ನೀಡಿ ಜಿಲ್ಲೆಯಲ್ಲಿ ೪ ಲಕ್ಷ ಹಣ ಪರಿಹಾರ ನೀಡಲಾಗಿತ್ತು. ೧೯೮೩ರಲ್ಲಿ ಜೂನ್ ೨೭ ರಿಂದ ೩೦ರ ವರೆಗೆ ಬಾರಿ ಮಳೆಯ ಕಾರಣ ಗಂಡಾಂತಕಾರಿ ಪ್ರವಾಹ ಬಂದಿತ್ತು. ಇದರಿಂದ ಸಾರಿಗೆ ಸಂಪರ್ಕ ಕಡಿತಗೊಂಡಿತ್ತು. ಅಲ್ಲದೆ ೧೦೫ ಗ್ರಾಮಗಳು, ೩,೩೮೬ ಕುಟುಂಬಗಳು ಬಾಧಿತವಾಗಿದ್ದವು. ಐದು ಜನರು ಸಾವನ್ನಪ್ಪಿ, ೫೫೬ ಮನೆಗಳು ಕುಸಿದಿದ್ದವು. ೨೩೭೪ ಜಾನುವಾರುಗಳು ಪ್ರಾಣ ಕಳೆದುಕೊಂಡು ೧೬೮.೮೭ ಲಕ್ಷ ಖಾಸಗಿ ಆಸ್ತಿ ಹಾನಿಯಾಗಿತ್ತೆಂದು ತಿಳಿಯುತ್ತದೆ.

೨೦೦೫ ಮತ್ತು ೨೦೦೬ರಲ್ಲಿಯ ಪ್ರವಾಹಗಳು ಜಿಲ್ಲೆಯ ಇತಿಹಾಸದಲ್ಲಿ ಕಂಡರಿಯದ ಭಯಂಕರ ಪ್ರವಾಹಗಳು. ೨೦೦೫ರಲ್ಲಿ ೯೪ ಗ್ರಾಮಗಳು ಬಾಧಿತವಾದರೆ ೨೦೦೬ರಲ್ಲಿ ೯೫ ಗ್ರಾಮಗಳು ಬಾಧಿತವಾಗಿದ್ದವು.

೨೦೦೬ರ ಯುನಿಸೆಫ್ ವರದಿ ಪ್ರಕಾರ ಗುಜರಾತ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ, ಮಧ್ಯ ಪ್ರದೇಶ, ಓರಿಸ್ಸಾ ರಾಜ್ಯಗಳು ಪ್ರವಾಹದಿಂದ ಹೆಚ್ಚು ಬಾಧಿತವಾದವು. ೨೫ ಮಿಲಿಯನ್ ಜನಸಂಖ್ಯೆ ಪ್ರಭಾವಿತವಾಗಿತ್ತು. ೨೧೦೦ ಜನರು ಸಾವನ್ನಪ್ಪಿರಬಹುದೆಂದು ಅಂದಾಜಿಸಲಾಗಿದೆ. ಆದರೆ ಇದು ೨೦೦೫ರಷ್ಟು ಭಯಂಕರವಲ್ಲವೆಂದು ತಿಳಿಸುತ್ತದೆ. ಕರ್ನಾಟಕದಲ್ಲಿ ಬೆಳಗಾವಿ, ಬಿಜಾಪುರ, ಗುಲಬರ್ಗಾ, ಕೊಪ್ಪಳ, ರಾಯಚೂರ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಪ್ರವಾಹಕ್ಕೆ ತುತ್ತಾದ ಜಿಲ್ಲೆಗಳು, ೭೬೪ ಗ್ರಾಮಗಳು ಒಂದು ಮಿಲಿಯನ್ ಜನಸಂಖ್ಯೆ ಪ್ರವಾಹ ಪೀಡಿತರಾಗಿದ್ದು, ೧೭೪ ಪರಿಹಾರ ಕೇಂದ್ರಗಳಲ್ಲಿ ಒಂದು ಲಕ್ಷ ಜನರಿಗೆ ತಾತ್ಕಾಲಿಕ ಆಶ್ರಯ ನೀಡಲಾಗಿತ್ತು. ಪ್ರತಿವರ್ಷ ಪ್ರವಾಹಕ್ಕೆ ತುತ್ತಾಗುವ ೯೦ ಗ್ರಾಮಗಳಿಗೆ ಶಾಶ್ವತ ಪುನರ್ ವಸತಿ ಒದಗಿಸಲು ಸರಕಾರ ನಿರ್ಧರಿಸಿ ಮೇಲೆ ತಿಳಿಸಿದ ಜಿಲ್ಲೆಗಳ ೧೬,೪೦೫ ಕುಟುಂಬಗಳಿಗೆ ಶಾಶ್ವತ ಪುನರ್ವಸತಿ ಒದಗಿಸಲು ನಿರ್ಧರಿಸಿದೆ ಎಂದು ತಿಳಿಸಿದೆ.

೨೦೦೫ ಮತ್ತು ೨೦೦೬ರಲ್ಲಿ ಬೆಳಗಾವಿ ಜಿಲ್ಲೆಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಪ್ರವಾಹ ಬರಲು ಮಹಾರಾಷ್ಟ್ರ ರಾಜ್ಯದ ವಿವಿಧ ಅಣೆಕಟ್ಟೆ ಅಚ್ಚುಕಟ್ಟು ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗಿ ಮುನ್ಸೂಚನೆಗಳಿಲ್ಲದೆ ನೀರು ಬಿಟ್ಟಿರುವುದೇ ಪ್ರಮುಖ ಕಾರಣ. ಕೊಯ್ನಾ, ವಾರಣಾ, ದೂಧಗಂಗಾ, ರಾಜಾರಾಮ, ರಾಜಾಪೂರ ಅಣೆಕಟ್ಟುಗಳಿಂದ ಕೃಷ್ಣಾ ನದಿಗೆ ಹೆಚ್ಚುವರಿಯಾಗಿ ನೀರು ಬಿಟ್ಟಿದ್ದರಿಂದ ಕೃಷ್ಣಾ ನದಿಯಲ್ಲಿ ಹರಿಯುವ ನೀರಿನ ಪ್ರಮಾಣ ಹೆಚ್ಚಾಗಿತ್ತು.

ಜಿಲ್ಲೆಯಲ್ಲಿ ೨೦೦೫ರ ಪ್ರವಾಹದ ಹಾನಿ[೫]

೧) ಬಾಧಿತ ಗ್ರಾಮಗಳು – ೯೪ (ಸಂಪೂರ್ಣವಾಗಿ ೪೭, ಭಾಗಶಃ–೪೭)

೨) ಸಾವುಗಳ ಸಂಖ್ಯೆ – ೨೨ (ಪ್ರವಾಹದಿಂದ ಕೊಚ್ಚಿ–೧೦, ಮನೆಗಳು ಬೀಳುವುದರಿಂದ–೧೨)

೩) ಮನೆಗಳ ನಾಶ – ೪೦,೭೨೩ (ಹಾನಿ ೨೦೦೬.೬೧ ಕೋಟಿ)

೪) ಬೆಳೆ ನಾಶ – ೫೭,೮೯೬ (೪೭೧.೬೬ ಕೋಟಿ)

೫) ಸಾರ್ವಜನಿಕ ಆಸ್ತಿ ಹಾನಿ – ೯೫.೨೦ ಕೋಟಿ

ಒಟ್ಟು ಹಾನಿ – ೭೭೨.೪೭ ಕೋಟಿ

೬) ೨೦೦೦ ವಿದ್ಯುತ್ ಟ್ರಾನ್ಸ್‌ಫಾರ್ಮರಗಳು ನೀರಿನಲ್ಲಿ ಮುಳುಗಡೆ

೭) ೪೦೦ ಕಿ.ಮೀ ವಿದ್ಯುತ್ ಲಾಯಿನಿಗೆ ಪರಿಣಾಮ

೮) ಪ್ರಾಣಿಗಳ ಹಾನಿ – ೪೨೦೦೦

ರಕ್ಷಣಾ ಕಾರ್ಯಗಳು :

೧. ರಕ್ಷಣೆ ಒದಗಿಸಿದ ಜನಸಂಖ್ಯೆ – ೨,೮೫,೩೫೬

೨. ರಕ್ಷಣೆ ಒದಗಿಸಿದ ಜಾನುವಾರುಗಳು – ೧೧,೦೦೦

೩. ಪ್ರವಾಹಕ್ಕೆ ಉಪಯೋಗಿಸಿದ ದೋಣಿಗಳ ಸಂಖ್ಯೆ – ೮೩

೪. ಸೈನ್ಯದ ಸಹಾಯ – ೩ ಹೆಲಿಕ್ಯಾಪ್ಟರ್, ೨ ಸೈನಿಕ ತುಕುಡಿಗಳು, ೧೬ ದೋಣಿಗಳು

೫. ಪ್ರವಾಹದಿಂದ ಹೆಚ್ಚು ಪ್ರಭಾವಿತವಾಗಿ ಸೈನಿಕರಿಗೆ ಜವಾಬ್ದಾರಿ ವಹಿಸಿದ ಗ್ರಾಮಗಳ ಸಂಖ್ಯೆ– ೧೨

೬. ಹೆಲಿಕ್ಯಾಪ್ಟರ್‌ಗಳಿಂದ ರಕ್ಷಿಸಿದ ಜನರ ಸಂಖ್ಯೆ – ೧೯೪ (೨೦೮ ಪುರುಷರು, ೬೬ ಮಹಿಳೆಯರು ಮತ್ತು ೨೦ ಮಕ್ಕಳು

೭. ವಿತರಣೆ ಮಾಡಿದ ಆಹಾರ ಪೊಟ್ಟಣಗಳು – ೭೯,೭೦೦ (ವಾಯು ಮಾರ್ಗ– ೬೪೭೦೦, ಭೂಮಾರ್ಗ – ೧೫೦೦೦)

೮. ಔಷಧ ವಿತರಣೆ – ೨೫ ಲಕ್ಷ ರೂ.

೯. ೧೨೦೦೦ ಮಕ್ಕಳಿಗೆ ಶಕ್ತಿ ವರ್ಧಕ ಆಹಾರದ ವಿತರಣೆ

ಪರಿಹಾರ ಮತ್ತು ಪುನರ್ವಸತಿ :

೧. ಪುನರ್ ವಸತಿ ಕೇಂದ್ರಗಳು – ೫೮

೨. ಪುನರ್ ವಸತಿ ಕೇಂದ್ರಗಳಲ್ಲಿಯ ಕುಟುಂಬಗಳ ಸಂಖ್ಯೆ –೫೭೦೭೧

೩. ಪುನರ್ ವಸತಿ ಕೇಂದ್ರಗಳಲ್ಲಿಯ ಜನಸಂಖ್ಯೆ – ೮೮೨೨೭

೪. ಗೋಶಾಲೆಗಳ ಸಂಖ್ಯೆ – ೧೮ (೩೪೨೨ ಜಾನುವಾರುಗಳು, ೫೦೦ ಟನ್ ಹಿಂಡಿ ಮತ್ತು ೨೫೦ ಟನ್ ಮೇವು)

೫. ಪುನರ್ ವಸತಿ ಕೇಂದ್ರಗಳಿಗೆ ಅಕ್ಕಿ ವಿತರಣೆ – ೭೦೧೫ ಕ್ವಿಂಟಲ್

೬. ಪುನರ್ ವಸತಿ ಕೇಂದ್ರಗಳಿಗೆ ಅನಿಲ ಸಿಲಿಂಡರ್‌ಗಳ ವಿತರಣೆ – ೩೦೦೦

೭. ಸೀಮೆ ಎಣ್ಣೆ ವಿತರಣೆ – ೫,೮೦,೧೮೨ ಲೀಟರ್

೮. ರೇಶನ್ ವಿತರಿಸಿದ ರೇಶನ್ ಕಾರ್ಡುಗಳ ಸಂಖ್ಯೆ – ೮೩೦೦೦

೯. ೫೭೦೭೧ ಕುಟುಂಬಗಳಿಗೆ ಉಚಿತವಾಗಿ ೧೦ ಕಿಲೋ ಅಕ್ಕಿ ಮತ್ತು ೫ ಲೀಟರ್ ಸೀಮೆ ಎಣ್ಣೆ ವಿತರಿಸಲಾಯಿತು.

೧೦. ಸತ್ತ ಪ್ರಾಣಿಗಳನ್ನು ತೆಗೆಯಲು ೨೩ ವಾಹನಗಳು ಮತ್ತು ೩೦೦ ಗೃಹ ರಕ್ಷಕ ದಳದ ಜನರನ್ನು ಉಪಯೋಗಿಸಲಾಯಿತು.

೧೧. ಅರಣ್ಯ ಇಲಾಖೆಯಿಂದ ೪೦೦ ಟನ್ ಉರವಲು ವಿತರಿಸಲಾಯಿತು.

೧೨. ವಿತರಿಸಿದ ತಗಡಿನ ಪತ್ರಾಗಳ ಸಂಖ್ಯೆ – ೧೦೦೦೦೦

೧೩. ಬಾಧಿತ ಜನರು ಬೇರೆ ಗ್ರಾಮಗಳಿಗೆ ತೆರಳಲು ಉಚಿತ ಬಸ್ಸಿನ ಸೌಕರ್ಯ – ೬೦ ಬಸ್ಸುಗಳು ಇತರ ಸಂಘ–ಸಂಸ್ಥೆಗಳಿಂದ ಸಹಾಯ

ಮೇಲೆ ವಿವರಿಸಿದ ಸರಕಾರದ ಪರಿಹಾರ ಯೋಜನೆಗಳನ್ನು ಹೊರತುಪಡಿಸಿ ಸರಕಾರೇತರ ಅನೇಕ ಸಂಘ–ಸಂಸ್ಥೆಗಳು, ವಿದ್ಯಾ ಕೇಂದ್ರಗಳು, ದಾನಿಗಳು ಹಲವು ವಿಧದ ಸಹಾಯ ಒದಗಿಸಿದರು. ಗುಜರಾತ ಹಾಗೂ ಜೈನ ಸಮಾಜ ೨೯೭೦೦ ಆಹಾರ ಪೊಟ್ಟಣಗಳನ್ನು ವಿತರಿಸಿತು. ಬೆಳಗಾವಿ ನಗರ ಪಾಲಿಕೆ ೩೨೦ ರಗ್ಗುಗಳನ್ನು ವಿತರಿಸಿತು. ಮಲಪ್ರಭಾ ಸಕ್ಕರೆ ಕಾರ್ಖಾನೆ ೫೦೦ ರಗ್ಗು ಹಾಗೂ ೫೦೦ ಬೆಡ್‌ಶೀಟ್‌ಗಳನ್ನು, ಚಳ್ಳಿಕೇರಿ ಶಾಸಕರಾಗಿದ್ದ ಡಾ. ಸುಧಾಕರ ೫೦೦ ರಗ್ಗು ಹಾಗೂ ೫೧೦ ಬೆಡ್‌ಶೀಟ್‌ಗಳನ್ನು ನೀಡಿದರು. ಸವದತ್ತಿಯ ರೇಣುಕಾ ದೇವಸ್ಥಾನದವರು ೮೦೦ ಸೀರೆಗಳು, ಗೋಕಾಕ ಜವಳಿ ಕಾರ್ಖಾನೆಯವರು ೨೦೦೦ ಉಡುಪುಗಳು, ಬೆಳಗಾವಿ ರೆಡ್‌ಕ್ರಾಸ್ ೨೦೦೧ ಬೆಚ್ಚನೆಯ ಉಡುಪುಗಳು, ೧೫೦೦ ರಗ್ಗು, ೧೫೦೦ ಬೆಡ್‌ಶೀಟ್‌ಗಳು ಮತ್ತು ಉಚಿತ ಔಷಧ ವಿತರಿಸಿದರು. ಹೀಗೆ ಹಲವು ಜನರು ಸಂತ್ರಸ್ತರಿಗೆ ನೆರವು ನೀಡಿದ ದಾಖಲೆಗಳೆಲ್ಲವನ್ನು ಇಲ್ಲಿ ಹೇಳುವುದು ಉಚಿತವೇನಿಸುವುದಿಲ್ಲ. ಆ ಸಂದರ್ಭದಲ್ಲಿ ಸಾರ್ವಜನಿಕರಿಂದ ಪ್ರವಾಹದಂತೆ ನೆರವು ಹರಿದು ಬಂದಿತು.

ಕೇಂದ್ರಿಯ ಪರಿಹಾರ ನಿಧಿಯಿಂದ ೬೭ ಕೋಟಿ ನೆರವು ಬಂತು. ಈ ಪ್ರವಾಹದಲ್ಲಿ ಅಥಣಿ ತಾಲೂಕಿನ ೨೪ ಗ್ರಾಮಗಳು ಭಾಗಶಃ ಬಾಧೆಗೊಳಗಾಗಿದ್ದವು. ಈ ಸಂದರ್ಭದಲ್ಲಿ ೧೦೪೪೯ ಮನೆಗಳು ಹಾನಿಗೊಳಗಾಗಿದ್ದವು. ಇವುಗಳಲ್ಲಿ ೫೧೬೧ ಸಂಪೂರ್ಣ ಹಾಗೂ ೫೨೮೮ ಭಾಗಶಃ ಹಾನಿಗೊಳಗಾದವು. ಸುಮಾರು ೨೨ ಕೋಟಿಗಳ ಅಂದಾಜು ಮೊತ್ತದ ಮನೆಗಳು ಕುಸಿದು ಹೋದವು. ಸರಕಾರ ಸುಮಾರು ೩ ಕೋಟಿ ರೂಪಾಯಿ ಮನೆ ಹಾನಿ

ಪರಿಹಾರ ವಿತರಿಸಿತು. ೬೭೭೪೬ ಎಕರೆ ಕ್ಷೇತ್ರದಲ್ಲಿಯ ಬೆಳೆ ನೀರಿನಲ್ಲಿ ಕೊಚ್ಚಿ ಹೋಯಿತು. ಈ ಬೆಳೆ ಹಾನಿ ಅಂದಾಜು ೧೬೪ ಕೋಟಿ ರೂಪಾಯಿಗಳು. ಸರಕಾರ ೧೮ ಕೋಟಿ ಬೆಳೆ ಪರಿಹಾರ ನೀಡಿತು.

ಸರಕಾರದ ಈ ಅಂಕಿ ಅಂಶಗಳು ಪ್ರಶ್ನಾತೀತವೇನಲ್ಲ. ವಾಸ್ತವದಲ್ಲಿ ಈ ಪ್ರವಾಹದಿಂದಾದ ಹಾನಿಯ ಮೊತ್ತ ಅಂದಾಜಿಗೆ ನಿಲಕದಂತ್ತಿತ್ತು. ಖವಟಕೊಪ್ಪ ಗ್ರಾಮ ಒಂದರಲ್ಲಿಯೇ ಪ್ರವಾಹದಿಂದ ಉಂಟಾದ ಹಾನಿ ಮತ್ತು ಸರಕಾರ ನೀಡಿದ ಪರಿಹಾರ ಇಂತಿದೆ.

ಖವಟಕೊಪ್ಪ ಗ್ರಾಮಕ್ಕೆ ಪ್ರವಾಹದಿಂದಾದ ಹಾನಿ ಮತ್ತು ಪರಿಹಾರದ ವಿವರ

೦೧. ಜನಸಂಖ್ಯೆ – ೩೪೮೮೪

೦೨. ಪ್ರವಾಹದಿಂದ ಮನೆಗಳ ಹಾನಿ –

ಪಕ್ಕಾ ಮನೆಗಳು – ೨೪ (ಸಂಪೂರ್ಣ–೨೩ ಭಾಗಶಃ–೧)

ಕಚ್ಚಾ ಮನೆಗಳು – ೩೯೭ (ಸಂಪೂರ್ಣ –೧೮೩ ಭಾಗಶಃ–೨೧೪)

೦೩. ಅಂದಾಜು ಹಾನಿ – ಸಂಪೂರ್ಣ – ೧೩.೨೩ ಲಕ್ಷ

ಭಾಗಶಃ – ೦೯.೩೧ ಲಕ್ಷ

ಒಟ್ಟು – ೨೨.೫೪ ಲಕ್ಷ

೦೪. ಪರಿಹಾರ ವಿತರಣೆ ಸಂಪೂರ್ಣ – ೨೦,೦೦೦

ಭಾಗಶಃ – ೮,೦೪,೮೦೦

ಒಟ್ಟು – ೮,೨೪,೮೦೦

೦೫. ಬೆಳೆ ಹಾನಿ – ೨೫೬೫.೧೭ ಗುಂಟೆ

೦೬. ಬೆಳೆಯ ಅಂದಾಜು ಹಾನಿ – ೮,೫೬,೯೪,೦೮೫

೦೭. ನ್ಯಾಯಬೆಲೆ ಅಂಗಡಿಗಳ ಮುಖಾಂತರ ಆಹಾರ ಧಾನ್ಯ ಮತ್ತು ಸೀಮೆ ಎಣ್ಣೆ ವಿತರಣೆ ವಿವರ (೧೦ ಕೆ.ಜಿ. ಅಕ್ಕಿ, ೧೦ ಕೆ.ಜಿ. ಗೋಧಿ, ೧೦ ಲೀಟರ್ ಸೀಮೆ ಎಣ್ಣೆ ವಿತರಣೆ)

ರೇಶನ್ ಕಾರ್ಡ್‌ಗಳ ಸಂಖ್ಯೆ – ೬೩೨

ಪ್ರಭಾವಿತ ಕುಟುಂಬಗಳು – ೭೨೯

ಮೊದಲ ಹಂತದಲ್ಲಿ –

೦೧. ಅಕ್ಕಿ – ೬೩.೩೦ ಕ್ವಿಂಟಲ್

೦೨. ಗೋಧಿ – ೭೨.೧೫ ಕ್ವಿಂಟಲ್

೦೩. ಸೀಮೆ ಎಣ್ಣೆ – ೭೨೧೫ ಲೀಟರ್

ಎರಡನೇ ಹಂತದಲ್ಲಿ –

೦೧. ಅಕ್ಕಿ – ೭೨.೭೦ ಕ್ವಿಂಟಲ್

೦೨. ಗೋಧಿ – ೭೨.೭೦ ಕ್ವಿಂಟಲ್

೦೩. ಸೀಮೆ ಎಣ್ಣೆ – ೩೬೩೫ (ಐದು ಲೀಟರ್‌ನಂತೆ)

೦೮. ಮೃತಪಟ್ಟ ಜಾನುವಾರುಗಳ ಸಂಖ್ಯೆ – ೦೭

೦೯. ಪರಿಹಾರ ನೀಡಿದ ಮೊತ್ತ – ರೂ. ೪೯,೦೦೦/–

೧೦. ಪರಿಹಾರ ನೀಡಬೇಕಾದ ಮೊತ್ತ –__________

೧೧. ಖವಟಕೊಪ್ಪ ಗ್ರಾಮದ ಪ್ರವಾಹದಿಂದ ಜಲಾವೃತಗೊಂಡ ನಿರಾಶ್ರಿತರಿಗೆ ಪರಿಹಾರ ಧನ ನೀಡಲು ಬೇಕಾಗುವ ಅನುದಾನ ವಿವರಣೆ ಮತ್ತು ಸಂದಾಯ ಮಾಡಿದ ವಿವರ ೦೩.೧೦.೨೦೦೫

ಅ) ಸ್ಥಳಾಂತರಿಸಿದ ಕುಟುಂಬಗಳ ಸಂಖ್ಯೆ – ೭೯೦

ಬ) ಒಟ್ಟು ನೀಡಬೇಕಾದ ಪರಿಹಾರದ ಮೊತ್ತ – ೭೯೦೦೦

ಕ) ಪರಿಹಾರ ಧನ ವಿತರಿಸಲು ನೀಡಿದ ಹಣ – ೭೯೦೦೦

ಡ) ಪರಿಹಾರ ವಿತರಿಸಿದ ಹಣ – ೭,೨೭,೦೦೦

ಇ) ಪರಿಹಾರ ಧನ ವಿತರಿಸಿದ ಕುಟುಂಬಗಳ ಸಂಖ್ಯೆ – ೭೨೭

೧೨. ಪರಿಹಾರ ಧನ ವಿತರಣೆಯಲ್ಲಿ ಆದ ತಾರತಮ್ಯಗಳ ಬಗ್ಗೆ ಅರ್ಜಿಗಳ ವಿವರ

ಅ) ಬಿದ್ದ ಮನೆಗಳಿಗೆ ಪರಿಹಾರ ಧನ ಭೇಡಿಕೆ ಹೆಚ್ಚುವರಿಯಾಗಿ ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ – ೬೦೭

ಬ) ಅರ್ಹತೆ ಪಡೆದ ಅರ್ಜಿಗಳ ಸಂಖ್ಯೆ – ೦೭

ಕ) ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ – ೬೦೦

೨.೧೧ ಬೆಳಗಾವಿ ಜಿಲ್ಲೆಯಲ್ಲಿ ೨೦೦೬ರ ಪ್ರವಾಹದ ಹಾನಿ :

ಜಿಲ್ಲೆಯಲ್ಲಿ ಪ್ರವಾಹದಿಂದ ಬಾಧಿತವಾದ ಗ್ರಾಮಗಳು– ೯೫ (ಸಂಪೂರ್ಣ–೫೮, ಭಾಗಶಃ–೩೭)

೦೧. ಪ್ರವಾಹದಿಂದ ಬಾಧಿತವಾದ ಜನಸಂಖ್ಯೆ – ೫.೬೯ ಲಕ್ಷ

೦೨. ಉಪಯೋಗಿಸಿದ ದೋಣಿಗಳ ಸಂಖ್ಯೆ – ೬೩

೦೩. ಬಾಧಿತ ಜನರಿಗೆ ತೆರೆದ ಗಂಜಿ ಕೇಂದ್ರಗಳು – ೮೧

೦೪. ಆಶ್ರಯ ಪಡೆದ ಕುಟುಂಬಗಳ ಸಂಖ್ಯೆ – ೧೬೦೦೦

೦೫. ಆಶ್ರಯ ಪಡೆದ ಜನಸಂಖ್ಯೆ – ೪೨೦೦೦

೦೬. ಸುರಕ್ಷಿತ ಸ್ಥಳಗಳಿಗೆ ಜಾನುವಾರುಗಳ ಸ್ಥಳಾಂತರ – ೨೯೦೦೦

೦೭. ಪ್ರತಿಕುಟುಂಬಕ್ಕೆ ಉಚಿತವಾಗಿ ೧೦ ಕೆ.ಜಿ ಅಕ್ಕಿ ಗೋಧಿ ಹಾಗೂ ೧೦ ಲೀಟರ್ ಸೀಮೆ ಎಣ್ಣೆಯನ್ನು ವಿತರಿಸಲಾಗಿತ್ತು.

೦೮. ಸ್ಥಳಾಂತರಗೊಂಡ ಜಾನುವಾರುಗಳಿಗೆ ತೆರೆದ ಗೋಶಾಲೆಗಳು –೦೬

೦೯. ಆಶ್ರಯ ಒದಗಿಸಿದ ಜಾನುವಾರುಗಳ ಸಂಖ್ಯೆ ೨,೬೯೮

೧೦. ಜಾನುವಾರುಗಳ ಮೇವು ಖರೀದಿ – ೧೮ ಲಕ್ಷ

೧೧. ಪಶು ಆಹಾರ – ೫೩೦ ಕ್ವಿಂಟಲ ಪಶು ಆಹಾರ ೧೫೬ ಮೆ. ಟನ್ ಮೇವು ಪೂರೈಕೆ

೧೨. ಆರೋಗ್ಯ ಕಾಪಾಡಲು ೬೬ ವೈದ್ಯರನ್ನು, ೧೯ ಅಂಬ್ಯಲೆನ್ಸ್‌ಗಳ ನೇಮಕ

೧೩. ಮನೆಗಳ ನಾಶ – ೭೬೬೪ (ಭಾಗಶಃ – ೭೫೦೨, ಪೂರ್ತಿಯಾಗಿ – ೧೬೨)

೧೪. ಬೆಳೆಗಳ ನಾಶ – ೫೬೭೦೬ ಹೆಕ್ಟೇರ್ ಜಮೀನಿನಲ್ಲಿ ಬೆಳೆ ನಾಶ)

೧೫. ಅಂದಾಜು ಹಾನಿ – ರೂ. ೨೪೭.೯೮ ಕೋಟಿ

(ಕಬ್ಬು – ೩೬೯೬ ಹೆ. (ರೂ. ೨೨೦.೭೭ ಕೋಟಿ), ಗೋವಿನ ಜೋಳ – ೧೬೬೯ ಹೆ. (ರೂ. ೨೫ ಕೋಟಿ), ಭತ್ತ – ೨೮೭೬ ಹೆ. (ರೂ. ೪.೦೩ ಕೋಟಿ), ಜೋಳ – ೨೬೦ ಹೆ. (ರೂ. ೦.೧೨ ಕೋಟಿ), ಶೇಂಗಾ – ೪೯೫೮ ಹೆ. (ರೂ. ೫.೧೪ ಕೋಟಿ), ಸೋಯಾಬಿನ್–೮೭೩೨ ಹೆ. (ರೂ. ೧೨.೯ ಕೋಟಿ), ಸೂರ್ಯಕಾಂತಿ – ೨೦೦ ಹೆ. (ರೂ. ೦.೦೪ ಕೋಟಿ), ಇತರೆ – ೧೨೧೫ ಹೆ. (ರೂ. ೨.೪೪ ಕೋಟಿ).

೧೬. ಅತಿವೃಷ್ಟಿ ಹಾಗೂ ಪ್ರವಾಹದಿಂದ ೨೨೧ ಕೋಟಿ ರೂ. ಮೌಲ್ಯದ ಸಾರ್ವಜನಿಕ ಆಸ್ತಿ – ಪಾಸ್ತಿಗಳ ಹಾನಿ

ಕೋಷ್ಠಕ ೨.೮

೨೦೦೬-೨೦೦೭ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಪ್ರವಾಹದ ಅತಿವೃಷ್ಠಿ ಕುರಿತು ಸರಕಾರದಿಂದ ಬಿಡುಗಡೆಯಾದ ಅನುದಾನ

ಕ್ರಸಂ	ವಿವರ	ಅನುದಾನ (ಲಕ್ಷಗಳಲ್ಲಿ)
೧	ಏಪ್ರೀಲ್ ೨೦೦೬ರಂದು ಆರಂಭದ ಶಿಲ್ಕು	೪೨೧.೧೮
೨	ಉದ್ಯೋಗ ಸೃಷ್ಠಿ	೧೨೦೦.೦೦
೩	ಕುಡಿಯುವ ನೀರು	೫೦.೦೦
೪	ಅನುಷ್ಠಾನ ಅಧಿಕಾರಿಗಳಿಂದ ಮರಳಿ ಸ್ವೀಕೃತವಾದ ಅನುದಾನ	೧೬೮.೪೯
೫	ಪ್ರವಾಹ/ಅತಿವೃಷ್ಟಿ ಕುರಿತು ಸ್ವೀಕರಿಸಿದ ಅನುದಾನ	೬೭೯೩.೦೦
೬	ಭೂಸ್ವಾಧೀನ/ಪುನರ್ವಸತಿ ಶೀರ್ಷಿಕೆಯಿಂದ	೪೦.೦೦
೭	ರೂ. ೪೩೭.೫೦ ಲಕ್ಷ ಮೌಲ್ಯದ ೭೦೦೦ ಟನ್ ಆಹಾರ ಧಾನ್ಯ	೪೩೭.೫೦
	ಒಟ್ಟು : ರೂ	**೯೧೧೦.೧೭ ಲಕ್ಷ**

ಪ್ರವಾಹ/ಅತಿವೃಷ್ಟಿಯಿಂದ ಹಾನಿಗೊಳಗಾದ ಸಾರ್ವಜನಿಕ ಆಸ್ತಿಗಳ ದುರಸ್ತಿ-ಸುಧಾರಣೆಗಾಗಿ ಬಿಡುಗಡೆ ಮಾಡಿದ ಅನುದಾನದ ವಿವರ :

೦೧. ಮಂಜೂರು ಮಾಡಿದ ಮೊತ್ತ (ಲಕ್ಷಗಳಲ್ಲಿ) – ರೂ. ೮೩೬೬.೧೯

೦೨. ಬಿಡುಗಡೆ ಮಾಡಲಾದ ಆಹಾರ ಧಾನ್ಯ ಟನ್ – ೭೦೦೦.೦೦

೦೩. ಆಹಾರ ಧಾನ್ಯಗಳ ಮೊತ್ತ (ಲಕ್ಷಗಳಲ್ಲಿ) – ರೂ. ೪೩೭.೫೦

೦೪. ಒಟ್ಟು (ಲಕ್ಷಗಳಲ್ಲಿ) – ರೂ. ೮೮೦೩.೯೬

ಸನ್ ೨೦೦೬-೦೭ ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ೬ ತಾಲೂಕುಗಳಾದ ಹುಕ್ಕೇರಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ರಾಯಬಾಗ, ಅಥಣಿ ತಾಲೂಕುಗಳಿಗೆ ೧೨ ಕೋಟಿ ಹಣ ಬಿಡುಗಡೆ ಮಾಡಿತ್ತು. ಅಥಣಿ ತಾಲೂಕಿಗೆ ೭೨ ಕಾಮಗಾರಿಗಳನ್ನು ಕೈಗೆತ್ತಿಕೊಂಡು ೨ ಕೋಟಿ ಹಣ ಬಿಡುಗಡೆ ಮಾಡಿತು.

ಅಥಣಿ ತಾಲೂಕಿನಲ್ಲಿ ಪ್ರವಾಹದ ಪರಿಣಾಮ :

೨೦೦೬-೦೭ರಲ್ಲಿ ತಾಲೂಕಿನಲ್ಲಿ ಕೃಷ್ಣಾ ನದಿ ಜಿಲ್ಲೆಯ ಮಹಾಪುರದಿಂದ ೨೭ ಗ್ರಾಮಗಳು ಸಂಪೂರ್ಣವಾಗಿ, ೫ ಗ್ರಾಮಗಳು ಭಾಗಶಃ ಬಾಧಿತಗೊಂಡಿದ್ದವು.

ಸಂಪೂರ್ಣವಾಗಿ ಬಾಧಿತ ಗ್ರಾಮಗಳು :

ಮಂಗಾವತಿ, ಜುಗುಳ, ಶಹಾಪೂರ, ಮಳವಾಡ, ಕುಸನಾಳ, ಕೃಷ್ಣಾ ಕಿತ್ತೂರ, ಬಣಜವಾಡ, ಕಾತ್ರಾಳ, ಶಿನ್ನಾಳ, ತಂಗಡಿ, ಸಪ್ತಸಾಗರ, ತೀರ್ಥ, ನದಿ ಇಂಗಳಗಾಂವ, ದರೂರ, ಖವಟಕೊಪ್ಪ, ಶೇಗುಣಸಿ, ಹುಲಗಬಾಳಿ, ಅವರಖೋಡ, ನಾಗನೂರ, ಪಿ.ಕೆ, ದೊಡವಾಡ, ಸತ್ತಿ, ನಂದೇಶ್ವರ, ಮಹಿಷವಾಡಗಿ, ಜನವಾಡ, ಸವದಿ, ಶಿರಹಟ್ಟಿ, ಝುಂಜರವಾಡ.

ಭಾಗಶಃ ಬಾಧಿತಗೊಂಡ ಗ್ರಾಮಗಳು :

ಉಗಾರ ಬಿ.ಕೆ, ಉಗಾರ ಕೆ. ಎಚ್, ಹಲ್ಯಾಳ, ಬಳವಾಡ, ಐನಾಪುರ.

ಪ್ರವಾಹ ಪೀಡಿತ ಗ್ರಾಮಗಳಿಗೆ ನೀಡಿದ ದೋಣಿಗಳ ಮಾಹಿತಿ

೦೧) ಒಟ್ಟು ಗ್ರಾಮಗಳು – ೧೬

೦೨) ದೋಣಿಗಳ ಸಂಖ್ಯೆ – ೩೪

ಸಂತ್ರಸ್ತರಿಗೆ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳಲ್ಲಿ ಮಾಹಿತಿ (೨೩–೦೮–೨೦೦೬ರ ವರೆಗೆ)

೦೧) ಗ್ರಾಮಗಳ ಸಂಖ್ಯೆ – ೩೨

೦೨) ಹಳೆ ಶೆಡ್‌ಗಳ ಸಂಖ್ಯೆ – ೮೮೮

೦೩) ಹೊಸ ಶೆಡ್‌ಗಳ ಸಂಖ್ಯೆ – ೧೨೧೯

೦೪) ಒಟ್ಟು ಶೆಡ್‌ಗಳ ಸಂಖ್ಯೆ – ೨೧೦೭

೦೫) ಶೆಡ್‌ಗಳಲ್ಲಿ ಆಶ್ರಯ ಪಡೆದ ಕುಟುಂಬಗಳ ಸಂಖ್ಯೆ – ೨೬೧೭

೦೬) ಒಟ್ಟು ಜನರ ಸಂಖ್ಯೆ – ೧೦೧೪೨

ಸಂತ್ರಸ್ತರಿಗೆ ತೆರೆದ ಗಂಜಿ ಕೇಂದ್ರಗಳು

೦೧) ಗ್ರಾಮಗಳ ಸಂಖ್ಯೆ – ೩೨

೦೨) ಗ್ರಾಮಗಳ ಒಟ್ಟು ಜನಸಂಖ್ಯೆ – ೧೬೧೭೭೫

೦೩) ಗಂಜಿ ಕೇಂದ್ರದಲ್ಲಿಯ ಒಟ್ಟು ಕುಟುಂಬಗಳು – ೬೧೧೩

೦೪) ಗಂಜಿ ಕೇಂದ್ರದಲ್ಲಿಯ ಒಟ್ಟು ಜನಸಂಖ್ಯೆ – ೨೫೪೮೩

ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ, ಗೋಧಿ ಮತ್ತು ಸೀಮೆ ಎಣ್ಣೆ ವಿತರಣೆ ಮಾಡಿದ ಮಾಹಿತಿ

೦೧) ಗ್ರಾಮಗಳ ಸಂಖ್ಯೆ – ೨೭

೦೨) ಪಡಿತರ ಚೀಟಿಗಳ ಸಂಖ್ಯೆ – ೨೪೫೬೩

೦೩) ಅಕ್ಕಿ – ೨೭೯೭.೭೬

೦೪) ಗೋಧಿ – ೨೨೦೨.೩೦

೦೫) ಸೀಮೆ ಎಣ್ಣೆ – ೨೪೫೬೩೦

ಪ್ರವಾಹ ಪೀಡಿತ ಗ್ರಾಮಗಳ ಜಾನುವಾರುಗಳಿಗೆ ಒಣ ಮೇವು ಹಂಚಿದ ವಿವರ

೦೧) ಗ್ರಾಮಗಳ ಸಂಖ್ಯೆ – ೧೯

೦೨) ಬಾಧಿತ ಜಾನುವಾರುಗಳ ಸಂಖ್ಯೆ – ೧೫೦೪೫

೦೩) ಮೇವು ಹಂಚಿದ ಪ್ರಮಾಣ(ಕೆ.ಜಿ.ಗಳಲ್ಲಿ) – ೩೦೦೩೯೫

೦೪) ಮೇವಿನ ಮೌಲ್ಯ ರೂ.ಗಳಲ್ಲಿ – ೭೭೩೯೬೮.೦೦

ಪಶು ಆಹಾರ ಹಂಚಿದ ಮಾಹಿತಿ

೦೧) ಗ್ರಾಮಗಳ ಸಂಖ್ಯೆ – ೧೭

೦೨) ಬಾಧಿತ ಜಾನುವಾರುಗಳ ಸಂಖ್ಯೆ – ೧೫೦೪೫

೦೩) ಪಶು ಆಹಾರದ ಪ್ರಮಾಣ(ಕ್ವಿಂಟಲಗಳಲ್ಲಿ) – ೧೬೮.೫೦

೦೪) ಪಶು ಆಹಾರದ ಮೌಲ್ಯ ರೂ.ಗಳಲ್ಲಿ – ೧೧,೮೯೧.೦೦

ಜಾನುವಾರುಗಳಿಗೆ ಮೇವು ಹಂಚಿದ ವಿವರ

೦೧) ಒಟ್ಟು ಮೇವು ಪೂರೈಸಿದ್ದು ಟನ್‌ಗಳಲ್ಲಿ – ೩೦೯.೦೫ ಟನ್ ರೂ. ೭,೭೬,೯೬೮.೦

೦೨) ಒಟ್ಟು ಕಡಬಾ ಕುಟ್ಟೆ ಪೂರೈಸಿದ್ದು ಟನ್‌ಗಳಲ್ಲಿ– ೫೯.೦೬ ಟನ್ ರೂ. ೧,೪೯,೦೫೦.೦

೦೩) ಒಟ್ಟು ಪಶು ಆಹಾರ (ಹಿಂಡಿ ಮಿಶ್ರಣ) – ೧೬.೦೮ ಟನ್ ರೂ. ೧,೧೮,೦೯೧.೦೦

ಒಟ್ಟು – ೩೮೫.೦೯ ಟನ್ ರೂ. ೧೦೪೪,೧೦೯.೦೦

ಕೃಷ್ಣಾ ಮಹಾಪೂರದಿಂದ ಅಥಣಿ ತಾಲೂಕಿನಲ್ಲಾದ ಬೆಳೆ ಹಾನಿ (ಕ್ಷೇತ್ರ ಹೆಕ್ಟೇರ್‌ಗಳಲ್ಲಿ/ಹಾನಿ ಲಕ್ಷಗಳಲ್ಲಿ)

೦೧. ಬಾಧಿತ ಗ್ರಾಮಗಳು – ೩೫

೦೨. ಕಬ್ಬಿನ ಬೆಳೆ

ಕ್ಷೇತ್ರ – ೧೮೬೪೫

ಹಾನಿ – ೧೧೧೮೭.೦೦

೦೩. ಗೋವಿನ ಜೋಳ ಬೆಳೆ

ಕ್ಷೇತ್ರ – ೮೧೪.೦೦

ಹಾನಿ – ೧೨೨.೧೦

೦೪. ಸೋಯಾಬಿನ್

ಕ್ಷೇತ್ರ – ೭೩೦ ಹೆಕ್ಟೇರ್

ಹಾನಿ – ೧೪೬ ಲಕ್ಷ

೦೫. ಇತರೆ

ಕ್ಷೇತ್ರ – ೧೨೧.೦೦

ಹಾನಿ – ೬೦.೫೦

೦೬. ಒಟ್ಟು ಕ್ಷೇತ್ರ – ೨೦೩೧೦ (ಹೆಕ್ಟೇರ್)

ಒಟ್ಟು ಹಾನಿ – ೧,೧೫,೧೫ (ಲಕ್ಷಗಳು)

ಖವಟಕೊಪ್ಪ ಗ್ರಾಮಕ್ಕೆ ಪ್ರವಾಹದಿಂದ ಹಾನಿ

೦೧. ಪ್ರವಾಹದ ಕಾರಣ ಒದಗಿಸಿದ ಬೋಟ್‌ಗಳ ಸಂಖ್ಯೆ – ೦೧

ಗ್ರಾಮಕ್ಕೆ ನಿರ್ಮಿಸಿದ ಶೆಡ್‌ಗಳ ಮಾಹಿತಿ

೦೧) ಹೊಸ ಶೆಡ್‌ಗಳ ನಿರ್ಮಿಸಿದ ಸಂಖ್ಯೆ – ೧೭

೦೨) ಶೆಡ್‌ಗಳಲ್ಲಿ ವಾಸಿಸಿದ ಕುಟುಂಬಗಳ ಸಂಖ್ಯೆ – ೩೦

೦೩) ಒಟ್ಟು ಜನರ ಸಂಖ್ಯೆ – ೧೫೦

ಗಂಜಿ ಕೇಂದ್ರದ ಮಾಹಿತಿ

೦೧) ಗ್ರಾಮದ ಒಟ್ಟು ಜನಸಂಖ್ಯೆ – ೩೪೮೪

೦೨) ಗಂಜಿ ಕೇಂದ್ರದ ಹೆಸರು – ಶಂಕರಹಟ್ಟಿ ಪ್ರೌಢಶಾಲೆ,

೦೩) ಒಟ್ಟು ಕುಟುಂಬಗಳ ಸಂಖ್ಯೆ – ೨೦೨

೦೪) ಗಂಜಿ ಕೇಂದ್ರದಲ್ಲಿರುವ ಒಟ್ಟು ಜನಸಂಖ್ಯೆ – ೯೫೯

ಗಂಜಿ ಕೇಂದ್ರಕ್ಕೆ ಅಕ್ಕಿ ವಿತರಣೆ ಮಾಹಿತಿ

೦೧) ಅಕ್ಕಿ ಪೂರೈಕೆ ೦೫ ಕ್ವಿಂಟಲ್

ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ, ಗೋಧಿ ಮತ್ತು ಸೀಮೆ ಎಣ್ಣೆ ವಿತರಣೆ ಮಾಡಿದ ಮಾಹಿತಿ

೦೧) ಪಡಿತರ ಚೀಟಿಗಳ ಸಂಖ್ಯೆ – ೭೧೯

೦೨) ಅಕ್ಕಿ – ೭೦.೯೦ ಕ್ವಿಂಟಲ್

೦೩) ಗೋಧಿ – ೭೦.೯೦ ಕ್ವಿಂಟಲ್

೦೪) ಸೀಮೆ ಎಣ್ಣೆ – ೭೦.೯೦

ಜಾನುವಾರುಗಳಿಗೆ ಒಣ ಮೇವು ಹಂಚಿದ ವಿವರ

೦೧) ಬಾಧಿತ ಜಾನುವಾರುಗಳ ಸಂಖ್ಯೆ – ೬೫೦

೦೨) ಮೇವು ಹಂಚಿದ ಪ್ರಮಾಣ – ೧೩೫೫೫ (ಕೆ.ಜಿ)

೦೩) ಮೇವಿನ ಮೌಲ್ಯ ರೂ.ಗಳಲ್ಲಿ – ೩೩,೯೮೮.೦೦

ಕಡಬಾ ಕುಟ್ಟಿ ಪೂರೈಸಿದ ವಿವರ

೦೧) ಬಾಧಿತ ಜಾನುವಾರುಗಳ ಸಂಖ್ಯೆ – ೬೫೦

೦೧) ಕಡಬಾ ಕುಟ್ಟಿ ಪ್ರಮಾಣ – ೧೧೯೭೦.೦೦

೦೩) ಕಡಬಾ ಕುಟ್ಟಿ ಮೌಲ್ಯ – ೨೯,೯೨೫.೦೦

ಟಿ.ಸಿ.ಎಲ್/ಸುಣ್ಣ/ಫಿನಾಯಿಲ್‌ಗಳನ್ನು ವಿತರಿಸಿದ ವಿವರ

೦೧) ಟಿ.ಸಿ.ಎಲ್ ಪೌಡರ್ ಬ್ಯಾಗ್ (೨೫ ಕೆ.ಜಿ) – ೦೪

೦೨) ಸುಣ್ಣ ಚೀಲ (೨೫ ಕೆ.ಜಿ) – ೧೪

೦೩) ಫಿನಾಯಿಲ್ ಡಬ್ಬಿ (೫ ಲೀಟರ್) – ೦೫

ಮಹಾಪೂರದಿಂದ ಬೆಳೆ ಹಾನಿ

೦೧) ಕಬ್ಬಿನ ಬೆಳೆ

ಕ್ಷೇತ್ರ – ೬೦೦ (ಹೆಕ್ಟೇರ್)

ಹಾನಿ – ೩೬೦ (ಲಕ್ಷ)

೦೨) ಗೋವಿನ ಜೋಳ ಬೆಳೆ

ಕ್ಷೇತ್ರ – ೩೦ (ಹೆಕ್ಟೇರ್)

ಹಾನಿ – ೪.೫ (ಲಕ್ಷ)

೦೩) ಸೋಯಾಬಿನ ಬೆಳೆ

ಕ್ಷೇತ್ರ – ೩೪ (ಹೆಕ್ಟೇರ್)

ಹಾನಿ – ೬.೦೦ (ಲಕ್ಷ)

೦೪) ಇತರೆ

ಕ್ಷೇತ್ರ – ೪.೦ (ಹೆಕ್ಟೇರ್)

ಹಾನಿ – ೨.೦೦ (ಲಕ್ಷ)

ಹೀಗೆ ೨೦೦೫ ಮತ್ತು ೨೦೦೬ರ ಪ್ರವಾಹಗಳು ಬೆಳಗಾವಿ ಜಿಲ್ಲೆ ಅಥಣಿ ತಾಲೂಕು ಮತ್ತು ಖವಟಕೊಪ್ಪ ಗ್ರಾಮಗಳಿಗೆ ಭಾರಿ ಪರಿಣಾಮ ಬೀರಿದವು. ಸರಕಾರಗಳು ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡರೂ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತೆ ಪ್ರವಾಹ ಬಾಧಿತ ಕುಟುಂಬಗಳ ಜೀವನ ಸಂಕಟದಿಂದ ಹೊರಬರಲು ಸಾಧ್ಯವಾಗಲಿಲ್ಲ. ಸರಕಾರಗಳು ಪ್ರವಾಹದ ಸಮಯದಲ್ಲಿ ಮಾತ್ರ ಶಾಶ್ವತ ಪುನರ್ವಸತಿ ಕುರಿತು ಚರ್ಚಿಸುತ್ತವೆ. ಆದರೆ ಇದುವರೆಗೂ ಅಂತಹ ಯಾವುದೇ ಕ್ರಮಗಳು ಜಾರಿಯಾಗಿಲ್ಲ.

೨.೧೦ ಕೃಷ್ಣಾ ಜಲ ವಿವಾದ :

ಈಗಾಗಲೇ ಗಮನಿಸಿದಂತೆ ಕೃಷ್ಣಾ ಕಣಿವೆ ನೀರನ್ನು ಪೂರ್ತಿ ಬಳಕೆ ಮಾಡದಿರುವುದಕ್ಕೆ ಇದು ಅಂತರಾಜ್ಯ ನದಿಯಾಗಿರುವುದು. ಮಹಾರಾಷ್ಟ್ರ–ಕರ್ನಾಟಕ ಮತ್ತು ಆಂಧ್ರ ಸರಕಾರಗಳು ನದಿ ನೀರನ್ನು ಸರಿಯಾಗಿ ಹಂಚಿಕೊಳ್ಳುತ್ತಿಲ್ಲ. ಬೇರೆ ರಾಜ್ಯಗಳು ನೀರಾವರಿ ಯೋಜನೆಗಳಿಗೆ ತಗಾದೆ ಎತ್ತುತ್ತಿವೆ. ಅವುಗಳ ಪಾಲು ನಿರ್ಧಾರವಾಗಬೇಕಾಗಿದೆ. ರಾಜಕೀಯ ಇಚ್ಛಾಶಕ್ತಿಯ

ಕೊರತೆಯಿಂದ ಈ ಭಾಗದ ಜನತೆ ಸ್ವಾತಂತ್ರ್ಯ ದೊರೆತು ಅರವತ್ತು ವರ್ಷಗಳಾದರೂ ಬರಗಾಲದ ಬವಣೆ ಅನುಭವಿಸಬೇಕಾಗಿದೆ.

"ಕೃಷ್ಣಾ ಕಣಿವೆಯಲ್ಲಿ ಕರ್ನಾಟಕಕ್ಕೆ ದೊರೆತಿರುವ ನೀರಿನ ಪಾಲು ೭೩೪ ಟಿ.ಎಂ.ಸಿ. ಉಪಯೋಗಿಸಿದ್ದು ೫೯೮ ಟಿ.ಎಂ.ಸಿ. ರೈತರ ಭೂಮಿಗೆ ತಲುಪಿಸಬೇಕಾಗಿದ್ದು ೧೪೨ ಟಿ.ಎಂ.ಸಿ. ಇನ್ನೂ ಬಳಕೆಯಾಗದಿರುವುದು ೧೩೬ ಟಿ.ಎಂ.ಸಿ. ಕಾವೇರಿಯಲ್ಲಿ ಕರ್ನಾಟಕದ ಪಾಲು ೨೭೦ ಟಿ.ಎಂ.ಸಿ. ಇದರಲ್ಲಿ ಈಗಾಗಲೇ ಉಪಯೋಗಿಸಿದ್ದು ೨೩೮ ಟಿ.ಎಂ.ಸಿ. ಉಳಿದಿದ್ದು ೩೨ ಟಿ.ಎಂ.ಸಿ. ಮಾತ್ರ. ಕಾವೇರಿ ಕಣಿವೆಯ ನೀರಾವರಿ ಯೋಜನೆಗಳಿಗೆ ಇದುವರೆಗೆ ೫,೪೦,೯೬೭ ಕೋಟಿ ರೂ. ಖರ್ಚು ಮಾಡಿದ್ದರೆ ಕಾವೇರಿಗಿಂತ ಹೆಚ್ಚು ಅಂದರೆ ೪೫ಕ್ಕೂ ಅಧಿಕ ಯೋಜನೆಗಳನ್ನು ಹೊಂದಿರುವ ಕೃಷ್ಣಾ ಕಣಿವೆ ಯೋಜನೆಗೆ ಮಾಡಿರುವ ವೆಚ್ಚ ೧೬,೧೯,೪೧೧ ಕೋಟಿ ರೂಪಾಯಿ ಮಾತ್ರ. (ಸಂಯುಕ್ತ ಕರ್ನಾಟಕ ದಿನಾಂಕ : ೦೭-೦೯-೨೦೦೮, ಪುಟ-೬)

ಕೃಷ್ಣಾ ನದಿ ನೀರು ಹಂಚಿಕೆ ಸಂಬಂಧಿಸಿದಂತೆ ೧೯೬೯ರಲ್ಲಿ ಮೊಟ್ಟಮೊದಲ ಬಾರಿಗೆ ವಿವಾದ ಸೃಷ್ಟಿಯಾಯಿತು. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಸರಕಾರಗಳ ಮನವಿ ಮೇರೆಗೆ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿ ರಚನೆಯಾಯಿತು. ಅದು 'ಬಚಾವತ ನ್ಯಾಯ ಮಂಡಳಿ'. ನ್ಯಾಯ ಮಂಡಳಿ ತನ್ನ ವರದಿಯಲ್ಲಿ 'ಎ' ಮತ್ತು 'ಬಿ' ಎಂಬ ಎರಡು ಸ್ಕೀಮ್‌ಗಳನ್ನು ರೂಪಿಸಿ ಸ್ಕೀಮ್ 'ಎ' ನಲ್ಲಿ ೨೦೬೦ ಟಿ.ಎಂ.ಸಿ ನೀರನ್ನು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಕ್ರಮವಾಗಿ ೭೦೦, ೮೦೦, ಹಾಗೂ ೫೬೦ ಟಿ. ಎಂ.ಸಿ ನೀರು ಹಂಚಿಕೆಯಾಯಿತು.

ನ್ಯಾಯಮೂರ್ತಿ ಬೃಜೇಶ ಕುಮಾರ ನೇತೃತ್ವದಲ್ಲಿ ನ್ಯಾಯಮೂರ್ತಿಗಳಾದ ಶ್ರೀ ವಾಸ್ತವ ಮತ್ತು ಡಿ. ಕೆ. ಸೇಥ ಸದಸ್ಯರನ್ನು ಒಳಗೊಂಡ ಎರಡನೆಯ ನ್ಯಾಯಾಧೀಕರಣ ರಚನೆಯಾಗಿ ೩೦-೧೨-೨೦೧೦ರಂದು ಮತ್ತೊಂದು ತೀರ್ಪು ನೀಡಿತು. ಅದರಂತೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಗೆ ಅನುಕ್ರಮವಾಗಿ ೭೩೪, ೫೮೫ ಮತ್ತು ೮೧೧ ಟಿ.ಎಂ.ಸಿ ನೀರು ಹಂಚಿಕೆಯಾಗಿದೆ.

ಕಣಿವೆ ಪ್ರದೇಶದಲ್ಲಿ ರಾಜ್ಯಗಳ ಅರ್ಹತೆ ಮತ್ತು ಹಂಚಿಕೆಯನ್ನು ಟಿ.ಎಂ.ಸಿ.ಗಳಲ್ಲಿ ಗಮನಿಸಿದಾಗ ಅರ್ಹತೆ ಮಹಾರಾಷ್ಟ್ರ ೬೯೦.೯೦ ಹಂಚಿಕೆ ೬೬೬, ಕರ್ನಾಟಕ ಅರ್ಹತೆ ೧೧೨೯.೧೬ ಹಂಚಿಕೆ ೯೧೧, ಆಂಧ್ರ ಪ್ರದೇಶ ಅರ್ಹತೆ ೭೫೭.೯೩ ಹಂಚಿಕೆ ೧೦೦೧ ಟಿ.ಎಂ.ಸಿ. ಈ ನ್ಯಾಯಾಧೀಕರಣದಿಂದಲೂ ರಾಜ್ಯಕ್ಕೆ ನ್ಯಾಯ ದೊರಕಿಲ್ಲ ಎಂಬುದು ತಿಳಿಯುತ್ತದೆ.

ಸ್ಕೀಮ್ 'ಬಿ'ಯಲ್ಲಿ ಜಾರಿಯಾಗುವ ರಾಜ್ಯದ ನೀರಾವರಿ ಯೋಜನೆಗಳೆಂದರೆ ಚಿಮ್ಮಲಗಿ ಏತ ನೀರಾವರಿ ಯೋಜನೆ, ಇಂಡಿ ಏತ ನೀರಾವರಿ ಯೋಜನೆ, ಮುಳವಾಡ ಏತ ನೀರಾವರಿ ಯೋಜನೆ, ರಾಮಪೂರ ಏತ ನೀರಾವರಿ ಯೋಜನೆ, ನಾರಾಯಣಪೂರ ಬಲದಂಡೆ ಕಾಲುವೆ, ಕೊಪ್ಪಳ ಏತ ನೀರಾವರಿ ಯೋಜನೆ, ಭೀಮಾ ನದಿ ಯೋಜನೆ, ಹೆರಕಲ್ ಏತ ನೀರಾವರಿ ಯೋಜನೆ, ಮಲಾಬಾದ ಏತ ನೀರಾವರಿ ಯೋಜನೆಗಳು. ಇವುಗಳಿಂದ ಸುಮಾರು ೫೪೧೫೮೭ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಬಹುದು.

ಕೃಷ್ಣಾ ನ್ಯಾಯಾಧೀಕರಣದ ಲಾಭ ಮತ್ತು ನಷ್ಟ :

ಆಲಮಟ್ಟಿ ಅಣೆಕಟ್ಟನ್ನು ೫೧೯ ರಿಂದ ೫೨೪ ಮೀಟರ್ ಎತ್ತರಕ್ಕೆ ತುಂಗ ಮೇಲ್ದಂಡೆ ಯೋಜನೆಗೆ ೪೦ ಟಿ.ಎಂ.ಸಿ ಹೆಚ್ಚುವರಿ ನೀರು, ನಷ್ಟವೆಂದರೆ ರಾಜ್ಯ ಕೇಳಿದಷ್ಟು ನೀರು ಸಿಕ್ಕಿಲ್ಲ. ರಾಜ್ಯ ಸಿದ್ಧಪಡಿಸಿದ ಸ್ಕೀಮ್ 'ಬಿ'ಯಲ್ಲಿ ೧೦೧ ಟಿ.ಎಂ.ಸಿ ಕೊರತೆ.

ಕೃಷ್ಣಾ ನ್ಯಾಯಾಧೀಕರಣಗಳ ತೀರ್ಪಿನಿಂದ ಕರ್ನಾಟಕಕ್ಕೆ ನ್ಯಾಯ ದೊರಕಿಲ್ಲ. ರಾಜ್ಯಕ್ಕೆ ನ್ಯಾಯಯುತವಾಗಿ ದೊರೆಯಬೇಕಾದ ನೀರಿನ ಪ್ರಮಾಣ ದೊರಕಿಲ್ಲ ಅಲ್ಲದೇ ರಾಜ್ಯಕ್ಕೆ ದೊರೆತ ನೀರಿನ ಪಾಲನ್ನು ಸರಿಯಾಗಿ ಬಳಸಿಕೊಂಡಿಲ್ಲ. ರಾಜ್ಯಕ್ಕೆ 'ಎ' ಮತ್ತು 'ಬಿ' ಸ್ಕೀಮ್‌ಗಳಲ್ಲಿ ದೊರೆತ ಕೃಷ್ಣಾ ನದಿ ನೀರನ್ನು ಸಂಪೂರ್ಣವಾಗಿ ಬಳಸಿಕೊಂಡರೆ ಉತ್ತರ ಕರ್ನಾಟಕದ ಬರ ನೀಗುವುದರಲ್ಲಿ ಸಂಶಯವಿಲ್ಲ.

ಟಿಪ್ಪಣಿಗಳು :

1. D. R. Khullur - 1999 "India : A Comprehensive Geography" Kalyani Publishers, New Delhi
೨. ಮನು ಗುಪ್ತಾ (೨೦೦೯) "ಸಮುದಾಯ ಆಧಾರಿತ ಪ್ರಕೃತಿ ವಿಕೋಪ ನಿರ್ವಹಣೆ" ಯೋ.ಪು–೨೬.
೩. ಎಸ್. ವಿನೋದ ಚಂದ್ರ ಮೆನನ್ (೨೦೦೯) "ಭಾರತದ ವಿಕೋಪ ನಿರ್ವಹಣೆ : ಉಪಕ್ರಮಗಳ ಬದಲಾವಣೆ" ಯೋ.ಪು–೧೨.
೪. R. Suresh (2003) "Water Shed Hydrology" Standard Publishers Distributers Delhi – 06
೫. ಬೆಳಗಾವಿ ಜಿಲ್ಲೆಯಲ್ಲಿ ೨೦೦೫–೦೬ ಮತ್ತು ೨೦೦೬–೦೭ರಲ್ಲಿ ಪ್ರವಾಹ ಬಂದ ಸಮಯದಲ್ಲಿ ಜಿಲ್ಲಾಡಳಿತ ವತಿಯಿಂದ ಜರುಗಿಸಿದ ಕ್ರಮಗಳ ವರದಿ.
೬. ಅಥಣಿ ತಾಲೂಕಿನಲ್ಲಿ ಕೃಷ್ಣಾ ನದಿ ಪ್ರವಾಹದಿಂದ ಆದ ಹಾನಿಯ ಸಮೀಕ್ಷೆ ಕುರಿತು ಆಗಮಿಸಿದ ಕೇಂದ್ರ ಅಧ್ಯಯನ ತಂಡಕ್ಕೆ ಸಲ್ಲಿಸಿದ ಮಾಹಿತಿ ಪತ್ರಿಕೆ –೨೦೦೬

ಅಧ್ಯಾಯ : ಮೂರು

ಪ್ರವಾಹ ಮತ್ತು ಪುನರ್ವಸತಿ ಸಮೀಕ್ಷೆ

ಅಧ್ಯಾಯ : ಮೂರು

ಪ್ರವಾಹ ಮತ್ತು ಪುನರ್ವಸತಿ ಅಧ್ಯಯನಗಳ ಸಮೀಕ್ಷೆ

ಪ್ರಸ್ತಾವನೆ :

ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಸಹಾಯಕವಾಗುವ ಸಾಹಿತ್ಯದ ಪುನರಾವಲೋಕನ ಮಾಡಲಾಗಿದೆ. ಪ್ರವಾಹದ ಕಾರಣ, ಪರಿಣಾಮ, ನಿಯಂತ್ರಣ, ಸ್ಥಳಾಂತರ ಮತ್ತು ಪುನರ್ವಸತಿ, ಪುನರ್ವಸತಿಗೆ ಸಂಬಂಧಿಸಿದ ೪೦ ಲೇಖನಗಳನ್ನು ಪರಾಮರ್ಶಿಸಲಾಗಿದೆ.

ದೇಶದಲ್ಲಿಯ ಬರಗಾಲ ಮತ್ತು ಪ್ರವಾಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸ್ವತಂತ್ರ ಭಾರತ ಸರಕಾರ ಅನೇಕ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿತು. ಉತ್ತರ ಭಾರತ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ ಮತ್ತು ಆಸ್ಸಾಂ ರಾಜ್ಯಗಳು ಪ್ರವಾಹದಿಂದ ತೀವ್ರ ತೊಂದರೆಗೆ ಒಳಗಾದರೆ ಕರ್ನಾಟಕ ಮಹಾರಾಷ್ಟ್ರ ಮತ್ತು ಇನ್ನುಳಿದ ದಕ್ಷಿಣ ಭಾರತದ ಪ್ರಸ್ತ ಭೂಪ್ರದೇಶಗಳ ಬರಗಾಲದ ಬವಣೆ ಎದುರಿಸುತ್ತಿವೆ. ಈ ಎರಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರಕಾರ ಅಣೆಕಟ್ಟುಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿತು. ಇದರಿಂದ ನದಿ ತಟಗಳಲ್ಲಿ ವಾಸಿಸುವ ಆದಿವಾಸಿ, ಗ್ರಾಮೀಣ ಜನರನ್ನು ಸ್ಥಳಾಂತರಿಸಬೇಕಾಯಿತು. ಉತ್ತರ ಭಾರತದಲ್ಲಿಯ ನದಿಗಳ ಪ್ರವಾಹದ ಸಮಸ್ಯೆಗಳು ಮತ್ತು ಅಣೆಕಟ್ಟು ನಿರ್ಮಾಣದಿಂದ ಉದ್ಭವಿಸಿದ ಸಂತ್ರಸ್ತರ ಸಮಸ್ಯೆಗಳಾದ ಭೂಮಿ ವಶಪಡಿಸಿಕೊಳ್ಳುವುದು, ಸ್ಥಳಾಂತರ, ಮೂಲ ಸೌಲಭ್ಯಗಳ ಕೊರತೆ ಮುಂತಾದ ಸಮಸ್ಯೆಗಳ ಕುರಿತು ಅನೇಕ ಅಧ್ಯಯನಗಳಾಗಿವೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿಯ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಬಹುದೆಂಬ ಉದ್ದೇಶದಿಂದ ಪ್ರವಾಹ ಮತ್ತು ಸ್ಥಳಾಂತರ ಕುರಿತ ಸಾಹಿತ್ಯ ಪುನರಾವಲೋಕನ ಮಾಡಲಾಗಿದೆ.

ಈ ಅಧ್ಯಯನಕ್ಕೆ ಈ ಎಲ್ಲ ಸಂಶೋಧನೆಗಳನ್ನು ಪೂರಕವಾಗಿ ಬಳಸಿಕೊಳ್ಳಲು ಯೋಜಿಸಲಾಗಿದೆ. ಅವುಗಳ ಅಧ್ಯಯನ ವಿಧಾನ, ಫಲಿತಗಳು, ಸಲಹೆಗಳು ಮುಂತಾದ ಎಲ್ಲ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಧ್ಯಯನಕ್ಕೆ ವೇದಿಕೆ ನಿರ್ಮಿಸಲಾಗಿದೆ.

ಪ್ರವಾಹಗಳ ಕಾರಣ ಪರಿಣಾಮ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಅವಲೋಕಿಸಲಾಗಿದೆ. ಅಧ್ಯಯನಗಳನ್ನು ಪ್ರಮುಖವಾಗಿ ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ.

೧) ಪ್ರವಾಹದ ಕಾರಣಗಳ ಶೋಧದ ಅಧ್ಯಯನಗಳು

೨) ಪ್ರವಾಹದ ಪರಿಣಾಮಗಳ ಅಧ್ಯಯನಗಳು

೩) ಪ್ರವಾಹದ ನಿಯಂತ್ರಣ ಅಧ್ಯಯನಗಳು

೪) ಸ್ಥಳಾಂತರ ಮತ್ತು ಪುನರ್ವಸತಿಗೆ ಸಂಬಂಧಿಸಿದ ಅಧ್ಯಯನಗಳು

ಪ್ರವಾಹ ಕಾರಣ ಶೋಧದ ಅಧ್ಯಯನಗಳು :

ಪ್ರಕೃತಿ ವಿಕೋಪಗಳು ಬಹಳಷ್ಟು ಮಾನವನ ಸ್ವಯಂಕೃತ ಅಪರಾಧಗಳು. ಇವು ನಿಸರ್ಗದ ಮೇಲೆ ಮಾನವ ದೌರ್ಜನ್ಯಗಳ ಫಲ, ಮಾನವ ತನ್ನ ಸ್ವಂತ ಸುಖಭೋಗಗಳಿಗಾಗಿ ಸ್ವಾರ್ಥ ಕೇಂದ್ರಿತ ಜೀವನಕ್ಕೆ ಮಾರು ಹೋದುದರಿಂದ ಅನೇಕ ಅನಾಹುತಗಳಿಗೆ ಕಾರಣವಾಗುತ್ತಿದೆ. ತಜ್ಞರು ಪ್ರವಾಹಗಳ ಕಾರಣಗಳ ಕುರಿತಾದ ಅನೇಕ ವಿಚಾರಗಳನ್ನು ತಿಳಿಸುತ್ತಾರೆ. ಇಂತಹ ವಿಚಾರಗಳ ಕುರಿತಾದ ಲೇಖನಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ರಾಜೀವ ಸಿನ್ಹಾ (೨೦೦೮)[೧] ಕೋಸಿ ಪ್ರವಾಹದ ಕಾರಣ ಮತ್ತು ನಿಯಂತ್ರಣ ನ್ಯೂನ್ಯತೆಗಳ ಅಧ್ಯಯನ ಮಾಡಿರುವುದು.

ಕೋಸಿ ನದಿ ಪಾತ್ರದಲ್ಲಿ ಸರಿಯಾದ ಪ್ರವಾಹ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದೇ ಪ್ರವಾಹಗಳಿಗೆ ಕಾರಣ. ಕೋಸಿ ನದಿ ಪ್ರವಾಹಗಳು ಮಾನವ ನಿರ್ಮಿತವಾದವುಗಳು, ಪ್ರವಾಹ ನಿಯಂತ್ರಿಸಲು ಸರಿಯಾದ ಯೋಜನೆಗಳು ಇಲ್ಲದಿರುವದು ಮತ್ತು ಪ್ರಾಚೀನ ಪ್ರವಾಹ ನಿಯಂತ್ರಣ ಕ್ರಮಗಳೇ ಕೋಸಿ ಪ್ರವಾಹಕ್ಕೆ ಕಾರಣವಾಗಿವೆ. ನದಿಗಳನ್ನು ನಿಯಂತ್ರಿಸುವುದರಿಂದ ಪ್ರವಾಹ ನಿಯಂತ್ರಿಸಲು ಸಾಧ್ಯವಿಲ್ಲ. ಬದಲಾಗಿ ನದಿಗಳ ಸರಿಯಾದ ಮೇಲ್ವಿಚಾರಣೆ ಶಾಶ್ವತ ಪರಿಹಾರ, ನೆರೆಗೆ ಕಾರಣಗಳನ್ನು ಕಂಡುಕೊಂಡಲ್ಲದೆ ಪರಿಹಾರಗಳನ್ನು ಹುಡುಕುವುದು ಸಾಧ್ಯವಿಲ್ಲವೆಂಬುದು ಅವರ ಅಭಿಪ್ರಾಯ.

ದಿನೇಶ ಕುಮಾರ ಮಿಶ್ರಾ (೨೦೦೮)[೨] ಇವರು ಅಗಷ್ಟ ೮, ೨೦೦೮ರಂದು ಬಿಹಾರದಲ್ಲಿ ಸಂಭವಿಸಿದ ಪ್ರವಾಹ ಪ್ರದೇಶಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವರ ಸಂಕಷ್ಟಗಳನ್ನು ತಿಳಿದುಕೊಂಡು ಸರಕಾರದ ಪರಿಹಾರ ಕ್ರಮದಲ್ಲಾಗುತ್ತಿರುವ ಲೋಪಗಳನ್ನು ಗಮನಿಸಿ ಈ ಲೇಖನದಲ್ಲಿ ವಿವರಿಸಿದ್ದಾರೆ. ಕೆಲವೊಂದು ಜನರ ಬೇಜವಾಬ್ದಾರಿತನ ಹಾಗೂ ರಾಜ್ಯ ಸರಕಾರದ ನಿಷ್ಕಾಳಜಿಯೇ ಆ ಪ್ರವಾಹಕ್ಕೆ ಕಾರಣವೆಂದು ಗುರುತಿಸಿದ್ದಾರೆ.

ಅಲೋಕ ಗುಪ್ತಾ, ಅರೇರಿಯಾ, ಸಹರ್ಸಾ, ಅರ್ನಬ ದತ್ತ ಮತ್ತು ಸವ್ಯ ಮಿಶ್ರಾ (೨೦೦೮)[೩] ಇವರು ಬಿಹಾರದಲ್ಲಾದ ಪ್ರವಾಹಕ್ಕೆ ಹೆಚ್ಚಿನ ನೀರಿನ ಹರಿವು ಕಾರಣವಲ್ಲ, ಬದಲಾಗಿ ಒಡ್ಡುಗಳ ನಿರ್ವಹಣೆಯಲ್ಲಿನ ಲೋಪಗಳೇ ಕಾರಣ ಎಂದಿದ್ದಾರೆ. ಬಿಹಾರ ಸರಕಾರ ಪ್ರವಾಹ ನಿಯಂತ್ರಿಸಲು ಒಡ್ಡುಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಾಕಷ್ಟು ಹಣ ವ್ಯಯ ಮಾಡುತ್ತದೆ. ಆದರೆ ಇದರಿಂದ ಶಾಶ್ವತ ಪ್ರವಾಹ ನಿಯಂತ್ರಣ ಸಾಧ್ಯವಿಲ್ಲವೆಂದು ನೇಪಾಳದ ಜಲ ಸಂಪನ್ಮೂಲ ಇಲಾಖೆ ಪ್ರಮುಖ ವಕ್ತಾರರಾದ ಅನುಪ ಉಪಾಧ್ಯಾಯ, ಡಿ.ಕೆ ಮಿಶ್ರಾ, ಜಲ ತಜ್ಞರು ಮತ್ತು ಸತ್ಯಶೊಧನ ಸಮಿತಿ ಸದಸ್ಯರು ಅಭಿಪ್ರಾಯ ಪಡುತ್ತಾರೆ. ನೇಪಾಳ ಪ್ರಧಾನ ಮಂತ್ರಿ ಪ್ರಚಂಡ ಅವರು ಕೋಸಿ ಒಪ್ಪಂದದಂತೆ ೧೯೯ ವರ್ಷಗಳ ಕಾಲ ನದಿ ನಿರ್ವಹಣೆ ಜವಾಬ್ದಾರಿಯನ್ನು ಭಾರತಕ್ಕೆ ಕೊಟ್ಟಿರುವುದೇ ತಪ್ಪು ಎಂದು ತಿಳಿಸಿರುವುದನ್ನು ಉಲ್ಲೇಖಿಸಿದ್ದಾರೆ.

ಹಿಮಂಸು ಉಪಾಧ್ಯಾಯ (೨೦೦೮)[೪] ಜೂನ ೧೧, ೨೦೦೮ ರಂದು ಬಿಹಾರ ರಾಜ್ಯದ ಮೆಹಸನಾ ಜಿಲ್ಲೆಯ ೮ ಗ್ರಾಮಗಳಾದ ಸುಜತಪುರ, ತೋಡಮಲಪುರ, ಬಾವಾಜಿಪುರ, ನರಸಿಂಹಪುರ, ನನಿಕಾದಿ, ಬಾಲಾಸನ, ಕಸವಾ ಮತ್ತು ಶೇದಾವಿ ಗ್ರಾಮಗಳು ನರ್ಮದಾ ನದಿಯ ಮುಖ್ಯ ನಾಲೆ ಒಡೆದು ಜಲಾವೃತವಾದವು. ಇದರಿಂದ ೨೧೦೦ ಕುಟುಂಬಗಳನ್ನು ಸ್ಥಳಾಂತರಿಸಲಾಯಿತು. ೨೦೦ ಎಕರೆ ಭೂಮಿ ಮುಳುಗಡೆಯಾಯಿತು. ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ ಅವರು ಇಂತಹ ಘಟನೆಗಳು ನರ್ಮದಾ ಅಣೆಕಟ್ಟೆಯ ಗುಣಮಟ್ಟ ಮತ್ತು ಸಂರಕ್ಷಣೆ ಬಗೆಗೆ ಗಮನ ಹರಿಸಬೇಕೆಂದು ತಿಳಿಸುತ್ತವೆ ಎಂದಿದ್ದಾರೆ.

ಹಿರೇನ ಗೈನ (೨೦೦೮)[೫] ಆಸ್ಸಾಂದ ಬಾರ್ಪೆಟಾ, ಧೆಮಾಜಿ, ಲಕ್ಷ್ಮೀಪುರ ಜಿಲ್ಲೆಗಳಲ್ಲಿ ಅಸಹಜವಾದ ನೆರೆಹಾವಳಿ ಬಂದು ಬೆಳೆ, ಜೀವ ಮತ್ತು ವಿತ್ತ ಹಾನಿಗಳನ್ನು ಮಾಡಿತು ಜನರು ಇದಕ್ಕೆಲ್ಲ ನಿಸರ್ಗವೇ ಕಾರಣವೆಂದು ಧೂಷಿಸಿದರು. ನಂತರ ಜನರಿಗೆ ತಿಳಿದ ವಿಷಯವೆಂದರೆ ಈ

ನೆರೆಹಾವಳಿಗಳಿಗೆ ಮನುಷ್ಯನೇ ಕಾರಣವೆಂದು. ಭೂತಾನದಲ್ಲಿ ಕುಲಿಶು, ಅರುಣಾಚಲ ಪ್ರದೇಶದಲ್ಲಿ ರಂಗಾನದಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಮಳೆಗಾಲದಲ್ಲಿ ಹೆಚ್ಚಿನ ಮಳೆಯಾಗಿ ನೀರಿನ ಪ್ರಮಾಣ ಹೆಚ್ಚಾದಾಗ ಅಣೆಕಟ್ಟೆಗೆ ತೊಂದರೆಯಾಗಬಾರದೆಂದು ಅನಿಯಂತ್ರಿತವಾಗಿ ನೀರನ್ನು ನದಿಗೆ ಬಿಡುತ್ತಿರುವುದೇ ನೆರೆಹಾವಳಿಗೆ ಕಾರಣವಾಗುತ್ತದೆಂದು ತಿಳಿಸಿದ್ದಾರೆ.

ನರೇಂದ್ರ ಕುಮಾರ ರಾಣಾ ಹಾಗೂ ಶಿವಶಂಕರ ವರ್ಮಾ (೨೦೦೯)[೬] ಉತ್ತರ ಪ್ರದೇಶದ ರುಪ್ತಿ ನದಿಯಲ್ಲಿ ಬರುವ ಪ್ರವಾಹಗಳ ಸ್ವರೂಪ, ಪ್ರಮುಖ ಪ್ರವಾಹಗಳು ಮತ್ತು ಅವುಗಳ ಕಾರಣಗಳ ಕುರಿತು ತಿಳಿಸಿದ್ದಾರೆ.

ನದಿ ಪಾತ್ರದಲ್ಲಿಯ ಹೆಚ್ಚಿನ ಮಳೆ ಮತ್ತು ಪರಿಸರದಲ್ಲಿಯ ಮನುಷ್ಯನ ಚಟುವಟಿಕೆಗಳಾದ ಒಕ್ಕಲುತನ, ಭೂಮಿ ಸ್ವಚ್ಛತೆ, ರಚನಾತ್ಮಕ ಕಾರ್ಯಗಳು, ನಗರೀಕರಣ, ಅರಣ್ಯ ನಾಶ, ಜಲಾನಯನ ಪ್ರದೇಶದ ಅತಿಕ್ರಮಣ, ಒಡ್ಡು, ರೈಲು, ರಸ್ತೆ ನಿರ್ಮಾಣದ ಕಾರ್ಯಗಳು ಪ್ರವಾಹಕ್ಕೆ ಕಾರಣಗಳಾಗಿವೆಯೆಂದಿದ್ದಾರೆ.

ಅಮಿತಾಭ ಶ್ರೀ ವಾತ್ಸವ (೨೦೦೯)[೭] ಬಿಹಾರದ ಕೋಸಿ ನದಿಯಿಂದಾದ ಪ್ರವಾಹದ ಕಾರಣ ದುಷ್ಪರಿಣಾಮಗಳ ಬಗೆಗೆ ತಿಳಿಸುತ್ತ ಪರಿಹಾರ ಕಾರ್ಯದಲ್ಲಾದ ವೈಫಲ್ಯದ ಕುರಿತು ಚರ್ಚಿಸಿದ್ದಾರೆ.

ಪ್ರವಾಹದ ನಾಲ್ಕು ತಿಂಗಳ ನಂತರ ಸಫೌಲಾ ಜಿಲ್ಲೆಯ ಮಹೇಂದ್ರ ಶರ್ಮ ಎಂಬ ವ್ಯಕ್ತಿ ಪರಿಹಾರ ದೊರಕದ ಕಾರಣ ತೀರಿಹೋದ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪರಸ್ಪರ ಧೂಷಿಸಿದವು ವಿನಹ ಸಂತ್ರಸ್ತರಿಗೆ ಪರಿಹಾರ ಒದಗಿಸಲಿಲ್ಲ. ಬಿಹಾರ ಮುಖ್ಯಮಂತ್ರಿ ನಿತೀಶಕುಮಾರ ಹೆಚ್ಚು ಪರಿಹಾರಕ್ಕಾಗಿ ಕೇಂದ್ರಕ್ಕೆ ಆಗ್ರಹಿಸಿದರೂ ಕೇಂದ್ರ ಸರಕಾರ ಕಿವಿಗೊಡಲಿಲ್ಲ. ಅವೈಜ್ಞಾನಿಕ ಅಣೆಕಟ್ಟುಗಳ ನಿರ್ಮಾಣ, ಭದ್ರತೆಯ ಕೊರತೆ, ಪ್ರವಾಹಕ್ಕೆ ಕಾರಣವೆಂದು ತಿಳಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರವಾಹದ ಕುರಿತು ಯಾವುದೇ ಮುನ್ಸೂಚನೆ ನೀಡದೇ ಇರುವುದು ಪ್ರವಾಹದ ದುಷ್ಪರಿಣಾಮಗಳಿಗೆ ಕಾರಣವೆಂದಿದ್ದಾರೆ.

ಪ್ರವಾಹದ ಪರಿಣಾಮಗಳ ಕುರಿತಾದ ಲೇಖನಗಳು :

ಪ್ರವಾಹದಿಂದ ಅನುಕೂಲತೆ ಜೊತೆಗೆ ಸಾಕಷ್ಟು ತೊಂದರೆಗಳನ್ನು ಕಾಣುತ್ತೇವೆ. ಬೆಳೆ, ವಿತ್ತ ಹಾನಿಗಳೊಂದಿಗೆ ಮನುಷ್ಯನ ಜೀವ ಹಾನಿ, ಜನ-ಜಾನುವಾರುಗಳ ಹಾನಿಯನ್ನು

ಗಮನಿಸಬಹುದು. ಪ್ರವಾಹದಿಂದಾದ ಪರಿಣಾಮಗಳ ಕುರಿತಾದ ಅನೇಕ ಲೇಖನಗಳನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖ ಲೇಖನಗಳನ್ನು ಅವಲೋಕಿಸಲಾಗಿದೆ.

ವುಜಿಕಾ, ಯೇವಜಿಕ್ (೧೯೭೨)[೮] ೧೯೭೨ ಸೆಪ್ಟೆಂಬರ್ ೧೧ರಿಂದ ೧೩ರ ವರೆಗೆ ಅಮೇರಿಕಾದ ಪೋಟ ಕಾಲೀನಾದಲ್ಲಿ ಜಲಶಾಸ್ತ್ರದ ಎರಡನೇಯ ಅಂತರಾಷ್ಟ್ರೀಯ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಜಲ ವಿಪತ್ತುಗಳ ಬಗೆಗೆ ಚರ್ಚಿಸಲಾಯಿತು. ನೆರೆಹಾವಳಿ ಮತ್ತು ಬರಗಾಲಗಳು ಜಲ ಸಂಬಂಧಿತ ಭಯಂಕರ ವಿಪತ್ತುಗಳು, ಜಲಶಾಸ್ತ್ರದಲ್ಲಿ ಅಂಕಿಸಂಖ್ಯೆಗಳ ಬಳಕೆಯ ಕೊರತೆಯಿಂದ ವಿಪತ್ತುಗಳ ತೀವ್ರತೆ ಹೆಚ್ಚಾಗುತ್ತವೆ ಎಂದಿದ್ದಾರೆ

ಮನುಷ್ಯ ನಿರ್ಮಿತ ಪ್ರವಾಹ ನಿಯಂತ್ರಣ ಸಾಧನಗಳಿಂದ ಪ್ರವಾಹ ತೀವ್ರತೆ ಮತ್ತಷ್ಟು ಹೆಚ್ಚಾಗುತ್ತದೆ. ಪ್ರವಾಹಕ್ಕೆ ಸಂಬಂಧಸಿದ ಸಾಕಷ್ಟು ಅಧ್ಯಯನಗಳಾಗಿವೆ. ಆದರೆ ಅವು ಹೆಚ್ಚಾಗಿ ವಿವರಣಾತ್ಮಕವಾಗಿವೆ. ಅದರ ವಿವಿಧ ಮುಖಗಳನ್ನು ಅಧ್ಯಯನ ಮಾಡುವುದಿಲ್ಲವೆಂದು ತಿಳಿಸಿದ್ದಾರೆ.

ಡಿ. ಆರ್ ಸಿಕ್ಕಾ (೧೯೭೨)[೯] ಮಧ್ಯಪ್ರದೇಶದ ಬೃಹತ್ ಯೋಜನೆಗಳ ಕಾರ್ಯದರ್ಶಿಗಳಾಗಿದ್ದ ಡಿ.ಆರ್ ಸಿಕ್ಕಾ ಅವರು ಭಾರತದ ಪ್ರವಾಹಗಳ ಕುರಿತು ಅವಲೋಕನ ಮಾಡಿದ್ದಾರೆ.

೧೯೭೦ರಲ್ಲಿ ದೇಶದಲ್ಲಿ ಸಂಭವಿಸಿದ ಪ್ರವಾಹ, ೧೯೫೩ ರಿಂದ ೧೯೭೦ರ ವರೆಗೆ ಸಂಭವಿಸಿದ ಪ್ರವಾಹಗಳಲ್ಲಿ ಭಯಂಕರವಾದುದು. ಇದರಿಂದ ೮೭ ಮಿಲಿಯನ್ ಜನ ಪ್ರಭಾವಿತರಾಗಿ, ೨೦೨ ಮಿಲಿಯನ್ ಮನೆಗಳು ನಾಶವಾದವು. ೧೦೦೦ ಜನ ಸಾವಿಗೀಡಾಗಿದರು, ೫೮೦೦ ಮಿಲಿಯನ್ ವಿತ್ತ ಹಾನಿ ಸಂಭವಿಸಿತು. ಈ ಹಾನಿಗಳ ಕುರಿತು ಚರ್ಚಿಸಿ ಪ್ರವಾಹದ ಮುನ್ನೆಚ್ಚರಿಕೆ ಕ್ರಮಗಳಿಂದ ಪ್ರವಾಹದಿಂದಾಗುವ ದುಷ್ಪರಿಣಾಮಗಳನ್ನು ನಿಯಂತ್ರಿಸಬಹುದೆಂದು ತಿಳಿಸಿದ್ದಾರೆ. ಪ್ರವಾಹದ ಆಳ, ಅವಧಿಗಳ ಆಧರಿಸಿ ಮಾಪನ ಸಾಧ್ಯ ಎಂದಿದ್ದಾರೆ.

ಬ್ರುಸ್ ಮಿಟಚೆಲ (೧೯೯೯)[೧೦] ಅವರ ಈ ಲೇಖನದಲ್ಲಿ ವಿವಿಧ ಯೋಜನೆಗಳಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ. ಮನುಷ್ಯನ ಚಟುವಟಿಕೆಗಳು ಪರಿಸರದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತವೆ. ಇದರ ಕುರಿತು ಕ್ಲರ್ಕ, ಬಿಸೆಟ ಮತ್ತು ವದರ್ನ (೧೯೮೦), ಜರಾಸನ (೧೯೮೧), ಲೀ (೧೯೮೨), ಮೆರೆಚಿತ (೧೯೮೨), ಗ್ರೀಮಾ, ತಿಮ್ಮರಮನ, ಫೌಲ ಮತ್ತು ಬೀರ (೧೯೮೬) ಮುಂತಾದ ಭೂಗೋಳ ಶಾಸ್ತ್ರಜ್ಞರು ಅಧ್ಯಯನ

ಮಾಡಿದ್ದಾರೆ. ಮಾನವನಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮಗಳ ಬಗೆಗೆ ಅಧ್ಯಯನ ಮಾಡುವಾಗ ಯೋಜನೆಗಳಲ್ಲಿ ಪರಿಸರಕ್ಕೆ ಸಂಬಂಧಪಟ್ಟ ಅಂಶಗಳನ್ನು ಅವಲೋಕಿಸಬೇಕು, ಪರಿಹಾರೋಪಾಯಗಳನ್ನು ಗುರುತಿಸಬೇಕು, ಗುಣಾತ್ಮಕ ಬದಲಾವಣೆಗೆ ಕ್ರಮ ಕೈಗೊಳ್ಳುವಾಗ, ಯೋಜನೆಗಳಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುವಂತಿದ್ದರೆ ಯೋಜನೆಗಳನ್ನು ನವೀಕರಣಗೊಳಿಸಿ ಯೋಜನೆಯಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮಗಳನ್ನು ನಿಯಂತ್ರಿಸಬಹುದು ಎಂದಿದ್ದಾರೆ.

ಫನೀಂದರ ಗೋಯರಿ (೨೦೦೫)[೧೧] ಆಸ್ಸಾಂ ಪ್ರವಾಹಗಳಿಂದ ಅಲ್ಲಿಯ ಕೃಷಿ ಕ್ಷೇತ್ರದ ಮೇಲೆ ಪ್ರವಾಹದ ದುಷ್ಪರಿಣಾಮ ಕುರಿತು ತಿಳಿಸಿದ್ದಾರೆ.

ಕೃಷಿ ಕ್ಷೇತ್ರದಲ್ಲಾಗುತ್ತಿರುವ ಹಾನಿ, ಕೃಷಿ ಅಭಿವೃದ್ಧಿ ಮೇಲಾಗುತ್ತಿರುವ ಪರಿಣಾಮ, ಕೃಷಿ ಕ್ಷೇತ್ರದ ಸಂರಕ್ಷಣೆ ಕುರಿತು ಚರ್ಚಿಸಿದ್ದಾರೆ.

ಆಸ್ಸಾಂದಲ್ಲಿ ಪ್ರತಿವರ್ಷ ಸಂಭವಿಸುತ್ತಿರುವ ಪ್ರವಾಹಗಳಿಂದ ಭೂ ಸವಕಳಿ, ಕಡಿಮೆ ಇಳುವರಿ, ಕೃಷಿ ಪದ್ಧತಿ ಮೇಲೆ ಪರಿಣಾಮ, ರಸಗೊಬ್ಬರಗಳ ಕಡಿಮೆ ಉಪಯೋಗ, ಸುಧಾರಿತ ಬೀಜಗಳ ಉಪಯೋಗದಲ್ಲಿ ಹಿಂಜರಿತ, ಕಡಿಮೆ ತಾಂತ್ರಿಕತೆ, ಪ್ರವಾಹಕ್ಕೆ ಒಳಗಾಗುವ ಪ್ರದೇಶಗಳು ಒಂದೆರಡು ವರ್ಷಗಳಲ್ಲಿ ಫಲವತ್ತತೆ ಕಳೆದುಕೊಂಡು ಒಕ್ಕಲುತನಕ್ಕೆ ಸೂಕ್ತ ಎನಿಸುವುದಿಲ್ಲವೆಂಬ ಕೆಲವೊಂದು ಪರಿಣಾಮಗಳನ್ನು ತಿಳಿಸಿ, ಸರಕಾರಗಳು ಪ್ರವಾಹ ನಿಯಂತ್ರಣದಲ್ಲಿ ತಾತ್ಕಾಲಿಕ ಕ್ರಮಗಳನ್ನು ಮಾತ್ರ ಕೈಗೊಳ್ಳುತ್ತಿದ್ದು ಶಾಶ್ವತ ಪರಿಹಾರ ಕೈಗೊಳ್ಳಬೇಕೆಂದು, ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ನೆರವು ನೀಡಬೇಕೆಂದು ತಿಳಿಸಿದ್ದಾರೆ.

ವಿಭಾ ವರ್ಷಿನಿ (೨೦೦೮)[೧೨] ಅಣೆಕಟ್ಟೆಗಳಿಂದ ಮಲೇರಿಯಾ ಹೆಚ್ಚುತ್ತದೆಂಬ ವಾದವನ್ನು ಅಲ್ಲಗಳೆಯುತ್ತಾರೆ. ಅಣೆಕಟ್ಟುಗಳನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಮತ್ತು ಚಿಕ್ಕ ಅಣೆಕಟ್ಟುಗಳಿಂದ ಮಲೇರಿಯಾ ಸಮಸ್ಯೆಯಾಗಲಾರದೆಂದು ತಿಳಿಸಿದ್ದಾರೆ. ೨೦೦೧ ರಿಂದ ೨೦೦೫ ರ ವರೆಗೆ ಐದು ವರ್ಷಗಳ ಕಾಲ ಫಂಡರಿಪುರ ಮತ್ತು ಜಗಡಾ ಗ್ರಾಮಗಳಲ್ಲಿ ಸಂಶೋಧನೆ ನಡೆಸಿ ಈ ವಿಷಯವನ್ನು ತಿಳಿಸಿದ್ದಾರೆ.

ಬೃಹತ್ ಅಣೆಕಟ್ಟುಗಳು ಗಂಡಾಂತರಕಾರಿ, ಒಡ್ಡು ಯೋಜನೆಗಳು ತಾತ್ಕಾಲಿಕವಾದರೆ, ಪ್ರವಾಹ ನಿಯಂತ್ರಣ ಹೇಗೆ ಸಾಧ್ಯ ಎಂಬುದಕ್ಕೆ ಜವಾಹರಲಾಲ ನೆಹರು ವಿಶ್ವವಿದ್ಯಾಲಯದ ಪರೊ. ರೋಹನ ಡಿಸೋಜಾರವರು ಪ್ರವಾಹ ತಡೆಗಟ್ಟಲು ಸಾಧ್ಯವಿಲ್ಲ, ನೈಸರ್ಗಿಕ ಪ್ರವಾಹಗಳಿಗೆ

ಅಡ್ಡಿಪಡಿಸಬೇಡಿ ಪ್ರವಾಹಗಳೊಂದಿಗೆ ಜನರು ಜೀವಿಸುವುದನ್ನು ಕಲಿಯುವುದು ಪ್ರವಾಹಕ್ಕೆ ಪರಿಹಾರವೆಂದು ಅಭಿಪ್ರಾಯ ಪಟ್ಟಿರುವುದನ್ನು ಉಲ್ಲೇಖಿಸಿದ್ದಾರೆ.

ಅರ್ನಬ ಪ್ರತಿಮ ದತ್ತ ಮತ್ತು ಅಲೋಕ ಗುಪ್ತಾ(೨೦೦೮)[೧೩] ಪ್ರವಾಹದ ದುಷ್ಪರಿಣಾಮದ ಅಂದಾಜಿನಲ್ಲಿ ಆಗುತ್ತಿರುವ ನ್ಯೂನ್ಯತೆಗಳನ್ನು ತಿಳಿಸಿ, ಸರಕಾರದ ನಿಯಂತ್ರಣ ಕ್ರಮಗಳಿಂದ ಕೋಸಿ ನದಿಯಲ್ಲಿ ಪ್ರವಾಹ ತಡೆಗಟ್ಟಲು ಸಾಧ್ಯವೇ ಎಂಬುದರ ಕುರಿತು ಚರ್ಚಿಸಿದ್ದಾರೆ.

ಪ್ರಧಾನ ಮಂತ್ರಿಗಳು ಬಿಹಾರ ಪ್ರವಾಹದ ದುಷ್ಪರಿಣಾಮ ಸಮೀಕ್ಷೆಗೆ ಎಸ್.ಸಿ.ಜಾ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಸಮಿತಿಯು ದುಷ್ಪರಿಣಾಮ ಅವಲೋಕಿಸಿ ಇದನ್ನು ನಿಭಾಯಿಸುವುದು ರಾಜ್ಯ ಅಥವಾ ಕೇಂದ್ರ ಸರಕಾರಕ್ಕೆ ಸಾಧ್ಯವಿಲ್ಲದ ಮಾತು, ಪರಿಹಾರ ಕಾರ್ಯದ ವೆಚ್ ರೂ. ೨೫೦೦೦ ಕೋಟಿ ತಲುಪಬಹುದು ಕಾರಣ ಏಶಿಯಾ ಇಲ್ಲವೆ ಜಾಗತಿಕ ಬ್ಯಾಂಕಿನ ಸಹಾಯ ಕೇಳಬೇಕೆಂದು ವರದಿ ನೀಡಿತು. ಇದಕ್ಕೂ ಮೊದಲು ಬಿಹಾರ ಸರಕಾರ ೯೦೦೦ ಕೋಟಿ ಅಂದಾಜಿಸಿ ಕೇಂದ್ರದ ಸಹಾಯ ಕೇಳಿತ್ತು. ಕೇಂದ್ರ ಸರಕಾರ ೧೦೦೦ ಕೋಟಿ ಹಣ ಮಾತ್ರ ಬಿಡುಗಡೆ ಮಾಡಿತ್ತು

೧೯೯೧ರಲ್ಲಿ ಪ್ರವಾಹ ನಿಯಂತ್ರಿಸಲು ಬಿಹಾರ ಮತ್ತು ಭಾರತ ಸರಕಾರಗಳು ಸಪ್ತಕೋಸಿ ಎತ್ತರದ ಅಣೆಕಟ್ಟು ನಿರ್ಮಿಸಲು ಒಪ್ಪಿಕೊಂಡವು. ಪರಿಸರ ತಜ್ಞ ಸುಧೀಂದ್ರ ಶರ್ಮಾರವರು ಈ ಅಣೆಕಟ್ಟೆ ನಿರ್ಮಿಸಲು ೨೦ ವರ್ಷ ತಗುಲಬಹುದು ಅಲ್ಲದೆ ಇದರಿಂದ ಶೇಕಡಾ ೭೮ ರಷ್ಟು ಹರಿವನ್ನು ಮಾತ್ರ ನಿಯಂತ್ರಿಸಬಹುದು, ಇನ್ನುಳಿದ ಶೇಕಡಾ ೨೨ರಷ್ಟು ಹರಿವು ಗಂಡಾಂತರಕಾರಿಯಾಗುತ್ತದೆಂದು ತಿಳಿಸಿದರು.

ಜಲ ತಜ್ಞರಾದ ದಿನೇಶ ಕುಮಾರ ಮಿಶ್ರಾ, ಹಮನ್ಸ ಠಕ್ಕರ ಈ ಯೋಜನೆಯನ್ನು ವಿರೋಧಿಸಿದರು. ಕಠ್ಮಂಡುವಿನ ಅಜಯ ದೀಕ್ಷಿತ ಅವರು ಅಣೆಕಟ್ಟುಗಳಿಂದ ಪ್ರವಾಹ ನಿಯಂತ್ರಣ ಮತ್ತು ವಿದ್ಯುತ್ ಉತ್ಪಾದನೆಗಳೆರಡು ಸಾಧ್ಯವಿಲ್ಲ ಇವೆರಡು ವಿರುದ್ಧ ವಿಚಾರಗಳು ಎಂದಿದ್ದಾರೆ.

ಒಡ್ಡು ಯೋಜನೆಗಳಿಂದ ಪ್ರವಾಹ ನಿಯಂತ್ರಿಸಲು ಸಾಧ್ಯವಿಲ್ಲ. ೧೯೫೦ ರ ನಂತರ ಬಿಹಾರದಲ್ಲಿ ಒಡ್ಡು ಯೋಜನೆಗಳನ್ನು ಪ್ರಾರಂಭಿಸಿದ ನಂತರ ಪ್ರವಾಹಗಳ ಪ್ರಮಾಣ ಇಮ್ಮಡಿಯಾಗಿದೆ. ಮಿಶ್ರಾ ಅವರು ಒಡ್ಡುಗಳಿಂದ ಪ್ರವಾಹ ಅವಧಿ ಹೆಚ್ಚುತ್ತದೆ ಎಂದಿದ್ದಾರೆ. ನದಿಗಳ ಜೋಡಣೆ ಪ್ರವಾಹಕ್ಕೆ ಪರಿಹಾರ ಒದಗಿಸಲಾರದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕೋಸಿ ಉನ್ನತ ಮಟ್ಟದ ಆಯೋಗ ಮತ್ತು ಗಂಗಾ ಪ್ರವಾಹ ನಿಯಂತ್ರಣ ಸಮೀತಿಗಳು ಸರಿಯಾಗಿ ಕಾರ್ಯ ನಿರ್ವಹಿಸದಿರುವುದು ಮತ್ತು ಇಂಜನೀಯರಗಳ ಸಲಹೆಗಳನ್ನು

ಮನ್ನಿಸದಿರುವುದೇ ಪ್ರವಾಹಕ್ಕೆ ಕಾರಣವೆಂದು ಬಿಹಾರ ಜಲಸಂಪನ್ಮೂಲ ಅಧಿಕಾರಿಗಳು ದೂಷಿಸುತ್ತಾರೆ ಎಂದು ಉಲ್ಲೇಖಿಸಿದ್ದಾರೆ.

ದಿನೇಶ ಕುಮಾರ ಮಿಶ್ರಾ (೨೦೦೮)[೧೪] ಈ ಲೇಖನದಲ್ಲಿ ಪ್ರವಾಹದ ದುಷ್ಪರಿಣಾಮ ಮತ್ತು ಮುನ್ಸೂಚನಾ ನ್ಯೂನ್ಯತೆಗಳನ್ನು ಕುರಿತು ತಿಳಿಸಿದ್ದಾರೆ.

ಅಗಷ್ಟ ೧೮, ೨೦೦೮ರ ಕೋಸಿ ಪ್ರವಾಹದಿಂದ ೫ ಜಿಲ್ಲೆಗಳು, ೧೧೪ ಬ್ಲಾಕಗಳು, ೨೫೨೮ ಗ್ರಾಮಗಳ ಮೇಲೆ ಪರಿಣಾಮ ಬೀರಿತು. ೪೮.೦೪ ಲಕ್ಷ ಜನಸಂಖ್ಯೆ ಪ್ರವಾಹ ಪೀಡಿತರಾದರು, ೩,೨೨,೧೯೯ ಮನೆಗಳು ನಾಶವಾದವು, ೩.೩೮ ಲಕ್ಷ ಹೆಕ್ಟೇರ್ ಬೆಳೆ ನಾಶವಾಯಿತು. ೨೩೫ ಜನರ ಸತ್ತರು, ೭೮೭ ಪ್ರಾಣಿಗಳು ಜೀವತೆತ್ತವು.

ಸರಕಾರ, ಅಧಿಕಾರಿಗಳು, ಕೆಂದ್ರೀಯ ನೀರಾವರಿ ಆಯೋಗಗಳು ಪ್ರಾರಂಭದಿಂದಲೂ ಈ ಕೋಸಿ ಯೋಜನೆಯಿಂದ ನದಿ ನೀರಿನ ಮಟ್ಟದಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲವೆಂದು ತಿಳಿಸಿದವು. ಕೇಂದ್ರೀಯ ನೀರಾವರಿ ಆಯೋಗ ಜನರಿಗೆ ಪರಿಹಾರ ನೀಡಕೂಡದು, ಒಮ್ಮೆ ಪರಿಹಾರ ಕೊಟ್ಟರೆ ಮುಂದಿನ ಯೋಜನೆಗಳಲ್ಲಿ ಜನ ಅದನ್ನೆ ಬಯಸುತ್ತಾರೆ ಎಂದು ತಿಳಿಸಿತು. ತೊಂದರೆಗೆ ಒಳಗಾದ ಜನರು ಇದನ್ನು ವಿರೋಧಿಸಿದರು. ಕೊನೆಗೆ ಸರಕಾರ ಪರಿಹಾರ ಕೊಡಲು ನಿರ್ಧರಿಸಿತು. ೧೯೭೦ರ ವರೆಗೆ ೬೬೫೦ ಕುಟುಂಬಗಳು ಮಾತ್ರ ಪುನರ್ವಸತಿಗೊಂಡಿದ್ದವು ಇನ್ನೂ ೩೫೦೦ ಕುಟುಂಬಗಳಿಗೆ ಯಾವುದೇ ಪರಿಹಾರ ದೊರಕಿರಲಿಲ್ಲ. ಸರಕಾರದ ಆಶ್ವಾಸನೆಗಳು ಹುಸಿಯಾಗಿದ್ದವು. ನಿರಾಶ್ರಿತರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರಕಾರ ೧೯ ಸದಸ್ಯರನ್ನು ಒಳಗೊಂಡ ಪ್ರಾಧಿಕಾರ ರಚಿಸಿತು. ಇದರಿಂದಲೂ ಯಾವುದೇ ಪ್ರಯೋಜನವಾಗಲಿಲ್ಲ. ಪ್ರಾಧಿಕಾರದ ಅಧ್ಯಕ್ಷರಿಗೆ ಕ್ಯಾಬಿನೇಟ್ ದರ್ಜೆ ಸ್ಥಾನ ದೊರಕಿತು ಹೊರತಾಗಿ ತೊಂದರೆಗೆ ಒಳಗಾದವರಿಗೆ ಯಾವುದೇ ಉಪಯೋಗವಾಗಲಿಲ್ಲ ಎಂದಿದ್ದಾರೆ. ಈ ಸಮೀತಿ ಯೋಜನಾ ನಿರಾಶ್ರಿತರಿಗೆ ಸರಕಾರಕ್ಕೆ ೩ ಮತ್ತು ೪ ನೇ ದರ್ಜೆಯಲ್ಲಿ ಸರಕಾರಿ ನೌಕರಿಗಳಲ್ಲಿ ಉದ್ಯೋಗಗಳನ್ನು ಮೀಸಲಿಡಲು ಶಿಪ್ಪಾರಸ್ಸು ಮಾಡಿತು ಇದರಿಂದಲೂ ಯಾರಿಗೂ ಪ್ರಯೋಜನವಾಗಲಿಲ್ಲ, ಕೊನೆಗೆ ೧೯೯೮ ರಲ್ಲಿ "ಕೋಸಿ ಮುಕ್ತಿ" ಸಂಘರ್ಷ ಸಮಿತಿ ಮಾನವ ಹಕ್ಕುಗಳಿಗೆ ದೂರು ನೀಡಿತು. ಸಂತ್ರಸ್ತರು ವಿಧಾನ ಸಭೆ ಲೋಕಸಭೆಗಳಿಗೆ ಸ್ಪರ್ಧಿಸಿದರು. ಯಾವುದು ಫಲ ನೀಡಲಿಲ್ಲ, ಕೊನೆಯ ಅಸ್ತ್ರವಾಗಿ ಉಚ್ಛ ನ್ಯಾಯಾಲಯಕ್ಕೆ ಮೊರೆಹೋಗಬೇಕೆಂದು ತಿರ್ಮಾನಿಸಿದರು ಎಂದು ಆ ಸಂತ್ರಸ್ತರ ಕಷ್ಟಗಳನ್ನು ವಿವರಿಸಿದ್ದಾರೆ.

ಅಮಿತಾಭ ಶ್ರೀ ವಾತ್ಸವ (೨೦೦೯)[೧೫] ಅವರ ಅಧ್ಯಯನ ಅನೇಕ ಆತಂಕಕಾರಿ ವರದಿಗಳನ್ನು ಬಯಲುಗೊಳಿಸಿತು. ಬಿಹಾರ ಪ್ರವಾಹದಿಂದ ಬಡತನ ನಿರುದ್ಯೋಗಗಳ ಪ್ರಮಾಣಗಳು ಹೆಚ್ಚಿ ಮಕ್ಕಳು ಮಾರಾಟವಾಗುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಪ್ರವಾಹ ಪೀಡಿತ ಸಹರ್ಸಾ, ಮಧೇಪುರ, ಸಫೌಲ, ಪರ್ನಿಯಾ, ಅರೇರಿಯಾ ಮತ್ತು ಕಾತಿಹಾರ ಜಿಲ್ಲೆಗಳಲ್ಲಿ ಸುಮಾರು ೧೨೦೦೦ ಮಕ್ಕಳು ಮಾರಾಟವಾಗಿರುವುದನ್ನು ಅಂದಾಜಿಸಿದ್ದಾರೆ. ಅತೀ ಕಡಿಮೆ ಎಂದರೆ ೫೦೦ ರೂ. ಗಳಿಗೆ ಮಕ್ಕಳನ್ನು ಮಾರಿರುವುದನ್ನು ಉಲ್ಲೇಖಿಸಿದ್ದಾರೆ. ಕೆಲವೊಂದು ಮಕ್ಕಳನ್ನು ಸ್ವತಃ ಅವರ ಪಾಲಕರೇ ಮಾರಿರುವುದು ಅವರ ಬಡತನಕ್ಕೆ ನಿದರ್ಶನವಾಗಿದೆ ಎಂದಿದ್ದಾರೆ.

ಪ್ರವಾಹ ನಿಯಂತ್ರಣ ಕುರಿತಾದ ಲೇಖನಗಳು :

ಪ್ರವಾಹ ನಿಯಂತ್ರಣ ಸರಕಾರಗಳ ಕರ್ತವ್ಯ. ಸರಕಾರಗಳು ಪ್ರವಾಹ ನಿಯಂತ್ರಣಕ್ಕೆ ಕೋಟಿ, ಕೋಟಿ ಹಣ ವೆಚ್ಚ ಮಾಡುತ್ತವೆ. ಆದರೆ ಈ ಎಲ್ಲ ಪರಿಹಾರಗಳು ತಾತ್ಕಾಲಿಕವಾಗಿದ್ದು ಖಾಯಂ ಸ್ವರೂಪದ ಪ್ರವಾಹ ನಿಯಂತ್ರಣಗಳ ಯೋಜನೆಗಳನ್ನು ರೂಪಿಸಲು ಕೆಲವು ಸರಕಾರ ಶ್ರಮಿಸುತ್ತವೆ. ಪ್ರವಾಹಗಳನ್ನು ರಚನಾತ್ಮಕ ಇಲ್ಲವೇ ರಚನಾಯೇತರ ಕ್ರಮಗಳ ಮುಖಾಂತರ ನಿಯಂತ್ರಿಸಬಹುದು. ರಚನಾತ್ಮಕ ಅಭಿಯಾಂತ್ರಿಕ ಕ್ರಮಗಳು ಯೋಗ್ಯವಲ್ಲವೆಂದು ಅನೇಕ ತಜ್ಞರು ವಾದಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ರವಾಹ ನಿಯಂತ್ರಣ (Flood Control) ಕ್ಕಿಂತಲೂ ಪ್ರವಾಹ ಮೇಲ್ವಿಚಾರಣೆಗಳಿಂದ (Flood Management) ಪ್ರವಾಹದ ದುಷ್ಪರಿಣಾಮಗಳನ್ನು ಕಡಿಮೆ ಮಾಡಬಹುದು ಎಂಬ ವಾದ ಕೇಳಿ ಬರುತ್ತಿದೆ. ಇದರ ಕುರಿತಾದ ಅನೇಕ ಲೇಖನಗಳನ್ನು ಕಾಣಬಹುದು. ಅವುಗಳಲ್ಲಿ ಮಹತ್ವದ ಲೇಖನಗಳನ್ನು ಪರಿಶೀಲಿಸಲಾಗಿದೆ.

ಜೋನ್ಸ ಮತ್ತು ಬಾರ್ಟೇಲರು (೨೦೦೪)[೧೬] ಅಮೇರಿಕಾದ ವುಡ್‌ಲ್ಯಾಂಡ್ ಟೆಕ್ಸಾಸ್, ಬೋಸ್ಟನ್, ಮೆಸ್ಸಾಚು ಸೆಟ್ ಗಳಲ್ಲಿಯ ಪ್ರವಾಹದ ಕುರಿತು ಚರ್ಚಿಸಿದ್ದಾರೆ.

ನೀರಿನ ಬೇಡಿಕೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಒಕ್ಕಲುತನ, ಕೈಗಾರಿಕೆ, ದಿನ ನಿತ್ಯದ ಬಳಕೆಯಲ್ಲಿ ನೀರಿನ ಸದುಪಯೋಗ, ಮರುಬಳಕೆ ವಿಧಾನಗಳಲ್ಲದೆ ನೀರಿನ ಸದ್ಬಳಕೆ ಜವಾಬ್ದಾರಿಯನ್ನು ಪ್ರತಿಯೊಬ್ಬ ವ್ಯಕ್ತಿಗೂ ತಿಳಿಸಬೇಕು. ಸರಕಾರಗಳು ನೀರು ಸರಿಯಾಗಿ ಬಳಕೆ ಮಾಡಲಾರದ ಯೋಜನೆಗಳಿಗೆ ಸಹಾಯ ಸವಲತ್ತುಗಳನ್ನು ಕಡಿತಗೊಳಿಸಬೇಕು ಎಂದು ತಿಳಿಸಿದ್ದಾರೆ.

ಅತಿ ಹೆಚ್ಚಿನ ಮಳೆ ಮತ್ತು ಮಾನವನಿಂದ ನಿಸರ್ಗದ ಮೇಲಾಗುತ್ತಿರುವ ಪರಿಣಾಮಗಳಿಂದ ಪ್ರವಾಹ ಉಂಟಾಗುತ್ತದೆ ಎಂದಿದ್ದಾರೆ.

ಅಣೆಕಟ್ಟುಗಳ ನಿರ್ಮಾಣ, ಕಾಲುವೆಗಳನ್ನು ತೋಡುವುದರಿಂದ ಪ್ರವಾಹಕ್ಕೆ ಶಾಶ್ವತ ಪರಿಹಾರಗಳು ದೊರಕುತ್ತಿಲ್ಲ, ಜನಸಂಖ್ಯೆ ನಿಯಂತ್ರಣ, ಜಲಾನಯನಗಳ ಸಂರಕ್ಷಣೆ, ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮ ತಡೆಗಟ್ಟುವದು ಪ್ರವಾಹಕ್ಕೆ ಶಾಶ್ವತ ಪರಿಹಾರ ಎಂದಿದ್ದಾರೆ.

ಭೂ ದೃಶ್ಯ ಪ್ರಖ್ಯಾತ ಇಂಜಿನೀಯರರಾದ ಮ್ಯಾಕ ಹಾರ್ಗ ತಮ್ಮ ಡಿಜೈನ ವುಯಿತ್ ಫ್ಲಡ್ ಎಂಬ ಪುಸ್ತಕದಲ್ಲಿ ಭೂಮಿ ರಚನೆ, ನೆರೆಹಾವಳಿ ಅವಲೋಕಿಸಿ ಕಟ್ಟಡಗಳನ್ನು ನಿರ್ಮಿಸಬೇಕೆಂದಿದ್ದಾರೆ.

ರಾಮಸ್ವಾಮಿ ಅಯ್ಯರ (೨೦೦೮)[೧೭] ಅವರು ಹಿಮಾಯಲದಲ್ಲಿ ಒಡ್ಡುಗಳನ್ನು ಕಟ್ಟುವುದರಿಂದ ನೆರೆಹಾವಳಿ ತಡೆಯಲು ಸಾಧ್ಯವಿಲ್ಲ. ಈ ಪ್ರದೇಶದಲ್ಲಿ ಒಡ್ಡುಗಳನ್ನು, ಅಣೆಕಟ್ಟುಗಳನ್ನು ಕಟ್ಟದೆ ಸಾಂಪ್ರದಾಯಿಕ ರೀತಿಯಲ್ಲಿ ನೆರೆಹಾವಳಿ ನಿಯಂತ್ರಿಸಬೇಕೆಂದಿದ್ದಾರೆ. ಕಳೆದ ದಿನಗಳಲ್ಲಿ ಇಲ್ಲಿ ನಡೆಯುತ್ತಿರುವ ಪ್ರವಾಹ ದುರಂತಗಳಿಂದ ಜೀವ, ವಿತ್ತ ಹಾನಿಗೊಳಗಾಗುವುದಕ್ಕೆ ಮಾನವನೇ ಕಾರಣವೆಂದು ತಿಳಿಸಿ. ಭೂಕಂಪ, ಸುನಾಮಿಗಳಲ್ಲಿ ಕೈಗೊಳ್ಳುವ ಕ್ರಮಗಳಂತೆ ಪ್ರವಾಹ ಸಮಯದಲ್ಲಿಯೂ ತೆಗೆದುಕೊಳ್ಳಬೇಕು. ಪ್ರವಾಹದ ಮುನ್ಸೂಚನೆ, ಪ್ರವಾಹದ ಸಮಯದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವುದು, ಪ್ರವಾಹದ ನಂತರ ಶಾಶ್ವತ ಕ್ರಮಗಳನ್ನು ಕೈಗೊಳ್ಳುವುದರಿಂದ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಬಹುದು ಎಂದಿದ್ದಾರೆ.

ಸಿ. ಪಿ. ಸಿನ್ಹಾ (೨೦೦೮)[೧೮] ಬಿಹಾರ ರಾಜ್ಯದಲ್ಲಿ ಮರುಕಳಿಸುತ್ತಿರುವ ಪ್ರವಾಹದ ಮೇಲ್ವಿಚಾರಣೆಯ ಕುರಿತು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ದೇಶದಲ್ಲಿ ಹೆಚ್ಚು ನೆರೆಹಾವಳಿಗೆ ತುತ್ತಾಗುವ ರಾಜ್ಯ ಬಿಹಾರ. ಇದರ ಭೌಗೋಳಿಕ ಪ್ರದೇಶ ಮತ್ತು ಜನಸಂಖ್ಯೆ ಅನುಕ್ರಮವಾಗಿ ದೇಶದ ಶೇಕಡಾ ೨.೮೫ ಮತ್ತು ಶೇಕಡಾ ೮ ರಷ್ಟಿದ್ದರೆ, ಶೇಕಡಾ ೧೭ ಪ್ರವಾಹಗಳ ಪ್ರದೇಶ, ಶೇಕಡಾ ೨೩ ರಷ್ಟು ನೆರೆಹಾವಳಿಯಿಂದ ನಷ್ಟಗಳು ಇಲ್ಲಿ ಸಂಭವಿಸುತ್ತವೆ. ರಾಜ್ಯದ ನೆರೆಹಾವಳಿ ನಷ್ಟದ ಶೇಕಡಾ ೮೯ ರಷ್ಟು ಪ್ರದೇಶವನ್ನು ಕೋಸಿ ಹೊಂದಿದೆ ಎಂದು ತಿಳಿಸಿದ್ದಾರೆ.

ನೆರೆ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿಲ್ಲ. ಆದರೆ ರಚನಾತ್ಮಕ ಮತ್ತು ರಚನಾಯೇತರ ಕ್ರಮಗಳ ಮುಖಾಂತರ ನೆರೆಹಾವಳಿಯನ್ನು ಅನುಕೂಲವಾಗುವ ರೀತಿಯಲ್ಲಿ ನಿಯಂತ್ರಿಸಬಹುದೆಂದು ಅಭಿಪ್ರಾಯ ಪಡುತ್ತಾರೆ.

ಮನೀಶ ಠಾಕುರ (೨೦೦೯)[೧೯] ಬಿಹಾರದಲ್ಲಿ ನೆರೆಹಾವಳಿ ನಿಯಂತ್ರಣದಲ್ಲಿ ಸ್ಥಳಿಯ ಸಂಘಟನೆಯಾದ ಬರಮುಕ್ತಿ ಅಭಿಯಾನದ ಪಾತ್ರ ಮತ್ತು ನೆರೆ ಪರಿಹಾರ ಕುರಿತು ತಿಳಿಸಿದ್ದಾರೆ.

ಉತ್ತರ ಬಿಹಾರದಲ್ಲಿ ಸಂಭವಿಸುತ್ತಿರುವ ನೆರೆಹಾವಳಿ ಮಾಹಿತಿಯನ್ನು ರಾಜಕಾರಣಿಗಳಿಗೆ ಅಧಿಕಾರಿಗಳಿಗೆ, ಇಂಜನೀಯರುಗಳಿಗೆ, ಸಂಬಂಧಪಟ್ಟ ನಾಗರಿಕರು ಮತ್ತು ಇನ್ನುಳಿದ ಫಲಾನುಭವಿಗಳಿಗೆ ತಿಳಿಸಲು ೧೯೯೧ ರಲ್ಲಿ "ಬರ ಮುಕ್ತಿ ಅಭಿಯಾನ" ಎಂಬ ಸರಕಾರೇತರ ಸಂಸ್ಥೆ ಹುಟ್ಟಿಕೊಂಡಿತು. ಪ್ರವಾಹಗಳಿಗೆ ತಾಂತ್ರಿಕ ಅಂಶಗಳಿಂದ ಪರಿಹಾರ ಕಂಡುಕೊಳ್ಳುವುದನ್ನು ಅಲ್ಲಗಳೆದು ಸಾಂಪ್ರದಾಯಿಕ ಪದ್ಧತಿಗಳ ಮುಖಾಂತರ ಪ್ರವಾಹ ನಿಯಂತ್ರಿಸಬೇಕೆಂದು ಸೂಚಿಸುತ್ತದೆ. ನದಿಗಳನ್ನು ಅಣೆಕಟ್ಟುಗಳು, ತಡೆಗೋಡೆಗಳಿಂದ ಮುಕ್ತಿಗೊಳಿಸಬೇಕೆಂದು ತಿಳಿಸಿ, ಪ್ರವಾಹ ಫಲವತ್ತಾದ ಭೂಮಿಯನ್ನು ನೀರಿನ ಹೊಂಡವನ್ನಾಗಿ ಮಾಡುತ್ತದೆ, ಮಲೇರಿಯಾದಂತಹ ರೋಗಗಳಿಗೆ ಕಾರಣವಾಗುತ್ತದೆ ಎಂದಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯ ಮಾಜಿ ಕಾರ್ಯದರ್ಶಿಯಾದ ರಾಮಸ್ವಾಮಿ ಅಯ್ಯರ ಅವರು ಅಣೆಕಟ್ಟು ಮತ್ತು ತಡೆಗೋಡೆಗಳಿಂದ ಪ್ರವಾಹ ನಿಯಂತ್ರಣ ಸಾಧ್ಯವಿಲ್ಲವೆಂಬುದು ಅನುಭವದಿಂದ ತಿಳಿದಿದೆ ಎಂದಿದ್ದಾರೆ. ಅಣೆಕಟ್ಟುಗಳ ಪ್ರಮುಖ ಉದ್ದೇಶ ನೀರಾವರಿ ಮತ್ತು ವಿದ್ಯುತ್ ತಯಾರಿಕೆ, ಇದರಲ್ಲಿ ಪ್ರವಾಹ ನಿಯಂತ್ರಣದ ಕ್ರಮಗಳು ಗೌಣವಾಗಿರುತ್ತವೆ. ನದಿಗಳ ಹರಿವನ್ನು ತಡೆಯುವದರಿಂದ ಹೂಳು ತುಂಬಿ ಆಣೆಕಟ್ಟಿನ ಹಿಂದಿನ ಜಲಾನಯನ ಪ್ರದೇಶ ಪ್ರವಾಹಕ್ಕೆ ಕಾರಣವಾಗುತ್ತದೆ. ಇವುಗಳಿಂದ ಪ್ರವಾಹ ನಿಯಂತ್ರಣ ಬದಲಾಗಿ ಅನೇಕ ಸಂಕಷ್ಟಗಳು ಹುಟ್ಟಿಕೊಳ್ಳುತ್ತವೆ ಎಂದು ತಿಳಿಸಿದ್ದಾರೆ.

ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಕುರಿತು ಕೆಳಗಿನ ಕೆಲವೊಂದು ಕ್ರಮಗಳನ್ನು ಸೂಚಿಸಿದ್ದಾರೆ.

೦೧) ನಿರಂತರ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾರ್ಯಯೋಜನೆ (ಮಾಸ್ಟರ್ ಪ್ಲ್ಯಾನ್) ಜಾರಿಗೆ ತರಬೇಕು.

೦೨) ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

೦೩) ಅವಶ್ಯಕತೆ ಇದ್ದಲ್ಲಿ ಒಡ್ಡುಗಳನ್ನು ನಿರ್ಮಿಸಬೇಕು ಮತ್ತು ಪ್ರವಾಹದಿಂದ ಹಾನಿ ಕಡಿಮೆ ಮಾಡಲು ಪ್ರವಾಹ ಮುನ್ಸೂಚನಾ ಕ್ರಮಗಳನ್ನು ಅಳವಡಿಸಬೇಕು.

೦೪) ಕಟ್ಟಡ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣ ವಿಧಿಸಬೇಕು.

೦೫) ಪ್ರವಾಹ ನಿಯಂತ್ರಣ ಕ್ರಮಗಳನ್ನು ಅಧುನಿಕರಣಗೊಳಿಸಬೇಕು.

ಸ್ಥಳಾಂತರ ಮತ್ತು ಪುನರ್ವಸತಿ :

ಸ್ವಾತಂತ್ರ್ಯಾನಂತರ ಅಭಿವೃದ್ಧಿ ಕಾರ್ಯಗಳು ತೀವ್ರಗತಿಯಲ್ಲಿ ಪ್ರಾರಂಭವಾದವು. ಅಭಿವೃದ್ಧಿ ಯೋಜನೆಗಳ ಕಾರಣ ದೇಶದಲ್ಲಿ ಸ್ಥಳಾಂತರ ಮತ್ತು ಪುನರ್ವಸತಿ ಸಾಮಾನ್ಯವಾಗಿವೆ. ಪುನರ್ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಸರಿಯಾದ ಕಾನೂನುಗಳ ಕೊರತೆ ಕಾರಣ ಯೋಜನೆಗಳಿಂದ ಬಾಧಿತ ಜನರಿಗೆ ಯೋಗ್ಯ ಪುನರ್ವಸತಿ ದೊರಕಿಲ್ಲ. ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ದೇಶದಲ್ಲಾದ ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳನ್ನು ಕುರಿತು ಅನೇಕ ತಜ್ಞರು ಅಧ್ಯಯನ ಮಾಡಿದ್ದಾರೆ. ಸ್ಥಳಾಂತರ ಮತ್ತು ಪುನರ್ವಸತಿ ಕುರಿತು ತಜ್ಞರ ಅಧ್ಯಯನಗಳನ್ನು ಅವಲೋಕಿಸಿದರೆ ಸಂತ್ರಸ್ತರ ಸಮಸ್ಯೆಗಳನ್ನು ತಿಳಿದುಕೊಳ್ಳಬಹುದು. ಅಲ್ಲದೆ ಮಾದರಿ ಪುನರ್ವಸತಿ ಯೋಜನೆಗಳು ಹೇಗಿರಬೇಕೆಂಬುದು ತಿಳಿಯುತ್ತದೆ. ಕಾರಣ ಈ ವಿಷಯದ ಕುರಿತಾದ ಕೆಲವೊಂದು ಲೇಖನಗಳನ್ನು ಅವಲೋಕಿಸಲಾಗಿದೆ.

ಎಸ್. ಪರಶುರಾಮ (೧೯೯೭)[೨೦] ಲೇಖಕರು ದೇಶದಲ್ಲಿಯ ಸ್ಥಳಾಂತರ ಮತ್ತು ಪುನರ್ ವಸತಿ ಕಾರ್ಯಗಳ ಕುರಿತು ಚರ್ಚಿಸಿದ್ದಾರೆ. ನರ್ಮದಾ ಕೊಳ್ಳದ ಅನುಭವದಿಂದ ದೇಶದಲ್ಲಿಯ ಪುನರ್ ವಸತಿ ಯೋಜನೆ ಅಮೂಲಾಗ್ರ ಬದಲಾವಣೆ ಬಯಸುತ್ತದೆ. ಸರಕಾರಗಳು ಪುನರ್ ವಸತಿ ಕಾರ್ಯವನ್ನು ಒಳ್ಳೆಯ ರೀತಿಯಿಂದ ನಿಭಾಯಿಸಬೇಕು. ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಯೋಜನೆಗಳು ಕೆಳಗಿನ ಕೆಲವೊಂದು ಪ್ರಮುಖ ಅಂಶಗಳನ್ನು ಒಳಗೊಂಡಿರಬೇಕೆಂದು ತಿಳಿಸುತ್ತಾರೆ. ಜೀವನೋಪಾಯಕ್ಕೆ ಸಹಾಯಕವಾಗಲು ನೀರಾವರಿಗೆ ಒಳಪಡುವ ಭೂಮಿ ಒದಗಿಸಬೇಕು., ಸ್ಥಳಾಂತರ ಸಮಯದಲ್ಲಿ ಸಹಾಯ ಒದಗಿಸಬೇಕು, ಉದ್ಯೋಗ ಅವಕಾಶಗಳನ್ನು ಸೃಷ್ಟಿಸಬೇಕು, ಸ್ವಯಂಉದ್ಯೋಗ ಯೋಜನೆಗಳನ್ನು ಜಾರಿಗೊಳಿಸಬೇಕು. ಸ್ವಉದ್ಯೋಗ ನಿರ್ವಹಿಸಲು ಸಾಲ ರೂಪದ ಹಣಕಾಸಿನ ಸೌಲಭ್ಯ ಒದಗಿಸಬೇಕು. ಬಡತನ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕು, ಪುನರ್ವಸತಿ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕು, ಉದ್ಯೋಗ ಖಾತ್ರಿ ಯೋಜನೆ, ಜವಾಹರ ರೋಜಗಾರ ಯೋಜನೆಗಳನ್ನು ಜಾರಿಗೊಳಿಸಬೇಕು, ಸಮಾಜದ ಎಲ್ಲ ರಂಗಗಳ ಜನರಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ಜಾರಿಗೊಳಿಸಬೇಕು. ಹರಿಜನರು, ಆದಿವಾಸಿಗಳು ಮತ್ತು ಸ್ತ್ರೀಪ್ರಧಾನ ಕುಟುಂಬಗಳಿಗೆ ಸರಕಾರದ ಯೋಜನೆಗಳು ತಲುಪಬೇಕೆಂದು ತಿಳಿಸಿ ಸರಕಾರೇತರ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬೇಕು ಎಂದಿದ್ದಾರೆ.

ಮೇಧಾ ಪಾಟ್ಕರ (೧೯೯೮)[೨೧] ಯೋಜನೆಗಳಿಂದ ಪ್ರಭಾವಿತರಾಗುವ ಜನರಿಗೆ ಅನುಕೂಲವಾಗುವಂತಹ ಧೋರಣೆಗಳು ಅವಶ್ಯಕವಾಗಿವೆ, ಸ್ಥಳಾಂತರ ಮತ್ತು ಅಭಿವೃದ್ಧಿ ಜೊತೆಯಾಗಬೇಕು ಎಂಬುದನ್ನು ಮೇಧಾ ಪಾಟ್ಕರ ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಸ್ಥಳಾಂತರ ಏಕೆ? ಯಾರಿಗಾಗಿ? ಸಾಮಾಜಿಕ ಹಿತಾಸಕ್ತಿ ನಿರ್ಧರಿಸುವವರು ಯಾರು? ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಪುನರ್ ವಸತಿ ಯೋಜನೆ, ಜನರ ಸಮ್ಮತಿಯೊಂದಿಗೆ ಯೋಜನೆ ಕೈಗೆತ್ತಿಗೊಳ್ಳಬೇಕು, ಯೋಗ್ಯ ಪುನರ್ ವಸತಿ ಒದಗಿಸುವುದು ಅಭಿವೃದ್ಧಿ ಯೋಜನೆಯ ಪ್ರಮುಖ ಅಂಶಗಳಾಗಿರಬೇಕೆಂಬುದು ಅವರ ಅಭಿಮತ.

ಈ ಸ್ಥಳಾಂತರಗಳನ್ನು ತಡೆಗಟ್ಟುವದು ಇಲ್ಲವೆ ಕಡಿಮೆ ಮಾಡುವುದು, ಅವಶ್ಯಕ ಯೋಜನೆ ಬಗೆಗೆ ಮಾಹಿತಿ ಪಡೆಯುವುದು, ಅದನ್ನು ಪ್ರಶ್ನಿಸುವುದು ಗ್ರಾಮ ಜನರ ಹಕ್ಕಾಗಿದೆ. ಅವರ ವಿಚಾರಗಳ ಮೇರೆಗೆ ಪುನರ್ ವಸತಿ ಯೋಜನೆಗಳು ಸಿದ್ಧಗೊಳ್ಳಬೇಕು ಎಂದಿದ್ದಾರೆ.

ಕಾನೂನು ವ್ಯವಸ್ಥೆಯಲ್ಲಿಯೂ ಬದಲಾವಣೆ ಅವಶ್ಯಕ, ಕಾನೂನಗಳು ಬಲವಂತರ ಕೈಯಲ್ಲಿವೆ, ಆದಿವಾಸಿಗಳು, ದಲಿತರು, ಹಿಂದುಳಿದ ಜನರು, ರೈತರಿಗೆ ಅನುಕೂಲವಾಗುವ ಬದಲಾವಣೆ ಬೇಕಿದೆ. ಯೋಜನೆಯಿಂದಾಗುವ ಲಾಭಾಂಶಗಳು ಯೋಜನೆಗಳಿಂದ ಪ್ರಭಾವಿತ ಜನರಿಗೆ ದೊರಕಬೇಕು. ಬಹಳ ಜನರಿಗೆ ತೊಂದರೆಕೊಡುವ ಯೋಜನೆಗಳ ಬದಲಾಗಿ ಜನರಿಗೆ ಹಿತಕರವಾಗುವ ಯೋಜನೆಗಳ ಅವಶ್ಯಕತೆಯಿದೆ ಎಂಬುದು ಅವರ ಅಭಿಪ್ರಾಯ.

ಕೆರ್ನಿಯಾ ಮೈಕೆಲ್ (೧೯೯೮)[೨೨] ಅವರು ಜಗತ್ತಿನ ವಿವಿಧ ಸ್ಥಳಾಂತರಗಳನ್ನು ಅಧ್ಯಯನ ಮಾಡಿ ಅವುಗಳಿಂದಾದ ದುಷ್ಪರಿಣಾಮಗಳನ್ನು ತಿಳಿಸಿದ್ದಾರೆ. ಭೂಮಿ, ಉದ್ಯೋಗ, ಮನೆಗಳನ್ನು ಕಳೆದುಕೊಳ್ಳುವುದು, ಶೋಷಣೆ, ಅನಾರೋಗ್ಯ ಮತ್ತು ಸಾವು, ಆಹಾರ, ಅಭದ್ರತೆ, ಸಾರ್ವಜನಿಕ ಉಪಯೋಗಕ್ಕಿರುವ ಆಸ್ತಿಗಳಿಲ್ಲದಿರುವುದು, ಸಾಮಾಜಿಕ ಅಸ್ಪೃಶ್ಯತೆಯಂತ ಸಮಸ್ಯೆಗಳು ಉದ್ಭವಿಸುವುದೆಂದು ತಿಳಿಸಿದ್ದಾರೆ.

ಎಮ್ ಭಾರತಿ ಮತ್ತು ಆರ್. ಎಸ್. ರಾವ್ (೧೯೯೯)[೨೩] ಜನರನ್ನು ಸ್ಥಳಾಂತರಗೊಳಿಸುವ ಅಭಿವೃದ್ಧಿ ಕಾರ್ಯಗಳಲ್ಲಿ ಪುನರ್ ವಸತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಸ್ಥಳಾಂತರಗೊಳಿಸುವ ಅಬಿವೃದ್ಧಿ ಕಾರ್ಯಗಳನ್ನು ನಿಯಂತ್ರಣದಲ್ಲಿಡಬೇಕು ಎನ್ನುವುದು ಈ ಲೇಖನದ ಪ್ರಮುಖ ಆಶಯ.

ಈಗಿನ ಅಭಿವೃದ್ಧಿ ಕಾರ್ಯಗಳನ್ನು ಅವಲೋಕಿಸಿದಾಗ ಅವುಗಳಿಂದ ಉಳ್ಳವನಿಗೆ ಅನುಕೂಲವಾಗುತ್ತದೆ. ಅಭಿವೃದ್ಧಿ ಕಾರ್ಯಗಳ ವೆಚ್ಚವನ್ನು ಇಡೀ ಸಮಾಜ ಭರಿಸುತ್ತದೆ. ಜನರನ್ನು ಸ್ಥಳಾಂತರಗೊಳಿಸಿ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುವುದು ಹುಚ್ಚುತನದ ಪರಮಾವಧಿ ಎಂದಿದ್ದಾರೆ.

ಕ್ರಿಸ್ ಡೆ ವ್ಹೆಟ್ (೨೦೦೧)[೨೪] ಆರ್ಥಿಕ ಅಭಿವೃದ್ಧಿ ಯೋಜನೆಗಳಿಂದ ಸಾಕಷ್ಟು ಜನಸಂಖ್ಯೆ ಸ್ಥಳಾಂತರಗೊಳ್ಳುತ್ತದೆ ಇದರಿಂದೆಲ್ಲರಿಗೂ ಒಳ್ಳೆಯದಾಗುವುದಿಲ್ಲ ಎಂಬ ವಿಚಾರದ ಕುರಿತು ಈ ಲೇಖನದಲ್ಲಿ ತಿಳಿಸಿದ್ದಾರೆ.

ಅಣೆಕಟ್ಟುಗಳು, ನೀರಾವರಿ ಯೋಜನೆಗಳು, ನಗರ ಸುಧಾರಣೆ, ರಸ್ತೆ, ನೀರು ಸರಬರಾಜುದಂತಹ ಅಭಿವೃದ್ಧಿ ಕಾರ್ಯಗಳಿಂದ ಸಾಕಷ್ಟು ಜನರಿಗೆ ಸಹಾಯಕವಾಗುತ್ತದೆ. ಇಂತಹುಗಳಿಂದ ಕೆಲವೊಂದು ಜನರು ತೊಂದರೆಗೆ ಒಳಗಾಗುತ್ತಾರೆ. ಸ್ಥಳಾಂತರಗಳಿಂದ ಸಾಮಾಜಿಕ, ಆರ್ಥಿಕ, ಮಾನಸಿಕ ತೊಂದರೆ ಅನುಭವಿಸುತ್ತಾರೆ. ಅನೈಚ್ಛಿಕ ಸ್ಥಳಾಂತರಗಳಿಂದ ಸಮಸ್ಯೆಗಳ ತೀವ್ರತೆ ಮತ್ತಷ್ಟು ಹೆಚ್ಚುತ್ತದೆ. ಚೀನಾ ೧೯೭೦ ರ ವರೆಗಿನ ಯೋಜನೆಗಳಿಂದ ಇದೇ ತೆರನಾದ ಸಮಸ್ಯೆಗಳನ್ನು ಎದುರಿಸಿತು ನಂತರ ಸರಿಯಾದ ಕಾರ್ಯ ಯೋಜನೆಗಳಿಂದ ಸ್ಥಳಾಂತರಗೊಂಡ ಜನರು ಒಳ್ಳೆಯ ಜೀವನ ಸಾಗಿಸಲು ಸಹಾಯಕವಾಯಿತು ಎಂದಿದ್ದಾರೆ

ಯೋಜನೆಗಳು ಯಶಸ್ವಿಯಾಗಬೇಕಾದರೆ ಕೆಲವೊಂದು ರಾಜಕೀಯ, ಸಾಮಾನ್ಯ, ವಿಶೇಷ ಸಲಹೆಗಳನ್ನು ನೀಡಿದ್ದಾರೆ. ಇವುಗಳನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳುವದರಿಂದ ಯೋಜನೆಗಳು ಯಶಸ್ವಿಯಾಗುತ್ತವೆಂದು ತಿಳಿಸಿದ್ದಾರೆ.

ಸಂಜಯ ಸಾಂಘವಿ (೨೦೦೨)[೨೫] ಗುಜರಾತದ ನರ್ಮದಾ ನದಿಗೆ ಕಟ್ಟಲಾಗಿರುವ ಅಣೆಕಟ್ಟೆಯಿಂದ ಸ್ಥಳಾಂತರಗೊಂಡ ಜನರ ಪುನರ್ವಸತಿ ಲೋಪಗಳ ಕುರಿತು ಅಧ್ಯಯನ ಮಾಡಿದ್ದಾರೆ.

ನರ್ಮದಾ ಅಣೆಕಟ್ಟೆಯಿಂದ ಗುಜರಾತ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳಿಗೆ ಇದರ ಅನುಕೂಲವಾಗುತ್ತದೆ. ಅಣೆಕಟ್ಟೆಯ ಪೂರ್ವಯೋಜನೆ ಪ್ರಕಾರ ೮೦.೩ ಮೀಟರ ಎತ್ತರ ನಿರ್ಮಿಸಿ ಮೂರು ರಾಜ್ಯಗಳು ಪುನರ್ ವಸತಿ ಒದಗಿಸಬೇಕಾಗಿತ್ತು. ೧೯೯೪ ರ ವರೆಗೆ ಈ ಕಾರ್ಯ ಪೂರ್ಣಗೊಂಡಿರಲಿಲ್ಲ. ಮೂರು ರಾಜ್ಯಗಳ ಒತ್ತಾಯಕ್ಕೆ ಅಕ್ಟೋಬರ ೨೦೦೦ ರಲ್ಲಿ ಉಚ್ಚ ನ್ಯಾಯಾಲಯ ಆಣೆಕಟ್ಟು ಎತ್ತರವನ್ನು ೯೦ ಮೀಟರ ಎತ್ತರಿಸಲು ಆದೇಶಿಸಿತು. ಗುಜರಾತ ಸರಕಾರ ಅಣೆಕಟ್ಟು ಎತ್ತರವನ್ನು ೯೫ ರಿಂದ ೧೦೦ ಮೀಟರ ಎತ್ತರಿಸಲು ಒತ್ತಾಯಿಸಿತು. ಇದರಿಂದ ಮತ್ತೆ ೧೦,೦೦೦ ಕುಟುಂಬಗಳಿಗೆ ಪುನರ್ವಸತಿ ಒದಗಿಸಬೇಕು. ಮಧ್ಯಪ್ರದೇಶ ಸರಕಾರ ೩೫೦೦೦ ನಿರಾಶ್ರಿತ ಕುಟುಂಬಗಳಿಗೆ ಭೂಮಿ ಆಧಾರಿತ ಪುನರ್ವಸತಿ

[illegible]

[illegible]

[illegible]

[illegible]

ಒದಗಿಸಬೇಕಾಗಿತ್ತು. ಸಾಧ್ಯವಾಗದೆ ಹಣಕಾಸಿನ ಸ್ವರೂಪದ ಪರಿಹಾರ ನೀಡಿ ಸ್ಥಳಾಂತರಿಸಲು ಚಿಂತಿಸುತ್ತಿದೆ. ರಾಜ್ಯ ಸರಕಾರಗಳ ಹಣಕಾಸಿನ ಸ್ಥಿತಿ ಸರಿಯಾಗಿ ಇಲ್ಲದಿದ್ದರೂ ಇಂತಹ ಯೋಜನೆಗಳನ್ನು ಹಾಕಿಕೊಂಡು ಆದಿವಾಸಿ, ಗ್ರಾಮೀಣ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತವೆ ಎಂದು ತಿಳಿಸಿದ್ದಾರೆ.

ಆರ್.ಎನ್.ಶರ್ಮಾ (೨೦೦೩)[೨೬] ವಿವಿಧ ಯೋಜನೆಗಳಿಂದ ಸ್ಥಳಾಂತರಗೊಂಡ ಜನರ ಪುನರ್ ವಸತಿ, ಪುನರ್ ನಿರ್ಮಾಣ ಮತ್ತು ಹಣ ವಿನಿಯೋಗಿಸುವ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಬಗೆಗೆ ಚರ್ಚಿಸಿದ್ದಾರೆ.

ಸರಕಾರ ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಭೂಮಿಯನ್ನು ಪಶಪಡಿಸಿಕೊಳ್ಳುತ್ತದೆ. ಮಿಡ್ ಡೇ ಮುಂಬಯಿ ಸೆಪ್ಟೆಂಬರ ೧೧, ೧೯೯೬ ರ ಪ್ರಕಾರ ಕರ್ನಾಟಕ ಸರಕಾರ ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲಿ ೧೫೦೦ ಎಕರೆ ಕೊಂಕಣ ರೇಲ್ವೆಗೆ, ೧೯೦೦ ಎಕರೆ ಮಂಗಳೂರು ಪೆಟ್ರೋಲ್ ಶುದ್ಧೀಕರಣ ಘಟಕಕ್ಕೆ, ೩೦೦ ಎಕರೆ ಬೃಹತ್ ಕೈಗಾರಿಕೆಗಳಿಗೆ, ೨೦೦ ಎಕರೆ ನಾಗಾರ್ಜುನ ಕಬ್ಬಿಣ ಅದಿರು ಘಟಕಕ್ಕೆ, ೧೨೦೦ ಎಕರೆ ಕೋಜೆಂಟ್ರಿಕ್ಸ್, ೧೩೫೦ ಎಕರೆ ಉಷಾ ಐಸ್ ಪಾಟ ಘಟಕ, ೫೫೦ ಎಕರೆ ಗ್ರಾಜಿಯ ಕೈಗಾರಿಕೆಗಳಿಗೆ ಭೂಮಿ ವಶಪಡಿಸಿಕೊಂಡಿದೆ ಎಂದು ಉಲ್ಲೇಖಿಸಿರುವರು.

ಮಹಾರಾಷ್ಟ್ರ ನೀರಾವರಿ – II ಮತ್ತು ಕರ್ನಾಟಕ ಯು.ಕೆ.ಪಿ ಕಾರಣ ೪,೫೦,೦೦೦ ಜನರು ಸ್ಥಳಾಂತರಗೊಂಡಿದ್ದಾರೆ. (ಪರಶುರಾಮ ೧೯೯೯ : ೫೧) ಸರದಾರ ಸರೋವರದಿಂದ ೨೯೭ ಗ್ರಾಮಗಳು ಎರಡು ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ (ಅದೇ-೫೫) ದೇಶದಲ್ಲಿ ೧೯೫೧ ರಿಂದ ೧೯೯೦ರ ವರೆಗೆ ೧೪.೫ ಮಿಲಿಯನ್ ಜನಸಂಖ್ಯೆ ಮೇಲೆ ನೇರ ಪರಿಣಾಮ ಬೀರಿದೆ. ಇದರಲ್ಲಿ ಶೇಕಡಾ ೨೫ ರಷ್ಟು ಜನರಿಗೆ ಮಾತ್ರ ಪುನರ್‌ವಸತಿ ಕಲ್ಪಿಸಲಾಗಿದೆ. (ಫರ್ನಾಂಡಿಸ್ ಮತ್ತು ಥುಕರಲ ೧೯೮೯:೮೦) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ೨೯ ನೇ ವರದಿ ಪ್ರಕಾರ ೧೯೯೦ ರ ವರೆಗೆ ದೇಶದ ಜನಸಂಖ್ಯೆಯ ಶೇಕಡಾ ೭.೫ ರಷ್ಟಿರುವ ಪ.ಜಾತಿ ಮತ್ತು ಪ. ಪಂಗಡ ಜನರು ಶೇಕಡಾ ೪೦ ರಷ್ಟು ಸ್ಥಳಾಂತರಗೊಂಡಿದ್ದಾರೆ ಎಂದು ತಿಳಿಸಿದ್ದಾರೆ

ಸಂವಿಧಾನ, ಸರಕಾರದ ಕಾಯ್ದೆ ಕಾನೂನುಗಳು ಹಿಂದುಳಿದವರ ಪರವಾಗಿದ್ದರೂ ಅಧಿಕಾರದ ದುರುಪಯೋಗದ ಕಾರಣ ಇವರಿಗೆ ನ್ಯಾಯ ಸಿಗುತ್ತಿಲ್ಲ. ಸಿಂಗುರ್ಲಿಯಲ್ಲಿ ಗೋವಿಂದ ಸಾಗರ ಅಣೆಕಟ್ಟೆಯಿಂದ ೪೦ ಗ್ರಾಮಗಳು ಸ್ಥಳಾಂತರಗೊಂಡವು ನಂತರ ಸುಪರ್ ಥರ್ಮಲ್ ಮತ್ತು ಗಣಿ ಉದ್ದಿಮೆಗಳ ಕಾರಣ ಮರು ಸ್ಥಳಾಂತರಗೊಂಡವು. ಆಗ

ರಾಜಕಾರಣಿಗಳು ಸಿಂಗುರ್ಲಿಯನ್ನು ಪ್ರತಿ ಕಾಶ್ಮೀರನ್ನಾಗಿ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ಆದರೆ ಅಲ್ಲಿಯ ಜನ ನಂತರ ಭ್ರಮ ನಿರಸಗೊಂಡರು. ಇದು ದೇಶದ ಸ್ಥಳಾಂತರಗೊಂಡ ಜನರ ಪರಿಸ್ಥಿತಿ (ಕೋಠಾರಿ) ಎಂದಿದ್ದಾರೆ. ಇಂದಿನ ಅಭಿವೃದ್ಧಿ ಯೋಜನೆಗಳು ಬಹಳಷ್ಟು ಜನರಗೆ ಬೇಡವಾಗಿವೆ. ಏಕೆಂದರೆ ಇವು ಜನ ವಿರೋಧವಾಗಿವೆ. ಕಂದಾಯ ಇಲಾಖೆಯಲ್ಲಿಯ ಲಂಚಗುಳಿತನ ಸ್ಥಳಾಂತರಗೊಂಡ ಜನರ ದುಃಖಕ್ಕೆ ಮತ್ತೊಂದು ಕಾರಣ. ಕಂದಾಯ ಇಲಾಖೆಯ ಆಸ್ತಿಗಳ ಮೌಲ್ಯನಿರ್ಣಯ ವೈಜ್ಞಾನಿಕವಾಗಿರುವುದಿಲ್ಲ. ಉದ್ದೇಶ ಪೂರ್ವಕವಾಗಿಯೇ ಆಸ್ತಿಗಳ ಮೌಲ್ಯಮಾಪನ ಮಾಡದೇ ಸಮಸ್ಯೆ ಸೃಷ್ಟಿಸುತ್ತಾರೆ. ಜನರಲ್ಲಿ ಮೌಲ್ಯಮಾಪನದ ಬಗೆಗೆ ಊಹಾಪೋಹ ಎಬ್ಬಿಸುತ್ತಾರೆ. ಮುಳುಗಡೆ ನಂತರ ಜನರಲ್ಲಿ ಕೀಳರಿಮೆ ಹುಟ್ಟಿ ಸ್ವಾಭಿಮಾನ ಕಳೆದುಕೊಂಡು ಸರಕಾರದ ಕಲ್ಯಾಣ ಕಾರ್ಯಕ್ರಮಗಳ ಮೇಲೆ ಅವಲಂಭಿತರಾಗಿರುತ್ತಾರೆ. ಮಹಿಳೆಯರು ವೃದ್ಧರು, ಪ.ಜಾತಿ, ಪ.ಪಂಗಡ, ಸಾಮನ್ಯ ಜನರು ಮುಳುಗಡೆಯಿಂದ ಹೆಚ್ಚು ಪ್ರಭಾವಿತರಾಗುತ್ತಾರೆ. ಪುನರ್ವಸತಿ ಯೋಜನೆಯಲ್ಲಿ ಇವರಿಗೆ ಪ್ರಾಶಸ್ತ್ಯ ಕೊಡಬೇಕು. ಶಾಶ್ವತ ಉದ್ಯೋಗ ಅವಕಾಶಗಳು ಪುನರ್ವಸತಿ ಯೋಜನೆಯ ಪ್ರಮುಖ ಅಂಶಗಳಾಗಬೇಕು. ಬೃಹತ್ ಪ್ರಮಾಣದ ಯೋಜನೆಗಳಿಗೆ ಹಣಕಾಸು ಸಹಾಯ ಒದಗಿಸುವ ಜಾಗತಿಕ ಬ್ಯಾಂಕದಂತಹ ಸಂಸ್ಥೆಗಳು ಪುನರ್ವಸತಿ ಯೋಜನೆಗಳ ಮೇಲೆ ನಿಗಾ ಇಡಬೇಕು ಎಂದಿದ್ದಾರೆ.

ಸೆರೆನಾ (೧೯೯೬:೧೫೧೫-೨೩) ಮತ್ತು ಕೋಠಾರಿ (೧೯೯೩) ಅವರು ಅಭಿವೃದ್ಧಿ ಯೋಜನೆಗಳಲ್ಲಿ ಸಮಾಜ ವಿಜ್ಞಾನಿಗಳು ಪ್ರಮುಖ ಪಾತ್ರ ವಹಿಸಬೇಕೆಂದು ತಿಳಿಸಿದ್ದಾರೆ. ಯೋಜನೆಗಳ ಅವಶ್ಯಕತೆ, ಉದ್ದೇಶ, ಜಾರಿ, ಸಮಸ್ಯೆಗಳು ಮುಂತಾದವುಗಳ ಕುರಿತು ಸರಕಾರ, ಜನರಿಗೆ ಮತ್ತು ಸಂಘ ಸಂಸ್ಥೆಗಳಿಗೆ ನೈಜ ಚಿತ್ರಣದ ಮಾಹಿತಿ ಒದಗಿಸಬೇಕೆಂದು ತಿಳಿಸಿದ್ದಾರೆ.

ಅನುಕಪೂರ(೨೦೦೫)[೨೭] ವಿಪತ್ತುಗಳ ಬಗೆಗೆ ನಾವು ಹೆಚ್ಚಿನ ಗಮನಕೊಟ್ಟಿಲ್ಲ ಎಂಬುದರ ಬಗೆಗೆ ಚರ್ಚಿಸಿದ್ದಾರೆ.

ಜಗತ್ತಿನ ವಿಪತ್ತುಗಳ ಇತಿಹಾಸದಲ್ಲಿ ದೇಶ ೧೦ ನೇ ಸ್ಥಾನವನ್ನು ಪಡೆಯುತ್ತದೆ. ಆದರೆ ಅದರ ಕಡೆಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಯೋಜನಾ ಆಯೋಗ ಇದನ್ನು ಯೋಜನೇತರ ವೆಚ್ಚವೆಂದು ಪರಿಗಣಿಸಿದೆ, ಹಣಕಾಸು ಆಯೋಗ ವಿಪತ್ತುಗಳ ವೆಚ್ಚ ಅಂದಾಜಿಸುವ ಪದ್ಧತಿ ಸರಿಯಾಗಿಲ್ಲ, ರಾಜ್ಯಗಳು ಬೇಡುವ ಹಣಕ್ಕೂ ಕೇಂದ್ರ ಬಿಡುಗಡೆ ಮಾಡುವ ಹಣಕ್ಕೂ ಸಾಕಷ್ಟು ವ್ಯತ್ಯಾಸ ಕಾಣುತ್ತದೆ, ವಿಪತ್ತುಗಳ ಮಾಹಿತಿ ಕೊರತೆ, ದೇಶದಲ್ಲಿ ೧೦೪೫ ಕಾನೂನುಗಳಿವೆ. ಆದರೆ ವಿಪತ್ತುಗಳಿಗೆ ಸಂಬಂಧಿಸಿದ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವ ಏಕರೂಪದ

ಕಾನೂನುಗಳಿಲ್ಲ, ಸಮೂಹ ಮಾಧ್ಯಮಗಳು, ಚಲನ ಚಿತ್ರ ಮಂಡಳಿಗಳು ಇದರ ಕಡೆಗೆ ಗಮನಕೊಡುವುದಿಲ್ಲ, ವಿಶ್ವವಿದ್ಯಾಲಯಗಳಲ್ಲಿ ವಿಪತ್ತುಗಳಿಗೆ ಸಂಬಂಧಿಸಿದ ವಿಷಯವಿಲ್ಲ, ಸರಕಾರದಲ್ಲಿ ವಿಪತ್ತು ಮಂತ್ರಿಗಳಿಲ್ಲ ಇವುಗಳನ್ನೆಲ್ಲ ಅವಲೋಕಿಸಿದಾಗ ವಿಪತ್ತುಗಳಿಗೆ ಹೆಚ್ಚಿನ ಗಮನ ಕೊಟ್ಟಂತೆ ಕಾಣುವುದಿಲ್ಲ ಆದರೆ ಇತ್ತೀಚಿನ ದಿನಗಳಲ್ಲಿ ಇವಲ್ಲವುಗಳಲ್ಲಿ ಬದಲಾವಣೆಯಾಗುತ್ತಿದೆ ಎಂದಿದ್ದಾರೆ.

ಫರ್ನಾಂಡಿಸ್ ವಾಲ್ಟರ (೨೦೦೫)[೨೮] ಪುನರ್ ವಸತಿ ಹಕ್ಕು ಎಂದು ಪರಿಗಣಿಸುವ ಕಾನೂನಿನ ಕೊರತೆ ಕುರಿತು ಚರ್ಚಿಸಿದ್ದಾರೆ. ೨೦೦೩ ರ ವರೆಗೆ ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ ರಾಜ್ಯಗಳು ಮಾತ್ರ ನೀರಾವರಿ ಯೋಜನೆಗಳಿಂದಾಗುವ ಸ್ಥಳಾಂತರಗಳಿಗೆ ಪುನರ್ವಸತಿ ಒದಗಿಸುವ ಕಾನೂನುಗಳನ್ನು ಹೊಂದಿವೆ. ಮಹಾರಾಷ್ಟ್ರ ಸರಕಾರ ರೈತರ ಒತ್ತಾಯಕ್ಕೆ ೧೯೭೬ ರಲ್ಲಿ ಕಾನೂನು ಜಾರಿಗೆ ತಂದರೆ ಉಳಿದ ರಾಜ್ಯಗಳಲ್ಲಿ ಜಾಗತಿಕ ಬ್ಯಾಂಕಿನ ಒತ್ತಾಯದ ಕಾರಣ ಕಾನೂನು ಜಾರಿಗೆ ತಂದಿವೆ. ಮಧ್ಯಪ್ರದೇಶ, ರಾಜಸ್ತಾನ, ಒರಿಸ್ಸಾ ಸರಕಾರಗಳು ೧೯೯೪ ರಿಂದ ೧೯೯೮ರ ವರೆಗೆ ರಾಷ್ಟ್ರೀಯ ಉಷ್ಣ ಸ್ಥಾವರ ಘಟಕ, ೧೯೯೩ ರಲ್ಲಿ ಭಾರತದ ಕಲ್ಲಿದ್ದಲು ಘಟಕ, ೧೯೯೪ ರಲ್ಲಿ ಪುನರ್ವಸತಿ ಯೋಜನೆಗಳನ್ನು ಪ್ರಚಾರಗೊಳಿಸಿದ್ದವು ಆದರೆ ದೇಶದಲ್ಲಿ ರಾಷ್ಟ್ರೀಯ ಯೋಜನೆ ಕೊರತೆಯಿದೆ ಎಂದಿದ್ದಾರೆ.

೧೮೯೪ರ ಭೂ ಸ್ವಾಧೀನ ಕಾಯಿದೆಯನ್ನು ೧೫೦೦ ಕ್ಕೂ ಹೆಚ್ಚು ಸಾಮಾಜಿಕ ಕಾರ್ಯಕರ್ತರ ಸಂಘಟನೆಗಳು, ಲಕ್ಷಕ್ಕೂ ಹೆಚ್ಚು ಯೋಜನೆಗೆ ಒಳಪಡುವ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ ೧೯೯೮ ರಲ್ಲಿ ಸ್ಥಳಾಂತರ ಮಿತಗೊಳಿಸಬೇಕು, ಯೋಜನೆಗೆ ಒಳಪಡುವ ಜನರ ಜೀವನೋಪಾಯಕ್ಕೆ ಮಹತ್ವ ನೀಡಬೇಕು. ಸಾರ್ವಜನಿಕ ಉದ್ದೇಶವನ್ನು ವ್ಯಾಖ್ಯಾನಿಸಬೇಕು, ಯೋಜನೆ ನಿರ್ಮಾಣದಲ್ಲಿ ಸ್ಥಳೀಯ ಜನರ ಸಹಭಾಗಿತ್ವ, ಗ್ರಾಮೀಣ ಮತ್ತು ಆದಿವಾಸಿ ಸಮುದಾಯಗಳಿಗೆ ಗಮನ, ಖರ್ಚು ಮತ್ತು ಲಾಭ ವ್ಯಾಖ್ಯಾನ ಬದಲಾಗಬೇಕು, ಪರಿಹಾರ ಧನ ಪುನರ್ ವಸತಿ ಪ್ರದೇಶಗಳನ್ನು ಆಧರಿಸಬೇಕು. ಯೋಜನೆಯಿಂದ ಪ್ರಭಾವಿತರಾಗುವವರು ಯೋಜನೆಯ ಲಾಭಾಂಶದಲ್ಲಿ ಪಾಲುದಾರರಾಗಿರಬೇಕು. ಯೋಜನೆ ಆದಿವಾಸಿಗಳಿಗೆ, ದಲಿತ ಜನಾಂಗಕ್ಕೆ ಸಾಮಾಜಿಕ ನ್ಯಾಯವೊದಗಿಸಬೇಕು ಮತ್ತು ಲಿಂಗಾಧರಿಸಿ ನ್ಯಾಯಯುತವಾಗಿರಬೇಕು. ಪುನರ್ ವಸತಿ ಹಕ್ಕಾಗಬೇಕೆಂಬ ಒಡಂಬಡಿಕೆ ನೀಡಿತು. ಈ ಅಂಶವನ್ನು ಪರಿಗಣಿಸಿ ೨೦೦೩ ರಲ್ಲಿ ರಾಷ್ಟ್ರೀಯ ಕಾಯ್ದೆ ಜಾರಿಯಲ್ಲಿ ಬಂದಿತು. ಕಾಯ್ದೆಯಲ್ಲಿ ಬಡತನ ನಿರ್ಮೂಲನೆಗೆ ಯಾವುದೇ ಕ್ರಮಗಳಿಲ್ಲ. ಬಯಲು ಪ್ರದೇಶದಲ್ಲಿ ೫೦೦ ಕ್ಕೂ ಹೆಚ್ಚು

ಮತ್ತು ಅರಣ್ಯ ಪ್ರದೇಶಗಳಲ್ಲಿ ೨೫೦ ಕುಟುಂಬಗಳು ಸ್ಥಳಾಂತರಗೊಂಡರೆ ಮಾತ್ರ ಈ ಕಾಯ್ದೆ ಅನ್ವಯವಾಗುತ್ತದೆ. ಹೆಚ್ಚಿಗೆ ಭೂಮಿ ವಶಪಡಿಸಿಕೊಳ್ಳುವವರ ಮೇಲೆ ಯಾವುದೇ ನಿರ್ಬಂಧವಿಲ್ಲ, ಸಾಮಾನ್ಯ ಜನರ ಒಪ್ಪಿಗೆಗೆ ಅವಕಾಶವಿಲ್ಲ "ಭೂಮಿಗೆ ಭೂಮಿ" ಪರಿಹಾರಕ್ಕೆ ಅವಕಾಶವಿಲ್ಲ, ಪುನರ್ ವಸತಿ ಸ್ಥಳಗಳಲ್ಲಿಯ ಬೆಲೆಗಳನ್ನಾಧರಿಸಿದ ಪರಿಹಾರದ ಪ್ರಸ್ತಾಪವಿಲ್ಲ ಕಾರಣ ಈ ವಿಧೇಯಕ ತನ್ನದೆ ಆದ ನ್ಯೂನ್ಯತೆಗಳನ್ನು ಹೊಂದಿದೆ ಎಂದಿದ್ದಾರೆ.

೨೦೦೩ರಲ್ಲಿ ಕಾಯ್ದೆಗೆ ಕೆಲವೊಂದು ಬದಲಾವಣೆಗಳು ಅವಶ್ಯಕವೆಂದು ರಾಷ್ಟ್ರೀಯ ಸಲಹಾ ಸಮಿತಿ ತಿಳಿಸಿತು. ಯೋಜನೆಗಳಿಂದ ಪ್ರಭಾವಿತ ಜನರು ಮೊದಲಿನಕ್ಕಿಂತಲೂ ಒಳ್ಳೆಯ ಜೀವನ ಸಾಗಿಸುವಂತಾಗಬೇಕು. ಕುಟುಂಬದ ಪ್ರತಿಯೊಬ್ಬ ವಯಸ್ಕರನ್ನು ಕುಟುಂಬದ ಸದಸ್ಯರೆಂದು ಪರಿಗಣಿಸಬೇಕು, ಸಾರ್ವಜನಿಕ ಉದ್ದೇಶದ ಬದಲಾಗಿ ಸಾರ್ವಜನಿಕ ಆಸಕ್ತಿಗೆ ಮಹತ್ವ ನೀಡಬೇಕು. ಪುನರ್ ವಸತಿ ಕಾರ್ಯಗಳ ನಂತರವೇ ಯೋಜನೆಗೆ ಅನುಮತಿ ನೀಡಬೇಕು, ಪರಿಹಾರ ಆಸ್ತಿಗಳಿಗೆ ಮಾತ್ರವಾಗಿರದೆ ಜೀವನೋಪಾಯಕ್ಕೂ ಕೊಡಬೇಕು. ಆಗ ಆದರ್ಶ ಪುನರ್ ವಸತಿ ಕಾನೂನಾಗಲು ಸಾಧ್ಯವೆಂದು ತಿಳಿಸಿದರು. ಹತ್ತೊಂಬತ್ತು ವರ್ಷಗಳ ವಿಚಾರ ವಿನಿಮಯದ ನಂತರ ೧೭ ಫೆಬ್ರುವರಿ ೨೦೦೪ ರಲ್ಲಿ ಸರಕಾರ ರಾಷ್ಟ್ರೀಯ ಪುನರ್ ವಸತಿ ಯೋಜನೆ ಸಂಬಂಧಿಸಿದಂತೆ ಸುತ್ತೋಲೆ ಹೊರಡಿಸಿದೆ ಎಂದಿದ್ದಾರೆ.

ಹರ್ಷ ಮಂದೆರ (೨೦೦೫)[೬] ಮಧ್ಯಪ್ರದೇಶದ ತಾಂಡವಾ ಜಿಲ್ಲೆಯ ಪುನಸಾದಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಇಂದಿರಾ ಸಾಗರ ಅಣೆಕಟ್ಟು ನಿರ್ಮಾಣ ಹಂತದಲ್ಲಾದ ಸರ್ವೇಕ್ಷಣ ನ್ಯೂನ್ಯತೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ಸ್ವಾತಂತ್ರ್ಯ ನಂತರದ ಬೃಹತ್ ಅಣೆಕಟ್ಟುಗಳ ನಿರ್ಮಾಣದಿಂದ ಆರ್ಥಿಕ ಪ್ರಗತಿ ತೀವ್ರಗತಿಯಿಂದ ಸಾಧ್ಯ ಎಂಬ ಕಲ್ಪನೆಯಿಂದ ಬೃಹತ್ ಅಣೆಕಟ್ಟುಗಳ ನಿರ್ಮಾಣ ಪ್ರಾರಂಭವಾಯಿತು. ದೇಶದಲ್ಲಿ ಯೋಜನೆಗಳಿಂದ ಪ್ರಭಾವಿತ ಜನರಿಗೆ ಸರಕಾರದ ಕಾನೂನುಗಳ ಮತ್ತು ಧೋರಣೆಯ ಪ್ರಯೋಜನಕಾರಿಯಾಗಿಲ್ಲ, ಕಾನೂನಿನಲ್ಲಿ ತಿಳಿಸಿದಂತೆಯೂ ಪರಿಹಾರ ಕ್ರಮಗಳು ಸರಿಯಾಗಿ ಕಾರ್ಯಗತವಾಗುತ್ತಿಲ್ಲವೆಂಬುದು ಇವರ ವಾದ.

ನರ್ಮದಾ ನದಿ ಗುಜರಾತ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ೧೩೧೨ ಕಿ.ಮೀ ಹರಿಯುತ್ತದೆ. ಈ ನದಿಗೆ ೩೦ ಬೃಹತ್, ೧೩೫ ಮಧ್ಯಮ, ೩೦೦೦ ಸಣ್ಣ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಸರಕಾರದ ಅಂದಾಜಿನ ಪ್ರಕಾರ ಇಂದಿರಾ ಸಾಗರ ಯೋಜನೆಯಿಂದ ೩೦೭೯ ಕುಟುಂಬದ ೮೦೫೭೭ ಜನರು ಸ್ಥಳಾಂತರಗೊಳ್ಳುತ್ತಾರೆ, ಆದರೆ

ಜನರ ಸ್ವತಂತ್ರ ಅಂಕಿ ಅಂಶಗಳ ಪ್ರಕಾರ ೩೦,೭೪೯ ಕುಟುಂಬದ ೧,೭೫,೨೧೨ ಜನರು ಸ್ಥಳಾಂತರಗೊಳ್ಳುತ್ತಾರೆಂದು ಅಂದಾಜಿಸಲಾಗಿದೆ. ಹೀಗೆ ಸರಕಾರದ ಸಮೀಕ್ಷಾ ನ್ಯೂನ್ಯತೆಗಳನ್ನು ತಿಳಿಸಿದ್ದಾರೆ.

ಉಚ್ಛನ್ಯಾಯಾಲಯ ೧೯೯೦ರಲ್ಲಿ ಸ್ಥಳಾಂತರಕ್ಕಿಂತ ೬ ತಿಂಗಳ ಮುಂಚಿತವಾಗಿ ಪುನರ್ವಸತಿ ಒದಗಿಸಬೇಕೆಂದು ಆಜ್ಞಾಪಿಸಿತು, ಜೂನ ತಿಂಗಳಲ್ಲಿ ಸ್ಥಳಾಂತರವಿದ್ದರೂ ಮೇ ತಿಂಗಳ ವರೆಗೆ ಜನರಿಗೆ ಪರಿಹಾರ ದೊರಕಲಿಲ್ಲ ಎಂಬುದನ್ನು ತಿಳಸಿದ್ದಾರೆ.

ಸ್ಥಳಾಂತರದ ಕುರಿತು ಜನರಿಗೆ ಸರಿಯಾದ ಮಾಹಿತಿ ಇಲ್ಲದಿರುವುದು, ದೋಷಪೂರಿತ ಸಮೀಕ್ಷೆಗಳು, ಪರಿಹಾರ ಕೊಡುವಲ್ಲಿ ವಿಳಂಬ, ಸರಕಾರ ಭೂಮಿ ಸಹಿತ ಪುನರ್ ವಸತಿ ನೀಡುವಲ್ಲಿ ವಿಫಲವಾಯಿತು. ಕೆಳವರ್ಗದ ಜನರ ಆಸ್ತಿ ಮೌಲ್ಯ ಮಾಪನದಲ್ಲಿ ಉಪೇಕ್ಷೆಯಾಗಿದ್ದಲ್ಲದೆ ಮೇಲು ವರ್ಗದ ಜನರಿಗೆ ಹೆಚ್ಚು ಅನುಕೂಲಕರವಾಗಿತ್ತು. ಕೆಳವರ್ಗದ ಜನರಲ್ಲಿ ಮುಳುಗಡೆ ಮತ್ತು ಪರಿಹಾರದಲ್ಲಿ ಸಂದೇಹಗಳಿದ್ದವು ಎಂದು ತಿಳಿಸಿದ್ದಾರೆ.

ಅಣೆಕಟ್ಟೆಯಿಂದ ತೊಂದರೆಗೆ ಒಳಗಾದ ಜನರ ಕುಂದು ಕೊರತೆಗಳನ್ನು ಪರಿಶೀಲಿಸಲು (ಜಿ.ಆರ್.ಎ) ಕುಂದು ಕೊರತೆಗಳ ಆಲಿಸುವ ಸಂಸ್ಥೆ ನೇಮಕವಾಗಿ ಕೆಲವೊಂದು ವಿಷಯಗಳನ್ನು ವರದಿ ಮಾಡಿತು. ಅಣೆಕಟ್ಟೆಯಿಂದ ಪ್ರಭಾವಿತವಾಗುವ ಪ್ರದೇಶಗಳಿಗೆ ಭೇಟಿ ನೀಡಿದಾಗ ಅಲ್ಲಿ ಮುಳುಗಡೆ ಗ್ರಾಮಗಳ ಸರಿಯಾದ ಮಾಹಿತಿ ಇರಲಿಲ್ಲ, ಮುಳುಗಡೆಯಾಗುವ ಇನ್ನೂ ಕೆಲವೊಂದು ಗ್ರಾಮಗಳು ಮುಳುಗಡೆ ಪಟ್ಟಿಯಲ್ಲಿ ಸೇರಿರಲಿಲ್ಲ ಅಲ್ಲದೆ ಸುತ್ತಮುತ್ತಲು ನೀರು ಆವರಿಸಿಕೊಂಡು ದ್ವೀಪಗಳಾಗುತ್ತಿದ್ದ ಗ್ರಾಮಗಳು ಪಟ್ಟಿಯಲ್ಲಿ ಇರಲಿಲ್ಲ, ಜೂನದಲ್ಲಿ ಮುಳುಗಡೆಯಾಗುತ್ತಿದ್ದರೂ ಮೇ ತಿಂಗಳವರೆಗೆ ಇನ್ನೂ ಕೆಲವೊಂದು ಜನರಿಗೆ ಪರಿಹಾರ ದೊರಕಿರಲಿಲ್ಲ. ಹೀಗೆ ಯೋಜನೆ ಸಿದ್ಧಪಡಿಸುವಲ್ಲಿ, ಕಾರ್ಯರೂಪಕ್ಕೆ ತರುವಲ್ಲಿ ಸರಕಾರ, ಅಧಿಕಾರಿಗಳು ತಪ್ಪು ಎಸಗಿ ನಿರಾಶ್ರಿತರನ್ನು ಮತ್ತಷ್ಟು ತೊಂದರೆಗೆ ಸಿಲುಕಿಸುತ್ತಾರೆ ಎಂದು ತಿಳಿಸಿದ್ದಾರೆ.

ಮಣಿ ಪದ್ಮಾ ಜೆನಾ (೨೦೦೬)[೩೦] ಒರಿಸ್ಸಾ ರಾಜ್ಯದ ೨೦೦೬ ರ ಪುನರ್ವಸತಿ ಪುನರ್ ನಿರ್ಮಾಣ ಧೋರಣೆ ಕುರಿತು ಚರ್ಚಿಸಿದ್ದಾರೆ.

ಓರಿಸ್ಸಾ ರಾಜ್ಯದಲ್ಲಿ ೧೯೫೦ ರಿಂದ ೧೯೯೩ ರ ಕಾಲಾವಧಿಯಲ್ಲಿ ೧೪೪೬ ಗ್ರಾಮಗಳ ೮೧೧೭೬ ಕುಟುಂಬಗಳನ್ನು ಸ್ಥಳಾಂತರಗೊಳಿಸಿ, ೧೪,೮೨,೬೨೬ ಎಕರೆ ಭೂಮಿಯನ್ನು

ವಶಪಡಿಸಿಕೊಳ್ಳಲಾಯಿತು. ಸಂಯುಕ್ತ ರಾಷ್ಟ್ರ ಅಭಿವೃದ್ಧಿ ಯೋಜನೆ (ಯು.ಎನ್.ಡಿ.ಪಿ) ಇದರಿಂದ ಐದು ಲಕ್ಷ ಸ್ಥಳಾಂತರಗೊಂಡು ೨೦ ಲಕ್ಷ ಜನರ ಮೇಲೆ ಪರಿಣಾಮ ಬೀರಿದೆ ಎಂದಿದೆ.

ಸ್ಥಳಾಂತರ ಯೋಜನೆಗಳ ಸಮಸ್ಯೆಗಳಿಂದ ಕಲಿಂಗ ನಗರದ ೧೨ ಜನ ಆದಿವಾಸಿಗಳು ಸಾವನ್ನಪ್ಪಿದರು. ಆಗ ೨೦೦೬ ರಲ್ಲಿ ಓರಿಸ್ಸಾ ಸರಕಾರ ಎಚ್ಚೆತ್ತು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಧೋರಣೆಯನ್ನು ಜಾರಿಗೊಳಿಸಲು ಆಸಕ್ತಿ ತೋರಿತು.

ಈ ಧೋರಣೆ ಅನ್ವಯ ಮನೆ, ಆಸ್ತಿಗಳಿಗೆ ಕೊಡುವ ಪರಿಹಾರ ಧನವನ್ನು ಹೆಚ್ಚಿಸಿತಲ್ಲದೆ ಯೋಜನೆಗಳಿಂದ ಉದ್ಭವಿಸುವ ಉದ್ಯೋಗ ಅವಕಾಶಗಳಲ್ಲಿ ಸ್ಥಳೀಯರಿಗೆ ಪ್ರಾತಿನಿಧ್ಯ ನೀಡಬೇಕು ಮತ್ತು ಉದ್ಯೋಗಗಳಿಗೆ ಪರಿಣಿತಿ ಕೊರತೆ ಇದ್ದರೆ ಅವಶ್ಯಕ ತರಬೇತಿಯನ್ನು ಸರಕಾರ ಒದಗಿಸುವ ಯೋಜನೆ ಮಾಡಬೇಕೆಂದು ತಿಳಿಸಿದ್ದಾರೆ.

ಕೈವಲ್ಯ ದೇಸಾಯಿ, ವಿನೀತ ಜೈನ, ರಾವುಲ ಪಾಂಡೆ, ಪಿ. ಶ್ರೀಕಾಂತ ಮತ್ತು ಉಪಮನ್ಯು ತ್ರಿವೇದಿ (೨೦೦೭)[೬೧] ಇಂದಿರಾ ಸಾಗರ ಪರಿಯೋಜನೆಯಿಂದ ಪುನರ್ವಸತಿಗೊಂಡ ೪೨೯ ಕುಟುಂಬಗಳ ೧೭೫೩ ಸದಸ್ಯರನ್ನು ಸಂದರ್ಶಿಸಿ ಮಾಹಿತಿ ಪಡೆದು ಪುನರ್ವಸತಿಯಲ್ಲಾದ ನ್ಯೂನ್ಯತೆಗಳನ್ನು ತಿಳಿಸಿ ಅವಶ್ಯಕ ಸಲಹೆಗಳನ್ನು ನೀಡಿದ್ದಾರೆ.

ಪ್ರಮುಖ ನ್ಯೂನ್ಯತೆಗಳೆಂದರೆ ಅನುಕೂಲಕರವಲ್ಲದ ಪುನರ್ವಸತಿ ಪ್ರದೇಶದ ಆಯ್ಕೆ, ಸ್ಥಳಾಂತರಿಗಳ ಮೇಲೆ ಆರ್ಥಿಕ ದುಷ್ಪರಿಣಾಮ, ಕೃಷಿ ಭೂಮಿ ಕಳೆದುಕೊಂಡಿರುವುದು, ನಿರುದ್ಯೋಗ ಕಾರ್ಮಿಕ ಸಮಸ್ಯೆಗಳು ಇತರೇ ಸಂಪನ್ಮೂಲಗಳ ನಾಶ, ಸಾರ್ವಜನಿಕ ಸಂಪನ್ಮೂಲಗಳ ಕೊರತೆ, ಅರಣ್ಯ ಭೂಮಿ ನಾಶ, ಆರೋಗ್ಯದ ಮೇಲೆ ಪರಿಣಾಮ, ಪರಿಹಾರ ವಿತರಣೆಯಲ್ಲಿ ಲಂಚಗುಳಿತನ ಮೂಲಭೂತ ಸೌಕರ್ಯಗಳ ಕೊರತೆ, ಕಡಿಮೆ ಆದಾಯ, ಕರಾಳ ಭವಿಷ್ಯ, ಚಿಂತಾಜನಕ ಸ್ಥಿತಿ ಮುಂತಾದ ಸಮಸ್ಯೆಗಳನ್ನು ತಿಳಿಸಿ ಅವಶ್ಯಕ ಧೋರಣೆಗಳನ್ನು ರೂಪಿಸಿದ್ದಾರೆ.

೧) ಪುನರ್‌ವಸತಿ ಆಧಾರಿತ ಯೋಜನೆಗಳಿಗೆ ಅನುಮತಿ ನೀಡಬೇಕು.

೨) ಜೀವನೋಪಾಯಕ್ಕೆ ಸಹಾಯಕವಾಗುವ ಪುನರ್ವಸತಿ ಯೋಜನೆ ರೂಪಿಸಬೇಕು.

೩) ಯೋಗ್ಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಯೋಜನೆ ಸಿದ್ಧಪಡಿಸಬೇಕು.

೪) ಪುನರ್‌ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸಮುದಾಯ ಜನರ ಸಹಭಾಗಿತ್ವ ಮುಂತಾದ ಕ್ರಮಗಳನ್ನು ಸೂಚಿಸಿದ್ದಾರೆ.

ಶಂಕರ ವೆಂಕಟೇಶ್ವರ (೨೦೦೭)[೩೨] ವಿಶೇಷ ಆರ್ಥಿಕ ವಲಯಗಳಿಗೆ ಭೂಮಿ ವಶಪಡಿಸಿಕೊಳ್ಳುವಾಗ ಪರಿಹಾರ ಕ್ರಮಗಳಿಂದ ಸ್ಥಳಾಂತರಿಗಳ ಮೇಲಾಗುವ ಪರಿಣಾಮಗಳ ಕುರಿತು ತಿಳಿಸಿದ್ದಾರೆ.

ವಿಶೇಷ ಆರ್ಥಿಕ ವಲಯಗಳಿಗೆ ವಶಪಡಿಸಿಕೊಳ್ಳುವ ಆಸ್ತಿಗಳಿಗೆ ಪರಿಹಾರ ವ್ಯವಸ್ಥೆ ಹಣದ ರೂಪದಲ್ಲಿದ್ದು ಇದು ಸೂಕ್ತವಲ್ಲವೆಂದು ಇವರ ಅಭಿಪ್ರಾಯ. ಪರಿಹಾರ ಹಣದಿಂದ ಆದಾಯ ತರುವ ಯಾವುದೇ ಆಸ್ತಿ ಹೊಂದಲು ಸಾಧ್ಯವಿಲ್ಲ. ಬದಲಿಗೆ ಐಷಾರಾಮಿ ವಸ್ತುಗಳಾದ ಕಾರು, ಟಿ.ವಿ, ಮೋಟರಸೈಕಲಗಳಂತಹ ವಸ್ತುಗಳನ್ನು ಖರೀದಿಸುತ್ತಾರೆ, ಇಲ್ಲವೆ ಮದ್ಯವ್ಯಸನಿಗಳಾದ ಉದಾಹರಣೆಗಳಿವೆ. ಕಾರಣ ಹಣದ ಬದಲಾಗಿ ಕೆಲವೊಂದು ಅವಧಿಗೆ ಮಾತ್ರ ಭೂಮಿ ಬಿಟ್ಟುಕೊಡುವದು, ಯೋಜನೆಗಳಲ್ಲಿ ಪಾಲುಗಾರಿಕೆ, ಪರಿಹಾರದಿಂದ ಬಂದ ಹಣ ತೊಡಗಿಸಲು ಮಾರ್ಗದರ್ಶನ ನೀಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ.

ಆರ್. ಉಮಾಮಹೇಶ್ವರಿ (೨೦೦೭)[೩೩] ಆಂದ್ರದ ಅಣೆಕಟ್ಟೆಗೆ ಭೂಮಿ ವಶಪಡಿಸಿಕೊಳ್ಳುವ ಅವಧಿಯಲ್ಲಿನ ಅಧಿಕಾರಿಗಳ ದೌರ್ಜನ್ಯಗಳ ಕುರಿತು ಚರ್ಚಿಸಿದ್ದಾರೆ.

ಪೋಲವಾರಮ ಇದು ಆಂಧ್ರಪ್ರದೇಶ ಸರಕಾರದ ವಿವಿಧ ಉದ್ದೇಶಗಳ ಯೋಜನೆ ಇದರಿಂದ ರಾಜ್ಯದ ಕರಾವಳಿ ಮತ್ತು ರಾಯಲ ಸೀಮಾ ಪ್ರದೇಶಗಳಿಗೆ ೮೦,೦೦೦ ಮಿಲಿಯನ್ ಕ್ಯೂಬಿಕ್ ನೀರನ್ನು ಒದಗಿಸುವ ಉದ್ದೇಶ. ಜನರು ಕಾನೂನು ಬಾಹಿರ ಭೂಮಿ ವಶಪಡಿಸಿಕೊಳ್ಳುವ ಧೋರಣೆ ಮತ್ತು ಪರಿಹಾರಗಳಲ್ಲಿಯ ನ್ಯೂನ್ಯತೆ ಬಗೆಗೆ ಧ್ವನಿ ಎತ್ತಿದರು. ಯೋಜನಾ ಅಧಿಕಾರಿಗಳು ಸ್ಥಳೀಯ ಜನರ ವಿರುದ್ಧ ನೂರೆಂಟು ಪೋಲಿಸ ಪ್ರಕರಣಗಳನ್ನು ದಾಖಲಿಸಿದರು. ಯೋಜನಾಧಿಕಾರಿಗಳ ದೌರ್ಜನ್ಯಕ್ಕೆ ಬೇಸತ್ತ ಜನ ಯೋಜನೆ ಪೂರ್ಣಗೊಳ್ಳುವ ಮೊದಲೇ ಪ್ರದೇಶ ಬಿಡಲು ನಿರ್ಧರಿಸಿದರು.

ಬ್ರಿಟಿಷ್ ಸರಕಾರ ಉಪಜೀವನಕ್ಕೆ ಭೂಮಿ ಕೊಟ್ಟು ಅಪರಾಧ ಮಾಡಿತ್ತು. ಈಗಿನ ಸರಕಾರ ಅದನ್ನು ನಮ್ಮಿಂದ ಕಸಿದುಕೊಂಡು ಸರಿಪಡಿಸುತ್ತಿದೆ ಎಂದು ವಿಷಾದದಿಂದ ಜನ, ನೊಂದು ಹೇಳುತ್ತಿರುವುದನ್ನು ಉಮಾಮಹೇಶ್ವರಿ ಉಲ್ಲೇಖಿಸಿದ್ದಾರೆ.

ಹರಿ ಮೋಹನ ಮಾಥುರ (೨೦೦೮)[೩೪] ಓರಿಸ್ಸಾ ರಾಜ್ಯದ ಪುನರ್ವಸತಿ ಯೋಜನೆ ನ್ಯೂನ್ಯತೆಗಳನ್ನು ತಿಳಿಸಿ ಯೋಜನೆಗಳಿಗೆ ಹಣಕಾಸಿನ ನೆರವು ನೀಡಿದ ವಿವಿಧ ಸಂಘಟನೆಗಳು ತಯಾರಿಸಿದ ಮಾದರಿ ಪುನರ್ವಸತಿ ಧೋರಣೆ ತಿಳಿಸಿದ್ದಾರೆ.

೧೯೫೦ ರ ನಂತರ ನೈಸರ್ಗಿಕ ಸಂಪದ್ಭರಿತ ರಾಜ್ಯ ಓರಿಸ್ಸಾ, ಅನೇಕ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಲು ದೇಶ, ವಿದೇಶಿಗರನ್ನು ಆಕರ್ಷಿಸಿತು ಕಾರಣ ಸ್ಥಳಾಂತರ ಮುಖ್ಯವಾಗಿಬಿಟ್ಟಿತು. ಸ್ಥಳಾಂತರಕ್ಕೆ ರಾಜ್ಯದ ಯೋಗ್ಯ ಧೋರಣೆಗಳಿರಲಿಲ್ಲ. ಜಾಗತಿಕ ಬ್ಯಾಂಕು ಹಣಕಾಸಿನ ಸೌಲಭ್ಯ ಒದಗಿಸುತ್ತಿರುವ ಕಾರಣ 'ರಾಜ್ಯದಲ್ಲಿಯ ಸ್ಥಳಾಂತರ, ಪುನರ್ವಸತಿ, ಪುನರ್ ನಿರ್ಮಾಣಕ್ಕೆ ಅಸಮಾಧಾನ ವ್ಯಕ್ತಪಡಿಸಿ ಮಾನವ ಹಕ್ಕುಗಳಿಗೆ ಚ್ಯುತಿ ಬರದಂತೆ ಪುನರ್ವಸತಿ ಕೈಗೊಳ್ಳಬೇಕು. ಇಲ್ಲವಾದಲ್ಲಿ ಹಣಕಾಸಿನ ಸಹಾಯ ನೀಡಲು ಸಾಧ್ಯವಿಲ್ಲ'ವೆಂದು ತಿಳಿಸಿತು

ಸಂಯುಕ್ತ ರಾಷ್ಟ್ರ ಅಭಿವೃದ್ಧಿ ಯೋಜನೆ (UNDP), ಸಂಯುಕ್ತ ರಾಷ್ಟ್ರ ಔದ್ಯೋಗಿಕ ಅಭಿವೃದ್ಧಿ ಸಂಘಟನೆ (UNIDO), ಅಂತರಾಷ್ಟ್ರೀಯ ಅಭಿವೃದ್ಧಿ ನಿಗಮ (DFID) ಗಳು ಸಂಯುಕ್ತ ಹಣಕಾಸಿನ ಸಹಯೋಗದೊಂದಿಗೆ ಯೋಗ್ಯ ಪುನರ್ವಸತಿ ಯೋಜನೆ ತಯಾರಿಸಿ ಓರಿಸ್ಸಾ ರಾಜ್ಯಕ್ಕೆ ಒಪ್ಪಿಸಲು ನಿರ್ಧರಿಸಿದವು. ಮೇ ೨೦೦೬ರಲ್ಲಿ ಓರಿಸ್ಸಾ ಸರಕಾರ ಇದಕ್ಕೆ ಒಪ್ಪಿಗೆ ನೀಡಿತು. ಇದು ದೇಶದಲ್ಲಿಯೇ ಪುನರ್ವಸತಿಗೆ ಸಂಬಂಧಿಸಿದಂತೆ ಮಾದರಿ ಧೋರಣೆ ಎನಿಸಿದೆ.

ಅದರ ಪ್ರಮುಖ ಅಂಶಗಳು

೧) ಎಲ್ಲ ಅಭಿವೃದ್ಧಿ ಯೋಜನೆಗಳಿಗೆ ಅನ್ವಯಿಸುವ ಯೋಜನೆ

೨) ಸ್ಥಳಾಂತರ ತಡೆಗಟ್ಟುವದು ಅಥವಾ ಕಡಿಮೆ ಮಾಡುವದು

೩) ಯೋಗ್ಯ ಪರಿಹಾರ ಒದಗಿಸುವುದು.

೪) ಸ್ಥಳಾಂತರ ಪ್ರದೇಶ ನಿರ್ಧರಿಸುವಲ್ಲಿ ಸ್ಥಳೀಯ ಜನರ ಸಹಭಾಗಿತ್ವ

೫) ಜೀವನೋಪಾಯ ಕ್ರಮಗಳನ್ನು ರೂಪಿಸಬೇಕು.

೬) ಪುನರ್ ವಸತಿಯೊಂದಿಗೆ ಅಭಿವೃದ್ಧಿ ಕೈಗೊಳ್ಳುವುದು.

೭) ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಕಡೆ ಗಮನ ಕೊಡುವದು.

೮) ಆದಿವಾಸಿಗಳ ಕಡೆಗೆ ಗಮನ ಹರಿಸುವದು.

೯) ಲಿಂಗ ಧೋರಣೆಗಳನ್ನು ಅನುಸರಿಸಬೇಕು.

೧೦) ಯೋಜನೆಯಲ್ಲಿ ಜನರ ಸಹಭಾಗಿತ್ವ

೧೧) ಜನರ ಕುಂದುಕೊರತೆಗಳ ಆಲಿಸುವ ಸಮೀತಿ

೧೨) ಯೋಜನೆಯ ಮೇಲ್ವಿಚಾರಣೆ ವ್ಯವಸ್ಥೆ.

ಆರ್. ಉಮಾ ಮಹೇಶ್ವರಿ (೨೦೦೮)[೩೫] ಆಂಧ್ರದ ಇಂದಿರಾಸಾಗರ ಪೋಲವಾರಮ ಅಣೆಕಟ್ಟು ಪರಿಹಾರ ಕಾರ್ಯದಲ್ಲಾದ ನ್ಯೂನ್ಯತೆಗಳನ್ನು ಕುರಿತು ಅಧ್ಯಯನ ಮಾಡಿರುವರು.

ಆಂದ್ರ ಸರಕಾರ ತಿಳಿಸಿದಂತೆ ಈ ಯೋಜನೆಯಿಂದ ೨೭೬ ಗ್ರಾಮಗಳ ೨,೩೭,೦೦೦ ಜನರು ಸ್ಥಳಾಂತರಗೊಳ್ಳುತ್ತಾರೆ. ಸರಕಾರದ ಅಧಿಕಾರಿಗಳ ಅಂದಾಜಿನಂತೆ ಯೋಜನೆ ಪೂರ್ತಿಗೊಳಿಸಲು ೮ ರಿಂದ ೧೦ ವರ್ಷ ಬೇಕಾಗಬಹುದು ಅಲ್ಲಿಯವರೆಗೆ ಜನರು ಪರಿಹಾರ ಧನವನ್ನು ಪಡೆದು ತಮ್ಮ ಜಮೀನುಗಳನ್ನು ಉಪಯೋಗಿಸಬಹುದೆಂದು ತಿಳಿಸಿದರು. ಅದೇ ವರ್ಷ ಹೆಚ್ಚಿಗೆ ಮಳೆಯಾಗಿ ಬೆಳೆ ನಾಶವಾಯಿತು. ಆದರೆ ಬೆಳೆ ಹಾನಿಗೆ ಅಧಿಕಾರಿಗಳು ಯಾವುದೇ ಪರಿಹಾರ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿದರು. ಸರಕಾರ ೮೦ ಹೆಕ್ಟೇರ ಜಮೀನನ್ನು ವಶಪಡಿಸಿಕೊಂಡು ೬೫ ಹೆಕ್ಟೇರ್‌ಗೆ ಮಾತ್ರ ಪರಿಹಾರ ಕೊಟ್ಟಿತು ಅಲ್ಲದೆ ಪುನರ್‌ವಸತಿ ಪ್ರದೇಶದ ಭೂ ಪ್ರದೇಶಗಳು ಸರಿಯಾಗಿಲ್ಲ ಬೆಳೆಗಳನ್ನು ಬೆಳೆಯಲು ಮೊದಲಿನಕ್ಕಿಂತ ಎರಡುಪಟ್ಟು ಹಣ ಖರ್ಚು ಮಾಡಬೇಕಾಗುತ್ತದೆ ಎಂದಿದ್ದಾರೆ. ಸರಕಾರದ ಮನೆಗಳ ಪರಿಹಾರ ಧನದಿಂದ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ ಪರಿಹಾರ ಕ್ರಮ ಅವೈಜ್ಞಾನಿಕವಾಗಿದೆ ಎಂದು ತಿಳಿಸುತ್ತಾರೆ.

ಸೆಕ್ಸೇನಾ (೨೦೦೮)[೩೬] ತಮ್ಮ ಲೇಖನದಲ್ಲಿ ಅಭಿವೃದ್ಧಿ ಯೋಜನೆಗಳಿಗಾಗಿ ದೇಶದಲ್ಲಿರುವ ಭೂಸ್ವಾಧೀನ ಸಂಬಂಧಿಸಿದ ಕಾನೂನುಗಳು ಮತ್ತು ಸರಕಾರದ ಧೋರಣೆಗಳನ್ನು ಕುರಿತು ಚರ್ಚಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳಿಗೆ ಜನರನ್ನು ಒಕ್ಕಲೆಬ್ಬಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಮುನ್ಸೂಚನೆ ನೀಡದೇ ಇರುವುದು, ಸರಿಯಾದ ಪರಿಹಾರ ಪುನರ್ ವಸತಿ ವ್ಯವಸ್ಥೆ ನೀಡದಿರುವುದರಿಂದ ರೈತರು ಭೂಮಿ, ಜೀವನೋಪಾಯ, ವಾಸಸ್ಥಳ ಮತ್ತು ತಮ್ಮ ಪರಿಸರಗಳಿಂದ ಅಭಿವೃದ್ಧಿ ಕಾರ್ಯಗಳ ನಿಮಿತ್ಯ ಒಕ್ಕಲೆಬ್ಬಿಸುವದನ್ನು ವಿರೋಧಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಬ್ರಿಟೀಷ್ ಸರಕಾರ ತಮಗೆ ಅನುಕೂಲವಾಗುವ ರೀತಿಯಲ್ಲಿ ಸಾರ್ವಜನಿಕ ಉಪಯೋಗಕ್ಕೆ ವೈಯಕ್ತಿಕ ಮಾಲಿಕತ್ವದ ಭೂಮಿಯನ್ನು ಸ್ವಾಧಿನಪಡಿಸಿಕೊಳ್ಳಲು ೧೮೯೪ ರಲ್ಲಿ ಭೂಸ್ವಾಧೀನ ಕಾಯ್ದೆ ಮತ್ತು ಅರಣ್ಯ ಸಂಪತ್ತು ಬಳಸಿಕೊಳ್ಳಲು ೧೯೨೭ ರಲ್ಲಿ ಅರಣ್ಯ ಕಾಯ್ದೆ ಜಾರಿಗೆ ತಂದಿತು. ಇದರಲ್ಲಿ ಸಾರ್ವಜನಿಕ ಉಪಯೋಗದ ಬಗೆಗೆ ಸರಿಯಾದ ವ್ಯಾಖ್ಯೆ ಇರಲಿಲ್ಲ. ೧೯೮೪ ರಲ್ಲಿ ಭಾರತ ಸರಕಾರ ಲಾಭಕ್ಕಾಗಿ ನಡೆಸುತ್ತಿರುವ ಖಾಸಗಿ ಕಂಪನಿಗಳಿಗೂ ಸಾರ್ವಜನಿಕ

ಉಪಯೋಗದ ಹೆಸರಿನಲ್ಲಿ ಭೂಮಿ ಸ್ವಾಧೀನಪಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಇದರಿಂದ ದೇಶದಲ್ಲಿ ರೈತರನ್ನು ಒಕ್ಕಲೆಬ್ಬಿಸುವದು ಮತ್ತು ಶೋಷಣೆ ಭರದಿಂದ ಸಾಗಿತು.

ಸರಕಾರದ ಈ ಕ್ರಮದಿಂದ ಸಂವಿಧಾನದ ಪರಿಚ್ಛೇದ ೯ (ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಹಕ್ಕು), ಪರಿಚ್ಛೇದ ೨೧ (ನಾಗರಿಕರು ಸ್ವಾಭಿಮಾನದಿಂದ ಜೀವಿಸುವ ಹಕ್ಕು) ನಾಗರಿಕ ಈ ಹಕ್ಕುಗಳಿಗೆ ಚ್ಯುತಿ ಬಂದಂತಾಗುತ್ತದೆ. ಕಾರಣ ಸಾರ್ವಜನಿಕರು ಸಾಮಾಜಿಕ ಕಾರ್ಯಕರ್ತರು, ಸರಕಾರೇತರ ಸಂಘ ಸಂಸ್ಥೆಗಳು ೧೮೯೪ ರ ಭೂಸ್ವಾಧೀನ ಕಾಯ್ದೆಯನ್ನು ವಿರೋಧಿಸಿದವು ಇದರಿಂದ ಸರಕಾರ ೧೯೮೪ ಮತ್ತು ೨೦೦೦ ರಲ್ಲಿ ಕಾಯ್ದೆಯನ್ನು ಸ್ವಲ್ಪ ಮಾರ್ಪಡಿಸಿತು. ಆದರೆ ಇದರಿಂದ ಭೂಮಿ ಕಳೆದುಕೊಳ್ಳುವವರಿಗೆ ಯಾವುದೇ ಅನುಕೂಲ ಇಲ್ಲದಿರುವುದರಿಂದ ಸಾರ್ವಜನಿಕ ಟೀಕೆಗಳಿಗೆ ಗುರಿಯಾಯಿತು. ಸರಕಾರ ಮತ್ತೆ ೨೦೦೭ರ ಕಾಯ್ದೆಯಲ್ಲಿ ಕೆಲವು ಮಾರ್ಪಾಟುಗಳೊಂದಿಗೆ ಲೋಕಸಭೆಯಲ್ಲಿ ಮಂಡಿಸಿತು. ಪ್ರಮುಖ ಬದಲಾವಣೆಗಳೊಂದಿಗೆ ಖಾಸಗಿ ಕಂಪನಿಗಳಿಗೆ ಸರಕಾರ ಭೂ ಸ್ವಾಧೀನ ಮಾಡಿಕೊಳ್ಳುವುದಿಲ್ಲವೆಂದು ತಿಳಿಸಿತು. ಅಲ್ಲದೆ ಭೂಸ್ವಾಧೀನದ ಜೊತೆಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಪ್ರಮುಖವೆಂದು ತಿಳಿಸಿತು. ಇದರಲ್ಲಿ "ಸಾರ್ವಜನಿಕ ಉದ್ದೇಶ" ದ ಬಗ್ಗೆ ತಿಳಿಸಲಾಯಿತು. ಆದಿವಾಸಿಗಳಿಗೆ ಸಂರಕ್ಷಣೆ ಒದಗಿಸಲಾಯಿತು. ಯಾವ ಉದ್ದೇಶಕ್ಕೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆಯೋ ಅದೇ ಉದ್ದೇಶಕ್ಕೆ ಬಳಸಬೇಕು. ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಐದು ವರ್ಷಗಳ ಒಳಗಾಗಿ ಉಪಯೋಗಿಸಬೇಕು. ಸಾಧ್ಯವಾಗದಿದ್ದಾಗ ಮರಳಿ ಕೊಡಬೇಕು. ಯೋಜನೆಗಳಿಂದಾದ ಹಾನಿ ತುಂಬಿಕೊಡಬೇಕು ಮುಂತಾದ ಸಂರಕ್ಷಣೆಗಳನ್ನು ಜನರಿಗೆ ಒದಗಿಸಬೇಕೆಂಬ ಸಲಹೆ ನೀಡಿರುವರು.

ಎಸ್.ಟಿ ಬಾಗಲಕೋಟಿ (೨೦೦೮)[೩೭] ಕರ್ನಾಟಕ ರಾಜ್ಯದ ಆಲಮಟ್ಟಿ ಅಣೆಕಟ್ಟೆಗಳಿಂದ ಸ್ಥಳಾಂತರಗೊಂಡ ಜನರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಅಧ್ಯಯನ ಮಾಡಿ ಸ್ಥಳಾಂತರದ ಸಮಸ್ಯೆಗಳ ಕುರಿತು ತಿಳಿಸಿದ್ದಾರೆ.

ಸ್ಥಳಾಂತರಗೊಂಡ ಜನರ ಮುಖದಲ್ಲಿ ಪರಕೀಯ ಪ್ರಜ್ಞೆ, ಆಸ್ತಿಪಾಸ್ತಿಗಳ ನಾಶ, ಸಾಕು ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿರುವುದು, ನಿರುದ್ಯೋಗ, ದಿನಗೂಲಿ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳ, ಉದ್ಯೋಗಕ್ಕಾಗಿ ಬೇರೆ ಗ್ರಾಮ ಮತ್ತು ರಾಜ್ಯಗಳಿಗೆ ವಲಸೆ, ಕಡಿಮೆ ಆದಾಯ ಇಂತಹ ಹಾನಿಗಳ ಜೊತೆಗೆ, ಪರಿಹಾರ ಧನದ ಕಾರಣ ವಾಸಸ್ಥಳಗಳಲ್ಲಿ ಸುಧಾರಣೆ, ಸಾಮಾಜಿಕ, ರಾಜಕೀಯ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸದೇ ಇರುವುದು, ಪರಿಹಾರ ಧನವನ್ನು

ಆದಾಯ ಮೂಲಗಳಿಗೆ ತೊಡಗಿಸದೇ ಐಷಾರಾಮಿ ವಸ್ತುಗಳಿಗೆ ಉಪಯೋಗಿಸಿರುವುದು ಸಾಮಾನ್ಯ ಎಂದಿದ್ದಾರೆ.

ಏಣಾಕ್ಷಿ, ಗಂಗೂಲಿ ಮತ್ತು ಥುಕರಲ (೨೦೦೯)[೩೮] ಸ್ಥಳಾಂತರಗಳಿಂದ ಮಕ್ಕಳ ಮೇಲಾಗುವ ಪರಿಣಾಮಗಳ ಕುರಿತು ಅಧ್ಯಯನಿಸಿದ್ದಾರೆ. ಅಗರವಾಲ (೧೯೮೮), ಸೇನ (೧೯೮೧), ಅವರು ಬಡ ಜನರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಸ್ಥಳಾಂತರಗಳು ಹೆಚ್ಚಿನ ದುಷ್ಪರಿಣಾಮ ಬೀರುತ್ತವೆ. ಸಂವಿಧಾನದಲ್ಲಿ ಮಕ್ಕಳನ್ನು ದೇಶದ ಪ್ರಜೆಗಳೆಂದು ಪರಿಗಣಿಸಿ ಸ್ವಾತಂತ್ರ್ಯ, ಅಭಿವೃದ್ಧಿ ಮತ್ತು ಶಿಕ್ಷಣಗಳಲ್ಲಿ ತಾರತಮ್ಯ ಸಲ್ಲದು, ಗಣಿಗಾರಿಕೆ, ಕಾರ್ಖಾನೆಗಳಲ್ಲಿ ಮಕ್ಕಳನ್ನು ಉದ್ಯೋಗಕ್ಕೆ ಬಳಸಿಕೊಳ್ಳುವುದನ್ನು ನಿರ್ಬಂಧಿಸಬೇಕೆಂದು ತಿಳಿಸಿದ್ದಾರೆ, ಸ್ಥಳಾಂತರವೂ ಸಾಮಾನ್ಯ ಜನರ ಮೇಲೆ ವಿವಿಧ ರೀತಿಯ ಪರಿಣಾಮ ಬೀರುವಂತೆ ಮಕ್ಕಳ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂದಿದ್ದಾರೆ.

ಭುವನೇಶ್ವರದ ಸಾಮಾಜಿಕ ಆರ್ಥಿಕ ಸಂಸ್ಥೆಯ ಅಧ್ಯಯನದ ಪ್ರಕಾರ ಓರಿಸ್ಸಾದ ಸ್ಥಳಾಂತರಗೊಂಡ ಕೆಲವು ಹಳ್ಳಿಗಳ ಜನರು ಪರಿಹಾರ ಧನವನ್ನು ಮದ್ಯಸೇವನೆಗೆ ಉಪಯೋಗಿಸಿ ಮಹಿಳೆಯರ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಎಸಗಿರುವುದನ್ನು ಉಲ್ಲೇಖಿಸಿದೆ.

ಥುಕರಲ್‌ರವರು ನರ್ಮದಾ ಮತ್ತು ತೆಹ್ರಾ ಅಣೆಕಟ್ಟುಗಳು ನಿರ್ಮಾಣ ಹಂತದಲ್ಲಿರುವಾಗ ಶಾಲಾ ಕಟ್ಟಡ ನಿರ್ಮಾಣ, ದುರಸ್ತಿ ಕಾರ್ಯಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸಲಾಗಿತ್ತು. ಸ್ಥಳಾಂತರದ ನಂತರ ಸೌಲಭ್ಯ ಒದಗಿಸುವ ಸಂಶಯ ವ್ಯಕ್ತಪಡಿಸಿದ್ದಾರೆ.

ಫರ್ನಾಂಡಿಸರು ಓರಿಸ್ಸಾದ ಸಾಲಂದಿ ನೀರಾವರಿ ಯೋಜನೆಯಿಂದ ಸ್ಥಳಾಂತರವಾದ ದಶಕಗಳ ನಂತರ ಶಾಲೆ ಕಟ್ಟಿಸಲಾಯಿತು ಅಲ್ಲದೇ ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಪರಿಣಾಮ ಬೀರಿತೆಂದು ತಿಳಿಸಿದ್ದಾರೆ.

ಸ್ಥಳಾಂತರಗಳಿಂದ ಸತ್ವಯುತ ಆಹಾರದ ಕೊರತೆಯ ಕಾರಣ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರಿತ್ತೆಂದು (ಸೆರೆನಾ ೧೯೯೬, ಗುಡ್ ೧೯೯೬ ಮೆಹ್ತಾ ಮತ್ತು ಪುಂಜ ೨೦೦೬, ಥುಕರಲ (೧೯೯೨) ತಿಳಿಸಿದ್ದನ್ನು ಉಲ್ಲೇಖಿಸಿದ್ದಾರೆ.

ರಾಮಯ್ಯ (೧೯೯೬) ಮತ್ತು ಸಹಾಯ ಸಂಸ್ಥೆಗಳ ವರದಿಗಳ ಪ್ರಕಾರ ಸ್ಥಳಾಂತರಗಳಿಂದ ಮಹಿಳೆಯರ ಕಾರ್ಯಗಳು ಹೆಚ್ಚಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತವೆಯೆಂದು ತಿಳಿಸಿದ್ದಾರೆ.

ಅಂತರಾಷ್ಟ್ರೀಯ, ರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಸಮೀತಿ ವರದಿ ಅನ್ವಯ ಸ್ಥಳಾಂತಗಳಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮದ ಕಾರಣ ಕೆಲವೊಂದು ಕಾಯ್ದೆಗಳನ್ನು ಜಾರಿಗೊಳಿಸಲಾಯಿತು ಎಂದಿದ್ದಾರೆ. ಕೌಟುಂಬಿಕ ಕಾನೂನು ತಜ್ಞ ಜಾನ ಎಕೆಲರ (೧೯೯೪) ಯೋಜನೆಗಳು ಮಕ್ಕಳ ಹಿತ ಕಾಪಾಡಬೇಕು ಮತ್ತು ನಿರ್ಮಾಣಗಳಲ್ಲಿ ಮಕ್ಕಳು ಪಾಲ್ಗೊಳ್ಳಬೇಕೆಂದು ತಿಳಿಸಿದ್ದಾರೆ.

ಮಕ್ಕಳು ಸ್ಥಳಾಂತರಗಳಲ್ಲಿ ಕುಟುಂಬಕ್ಕೆ ಮುಂಜಾಗ್ರತಾ ಸಲಹೆಗಳನ್ನು ನೀಡಲು ಸಾಧ್ಯ ಎಂಬುದನ್ನು ತಿಳಿಸಬೇಕು, ಅವರು ಮಾನಸಿಕವಾಗಿ ಸನ್ನದ್ದರಾಗಲು ಪ್ರೋತ್ಸಾಹ ನೀಡಬೇಕು ಎಂದಿದ್ದಾರೆ.

ಹರಿ ಮೋಹನ ಮಾಥುರ (೨೦೦೯)[೩೯] ಪುನರ್ ವಸತಿ ಯೋಜನೆಗಳಲ್ಲಿ ಲಿಂಗ ತಾರತಮ್ಯದ ಕುರಿತು ಚರ್ಚಿಸಿದ್ದಾರೆ.

ಬಸು (೨೦೦೬), ಮೆಹ್ತಾ (೨೦೦೦), ಪರಶುರಾಮ (೧೯೯೯) ಅವರ ಅಧ್ಯಯನಗಳ ಮುಖಾಂತರ ಪುನರ್ ವಸತಿ ಯೋಜನೆಗಳಲ್ಲಿ ಸ್ತ್ರೀಯರಿಗೆ ಯಾವುದೇ ಅನುಕೂಲತೆಗಳಿರುವದಿಲ್ಲ ಅಲ್ಲದೆ ಪುನರ್ ವಸತಿ ಕೇಂದ್ರಗಳಲ್ಲಿ ಸ್ತ್ರೀಯರು ಅಸಮರ್ಥರಾಗುತ್ತಾರೆ ಎಂದಿದ್ದಾರೆ.

ಮೆಹ್ತಾ (೨೦೦೦), ಥುಕರಲ (೧೯೯೯) ಅವರು ಪುನರ್ ವಸತಿ ಅಧ್ಯಯನದಲ್ಲಿ ಸ್ತ್ರೀಯರನ್ನು ಕಡೆಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಪುನರ್ ವಸತಿ ಸ್ತ್ರೀಯರ ಮೇಲೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ದುಷ್ಪರಿಣಾಮ ಬೀರುತ್ತದೆ. ವಿವಿಧ ವರ್ಗಗಳ ಸ್ತ್ರೀಯರ ಮೇಲೆ ವಿವಿಧ ರೀತಿಯಿಂದ ಪರಿಣಾಮ ಬೀರುತ್ತದೆ. ಪುನರ್ ವಸತಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ಕಾನೂನಿನ ಸಂರಕ್ಷಣೆ ಇಲ್ಲ. ಯೋಜನೆ ಸಿದ್ದಪಡಿಸುವಲ್ಲಿ ಮತ್ತು ಕಾರ್ಯಗತಗೊಳಿಸುವಲ್ಲಿ ಲಿಂಗ ತಾರತಮ್ಯ ಸಾಮನ್ಯ. ಯೋಜನೆಗಳಿಂದ ಸ್ತ್ರೀಯರ ಮೇಲಾಗುವ ಪರಿಣಾಮಗಳ ಬಗೆಗೆ ಸ್ತ್ರೀಯರನ್ನು ವಿಚಾರಿಸುವದಾಗಲಿ, ಯೋಜನೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದನ್ನು ಕಾಣುವದಿಲ್ಲ, ಪರಿಹಾರ ಕಾರ್ಯಗಳಲ್ಲಿ ಕಡೆಗಣಿಸಲಾಗುತ್ತದೆ. ಇದರಿಂದ ಅವರ ಆದಾಯದ ಮೇಲೆ ಪರಿಣಾಮ ಬೀರಿ ಕುಟುಂಬದಲ್ಲಿ ಸ್ಥಾನಮಾನ ಕುಂದುತ್ತದೆ. ಯೋಜನೆ ಸರಿಯಾಗಿ ಕಾರ್ಯಗತಗೊಳ್ಳಲು ಮಹಿಳಾ ಸಿಬ್ಬಂದಿ ಇರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ವಿವಿಧ ಸಂಘ ಸಂಸ್ಥೆಗಳು ಮಹಿಳಾ ತಾರತಮ್ಯ ನಿವಾರಿಸಲು ಸೂಚಿಸಿದ ಕ್ರಮಗಳ ಕುರಿತು ತಿಳಿಸಿದ್ದಾರೆ. ಅವು ಇಂತಿವೆ.

ಏಶಿಯಾ ಅಭಿವೃದ್ಧಿ ಬ್ಯಾಂಕ ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಕ್ರಮಗಳು

- ಸ್ತ್ರೀಯರ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಅವರ ಬೇಡಿಕೆ ಅವಶ್ಯಕತೆಗಳ ಕುರಿತು ಸಮೀಕ್ಷೆ ನಡೆಸಬೇಕು.
- ಸ್ತ್ರೀ ಪ್ರಧಾನ ಕುಟುಂಬಗಳನ್ನು ಸಮೀಕ್ಷೆಗಳಲ್ಲಿ ಪರಿಗಣಿಸಬೇಕು.
- ಭೂಮಿ ವಶಪಡಿಸಿಕೊಳ್ಳುವದು ಮತ್ತು ಪರಿಹಾರ ಕಾರ್ಯಗಳಲ್ಲಿ ಸ್ತ್ರೀಯರನ್ನು ಪರಿಗಣಿಸಬೇಕು.
- ಪುನರ್ ವಸತಿ ಅಥವಾ ಅನುದಾನಗಳನ್ನು ಜಂಟಿ ಖಾತೆಗೆ ಬಿಡುಗಡೆ ಮಾಡಬೇಕು.
- ಯೋಜನೆ ನಿರ್ಮಾಣ ಮತ್ತು ಕಾರ್ಯಗತಗೊಳಿಸುವಾಗ ಪುನರ್ ವಸತಿ ಒದಗಿಸುವ ಸಂಸ್ಥೆಗಳು ಬಾಧಿತ ಸ್ತ್ರೀಯರಿಗೆ ಸಹಾಯ ಮಾಡಲು ಮಹಿಳಾ ಸಿಬ್ಬಂದಿ ನಿಯೋಜಿಸಬೇಕು.
- ಪುನರ್ ವಸತಿ ಯೋಜನೆ ನಿರ್ಮಾಣ, ನಿರ್ವಹಣೆ ಮತ್ತು ಕಾರ್ಯಗತಗೊಳಿಸುವಲ್ಲಿ ಮಹಿಳಾ ಸಮೂಹಗಳನ್ನು ಒಳಗೊಂಡಿರಬೇಕು.
- ಕೈಪಂಪು, ಗಿರಣಿ, ಉರವಲುಗಳನ್ನು ಒದಗಿಸಿ ಸ್ತ್ರೀಯರ ಸಮಸ್ಯೆ ಪರಿಹರಿಸಬೇಕು.
- ಆರೋಗ್ಯ ಮತ್ತು ಸ್ವಚ್ಛತೆ ಬಗ್ಗೆ ತರಬೇತಿ ನೀಡಬೇಕು.
- ದುಡಿಯುವ ಮಹಿಳೆಯರ ಮಕ್ಕಳ ಸಂರಕ್ಷಣೆ, ಪ್ರಾಥಮಿಕ ಶಾಲೆ, ವಾಸಸ್ಥಳಗಳನ್ನು ಒದಗಿಸಿ ಸ್ತ್ರೀಯರಿಗೆ ಸಂರಕ್ಷಣೆ ಒದಗಿಸಬೇಕು.
- ಸ್ತ್ರೀಯರಿಗೆ ವಿವಿಧ ತರಬೇತಿ ನೀಡಿ, ಸಾಲ ಯೋಜನೆ ಮುಖಾಂತರ ಆದಾಯ ಹೆಚ್ಚಿಸುವ ಕ್ರಮ ಕೈಗೊಳ್ಳಬೇಕು.
- ಹೆಣ್ಣು ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಬೇಕು.
- ಸಾಲ ಮತ್ತು ಇತರೇ ವಿಷಯಗಳಲ್ಲಿ ಕಾನೂನಿನ ಸಂರಕ್ಷಣೆ ಒದಗಿಸಬೇಕು.
- ಯೋಜನೆ ನಿರ್ಧರಿಸುವಲ್ಲಿ ಸ್ತ್ರೀಯರ ಸಹಭಾಗಿತ್ವ ಹೆಚ್ಚಿಸಬೇಕು.
- ಮಹಿಳಾ ಸಬಲೀಕರಣಕ್ಕೆ ಕ್ರಮ ಕೈಗೊಳ್ಳಬೇಕು.

ಅಣೆಕಟ್ಟುಗಳ ಜಾಗತಿಕ ಆಯೋಗ ಸ್ಥಳಾಂತರಗಳಲ್ಲಿ ಮಹಿಳೆಯರ ಮೇಲಾಗುತ್ತಿರುವ ಪರಿಣಾಮಗಳನ್ನು ಅಧ್ಯಯನ ಮಾಡಲು ಸಮಿತಿ ರಚಿಸಿ ಅದರ ವರದಿ ಆಧಾರದ ಮೇಲೆ ಸ್ಥಳಾಂತರಗಳಲ್ಲಿ ಮಹಿಳಾ ತಾರತಮ್ಯ ನಿವಾರಿಸಲು ಕೆಲವೊಂದು ಶಿಫಾರಸ್ಸುಗಳನ್ನು ಮಾಡಿತು.

ರಾಷ್ಟ್ರೀಯ ಉಷ್ಣ ಸ್ಥಾವರ ಸಂಸ್ಥೆ ಸ್ಥಳಾಂತರಗಳಲ್ಲಿ ಮಹಿಳಾ ಸಂರಕ್ಷಣೆಗೆ ಕೆಲವೊಂದು ಕ್ರಮಗಳನ್ನು ಸೂಚಿಸಿದೆ ಪ್ರಥಮ ಬಾರಿಗೆ ಯೋಜನೆಯಲ್ಲಿ ಸಮಾಜಶಾಸ್ತ್ರರನ್ನು ಸೇರಿಸಿಕೊಳ್ಳಬೇಕೆಂದು ತಿಳಿಸಿತು.

ಕಾನೂನಾತ್ಮಕ ಸಂರಕ್ಷಣೆಗಳು :

- ಸ್ಥಳಾಂತರಗಳಲ್ಲಿ ಸ್ತ್ರೀಯರನ್ನು ಪರಿಗಣಿಸಿ ಪ್ರಾಶಸ್ತ್ಯ ಕೊಡಬೇಕು.
- ಯೋಜನೆ ಸಿದ್ಧಪಡಿಸುವಲ್ಲಿ, ಜಾರಿಗೊಳಿಸುವಲ್ಲಿ ಲಿಂಗ ತಾರತಮ್ಯ ಹೋಗಲಾಡಿಸಬೇಕು.
- ಯೋಜನೆ ಸಿದ್ಧಗೊಳ್ಳುವಾಗ ಮಹಿಳೆಯರ ಮೇಲಾಗುವ ದುಷ್ಪರಿಣಾಮ ತಡೆಗಟ್ಟುವದು, ಇಲ್ಲವೇ ಮಿತಗೊಳಿಸುವದು.
- ಪುನರ ವಸತಿ ಯೋಜನೆ ಲಿಂಗಾಧಾರಿತವಾಗಿರಬೇಕು.
- ಪುನರ್ ವಸತಿ ಸ್ಥಳಗಳ ಆಯ್ಕೆ, ಮನೆ ನಿರ್ಮಾಣ, ಸ್ಥಳಾಂತರ ಸಮಯ ನಿಗದಿಪಡಿಸುವಾಗ ಸ್ತ್ರೀಯರ ಜೊತೆ ಸಮಾಲೋಚಿಸಬೇಕು.
- ಸ್ಥಳಾಂತರಗಳಿಂದ ರಕ್ತ ಸಂಬಂಧ ನೆರೆಹೊರೆ ಮೇಲೆ ದುಷ್ಪರಿಣಾಮ ಬೀರದಂತೆ ಜಾಗೃತೆ ವಹಿಸಬೇಕು.
- ಯೋಜನೆ ಕಾರ್ಯಗತಗೊಳ್ಳುವಾಗ ಮಹಿಳೆಯರ ಜೊತೆ ಸಮಾಲೋಚಿಸಬೇಕು.
- ಸೌಲಭ್ಯಗಳನ್ನು ಒದಗಿಸುವಾಗ ಮಹಿಳಾ ಸರಕಾರೇತರ ಸಂಸ್ಥೆಗಳು ಬಾಧಿತಗೊಳ್ಳುವ ಸ್ತ್ರೀಯರ ಜೊತೆ ಸಮಾಲೋಚಿಸಬೇಕು.
- ಯೋಜನೆಗಳನ್ನು ಸಿದ್ಧಗೊಳಿಸುವಾಗ, ಜಾರಿಗೊಳಿಸುವಾಗ ಮಹಿಳಾ ಅಧಿಕಾರಿಗಳನ್ನು ನೇಮಿಸಿಕೊಳ್ಳಬೇಕು.
- ಆದಿವಾಸಿ, ಗ್ರಾಮೀಣ ಸಮುದಾಯಗಳಲ್ಲಿ ಸ್ಥಳಾಂತರದ ಕಾರ್ಯ ನಿರ್ವಹಿಸುವ ಮಹಿಳಾ ಸಿಬ್ಬಂದಿಗೆ ಯೋಗ್ಯ ಪ್ರೋತ್ಸಾಹ ಧನ ನೀಡಬೇಕು.
- ಯೋಜನೆ ಕಾರ್ಯಗತಗೊಳ್ಳುವಾಗ ಮಹಿಳೆಯರ ಮೇಲಾಗುವ ಪರಿಣಾಮಗಳ ಕುರಿತು ಅವಲೋಕಿಸಬೇಕೆಂಬ ಸಲಹೆಗಳನ್ನು ಸೂಚಿಸಿದೆ.

ಶ್ರೀನಿವಾಸನ್ ರಮಣಿ (೨೦೧೦)[೬೦] ವಿಶಿಷ್ಟ ಆರ್ಥಿಕ ವಲಯಗಳಿಗೆ ಭೂಮಿ ವಶಪಡಿಸಿಕೊಳ್ಳುವುದರ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ.

ಗುಜರಾತಿನ ಕಛ್ ಸಮುದ್ರ ತೀರದ ಭದ್ರೇಶ್ವರ ಪ್ರದೇಶವನ್ನು ಗುಜರಾತ ಸರಕಾರ ವಿಶಿಷ್ಟ ಆರ್ಥಿಕ ವಲಯವೆಂದು ಘೋಷಿಸಿ ಅದಾನಿ ಮತ್ತು ಟಾಟಾ ಸಮೂಹಗಳಿಗೆ ಕೈಗಾರಿಕೆಗಳಿಗಾಗಿ ಅವಕಾಶ ನೀಡಿತು. ಸಾಮಾಜಿಕ ಕಾರ್ಯಕತರು ಇದನ್ನು ವಿರೋಧಿಸಿದರು ಇದರಿಂದ ಈ ಪ್ರದೇಶದ ಜೀವ ಪರಿಸರ ಸಂಕುಲಕ್ಕೆ ಮತ್ತು ಜನರ ಜೀವನೋಪಾಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮೀನುಗಾರಿಕೆ ಮತ್ತು ಗುಜ್ಜರ ಸಮುದಾಯದ ಪಶುಸಂಗೋಪನೆಯ ಮೇಲೆ ಪರಿಣಾಮ ಬೀರುವ ಕಾರಣ ೩೨ ದಿನಗಳ ಕಾಲ ಚಳುವಳಿ ನಡೆಸಿ ವಿಶಿಷ್ಟ ವಲಯವೆಂದು ಘೋಷಿಸಲು ವಿರೋಧಿಸಿತು ನಾವು ಕೈಗಾರಿಕೀಕರಣದ ವಿರೋಧಿಗಳಲ್ಲ ಆದರೆ ಇದರಿಂದ ಯುವ ಪೀಳಿಗೆಗೆ ಉದ್ಯೋಗಗಳು ದೊರಕುವ ಬದಲಿಗೆ ಅವರ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಕಾರಣ ವಿಶಿಷ್ಟ ಆರ್ಥಿಕ ವಲಯವೆಂದು ಘೋಷಿಸುವದನ್ನು ವಿರೋಧಿಸುತ್ತೇವೆಂದು ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯ ಎಂದು ತಿಳಿಸಿದ್ದಾರೆ.

ಈ ಎಲ್ಲ ಅಧ್ಯಯನಗಳನ್ನು ಅವಲೋಕಿಸಿದಾಗ ಪ್ರವಾಹ ಮತ್ತು ಸ್ಥಳಾಂತರದಿಂದಾಗುವ ಸಮಸ್ಯೆಗಳ ಕುರಿತು ಕೆಲವೊಂದು ಈ ಕೆಳಗಿನ ವಿಷಯಗಳು ಗಮನ ಸೆಳೆಯುತ್ತವೆ.

೧) ಪ್ರವಾಹಕ್ಕೆ ನೈಸರ್ಗಿಕ ಅಂಶಗಳು ಕಾರಣವಾಗುವಂತೆ ಮಾನವನು ಕಾರಣವಾಗುತ್ತಿದ್ದಾನೆ.

೨) ಒಡ್ಡು ಯೋಜನೆ ಅಣೆಕಟ್ಟುಗಳಿಂದ ನಿರ್ಮಾಣ ಪ್ರವಾಹ ನಿಯಂತ್ರಣಕ್ಕೆ ಪರಿಹಾರವಲ್ಲ.

೩) ಜನರು ಪ್ರಕೃತಿಯೊಂದಿಗೆ ಹೊಂದಿಕೊಂಡ ಜೀವಿಸುವುದನ್ನು ರೂಢಿಸಿಕೊಳ್ಳಬೇಕು.

೪) ಪ್ರವಾಹ ಪ್ರದೇಶಗಳಲ್ಲಿ ಮುನ್ಸೂಚನೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

೫) ಪ್ರವಾಹ ಪ್ರದೇಶಗಳಲ್ಲಿ ಕಟ್ಟಡ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣವಿರಬೇಕು.

೬) ಸ್ಥಳಾಂತರಗಳನ್ನು ಮಿತಗೊಳಿಸಬೇಕು.

೭) ಯೋಜನೆಗಳಿಂದ ಬಾಧಿತ ಜನರಿಗೆ ಯೋಗ್ಯ ಪರಿಹಾರ ನೀಡಬೇಕು.

೮) ಯೋಜನೆಗಳ ನಿರ್ಮಾಣ ಕಾರ್ಯದಲ್ಲಿ ಬಾಧಿತ ಜನರನ್ನು ಸೇರಿಸಿಕೊಳ್ಳಬೇಕು.

೯) ಸ್ಥಳಾಂತರ ಲಿಂಗಾಧರಿತವಾಗಿರಬೇಕು.

೧೦) ಯೋಜನೆಯಲ್ಲಿ ಜೀವನೋಪಾಯ ಕ್ರಮಗಳನ್ನು ರೂಪಿಸಬೇಕು.

೧೧) ಯೋಜನೆ ಮೇಲ್ವಿಚಾರಣೆ ವ್ಯವಸ್ಥೆ ಸರಿಯಾಗಿರಬೇಕು.

೧೨) ಯೋಜನೆಯಿಂದ ಬಾಧಿತ ಜನರಿಗೆ ಯೋಜನೆ ಲಾಭಾಂಶಗಳು ದೊರಕುವಂತಾಗಬೇಕು.

೧೩) ಯೋಜನೆಯಿಂದ ಭೂಮಿಯನ್ನು ಕಳೆದುಕೊಂಡ ಜನರಿಗೆ ಹಣದ ರೂಪದಲ್ಲಿ ಪರಿಹಾರ ನೀಡದೆ ಕೃಷಿ ಭೂಮಿಯನ್ನು ಒದಗಿಸಬೇಕು.

೧೪) ಸರಕಾರದ ಉದ್ಯೋಗ ಅವಕಾಶಗಳಲ್ಲಿ ಯೋಜನಾ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು.

೧೫) ಬೃಹತ್ ಯೋಜನೆಗಳನ್ನು ಕೈಗೊಳ್ಳುವುದಕ್ಕಿಂತ ನಿಸರ್ಗಕ್ಕೆ ತೊಂದರೆಯಾಗದ ರೀತಿಯಲ್ಲಿ ಸಣ್ಣ ಸಣ್ಣ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಇದರಿಂದ ಪ್ರವಾಹ ನಿಯಂತ್ರಣವಾಗುತ್ತದೆ. ಅಲ್ಲದೆ ಯೋಜನಾ ನಿರಾಶ್ರಿತರು ಅಥವಾ ಸಂತ್ರಸ್ತರ ಸಮಸ್ಯೆಗಳಿರುವುದಿಲ್ಲ.

ಟಿಪ್ಪಣಿಗಳು :

1. Rajiv Sinha (2008) " Koshi : Rising Waters, Dynamic Channels and Human Disasters" EPW Vol. XLIII, No. 46, Nov 15-28, PP 42-46.
2. Dinesh Kumar Mishra ("2008) Bihar Floods : "The Inevitable has happened" EPW Vol. XLIII No. 36 Sept-6 PP. 8-12.
3. Alok Gupta, Araria, Saharsa, Arnab Datt and Savya Mishra (2008) "Engineered Flood not excess water, but neglected embarkment caused the flood" down to earth sept. PP 29.30.
4. Himansu Upadhaya (2008) "Breaehes in Narmada Command" EPW, Vol XLIII, No.-30 July-26 PP. 21-23.
5. Hiren Gain (2008) "Big Dams, Big floods" EPW Vol. XLIII No.30 July 15, PP. 19-21.
6. Narendra Kumar Rana and Sheo Shankar Verma "Floods in the Rapti River Basin, Uttra Pradhesh" National Geographic Journal of India Vol.55 March 20 PP. 25.32.
7. Amitab Srivatsav (2009) "Marooned in misery" India Today Jan 26, PP 24.66.
8. Vujika Yevjevich (1972) 'Floods and Drought' proceedings of the second international synophsis in Hydrolony at fort Collina.
9. D. R. Sikka (1972) Integrated Hydrologic and sociatal Instruction to Floods and droughts in India"
10. Bruce Mithel (1989) Environmental Impact Assesment" In geography and Researsh Analysis PP 199-211.
11. Panindar Goyari (2005) "Flood damages and sustainbility of agriculture in Assam" EPW, Vol. XL No. 26 June 25 PP. 2723-2729.
12. Vibha Varshini (2008) A Benign Dam that reduces malaria Incidence" down to earth, Nov 16-20 P. 43
13. Arnab Pratim Datt and Alok Gupta (2008) "Course correction can Bihar avert another Kosi Disaster" down to earth October, PP 22-24.

14. Dinesh Kumar Mishra (2008) "The Kosi and the Embarkment Story" EPW, Vol XLIII No. 46 Nov. 15-31 PP 47-52.

15. Amitab Srivatsav (2009) "Marooned in misery" India Today Jan 26, PP 24.66.

16. Jones and Bartell (1972) "Environmental science" International publication Barb house, Barbmens London UK.

17. Ramaswamy Iyer (2008) "Flood Himalayan Rivers Nepal : Some Heresies" EPW, Vol 46 Nov. 15-21 PP. 37-40.

18. C. P. Sinha (2008) "Management of Floods in Bihar" EPW, Vol XLIII No. 46. Nov 15-21 PP. 40-42

19. Manish Thakur (2009) "Global discourses and local moblisations the case of Bara Mukthi Abhiyan" Sociological Bullettin, Vol. 58 No. 2 May-August PP. 409-10

20. S. Parashuram (1997) "The Anti Dam movement and rehabitation" in the Dam and the Nation, displacement and resettlement in the Narmada Valley" Jean Dreze, Mira Samson and Satyajit Singh (ed) Oxford University press PP. 50-61.

21. Medha Patkar (1998) "The People policy on Development displacement and resettlement need to link desplacement and development EPW, Vol. 33, No. 38 Sept 19 P. 2432-33.

22. Cernea, Micheal. M. - (1988) Involuntry Resettlement In Development Project, The World Bank Washington DC.

23. M. Bharati and R. S. Rao (1999) "Linking Development to Displacement" EPW, Vol. 34 No. 28 July 10 PP 1955-56.

24. Chris De Wet (2001) "Economic Development and population displacement can everybody win! EPW Vol 36 No. 50 P-4637

25. Sanjay Sangavi (2002) "Narmada displacement : Continuing outrage' EPW, Vol. 37. No. 22 June 26 PP. 2132-34.

26. R. N. Sharma (2003) "Involuntry displacement : "A Few encounters" EPW, Vol. 38 No. 369 March 23-30. PP. 907-12.

27. Anu Kapur (2005) "Insensitive India ; Attitude towards disaster prvention and managment" EPW Vol XL No. 28 October 15 PP 4552-60.

28. Farnandes Walter (1998) "Land Aquisition (Amendment) Bill, 1998 Rights of projects affected persons ignored" EPW, Vol. 33 No. 4243, PP 2703-06

29. Harsha Mandera (2005) "Displacement with state subferfuge : A case stondy of Indira Sagar Pariyojana" EPW, Vol. XL No-26, PP 5056-5067.

30. Mani Padma Jain (2006) "Orissa Draft Resettlement and rehabilitation" EPW, Vol-XLII No. 22 October 2 PP. 384-387.

31. Kaivalya Desai Vinut Jain, Rahul Pandey, P. Shrikant, Upamanya Trivedi (2007) 'Rehabitation of the Indira Sagar Pariyojana displaced" EPW, Vol. XLIII No. 28 Dec 22 PP 27-36

32. Shankar Venkateshwar (2007) "Industrial displacement looking beyond cash compensation" EPW, Vol. XLIII No. 22 June 23 PP. 2050-51.

33. R. Umamaheshwari (2008) "The Last Crops" Down to Earth" Nov 16-20 P. 50.

34. Hari Mohan Mathur (2008) "A New Deal for displaced people : Orrissas Involuntry resettlement policy" Social change Dec, Vol.38 No-4 PP 553-575.

35. R. Umamaheshwari (2007) "Polavaram : The Rehabitation via forced concensus" EPW, Vol. XLIII No. 25 June 23-30 PP. 2385-87

36. Sexena K. B. (2008) "Development displacemnet and resistance : The law and the policy on land aquisition" Social change Vol. 38 No. 2 Sept 15 PP. 351-410

37. S. T. Bagalakoti (2008) "Socio Economic Impact of displacement : A Micro cevel study in (UKP) Karnataka, in Jayasheela, V Beasil Hans (ed) Rural Karnataka Serial publication Ansari Road, Dariya Ganj New Delhi-02 PP 250-59.

38. Enakshi, Ganguli and Thukkaral (2009) "Displacement and protecting the rights of children" in Lyla Mehta (ed) Displacement by the Development, Sage publication New Delhi PP. 83-103.

39. Hari Mohan Mathur 2009) "Gender Basis in resettlement planning in displaced by development (ed) Lyla Mehta.

40. Srinivas Ramani (2010) "Development and displacement : Resettlement in the Kutch " EPW, Vol. XLV No. 8 Feb. 20-26 PP. 15-18.

ಅಧ್ಯಾಯ : ನಾಲ್ಕು

ಸಂತ್ರಸ್ತರ ಸಾಮಾಜಿಕ ಪರಿಸ್ಥಿತಿ
ಹಾಗೂ
ಆರ್ಥಿಕ ಸ್ಥಿತಿಗಳ ಅಧ್ಯಯನ

ಅಧ್ಯಾಯ : ನಾಲ್ಕು

ಸಂತ್ರಸ್ತರ ಸಾಮಾಜಿಕ ಪರಿಸ್ಥಿತಿ ಹಾಗೂ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

ಈ ಅಧ್ಯಾಯದಲ್ಲಿ ಸಂತ್ರಸ್ತರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ವಿವರಿಸಲಾಗಿದೆ. ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ಲಿಂಗ, ವಯಸ್ಸು, ಧರ್ಮ, ಜಾತಿ, ವೈವಾಹಿಕ ಸ್ಥಿತಿ, ಅಂತಸ್ತು, ಶಿಕ್ಷಣ, ಉದ್ಯೋಗ, ಆದಾಯ, ಕುಟುಂಬದ ಸ್ವರೂಪ, ಆಸ್ತಿ ಸ್ವರೂಪ, ಮನೋರಂಜನಾ ಸಾಧನಗಳು, ಪ್ರತ್ಯೇಕವಾದ ಅಡುಗೆ ಮನೆ, ಅಡುಗೆಗೆ ಬಳಸುವ ಇಂಧನ, ಒಲೆಗಳ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸೌಕರ್ಯ, ಕುಟುಂಬದ ಭೂ ಹಿಡುವಳಿ ಪ್ರಮಾಣ, ಭೂ ಹಿಡುವಳಿ ಸ್ವರೂಪ, ಮುಖ್ಯ ಬೆಳೆ, ಹಣ ಉಳಿತಾಯ, ಉಳಿತಾಯ ಸ್ವರೂಪ, ಸಾಲದ ವಿವರ, ಸಾಲದ ಕಾರಣ, ಸಾಲದ ಪ್ರಮಾಣ, ಸಾಲದ ಮೂಲ, ಚಟಗಳು ಹೀಗೆ ಮುಂತಾದ ವಿವರಗಳನ್ನು ಮಾಹಿತಿದಾರರಿಂದ ಪಡೆದುಕೊಂಡು ವಿಶ್ಲೇಷಿಸಲಾಗಿದೆ.

ಲಿಂಗ ಪ್ರಮಾಣ :

ಮಾಹಿತಿ ಪಡೆದುಕೊಳ್ಳುವಲ್ಲಿ ಲಿಂಗ ಪ್ರಮುಖ ಪಾತ್ರ ವಹಿಸುತ್ತದೆ. ಲಿಂಗ ತಾರತಮ್ಯ ಮಾಡದೆ ಎಲ್ಲರಿಂದಲೂ ಮಾಹಿತಿ ಪಡೆದುಕೊಳ್ಳಲಾಯಿತು. ಪ್ರವಾಹ ಮತ್ತು ಪುನರ್ವಸತಿ ಕುರಿತು ಪುರುಷರು ಮತ್ತು ಮಹಿಳೆಯರ ವಿಭಿನ್ನ ವಿಚಾರಗಳನ್ನು ಹೊಂದಿರುವುದರಿಂದ ಪುರುಷ ಮತ್ತು ಮಹಿಳೆಯರಿಂದಲೂ ಮಾಹಿತಿ ಪಡೆಯಲಾಯಿತು. ಸಂತ್ರಸ್ತರ ಲಿಂಗ ಪ್ರಮಾಣವನ್ನು ಕೋಷ್ಟಕ ೪.೧ರಲ್ಲಿ ಪಡೆಯಲಾಗಿದೆ.

ಕೋಷ್ಟಕ ೪.೧

ಮಾಹಿತಿದಾರರ ಲಿಂಗ ಪ್ರಮಾಣ

ಅ.ನಂ	ಲಿಂಗ	ಮಾಹಿತಿದಾರರ ಪ್ರಮಾಣ	ಪ್ರತಿಶತ
೧	ಪುರುಷರು	೫೧೦	೮೭.೯೩
೨	ಮಹಿಳೆಯರು	೭೦	೧೨.೦೭
	ಒಟ್ಟು	**೫೮೦**	**೧೦೦.೦೦**

ಮೇಲಿನ ಕೋಷ್ಟಕ ೪.೧ನ್ನು ಅವಲೋಕಿಸಿದಾಗ ಸಂದರ್ಶಿಸಿದ ೫೮೦ ಸಂತ್ರಸ್ತರಲ್ಲಿ ಪುರುಷರು ೫೧೦ (ಶೇ ೮೭.೯೩) ಮತ್ತು ೭೦ (ಶೇ೧೨.೭) ಮಹಿಳೆಯರಿದ್ದಾರೆ. ಮಾಹಿತಿದಾರರರಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವುದನ್ನು ಕಾಣುತ್ತೇವೆ. ಪುರುಷ ಪ್ರಧಾನ ಸಮಾಜವಿರುವುದು ಮತ್ತು ಮಹಿಳೆಯರಿಂದ ಕುಟುಂಬದ ಉಳಿತಾಯ, ಸಾಲದ ಕುರಿತು ಮಾಹಿತಿ ದೊರೆಯುವುದು ವಿರಳ. ಕಾರಣ ಸಂದರ್ಶನಕಾರರ ಆಯ್ಕೆ ಯೋಗ್ಯವೆನಿಸುತ್ತದೆ.

ವಯಸ್ಸಿನ ಪ್ರಮಾಣ :

ಮಾಹಿತಿ ಸಂಗ್ರಹಣೆಯಲ್ಲಿ ವಯಸ್ಸು ಪ್ರಮುಖ ಪಾತ್ರ ವಹಿಸುತ್ತದೆ. ವಯಸ್ಸು ದೈಹಿಕ ಬೆಳವಣಿಗೆಯನ್ನು ಮಾತ್ರ ಸೂಚಿಸದೆ ವ್ಯಕ್ತಿಯ ಅನುಭವ ಮತ್ತು ಜ್ಞಾನದ ಸಂಕೇತವಾಗಿರುತ್ತದೆ. ಪ್ರವಾಹ ಮತ್ತು ಅದರ ದುಷ್ಪರಿಣಾಮದ ಕುರಿತು ವಿವಿಧ ವಯಸ್ಸಿನ ಜನರಲ್ಲಿ ವಿವಿಧ ಅಭಿಪ್ರಾಯಗಳಿರುತ್ತವೆ. ಕಾರಣ ಸಂತ್ರಸ್ತರ ವಯಸ್ಸಿನ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ಕಂಡುಕೊಳ್ಳಬಹುದು.

ಕೋಷ್ಟಕ ೪.೨

ಮಾಹಿತಿದಾರರ ವಯಸ್ಸಿನ ಪ್ರಮಾಣ

ಅ.ನಂ	ವಯಸ್ಸಿನ ಪ್ರಮಾಣ	ಸಂದರ್ಶನಕಾರರ ಸಂಖ್ಯೆ	ಪ್ರತಿಶತ
೧	೧೮–೨೯	೫೮	೧೦.೦೦
೨	೩೦–೪೪	೧೯೩	೩೩.೨೭
೩	೪೫–೫೯	೨೨೭	೩೯.೧೪
೪	೬೦ರ ಮೇಲ್ಪಟ್ಟು	೧೦೨	೧೭.೫೯
	ಒಟ್ಟು	**೫೮೦**	**೧೦೦.೦೦**

ಮೇಲಿನ ಕೋಷ್ಟಕ ೪.೨ನ್ನು ಗಮನಿಸಿದಾಗ ೧೮ ರಿಂದ ೨೯ ವಯಸ್ಸಿನವರು ೫೮ (ಶೇ೧೦.೦), ೩೦ ರಿಂದ ೪೪ ವಯಸ್ಸಿನವರು ೧೯೩ (ಶೇ೩೩.೨೭), ೪೫ ರಿಂದ ೫೯ರ ವರೆಗಿನ ೨೨೭ (ಶೇ೩೯.೧೪) ಮತ್ತು ೬೦ರ ಮೇಲ್ಪಟ್ಟವರು ೧೦೨ (ಶೇ೧೭.೫೯) ಕಂಡು ಬರುತ್ತಾರೆ. ಇವರಲ್ಲಿ ೪೫–೫೯ (ಶೇ೩೯.೧೪) ವಯಸ್ಸಿನವರು ಅಧಿಕ ಪ್ರಮಾಣದಲ್ಲಿರುವುದು ತಿಳಿದು ಬರುತ್ತದೆ. ಅಧ್ಯಯನ ಸೂಚಿಯಲ್ಲಿ ೧೮ ವಯಸ್ಸಿನ ಮೇಲ್ಪಟ್ಟವರಿಂದ ಮಾಹಿತಿ ಪಡೆಯಲು ಉದ್ದೇಶಿಸಲಾಗಿತ್ತು. ಮಾಹಿತಿ ಒದಗಿಸಿದ ಎಲ್ಲ ಮಾಹಿತಿದಾರರು ೧೮ ವಯಸ್ಸಿನ ಮೇಲ್ಪಟ್ಟವರಿದ್ದಾರೆ.

ಧರ್ಮ ಮತ್ತು ಜಾತಿ :

ಧರ್ಮ ಮತ್ತು ಜಾತಿಗಳು ಸಮಾಜದ ರಾಜಕೀಯ, ಆರ್ಥಿಕ, ಮತ್ತು ಸಾಮಾಜಿಕ ಕ್ಷೇತ್ರದ ಮೇಲೆ ಪ್ರಭಾವ ಬೀರುತ್ತವೆ. ವಿವಿಧ ಜಾತಿ ಮತ್ತು ಧರ್ಮದ ಜನರು ಪ್ರಾವಹದಿಂದ ವಿವಿಧ ರೀತಿಯಿಂದ ಪ್ರಭಾವಿತರಾಗಿರುತ್ತಾರೆ. ಸಾಮಾನ್ಯವಾಗಿ ಕೆಳಜಾತಿಯವರು ಮತ್ತು ಮುಸ್ಲಿಂ ಧರ್ಮದ ಜನರು ಗ್ರಾಮದ ಹೊರವಲಯಗಳ ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇವರ ಮೇಲೆ ಪ್ರವಾಹದ ದುಷ್ಪರಿಣಾಮ ಹೆಚ್ಚಿಗೆ ಕಾಣುತ್ತೇವೆ. ಪ್ರಸ್ತುತ ಅಧ್ಯಯನದಲ್ಲಿ ವಿವಿಧ ಜಾತಿ ಮತ್ತು ಧರ್ಮದವರ ಅನುಪಾತಕ್ಕೆ ಅನುಸರಿಸಿ ಪ್ರಾತಿನಿಧ್ಯ ನೀಡಲಾಗಿದೆ. ವಿವಿಧ ಜಾತಿ ಮತ್ತು ಧರ್ಮದ ಮಾಹಿತಿದಾರರ ವಿವರಗಳು ಕೆಳಗಿನಂತಿವೆ.

ಕೋಷ್ಟಕ ೪.೩

ಮಾಹಿತಿದಾರರ ಧರ್ಮ ಮತ್ತು ಜಾತಿಯ ಪ್ರಮಾಣ

ಅ.ನಂ	ಧರ್ಮ	ಜಾತಿ	ಸಂದರ್ಶನಕಾರರ ಸಂಖ್ಯೆ	ಪ್ರತಿಶತ
೧	ಹಿಂದು	ಉಚ್ಚ ಶ್ರೇಣಿ ಹಿಂದುಗಳು ಮಧ್ಯಮ ಶ್ರೇಣಿ ಹಿಂದುಗಳು ಕೆಳಶ್ರೇಣಿ ಹಿಂದುಗಳು	೧೫೫ ೭೮ ೧೬೨	೨೬.೭೨ ೧೩.೪೫ ೨೭.೯೩
೨	ಜೈನ		೧೭೦	೨೯.೩೧
೩	ಮುಸ್ಲಿಂ		೧೫	೨.೫೯
	ಒಟ್ಟು		**೫೮೦**	**೧೦೦.೦೦**

ಮೇಲಿನ ೪.೩ ಕೋಷ್ಟಕವನ್ನು ಗಮನಿಸಿದಾಗ ಎಲ್ಲ ಧರ್ಮ ಮತ್ತು ಜಾತಿಯ ಜನರಿಗೆ ಅವರ ಅನುಪಾತಕ್ಕೆ ಅನುಸಾರವಾಗಿ ಪ್ರಾತಿನಿಧ್ಯ ನೀಡಲಾಗಿದೆ. ಅಧ್ಯಯನದಲ್ಲಿ ಉಚ್ಚ ಶ್ರೇಣಿಯ ೧೫೫, ಮಧ್ಯಮ ಶ್ರೇಣಿ ೭೮ ಮತ್ತು ಕೆಳಜಾತಿಯ ೧೬೨ ಹೀಗೆ ಒಟ್ಟು ೩೯೫ ಹಿಂದು ಕುಟುಂಬಗಳಿದ್ದು (ಶೇ೬೮.೧೦), ಜೈನ ೧೭೦ (ಶೇ೨೯.೩೧), ಮುಸ್ಲಿಂ ೧೫ (ಶೇ೨.೫೯) ಜನರಿದ್ದಾರೆ. ಇವರಲ್ಲಿ ಹಿಂದೂಗಳ ಪ್ರಮಾಣ ಅತ್ಯಧಿಕವಾಗಿರುವದು ಕಂಡು ಬರುತ್ತದೆ.

ಸಂದರ್ಶಿತರ ಶೈಕ್ಷಣಿಕ ಅರ್ಹತೆ :

ವ್ಯಕ್ತಿಯ ಜೀವನದಲ್ಲಿ ಶಿಕ್ಷಣದ ಪಾತ್ರ ಅತೀ ಪ್ರಮುಖ. ವ್ಯಕ್ತಿಯ ಜ್ಞಾನ, ತಿಳುವಳಿಕೆ, ವ್ಯಕ್ತಿತ್ವ ಬೆಳವಣಿಗೆಯಲ್ಲಿ, ಉದ್ಯೋಗಗಳನ್ನು ನಿರ್ವಹಿಸಲು ಸಹಾಯಕವಾಗುತ್ತದೆ. ದೇಶದ ಅಭಿವೃದ್ಧಿ ಜನರ ಶಿಕ್ಷಣ ಪ್ರಮಾಣವನ್ನು ಅವಲಂಭಿಸಿರುತ್ತದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಕ್ಷಣವೇ ಕಾರಣ. ಸಮುದಾಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಸಮಸ್ಯೆಗಳಿಗೆ ಸ್ಪಂಧಿಸುವುದು ಶಿಕ್ಷಣದ ಮಟ್ಟವನ್ನು ಆಧರಿಸಿರುತ್ತದೆ. ಶಿಕ್ಷಣದ ಗುರಿ ಕೇವಲ ಪುಸ್ತಕೀಯ ಜ್ಞಾನವನ್ನು ಮಕ್ಕಳಲ್ಲಿ ತುಂಬುವದಾಗಿರದೆ ವ್ಯಕ್ತಿತ್ವದ ಪರಿಪೂರ್ಣ ಬೆಳವಣಿಗೆ ಅದರ ಪ್ರಮುಖ ಉದ್ಧೇಶವಾಗಿರುತ್ತದೆ. ಸಮಾಜದ ಯಾವುದೇ ಸಂಘ ಸಂಸ್ಥೆಗಳು ಕಲಿಸಿಕೊಡದ ಹಲವಾರು ಸಾಮಾಜಿಕ ಸದ್ಗುಣಗಳನ್ನು ಶಿಕ್ಷಣ ಕಲಿಸಿಕೊಡುತ್ತದೆ. ಜಾತ್ಯಾತೀತ ಮನೋಭಾವನೆ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ. ಸ್ಪರ್ಧಾತ್ಮಕ ಭಾವನೆಗಳು, ನಾಯಕತ್ವದ ಗುಣಗಳ ಬೆಳವಣಿಗೆಗೆ ಸಹಕಾರಿ. ಮಹಾತ್ಮಾ ಗಾಂಧೀಜಿಯವರು ಸಮಾಜದಲ್ಲಿ ಸಾಮಾಜಿಕ ಆರ್ಥಿಕ ಸುಧಾರಣೆ, ಭೌಧ್ಧಿಕ ಬೆಳವಣಿಗೆ, ರಾಜಕೀಯ ಉತ್ಕ್ರಾಂತಿಗಳ ಮತ್ತು ನೈತಿಕ ಬೆಳವಣಿಗೆಯ ಸಾಧನವೇ ಶಿಕ್ಷಣ ಎಂದಿದ್ದಾರೆ. ಸರಕಾರ ಪುನರ್ವಸತಿ ಯೋಜನೆಗಳಲ್ಲಿ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳು ಹೇಗಿರಬೇಕು ಎಂಬುದರ ಕುರಿತು ಮಾಹಿತಿ ಒದಗಿಸಲಾಗುತ್ತದೆ ಮಾಹಿತಿದಾರರು ನೀಡುವ ವಿವರಗಳು ಅವರ ಶೈಕ್ಷಣಿಕ ಮಟ್ಟವನ್ನು ಅವಲಂಭಿಸಿರುತ್ತವೆ. ಕಾರಣ ಮಾಹಿತಿದಾರರ ಶೈಕ್ಷಣಿ ಅರ್ಹತೆ ಮಾಹಿತಿಯನ್ನು ಕೋಷ್ಠಕ ೪.೪ರಲ್ಲಿ ಪಡೆಯಲಾಗಿದೆ.

ಕೋಷ್ಠಕ ೪.೪

ಮಾಹಿತಿದಾರರ ಶೈಕ್ಷಣಿಕ ಅರ್ಹತೆ

ಅ.ನಂ	ಶಿಕ್ಷಣದ ಮಟ್ಟ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಅನಕ್ಷರಸ್ಥರು	೭೭	೧೩.೨೭
೨	ಪ್ರಾಥಮಿಕ	೨೧೨	೫೦.೩೫
೩	ಮಾಧ್ಯಮಿಕ	೭೩	೧೨.೫೯
೪	ಪಿ.ಯು.ಸಿ	೪೬	೭.೯೩
೫	ಐ.ಟಿ.ಐ	೦೨	೦.೩೪
೬	ಡಿಪ್ಲೋಮಾ	೦೧	೦.೧೭
೭	ಶಿಕ್ಷಕರ ತರಬೇತಿ	೧೭	೨.೯೪
೮	ಬಿ.ಫಾರ್ಮ	೦೨	೦.೩೪
೯	ಪದವಿ, ಸ್ನಾತಕ ಮತ್ತು ಸ್ನಾತಕೋತ್ತರ	೭೦	೧೨.೦೭
	ಒಟ್ಟು	೫೮೦	೧೦೦.೦೦

ಮೇಲಿನ ಕೋಷ್ಟಕ ೪.೪ನ್ನು ಅವಲೋಕಿಸಿದಾಗ ಪ್ರತಿಶತ ೧೩.೨೭ ಮಾಹಿತಿದಾರರು ಅನಕ್ಷರಸ್ಥರಾಗಿದ್ದಾರೆ. ೫೦.೩೫ರಷ್ಟು ಜನರು ಪ್ರಾಥಮಿಕ ಶಿಕ್ಷಣ, ೧೨.೫೯ ಮಾಧ್ಯಮಿಕ ಶಿಕ್ಷಣ, ೭.೯೩ ಪದವಿಪೂರ್ವ ಶಿಕ್ಷಣ, ಐ.ಟಿ.ಆಯ್ ೦.೩೪, ಡಿ.ಎಡ್. ೨.೯೭, ಬಿ.ಫಾರ್ಮ ೦.೩೪ ಹಾಗೂ ೧೨.೦೭ ಪ್ರತಿಶತ ಜನರು ಪದವಿ ಸ್ನಾತಕೋತ್ತರ ಶಿಕ್ಷಣ ಪಡೆದವರು ಕಂಡುಬರುತ್ತಾರೆ.

ಮಾಹಿತಿದಾರರ ವೈವಾಹಿಕ ಸ್ತಿತಿಗತಿಗಳು :

ಮಾಹಿತಿದಾರರು ನೀಡುವ ಮಾಹಿತಿಗಳು ಆತನ ವೈವಾಹಿಕ ಬದುಕಿನ ಸ್ಥಿತಿಗತಿಗಳನ್ನು ಅವಲಂಭಿಸಿರುತ್ತವೆ. ಆದ್ದರಿಂದ ಮಾಹಿತಿದಾರನ ವೈವಾಹಿಕ ಬದುಕಿನ ಸ್ಥಿತಿಗತಿಗಳು ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರವಾಹದ ದುಷ್ಪರಿಣಾಮಗಳು ಅವಿವಾಹಿತರಲ್ಲಿ ಕಡಿಮೆ ಪ್ರಮಾಣದಲ್ಲಿದ್ದರೆ, ವಿವಾಹಿತರಲ್ಲಿ ಹೆಂಡತಿ, ಮಕ್ಕಳ ಕಾರಣ ಹೆಚ್ಚಿನ ತೀವ್ರತೆಯನ್ನು ಕಾಣುತ್ತೇವೆ. ಮಾಹಿತಿದಾರರ ವೈವಾಹಿಕ ಅಂತಸ್ತನ್ನು ೪.೫ರ ಕೋಷ್ಟಕದಲ್ಲಿ ನೋಡಬಹುದು.

ಕೋಷ್ಟಕ : ೪.೫

ಮಾಹಿತಿದಾರರ ವೈವಾಹಿಕ ಅಂತಸ್ತು

ಅ.ನಂ	ವೈವಾಹಿಕ ಅಂತಸ್ತು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ವಿವಾಹಿತ	೪೯೨	೮೪.೮೩
೨	ಅವಿವಾಹಿತ	೧೭	೨.೯೩
೩	ವಿಧವೆ	೬೬	೧೧.೩೮
೪	ವಿಧುರ	೦೨	೦.೩೪
೫	ಪ್ರತ್ಯೇಕ/ವಿಚ್ಛೇಧಿತ	೦೧	೦.೧೭
೬	ದೇವದಾಸಿ	೦೨	೦.೩೪
	ಒಟ್ಟು	೫೮೦	೧೦೦.೦೦

ಮೇಲಿನ ೪.೫ ಕೋಷ್ಟಕವನ್ನು ಗಮನಿಸಿದಾಗ ಪ್ರತಿಶತ ೮೪.೮೩ ರಷ್ಟು ಮಾಹಿತಿದಾರರು ವಿವಾಹಿತರಾಗಿದ್ದು, ಶೇಕಡಾ ೨.೯೩ ರಷ್ಟು ಅವಿವಾಹಿತರಾಗಿದ್ದಾರೆ. ವಿಧವೆಯರ ಪ್ರಮಾಣ ಶೇ ೧೧.೩೮ ರಷ್ಟಿದ್ದು ಇವರ ಪ್ರಮಾಣ ಹೆಚ್ಚಿಗೆ ಕಾಣುತ್ತೇವೆ. ವಿಧುರರು ಶೇ ೦.೩೪ ರಷಿದ್ದರೆ ದೇವದಾಸಿಯರು ೦.೩೪ ಪ್ರಮಾಣದಲ್ಲಿ ಇದ್ದಾರೆ. ಉಳಿದವರು ಶೇ ೦.೧೭ ವಿಚ್ಛೇಧಿತ/ಪ್ರತ್ಯೇಕ ವಾಸಿಸುವವರಾಗಿದ್ದಾರೆ.

ಮಾಹಿತಿದಾರರ ವಿವಿಧ ಉದ್ಯೋಗ ನಿರ್ವಹಿಸುವ ಪ್ರಮಾಣ:

ಮಾಹಿತಿದಾರನ ಉದ್ಯೋಗ ಆತನ ಬದುಕಿನ ರೂಪರೇಷೆಗಳನ್ನು ನಿರ್ಧರಿಸುತ್ತದೆ. ಅವನ ಆಶೆ, ಧೋರಣೆಗಳು ಅವನ ಉದ್ಯೋಗದೊಂದಿಗೆ ನೇರ ಸಂಬಂಧವನ್ನು ಪಡೆದಿರುತ್ತವೆ. ಕೃಷಿ ಮತ್ತು ಕೃಷಿ ಸಂಬಂಧಿತ ಉದ್ಯೋಗಗಳನ್ನು ನಿರ್ವಹಿಸುವ ಜನರ ಮೇಲೆ ಪ್ರವಾಹ ಹೆಚ್ಚಿನ ಪರಿಣಾಮ ಬೀರಿದರೆ, ಕೃಷಿಯೇತರ ಉದ್ಯೋಗಗಳಲ್ಲಿ ತೊಡಗಿದವರಲ್ಲಿ ಇದರ ಪರಿಣಾಮದ ತೀವ್ರತೆ ಕಡಿಮೆ ಕಾಣುತ್ತೇವೆ.

ಕೋಷ್ಟಕ ೪.೬

ಮಾಹಿತಿದಾರರ ಉದ್ಯೋಗ ನಿರ್ವಹಣೆಯ ಪ್ರಮಾಣ

ಅ.ನಂ	ಉದ್ಯೋಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಕೂಲಿ	೨೩೫	೪೦.೫೧
೨	ಒಕ್ಕಲುತನ	೨೦೯	೩೬.೦೪
೩	ವ್ಯಾಪಾರ	೦೭	೧.೨೧
೪	ಸರಕಾರಿ ನೌಕರಿ	೦೭	೧.೨೧
೫	ಸ್ವ ಉದ್ಯೋಗ	೭೨	೧೨.೪೧
೬	ಮನೆಗೆಲಸ	೩೩	೫.೬೯
೭	ವಿದ್ಯಾರ್ಥಿಗಲ	೧೭	೨.೯೩
	ಒಟ್ಟು	**೫೮೦**	**೧೦೦.೦೦**

ಮೇಲಿನ ೪.೬ ಕೋಷ್ಟಕವನ್ನು ಗಮನಿಸಿದಾಗ ಅತಿ ಹೆಚ್ಚು ಪ್ರತಿಶತ ೪೦.೫೧ರಷ್ಟು ಮಾಹಿತಿದಾರರು ಕೂಲಿ ಕೆಲಸದಲ್ಲಿ ತೊಡಗಿದ್ದರೆ, ಒಕ್ಕಲುತನದಲ್ಲಿ ತೊಡಗಿರುವ ಶೇ ೩೬.೦೪ ಜನರಿದ್ದಾರೆ. ವ್ಯಾಪಾರದಲ್ಲಿ ಶೇ ೧.೨೧, ಸರಕಾರಿ ನೌಕರಿಯಲ್ಲಿ ಶೇ ೧.೨೧ ರಷ್ಟು, ಸ್ವ ಉದ್ಯೋಗ ಶೇ ೧೨.೪೧, ಮನೆಗೆಲಸ ಶೇ ೫.೬೯ ಮತ್ತು ಶೇ ೨.೯೩ರಷ್ಟು ವಿದ್ಯಾರ್ಥಿಗಳಿರುವುದು ಕಂಡು ಬರುತ್ತದೆ.

ಮಾಹಿತಿದಾರರ ವಾರ್ಷಿಕ ಆದಾಯ :

ವಾರ್ಷಿಕ ಆದಾಯ ವ್ಯಕ್ತಿಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಜೀವನ ಮಟ್ಟ ಇದನ್ನೇ ಅವಲಂಭಿಸಿರುತ್ತದೆ. ಸಮಾಜ, ಕುಟುಂಬದಲ್ಲಿ ಸ್ಥಾನಮಾನಗಳು ವಾರ್ಷಿಕ ಆದಾಯಗಳಿಗೆ ಅನುಗುಣವಾಗಿರುತ್ತದೆ. ಅನೇಕ ದಿನಗಳ ಪ್ರವಾಹದ ಕಾರಣ ಬೆಳೆಗಳು ನಾಶವಾದವು. ಜನರ ವಾರ್ಷಿಕ ಆದಾಯದ ಮೇಲೆ ಪರಿಣಾಮ ಬೀರಿತು. ಕಾರಣ ಈ ಎಲ್ಲ ಅಂಶಗಳನ್ನು ತಿಳಿದುಕೊಳ್ಳಲು ಮಾಹಿತಿದಾರರ ವಾರ್ಷಿಕ ಆದಾಯವನ್ನು ಗಮನಿಸಲಾಯಿತು. ಅದನ್ನು ಕೋಷ್ಟಕ ೪.೭ರಲ್ಲಿ ನೋಡಬಹುದು.

ಕೋಷ್ಟಕ ೪.೭

ಮಾಹಿತಿದಾರರ ವಾರ್ಷಿಕ ಅದಾಯ ಪ್ರಮಾಣ

ಅ.ನಂ	ವಾರ್ಷಿಕ ಆದಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೨೫೦೦೦ ದ ಒಳಗೆ	೨೬೭	೪೬.೦೩
೨	೨೫೦೦೦-೫೦೦೦೦	೧೧೧	೧೯.೧೪
೩	೫೦೦೦೦-೧೦೦೦೦೦	೮೮	೧೫.೧೭
೪	ಒಂದು ಲಕ್ಷ ಮೇಲ್ಪಟ್ಟು	೧೧೪	೧೯.೬೬
	ಒಟ್ಟು	**೫೮೦**	೧೦೦.೦೦

ಕೋಷ್ಟಕ ೪.೭ ನ್ನು ಗಮನಿಸಿದಾಗ ೨೫೦೦೦ದ ಒಳಗೆ ವಾರ್ಷಿಕ ಆದಾಯವನ್ನು ಹೊಂದಿರುವ ಮಾಹಿತಿದಾರರ ಸಂಖ್ಯೆ ಪ್ರತಿಶತ ೪೬.೦೩, ಇನ್ನು ೨೫೦೦೦ ದಿಂದ ೫೦,೦೦೦ ವಾರ್ಷಿಕ ಆದಾಯ ಹೊಂದಿರುವವರು ಶೇ ೧೯.೧೪ರಷ್ಟಿದೆ. ೫೦,೦೦೦ದಿಂದ ಲಕ್ಷದವರೆಗೆ ಶೇ ೧೫.೧೭ ಜನರಿದ್ದಾರೆ. ೧ ಲಕ್ಷಕ್ಕಿಂತ ಹೆಚ್ಚಿನ ಆದಾಯವನ್ನು ಹೊಂದಿದವರು ಶೇ ೧೯.೬೬ ರಷ್ಟಿದ್ದಾರೆ. ಇದರಿಂದ ಮಾಹಿತಿದಾರರಲ್ಲಿ ಹೆಚ್ಚಿನ ಸಂಖ್ಯೆಯವರು (ಶೇ ೪೬.೦೩) ೨೫೦೦೦ದ ಒಳಗೆ ವಾರ್ಷಿಕ ಆದಾಯ ಹೊಂದಿರುವುದು ತಿಳಿದು ಬರುತ್ತದೆ.

ಕುಟುಂಬದ ಸ್ವರೂಪ :

ಕುಟುಂಬ ಸಾರ್ವತ್ರಿಕವಾದ ಮತ್ತು ಪ್ರಾಚೀನವಾದ ಸಂಸ್ಥೆ, ಸಾಮಾಜಿಕ ಸಂಸ್ಥೆಯ ಚಿಕ್ಕ ಘಟಕ. ಸಾಮಾಜಿಕ ರಚನೆಯಲ್ಲಿ ಅದರದು ಕೇಂದ್ರೀಯ ಸ್ಥಾನ. ಅದು ಭಾವನಾತ್ಮಕ ಸಂಬಂಧಗಳ ಮೇಲೆ ರಚನೆಗೊಂಡಿದೆ. ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಾಚೀನ ಕಾಲದಿಂದಲೂ ಸ್ಥಳ ಹಾಗೂ ಕಾಲದ ಅಗತ್ಯಗಳಿಗೆ ತಕ್ಕಂತೆ ರಚನೆ, ಕಾರ್ಯಗಳಲ್ಲಿ ಹಲವು ಮಾರ್ಪಾಡುಗಳೊಂದಿಗೆ ನಿರಂತರವಾಗಿ ಸಾಗಿ ಬಂದಿದೆ. ಪ್ರವಾಹ ಅವಿಭಕ್ತ ಕುಟುಂಬಗಳಲ್ಲಿ ಜನರ ಸಂಖ್ಯೆ ಹೆಚ್ಚಿಗಿರುವುದರಿಂದ ಅವರ ಮೇಲೆ ಹೆಚ್ಚಿನ ಪರಿಣಾಮ ಬೀರಿದರೆ, ವಿಭಕ್ತ ಕುಟುಂಬಗಳ ಮೇಲೆ ಅದರ ಪರಿಣಾಮದ ತೀವ್ರತೆ ಕಡಿಮೆ ಕಾಣುತ್ತೇವೆ. ಮಾಹಿತಿದಾರರ ಕುಟುಂಬದ ಸ್ವರೂಪವನ್ನು ಕೋಷ್ಟಕ ೪.೮ ರಲ್ಲಿ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೮

ಮಾಹಿತಿದಾರರ ಕುಟುಂಬದ ಸ್ವರೂಪ

ಅ.ನಂ	ಕುಟುಂಬದ ಸ್ವರೂಪ	ಸಂದರ್ಶನಕಾರರ ಸಂಖ್ಯೆ	ಪ್ರತಿಶತ
೧	ಅವಿಭಕ್ತ	೧೦೩	೧೭.೭೬
೨	ವಿಭಕ್ತ	೪೭೭	೮೨.೨೪
	ಒಟ್ಟು	**೫೮೦**	**೧೦೦.೦೦**

ಮೇಲಿನ ೪.೮ ಕೋಷ್ಟಕವನ್ನು ಗಮನಿಸಿದಾಗ ಅವಿಭಕ್ತ ಕುಟುಂಬಗಳಲ್ಲಿ ಪ್ರತಿಶತ ೧೭.೭೬ರಷ್ಟು ಜನರು ಮತ್ತು ವಿಭಕ್ತ ಕುಟುಂಬಗಳಲ್ಲಿ ಪ್ರತಿಶತ ೮೨.೨೪ ರಷ್ಟು ಜನರು ವಾಸಿಸುತ್ತಿರುವುದು ಕಂಡು ಬರುತ್ತದೆ.

ಕುಟುಂಬದ ಗಾತ್ರ :

ಕುಟುಂಬದ ಗಾತ್ರವು ಜೀವನಮಟ್ಟ ಮತ್ತು ಸ್ಥಾನಮಾನ ನಿರ್ಧರಿಸುವ ಪ್ರಮುಖ ಅಂಶ. ಕುಟುಂಬದ ಗಾತ್ರ ದೊಡ್ಡಗಿದ್ದರೆ ಜೀವನಮಟ್ಟ ಕೆಳಮಟ್ಟದಿರುತ್ತದೆ. ಕುಟುಂಬದ ಗಾತ್ರ ಚಿಕ್ಕದಾಗಿದ್ದರೆ ಕುಟುಂಬ ಒಳ್ಳೇಯ ಜೀವನಮಟ್ಟ ಕಾಯ್ದುಕೊಳ್ಳಲು ಸಾಧ್ಯ. ಪ್ರವಾಹದ ಪರಿಣಾಮಗಳು ಕುಟುಂಬದ ಗಾತ್ರವನ್ನು ಅವಲಂಬಿಸಿರುತ್ತದೆ. ಕೆಳಗಿನ ಕೋಷ್ಟಕದಲ್ಲಿ ಕುಟುಂಬದ ಗಾತ್ರ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಕೋಷ್ಟಕ ೪.೯

ಮಾಹಿತಿದಾರರ ಕುಟುಂಬದ ಗಾತ್ರ

ಅ.ನಂ	ಉದ್ಯೋಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಚಿಕ್ಕ ಕುಟುಂಬಗಳು (೨ ರಿಂದ ೪ ಸದಸ್ಯರು)	೩೧೬	೫೪.೪೮
೨	ಮಧ್ಯಮ ಕುಟುಂಬಗಳು (೫ ರಿಂದ ೭ ಸದಸ್ಯರು)	೨೧೪	೩೬.೯೦
೩	ಬೃಹತ್ ಗಾತ್ರದ ಕುಟುಂಬಗಳು (೮ರ ಮೇಲ್ಪಟ್ಟು)	೫೦	೮.೬೨
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೪.೯ನ್ನು ಗಮನಿಸಿದಾಗ ಪ್ರತಿಶತ ೫೪.೪೮ ಜನರು ಚಿಕ್ಕ ಕುಟುಂಬಗಳಲ್ಲಿ ವಾಸಿಸುತ್ತಿದ್ದರೆ, ಶೇ ೩೬.೯೦ ಜನರು ಮಧ್ಯಮ ಕುಟುಂಬಗಳಲ್ಲಿ ವಾಸಿಸುತ್ತಿದ್ದಾರೆ. ಹಾಗೆಯೇ ಕುಟುಂಬದಲ್ಲಿ ೮ ಸದಸ್ಯರಿಗಿಂತ ಹೆಚ್ಚಿನ ಸದಸ್ಯರನ್ನು ಒಳಗೊಂಡ ಕುಟುಂಬಗಳು ಶೇ ೮.೬೨ ಕಂಡು ಬರುತ್ತವೆ.

ಮನೆ ಸ್ವರೂಪ :

ಪ್ರವಾಹದ ಪರಿಣಾಮಗಳು ಮನೆಯ ಸ್ವರೂಪವನ್ನು ಅವಲಂಭಿಸಿರುತ್ತವೆ. ಗುಡಿಸಲುಗಳಲ್ಲಿ ವಾಸಿಸುವ ಜನರ ಮೇಲೆ ಹೆಚ್ಚಿನ ಪರಿಣಾಮ ಬೀರಿದರೆ ಮನೆಗಳಲ್ಲಿ ವಾಸಿಸುವ ಜನರ ಮೇಲೆ ಕಡಿಮೆ ಪರಿಣಾಮ ಕಾಣುತ್ತೇವೆ. ಆದರೆ ಹಾನಿಯ ಪ್ರಮಾಣಗಳು ಮನೆಗಳಲ್ಲಿ ವಾಸಿಸುವವರಲ್ಲಿ ಹೆಚ್ಚಿಗಿದ್ದರೆ, ಗುಡಿಸಲುಗಳಲ್ಲಿ ವಾಸಿಸುವವರಲ್ಲಿ ಕಡಿಮೆ ಕಾಣುತ್ತೇವೆ.

ಜನರ ಮನೆಗಳು ವಾಸಸ್ಥಳ ಮಾತ್ರವಾಗಿರದೆ ಅವರ ಜೀವನ ಮಟ್ಟವನ್ನು ತೋರಿಸುತ್ತವೆ. ಜನರು ಹೊಂದಿರುವ ವಾಸಸ್ಥಳಗಳ ಸ್ವರೂಪಗಳನ್ನು ಆಧರಿಸಿ ಅವರು ಎಂತಹ ಜೀವನ ಸಾಗಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಇತ್ತೀಚಿನ ದಿನಗಳಲ್ಲಿ ಜನರು ವಾಸಸ್ಥಳಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಗ್ರಾಮೀಣ ಜನರು ಸರಳ ಜೀವಿಗಳು ಎಂದು ಹೇಳುತ್ತೇವೆ. ಅವರ ಸರಳತೆ ವಾಸಸ್ಥಳಗಳಲ್ಲಿಯೂ ಕಾಣುತ್ತೇವೆ. ಕೆಳಗಿನ ಕೋಷ್ಟಕದಲ್ಲಿ ಮನೆಗಳ ಸ್ವರೂಪ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕ ೪.೧೦

ಮಾಹಿತಿದಾರರ ಮನೆ ಸ್ವರೂಪ

ಅ.ನಂ	ಮನೆಯ ಸ್ವರೂಪ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಗುಡಿಸಲುಗಳು	೧೯೧	೩೨.೯೩
೨	ಕಚ್ಚಾ ಮನೆಗಳು	೨೨೪	೩೮.೬೨
೩	ಪಕ್ಕಾ ಮನೆಗಳು	೧೬೫	೨೮.೪೫
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೧೦ ಅವಲೋಕಿಸಲಾಗಿ ಪ್ರತಿಶತ ೩೨.೯೩ ಗುಡಿಸಲುಗಳಲ್ಲಿ ಶೇಕಡಾ ೩೮.೬೨ ಕಚ್ಚಾಮನೆಗಳಲ್ಲಿ ಹಾಗೂ ಶೇಕಡಾ ೨೮.೪೫ ಜನರು ಪಕ್ಕಾ ಮನೆಗಳಲ್ಲಿ ವಾಸಿಸುತ್ತಿರುವುದು ಕಂಡು ಬರುತ್ತದೆ. ಗ್ರಾಮದ ಹೆಚ್ಚಿನ ಜನರು ಗುಡಿಸಲುಗಳು ಮತ್ತು ಕಚ್ಚಾ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಕೋಣೆಗಳ ಸಂಖ್ಯೆ :

ವ್ಯಕ್ತಿಗೆ ವಾಸಿಸಲು ಮನೆ ಎಷ್ಟು ಮುಖ್ಯವೋ ಅಷ್ಟೇ ಮನೆಯೊಳಗಿನ ಕೋಣೆಗಳ ಸಂಖ್ಯೆಯೂ ಪ್ರಮುಖ. ಇದು ಅವರ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಸುತ್ತದೆ. ಬಡತನ ಕುಟುಂಬಗಳು ಒಂದೇ ಕೋಣೆ ಹೊಂದಿದ್ದರೆ, ಶ್ರೀಮಂತ ಕುಟುಂಬಗಳು ಅನೇಕ ಕೋಣೆಗಳನ್ನು ಹೊಂದಿದ ಮನೆಗಳನ್ನು ಹೊಂದಿರುತ್ತಾರೆ. ಈ ಹಿನ್ನಲೆಯಲ್ಲಿ ಸಂತ್ರಸ್ತರ ಮನೆಗಳಲ್ಲಿನ ಕೋಣೆಗಳನ್ನು ಕುರಿತು ಮಾಹಿತಿ ಪಡೆದುಕೊಳ್ಳಲಾಗಿದೆ. ಆ ಮಾಹಿತಿಯನ್ನು ಕೋಷ್ಟಕ ೪.೧೧ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೪.೧೧

ಮಾಹಿತಿದಾರರು ಹೊಂದಿರುವ ಕೋಣೆಗಳ ಸಂಖ್ಯೆ

ಅ.ನಂ	ಕೋಣೆಗಳ ಸಂಖ್ಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧	೧೪೮	೨೫.೫೨
೨	೨	೨೨೭	೩೯.೧೪
೩	೩	೧೧೧	೧೯.೧೪
೪	೪ ರ ಮೇಲ್ಪಟ್ಟು	೯೪	೧೬.೨೦
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೧೧ರ ಪ್ರಕಾರ ಪ್ರತಿಶತ ೨೫.೫೨ ಜನರು ಒಂದೇ ಕೋಣೆಯಲ್ಲಿ ವಾಸಿಸುತ್ತಿದ್ದು, ಶೇಕಡಾ ೩೯.೧೪ ರಷ್ಟು ಜನರು ಎರಡು ಕೋಣೆಗಳಲ್ಲಿ ವಾಸಿಸುತ್ತಿದ್ದಾರೆ. ಶೇಕಡಾ ೧೯.೧೪ ರಷ್ಟು ಜನರು ಮೂರು ಕೋಣೆಗಳಲ್ಲಿ, ಶೇಕಡಾ ೧೬.೨೦ ರಷ್ಟು ನಾಲ್ಕಕ್ಕಿಂತ ಹೆಚ್ಚಿನ ಕೋಣೆಗಳಲ್ಲಿ ವಾಸಿಸುತ್ತಿದ್ದಾರೆ. ಈ ಎಲ್ಲ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರು (ಶೇ೩೯.೧೪) ೨ ಕೋಣೆಗಳಲ್ಲಿ ವಾಸಿಸುತ್ತಿರುವುದು ತಿಳಿದು ಬರುತ್ತದೆ.

ಗೃಹಪಯೋಗಿ ವಸ್ತುಗಳ ವಿವರ :

ಮನೆಗಳ ಹೊರಾಂಗಣ ಸೌಂದರ್ಯಕ್ಕೆ ಕಟ್ಟಡ ಹೇಗೆ ಶೋಭೆ ತರುತ್ತದೆಯೋ ಹಾಗೆಯೇ ಒಳಾಂಗಣ ಸೌಂದರ್ಯಕ್ಕೆ ಗೃಹೋಪಯೋಗಿ ವಸ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೆ ಜನರ ಜೀವನ ಶೈಲಿಯನ್ನು ಪ್ರತಿನಿಧಿಸುತ್ತವೆ. ಜನರು ಹೆಚ್ಚಿನ ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದರೆ ಪ್ರವಾಹದ ಸಮಯದಲ್ಲಿ ಅವುಗಳ ಶೇಖರಣೆ ಮತ್ತು ಸಂರಕ್ಷಣೆ ಸಮಸ್ಯೆಯಾಗುತ್ತದೆ. ಈ ವಿಷಯವನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರ ಮನೆಗಳಲ್ಲಿನ ವಸ್ತುಗಳು ಕುರಿತಾದ ಮಾಹಿತಿಯನ್ನು ಕೋಷ್ಟಕ ೪.೧೨ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೪.೧೨

ಮಾಹಿತಿದಾರರು ಹೊಂದಿರುವ ಗೃಹಪಯೋಗಿ ವಸ್ತುಗಳ ವಿವರ

ಅ.ನಂ	ಮನೆಯ ವಸ್ತುಗಳ ವಿವರ	ಮಾಹಿತಿದಾರರ ಹೊಂದಿರುವ ಸಂಖ್ಯೆ	ಪ್ರತಿಶತ
೧	ಕುರ್ಚಿ	೩೧೭	೫೬.೬೬
೨	ಕಾಟ	೩೩೦	೫೬.೯೦
೩	ಫ್ಯಾನ್	೩೦೪	೫೨.೪೧
೪	ಟಿ.ವ್ಹಿ	೩೪೧	೫೮.೭೯
೫	ರೇಡಿಯೋ	೧೨೦	೨೦.೬೯
೬	ಸೈಕಲ್	೨೪೪	೪೨.೦೭
೭	ಮೋಟಾರ್ ಸೈಕಲ್	೧೬೮	೨೮.೯೭
೮	ಇತರೆ (ಟ್ರ್ಯಾಕ್ಟರ್, ಕಾರು, ಜೀಪು)	೧೩	೨.೨೪

ಕೋಷ್ಟಕ ೪.೧೨ರ ಪ್ರಕಾರ (ಶೇ೫೬.೬೬) ಮಾಹಿತಿದಾರರು ಕುರ್ಚಿ, ಕಾಟ ಪ್ರತಿಶತ (೫೬.೯೦), ಫ್ಯಾನ್ (ಶೇ೫೨.೪೧) ಹೊಂದಿರುವುದು ತಿಳಿದು ಬರುತ್ತದೆ. ಮನೋರಂಜನಾ ಸಾಧನಗಳಾದಂತಹ ಟಿ.ವ್ಹಿ, (ಶೇ೫೮.೭೯)ಗಳನ್ನು ಕಾಣುತ್ತೇವೆ. ರೇಡಿಯೋ (ಶೇ೨೦.೬೯), ಸೈಕಲ್ (ಶೇ೪೨.೦೭) ಮಾಹಿತಿದಾರರು ಹೊಂದಿದ್ದರೆ, ಮೋಟಾರು ಸೈಕಲ್‌ಗಳನ್ನು (ಶೇ೨೮.೯೭) ಮಾಹಿತಿದಾರರು ಹೊಂದಿದ್ದಾರೆ. ಇತರೆ (ಶೇ೨.೨೪) ಮಾಹಿತಿದಾರರು ಟ್ರ್ಯಾಕ್ಟರ್, ಜೀಪು, ಕಾರು ಹೊಂದಿರುವವರನ್ನು ಕಾಣುತ್ತೇವೆ. ಇದನ್ನು ಗಮನಿಸಿದಾಗ ಹೆಚ್ಚು ಕಡಿಮೆ ಎಲ್ಲ ಸಂತ್ರಸ್ತರು ಆಧುನಿಕ ಗೃಹಪಯೋಗಿ ವಸ್ತುಗಳನ್ನು ಹೊಂದಿರುವುದು ತಿಳಿದು ಬರುತ್ತದೆ.

ಪ್ರತ್ಯೇಕವಾದ ಅಡುಗೆ ಮನೆ :

ಮನೆಗಳು ವಿವಿಧ ವಿಭಾಗಗಳನ್ನು ಹೊಂದಿರುವುದು ಜನರ ಜೀವನಮಟ್ಟದ ಸೂಚಕ. ಜನರ ಜೀವನಮಟ್ಟವನ್ನು ತಿಳಿದುಕೊಳ್ಳಲು ಎಷ್ಟು ಜನ ಮಾಹಿತಿದಾರರು ಪ್ರತ್ಯೇಕವಾದ ಅಡುಗೆ ಮನೆ ಹೊಂದಿದ್ದಾರೆಂದು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಅದನ್ನು ಕೋಷ್ಟಕ ೪.೧೩ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ : ೪.೧೩

ಪ್ರತ್ಯೇಕ ಅಡುಗೆ ಮನೆ ಹೊಂದಿದ ಕುಟುಂಬಗಳ ವಿವರ

ಅ.ನಂ	ವಿವರ	ಸಂಖ್ಯೆ	ಪ್ರತಿಶತ
೧	ಅಡುಗೆ ಮನೆ ಹೊಂದಿದವರು	೨೮೪	೪೮.೯೭
೨	ಅಡುಗೆ ಮನೆ ಹೊಂದಿದವರು	೨೯೬	೫೧.೦೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೧೩ನ್ನು ಅವಲೋಕಿಸಿದಾಗ ಪ್ರತಿಶತ ೪೮.೯೭ರಷ್ಟು ಮಾಹಿತಿದಾರರು ಪ್ರತ್ಯೇಕ ಅಡುಗೆ ಮನೆ ಹೊಂದಿದ್ದು, ೫೧.೦೩ರಷ್ಟು ಮಾಹಿತಿದಾರರು ಪ್ರತ್ಯೇಕ ಅಡುಗೆ ಮನೆ ಹೊಂದದೆ ಇರುವುದು ತಿಳಿಯುತ್ತದೆ.

ಅಡುಗೆಗೆ ಬಳಸುವ ಇಂಧನ :

ಇಂಧನ ಬಳಕೆಗೂ ವ್ಯಕ್ತಿಯ ಆರೋಗ್ಯ ಹಾಗೂ ಆತನ ಜೀವನ ಶೈಲಿಗೂ ನೇರವಾದ ನಂಟಿದೆ ಜನರು ಅಡುಗೆಗೆ ಕಟ್ಟಿಗೆ ಮತ್ತು ಕೃಷಿ ತ್ಯಾಜ್ಯಗಳನ್ನು ಅವಲಂಭಿಸಿದ್ದರೆ ಪ್ರಾವಹದ ಸಮಯದಲ್ಲಿ ಹೆಚ್ಚಿನ ತೊಂದರೆಗೆ ಒಳಗಾಗುತ್ತಾರೆ. ಕೆಳಗಿನ ಕೋಷ್ಟಕದಲ್ಲಿ ಇದಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಕೋಷ್ಟಕ ೪.೧೪

ಅಡುಗೆಗೆ ಬಳಸುವ ಇಂಧನದ ಮಾಹಿತಿ.

ಅ.ನಂ	ವಿವರ	ಸಂಖ್ಯೆ	ಪ್ರತಿಶತ
೧	ಕಟ್ಟಿಗೆ (ಕೃಷಿ ತ್ಯಾಜ್ಯ)	೧೨೨	೨೧.೦೩
೨	ಕಟ್ಟಿಗೆ + ಸೀಮೆ ಎಣ್ಣೆ	೩೦೩	೫೨.೨೪
೩	ಕಟ್ಟಿಗೆ + ಸೀಮೆ ಎಣ್ಣೆ +ಅಡುಗೆ ಅನಿಲ	೧೫೫	೨೬.೭೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೧೪ನ್ನು ಗಮನಿಸಿದಾಗ ಪ್ರತಿಶತಗಳಲ್ಲಿ ಅಡುಗೆಗೆ (ಶೇ೨೧.೦೩) ಕಟ್ಟಿಗೆ ಬಳಸುವವರನ್ನು ಕಂಡರೆ, ಕಟ್ಟಿಗೆ ಮತ್ತು ಸೀಮೆ ಎಣ್ಣೆ ಬಳಸುವವರು (ಶೇ೫೨.೨೪), ಕಟ್ಟಿಗೆ ಸೀಮೆ ಎಣ್ಣೆ ಮತ್ತು ಅಡುಗೆ ಅನಿಲ ಬಳಸುವವರನ್ನು (ಶೇ೨೬.೭೩)ರಷ್ಟು ಕಾಣುತ್ತೇವೆ. ಅರ್ಧಕ್ಕಿಂತ ಹೆಚ್ಚಿನ ಜನರು ಕಟ್ಟಿಗೆ ಮತ್ತು ಸೀಮೆ ಎಣ್ಣೆ ಬಳಸುತ್ತಿರುವುದು ಕಂಡು ಬರುತ್ತದೆ.

ಅಡುಗೆಗೆ ಬಳಸುವ ಒಲೆಗಳು :

ಒಲೆಗಳು ಆರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಾಂಪ್ರದಾಯಿಕ ಒಲೆಗಳ ಹೊಗೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರು ಅಡುಗೆಗೆ ಎಂತಹ ಒಲೆಗಳನ್ನು ಬಳಸುತ್ತಾರೆ ಎಂಬುದನ್ನು ತಿಳಿಯಲು ಕೆಳಗಿನ ಮಾಹಿತಿ ಪಡೆಯಲಾಯಿತು.

ಕೋಷ್ಟಕ :೪.೧೫

ಮಾಹಿತಿದಾರರು ಬಳಸುವ ಒಲೆಗಳ ವಿವರ

ಅ.ನಂ	ಒಲೆಗಳ ಮಾದರಿ	ಸಂಖ್ಯೆ	ಪ್ರತಿಶತ
೧	ಸುಧಾರಿತ	೪೧	೨.೦೭
೨	ಸಾಂಪ್ರದಾಯಿಕ	೫೪೯	೯೨.೯೩
	ಒಟ್ಟು	೫೮೦	೧೦೦.೦೦

ಮೇಲಿನ ಕೋಷ್ಟಕ ೪.೧೫ನ್ನು ಗಮನಿಸಿದಾಗ ಹೆಚ್ಚಿನ ಮಾಹಿತಿದಾರರು ಪ್ರತಿಶತ ೯೨.೯೩ರಷ್ಟು ಇನ್ನೂ ಸಾಂಪ್ರದಾಯಿಕ ಒಲೆಗಳನ್ನು ಬಳಸುತ್ತಿದ್ದು, (ಶೇಕಡಾ೭.೦೭)ರಷ್ಟು ಮಾಹಿತಿದಾರರು ಮಾತ್ರ ಸುಧಾರಿತ ಒಲೆಗಳನ್ನು ಬಳಸುತ್ತಿರುವುದು ತಿಳಿದು ಬರುತ್ತದೆ.

ಶೌಚಾಲಯ ವ್ಯವಸ್ಥೆ :

ಶೌಚಾಲಯಗಳು ಜನರ ಜೀವನ ಮಟ್ಟದ ಸೂಚಕಗಳು. ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯದ ಸಮಸ್ಯೆ ಕಾಣುತ್ತೇವೆ. ಪ್ರವಾಹದ ಸಮಯದಲ್ಲಿ ಸಂತ್ರಸ್ತರು ಅದರಲ್ಲಿಯೂ ಸಂತ್ರಸ್ತ ಮಹಿಳೆಯರು ಹೆಚ್ಚಿನ ಸಮಸ್ಯೆಯನ್ನು ಎದುರಿಸಿದರು. ಶೌಚಾಲಯ ವ್ಯವಸ್ಥೆ ಹೊಂದಲು ಸರಕಾರ ಕೆಲವೊಂದು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರ ಸದುಪಯೋಗ ಎಷ್ಟರಮಟ್ಟಿಗೆ ಆಗಿದೆಯೆಂದು ತಿಳಿಯಲು ಕೆಳಗಿನ ವಿವರಣೆ ಪಡೆಯಲಾಯಿತು.

ಕೋಷ್ಟಕ ೪.೧೬

ಮಾಹಿತಿದಾರರು ಹೊಂದಿರುವ ಶೌಚಾಲಯ ವ್ಯವಸ್ಥೆ ವಿವರ

ಅ.ನಂ	ವಿವರ	ಸಂಖ್ಯೆ	ಪ್ರತಿಶತ
೧	ಶೌಚಾಲಯ ವ್ಯವಸ್ಥೆ ಹೊಂದಿದವರು	೧೨೨	೨೧.೦೪
೨	ಶೌಚಾಲಯ ವ್ಯವಸ್ಥೆ ಹೊಂದದವರು	೪೫೮	೭೮.೯೬
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೧೬ನ್ನು ಗಮನಿಸಿದಾಗ ಪ್ರತಿಶತ ೨೧.೦೪ರಷ್ಟು ಮಾಹಿತಿದಾರರು ಮಾತ್ರ ಶೌಚಾಲಯ ವ್ಯವಸ್ಥೆ ಹೊಂದಿದ್ದಾರೆ. ಉಳಿದ ಶೇಕಡಾ ೭೮.೯೬ರಷ್ಟು ಮಾಹಿತಿದಾರರು

ಶೌಚಾಲಯ ವ್ಯವಸ್ಥೆ ಹೊಂದಿರುವುದಿಲ್ಲ. ಇದನ್ನು ಗಮನಿಸಿದಾಗ ನಮ್ಮ ಸರಕಾರವು ಶೌಚಾಲಯಗಳನ್ನು ಕಟ್ಟಿಸಕೊಳ್ಳಲು ಆರ್ಥಿಕ ನೆರವು ನೀಡುತ್ತಿದ್ದರೂ ಗ್ರಾಮದ ಜನತೆ ಅದರ ಸದ್ಬಳಕೆಯನ್ನು ಮಾಡಿಕೊಳ್ಳುತ್ತಿಲ್ಲ ಎಂದು ತಿಳಿದು ಬರುತ್ತದೆ.

ಕುಡಿಯುವ ನೀರಿನ ವ್ಯವಸ್ಥೆ :

ವ್ಯಕ್ತಿಗೆ ಬರುವ ರೋಗಗಳಲ್ಲಿ ಶೇಕಡಾ ೯೦ರಷ್ಟು ರೋಗವು ನೀರಿನಿಂದಲೇ ಬರುತ್ತವೆ. ಈ ಪ್ರದೇಶಗಳಲ್ಲಿ ಅಣೆಕಟ್ಟೆಯಲ್ಲಿ ನೀರನ್ನು ತಡೆಯುವುದರಿಂದ ವರ್ಷದಲ್ಲಿ ಎಂಟು ತಿಂಗಳುಗಳ ಕಾಲ ನೀರು ಮಾಲಿನ್ಯಗೊಂಡಿರುತ್ತದೆ. ವರ್ಷದ ಹೆಚ್ಚಿನ ದಿನಗಳಲ್ಲಿ ಜನರಿಗೆ ಶುದ್ಧ ಕುಡಿಯುವ ನೀರು ದೊರೆಯುವುದಿಲ್ಲ. ಪ್ರವಾಹದ ಸಮಯದಲ್ಲಿ ನದಿಯ ನೀರು ಮಾಲಿನ್ಯಗೊಂಡಿರುತ್ತದೆ. ಕುಡಿಯುವ ನೀರಿಗಾಗಿ ಜನರು ನದಿಯನ್ನು ಅವಲಂಭಿಸಿದ್ದರೆ ಕುಡಿಯುವ ನೀರಿನ ಸಮಸ್ಯೆ ಎದುರಿಸಬೇಕಾಗುತ್ತದೆ. ಕಾರಣ ಎಷ್ಟು ಜನರು ಕುಡಿಯುವ ನೀರಿಗಾಗಿ ನದಿಯನ್ನು ಅವಲಂಬಿಸಿದ್ದಾರೆ ಎಂದು ತಿಳಿಯಲು ಮತ್ತು ಜನರು ಕುಡಿಯುವ ನೀರಿನ ವ್ಯವಸ್ಥೆ ಹೇಗೆ ಮಾಡಿಕೊಂಡಿದ್ದಾರೆ ಎಂದು ತಿಳಿಯಲು ಕೆಳಗಿನ ಮಾಹಿತಿ ಪಡೆಯಲಾಯಿತು.

ಕೋಷ್ಟಕ ೪.೧೭

ಮಾಹಿತಿದಾರರ ಕುಡಿಯುವ ನೀರಿನ ವ್ಯವಸ್ಥೆ

ಅ.ನಂ	ಕುಡಿಯುವ ನೀರಿನ ವ್ಯವಸ್ಥೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ನದಿಯಿಂದ	೪೫೩	೭೮.೧೦
೨	ಕೊಳವೆ ಬಾವಿಗಳಿಂದ	೩೦	೫.೪೫
೩	ಇತರೆ (ಫಿಲ್ಟರ್ ಮುಖಾಂತರ)	೧೦೭	೧೮.೪೫
	ಒಟ್ಟು	೫೯೦	೧೦೦.೦೦

ಈ ಮೇಲಿನ ೪.೧೭ ಕೋಷ್ಟಕವನ್ನು ಗಮನಿಸಿದಾಗ ಪ್ರತಿಶತ ೭೮.೧೦ ಮಾಹಿತಿದಾರರು ಕುಡಿಯುವ ನೀರಿಗಾಗಿ ನದಿಯನ್ನೇ ಅವಲಂಭಿಸಿದ್ದರೆ, ಕೊಳವೆ ಭಾವಿಗಳಿಂದ ಶೇಕಡಾ ೫.೪೫, ಫಿಲ್ಟರ್‌ಗಳಿಂದ ಶೇಕಡಾ ೧೮.೪೫ ಕುಡಿಯುವ ನೀರಿಗಾಗಿ ಅವಲಂಬಿಸಿದ್ದಾರೆ. ಇನ್ನೂ ಹೆಚ್ಚಿನ ಜನರು ಕುಡಿಯುವ ನೀರಿಗಾಗಿ ನದಿಯನ್ನೆ ಅವಲಂಭಿಸಿರುವುದು ತಿಳಿಯುತ್ತದೆ.

ವಿದ್ಯುತ್ ಸೌಕರ್ಯ :

ವಿಜ್ಞಾನ ಸಮಾಜಕ್ಕೆ ನೀಡಿದ ಕೊಡುಗೆಗಳಲ್ಲಿ ವಿದ್ಯುತ್ ಸೌಲಭ್ಯವು ಒಂದು. ಸಮಾಜದಲ್ಲಿಯ ಪ್ರತಿಯೊಂದು ಚಟುವಟಿಕೆಗಳು ವಿದ್ಯುತ್‌ನ್ನು ಅವಲಂಬಿಸಿವೆ. ವಿದ್ಯುತ್ ಸೌಲಭ್ಯ

ಇಲ್ಲದಿದ್ದರೆ ಜೀವನ ನಡೆಸುವುದು ಕಠಿಣವಾಗುತ್ತದೆ. ಸರಕಾರ ಬಡಜನರೂ ಸಹಿತ ವಿದ್ಯುತ್ ಸೌಲಭ್ಯ ಹೊಂದಲು ಭಾಗ್ಯಜ್ಯೋತಿ, ಕುಠಿರಜ್ಯೋತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಎಲ್ಲ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಕೋಷ್ಟಕ ೪.೧೮

ವಿದ್ಯುತ್ ಸೌಕರ್ಯ ಹೊಂದಿರುವ ಮಾಹಿತಿ

ಅ.ನಂ	ವಿವರ	ಸಂಖ್ಯೆ	ಪ್ರತಿಶತ
೧	ವಿದ್ಯುತ್ ಸೌಕರ್ಯ ಹೊಂದಿರುವ ಕುಂಟುಂಬಗಳು	೫೧೬	೮೮.೯೭
೨	ವಿದ್ಯುತ್ ಸೌಕರ್ಯ ಹೊಂದದೆ ಇರುವ ಕುಂಟುಂಬಗಳು	೬೪	೧೧.೦೩
	ಒಟ್ಟು	**೫೮೦**	**೧೦೦.೦೦**

ಮೇಲಿನ ಕೋಷ್ಟಕ ೪.೧೮ನ್ನು ನೋಡಿದಾಗ ಪ್ರತಿಶತ ೮೮.೯೭ ಮಾಹಿತಿದಾರರು ವಿದ್ಯುತ್ ಸೌಕರ್ಯ ಹೊಂದಿದ್ದಾರೆ. ಸರಕಾರದ ಸೌಲಭ್ಯಗಳು ಹೊರತಾಗಿಯೂ ಇನ್ನೂ ಶೇಕಡಾ ೧೧.೦೩ರಷ್ಟು ಮಾಹಿತಿದಾರರು ವಿದ್ಯುತ್ ಹೊಂದದೆ ಇರುವುದು ತಿಳಿಯುತ್ತದೆ.

ಕುಟುಂಬದ ಭೂ ಹಿಡುವಳಿ ಪ್ರಮಾಣ :

ಗ್ರಾಮೀಣ ಪ್ರದೇಶದಲ್ಲಿ ಭೂ ಹಿಡುವಳಿಗಳನ್ನು ಆಧರಿಸಿ ಸ್ಥಾನಮಾನಗಳು ನಿರ್ಧಾರವಾಗುತ್ತವೆ. ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳು ಭೂ ಹಿಡುವಳಿದಾರರ ಕೈಯಲ್ಲಿ ಕೇಂದ್ರೀಕೃತವಾಗಿರುತ್ತವೆ. ಗ್ರಾಮೀಣ ಪ್ರದೇಶದ ಜನರು ಒಕ್ಕಲುತನವನ್ನು ಅವಲಂಭಿಸಿರುವುದರಿಂದ ಭೂಹಿಡುವಳಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರವಾಹದ ಪರಿಣಾಮಗಳು ಭೂರಹಿತರ ಮೇಲೆ ಕಡಿಮೆ ಪ್ರಮಾಣದಲ್ಲಾದರೆ ಭೂಮಿಯನ್ನು ಹೊಂದಿದವರ ಮೇಲೆ ಹೆಚ್ಚಿಗೆ ಕಾಣುತ್ತೇವೆ. ಜನರು ಹೊಂದಿರುವ ಭೂಮಿಯ ಪ್ರಮಾಣವನ್ನು ಆಧರಿಸಿ ಪ್ರವಹದ ದುಷ್ಪರಿಣಾಮಗಳನ್ನು ಕಾಣುತ್ತೇವೆ. ಕೆಳಗಿನ ಕೋಷ್ಟಕವನ್ನು ಆಧರಿಸಿ ಮಾಹಿತಿದಾರರು ಹೊಂದಿರುವ ಭೂ ಹಿಡುವಳಿ ಪ್ರಮಾಣವನ್ನು ತಿಳಿದುಕೊಳ್ಳಲಾಯಿತು.

ಕೋಷ್ಟಕ : ೪.೧೯

ಮಾಹಿತಿದಾರರು ಹೊಂದಿರುವ ಭೂ ಹಿಡುವಳಿ ಪ್ರಮಾಣ

ಅ.ನಂ	ಭೂ ಹಿಡುವಳಿ ಪ್ರಮಾಣ	ಸಂಖ್ಯೆ	ಪ್ರತಿಶತ
೧	ಭೂರಹಿತರು	೨೬೨	೪೫.೧೭
೨	ಒಂದು ಎಕರೆಗಿಂತ ಕಡಿಮೆ	೮೭	೧೫.೦೦
೩	೧ ರಿಂದ ೪.೯ ಎಕರೆ	೧೨೩	೨೧.೨೧
೪	೫ ರಿಂದ ೯.೯ ಎಕರೆ	೬೦	೧೦.೩೪
೫	೧೦ ಎಕರೆ ಮೇಲ್ಪಟ್ಟವರು	೪೮	೮.೨೮
	ಒಟ್ಟು	**೫೮೦**	೧೦೦.೦೦

ಕೋಷ್ಟಕ ೪.೧೯ನ್ನು ಗಮನಿಸಿದಾಗ ಅರ್ಧದಷ್ಟು ಮಾಹಿತಿದಾರರು ಭೂಮಿಯನ್ನು ಹೊಂದದೆ ಇರುವುದು ತಿಳಿಯುತ್ತದೆ. ಪ್ರತಿಶತ ೧೫ರಷ್ಟು ಮಾಹಿತಿದಾರರು ಒಂದು ಎಕರೆಗಿಂತ ಕಡಿಮೆ ಜಮೀನು ಮಾತ್ರ ಹೊಂದಿದ್ದರೆ, ಪ್ರತಿಶತ ೨೧.೨೧ರಷ್ಟು ಮಾಹಿತಿದಾರರು ಒಂದರಿಂದ ೪.೯ ಎಕರೆ ಜಮೀನು ಹೊಂದಿದ್ದಾರೆ, ೧೦.೩೪ ಮಾಹಿತಿದಾರರು ೫ರಿಂದ ೯.೯ಎಕರೆ, ಅಲ್ಲದೆ ಪ್ರತಿಶತ ೮.೨೮ ಮಾಹಿತಿದಾರರು ೧೦ ಎಕರೆಗಿಂತ ಹೆಚ್ಚಿನ ಭೂಮಿಯನ್ನು ಹೊಂದಿದವರಿದ್ದಾರೆ. ಇದರಿಂದ ಹೆಚ್ಚಿನ ಜನರು ಭೂರಹಿತ ಬಡತನ ಕುಟುಂಬಗಳು ಎಂಬುದು ತಿಳಿಯುತ್ತದೆ.

ಭೂ ಹಿಡುವಳಿ ಸ್ವರೂಪ :

ಮಾಹಿತಿದಾರರು ಎಷ್ಟು ಭೂಮಿಯನ್ನು ಹೊಂದಿದ್ದಾರೆ ಎನ್ನುವುದಕ್ಕಿಂತ ಯಾವ ಸ್ವರೂಪದ ಭೂಮಿ ಹೊಂದಿದ್ದಾರೆ ಎಂಬುದು ಪ್ರಮುಖ. ಭೂಮಿಯ ಸ್ವರೂಪ ಅವರ ಆದಾಯ, ಜೀವನಮಟ್ಟವನ್ನು ನಿರ್ಧರಿಸುತ್ತದೆ. ಒಂದು ಎಕರೆ ನೀರಾವರಿ ಭೂಮಿಯ ಆದಾಯ ಹತ್ತು ಎಕರೆ ಮಳೆ ಆಶ್ರಿತ ಭೂಮಿಯ ಆದಾಯದಷ್ಟು ಸಮಾನವಾಗಿರುತ್ತದೆ. ಗ್ರಾಮದಲ್ಲಿ ಕೃಷಿ ಕ್ಷೇತ್ರದಲ್ಲಿ ನೀರಿನ ಬಳಕೆಯ ಜ್ಞಾನದ ಕೊರತೆ ಮತ್ತು ಪ್ರವಾಹಗಳಿಂದ ಜಮೀನುಗಳು ಜವಳಾಗುತ್ತಿವೆ. ಅದರಲ್ಲಿಯೂ ನೀರಾವರಿ ಪ್ರದೇಶಗಳು ಫಲವತ್ತತೆ ಕಳೆದುಕೊಳ್ಳುತ್ತಿವೆ. ಕಾರಣ ಈ ಮೇಲಿನ ಅಂಶಗಳನ್ನು ತಿಳಿಯಲು ಮಾಹಿತಿದಾರರು ಹೊಂದಿರುವ ಭೂಮಿಯ ಸ್ವರೂಪ ತಿಳಿಯಲು ಮಾಹಿತಿ ಪಡೆಯಲಾಗಿದೆ.

ಕೋಷ್ಟಕ ೪.೨೦

ಮಾಹಿತಿದಾರರು ಹೊಂದಿರುವ ಭೂ ಹಿಡುವಳಿ ಸ್ವರೂಪ

ಅ.ನಂ	ಭೂ ಹಿಡುವಳಿ ಸ್ವರೂಪ	ಸಂಖ್ಯೆ	ಪ್ರತಿಶತ
೧	ಒಣ ಬೇಸಾಯ	೬೪	೧೧.೦೪
೨	ನೀರಾವರಿ	೧೬೬	೨೮.೬೨
೩	ಎರಡು	೫೪	೯.೩೧
೪	ಜವಳು	೩೪	೫.೮೬
೫	ಜಮೀನು ರಹಿತರು	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೪.೨೦ನ್ನು ಗಮನಿಸಿದಾಗ ಪ್ರತಿಶತ ೧೧.೦೪ ಒಣಬೇಸಾಯ, ಪ್ರತಿಶತ ೨೮.೬೨ ನೀರಾವರಿ, ಶೇಕಡಾ ೯.೩೧ ಒಣ ಹಾಗೂ ನೀರಾವರಿ, ಶೇಕಡಾ ೫.೮೬ ಜವಳು ಪ್ರದೇಶಗಳಾಗಿವೆ. ಜಮೀನು ರಹಿತರು ಶೇ೪೫.೧೭ ಇರುವುದರಿಂದ ಗ್ರಾಮದಲ್ಲಿ ಭೂರಹಿತರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡು ಬರುತ್ತದೆ.

ಬೆಳೆಯ ಸ್ವರೂಪ :

ಭೂಮಿಯ ಪ್ರಮಾಣ, ಸ್ವರೂಪದ ನಂತರ ಯಾವ ತೆರನಾದ ಬೆಳೆಗಳನ್ನು ಬೆಳೆಯುತ್ತಾರೆ ಎಂಬುದು ಪ್ರಮುಖ. ಇದನ್ನು ಆಧರಿಸಿ ಅವರ ಆದಾಯ ನಿರ್ಧಾರವಾಗುತ್ತದೆ. ಗ್ರಾಮದಲ್ಲಿ ತಂಬಾಕು, ಜೋಳ ಪ್ರಮುಖ ಬೆಳೆಗಳಾಗಿದ್ದವು, ಆದರೆ ನೀರಾವರಿಯಾದ ನಂತರ ನೀರನ್ನು ಆಧರಿಸಿದ ಬೆಳೆಗಳಾದ ಕಬ್ಬು, ಗೋಧಿ ಹೆಚ್ಚಿಗೆ ಬೆಳೆಯುತ್ತಾರೆ. ಪ್ರವಾಹದ ದುಷ್ಪರಿಣಾಮಗಳು ಬೆಳೆಯ ಸ್ವರೂಪವನ್ನು ಅವಲಂಭಿಸಿವೆ. ಜನರು ಕಬ್ಬಿನ ಬೆಳೆಯನ್ನು ಬೆಳೆಯುತ್ತಿದ್ದಾರೆ. ಪ್ರವಾಹ ಒಂದೆರಡು ದಿನಗಳಲ್ಲಿ ಬಂದು ಹೋದರೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ ಪ್ರವಾಹದ ಅವಧಿ ದೀರ್ಘವಾಗಿದ್ದರೆ ಹಾನಿಯ ಪ್ರಮಾಣವು ಹೆಚ್ಚಿಗಿರುತ್ತದೆ. ಇದನ್ನು ತಿಳಿಯಲು ಕೆಳಗಿನ ಮಾಹಿತಿ ಪಡೆದುಕೊಳ್ಳಲಾಗಿದೆ. ಇದರ ಬಗ್ಗೆ ಕೋಷ್ಟಕ ೪.೨೧ರಲ್ಲಿ ಮಾಹಿತಿ ಕಾಣಬಹುದು.

ಕೋಷ್ಟಕ ೪.೨೧

ಮಾಹಿತಿದಾರರ ಬೆಳೆಯ ಸ್ವರೂಪ

ಅ.ನಂ	ಬೆಳೆ ಸ್ವರೂಪ	ಸಂಖ್ಯೆ	ಪ್ರತಿಶತ
೧	ಕಬ್ಬು, ಹುರುಳಿ, ಗೋಧಿ	೨೨೦	೩೭.೯೩
೨	ಸದಕಿನ ಗೋಧಿ	೬೪	೧೧.೦೪
೩	ಜವಳು	೩೪	೫.೮೬
೪	ಜಮೀನು ರಹಿತರು	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೨೧ನ್ನು ಅವಲೋಕಿಸಿದಾಗ ಪ್ರತಿಶತ ೩೭.೯೩ ಮಾಹಿತಿದಾರರು ನೀರಾವರಿ ಆಶ್ರಯಿತ ಬೆಳೆಗಳಾದ ಕಬ್ಬು, ಹುರಳಿ, ಮತ್ತು ಗೋಧಿ ಬೆಳೆಗಳನ್ನು, ಪ್ರತಿಶತ ೧೧.೦೪ರಷ್ಟು ಸದಕಿನ ಗೋಧಿ, ಪ್ರತಿಶತ ೫.೮೬ರಲ್ಲಿ ಜವಳಿನ ಕಾರಣ ಯಾವುದೇ ಬೆಳೆ ಬೆಳೆಯುತ್ತಿಲ್ಲದಿರುವುದು ಕಂಡು ಬರುತ್ತದೆ. ಶೇ೪೫.೧೭ರಷ್ಟು ಮಾಹಿತಿದಾರರು ಯಾವುದೇ ಭೂಮಿ ಹೊಂದಿರದ ಕಾರಣ ಇದು ಅವರಿಗೆ ಅನ್ವಯಿಸುವುದಿಲ್ಲ.

ಹಣದ ಉಳಿತಾಯ :

ಒಬ್ಬ ವ್ಯಕ್ತಿಗೆ ಆದಾಯ ಪ್ರಮುಖ ಅದರಂತೆ ಎಷ್ಟು ಆದಾಯ ಬರುತ್ತದೆ ಎನ್ನುವುದಕ್ಕಿಂತ ಅವನು ಎಷ್ಟು ಉಳಿತಾಯ ಮಾಡುತ್ತಾನೆ ಎಂಬುದು ಅತೀ ಪ್ರಮುಖ. ಹಣವನ್ನು ಉಳಿತಾಯ ಮಾಡುವ ಪ್ರವೃತ್ತಿ ಇದ್ದರೆ ಜೀವನದಲ್ಲಿ ಬರುವ ಸಮಸ್ಯೆಗಳಿಗೆ ಪರಿಹರ ಕಂಡುಕೊಳ್ಳಬಹುದು. ಮಕ್ಕಳ ವಿದ್ಯಾರ್ಜನೆ, ವಿವಾಹ ಇನ್ನುಳಿದ ಯಾವುದೇ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲ ಕಾರಣ ಮಾಹಿತಿದಾರರಲ್ಲಿ ಉಳಿತಾಯ ಪ್ರವೃತ್ತಿ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಅದನ್ನು ಕೋಷ್ಟಕ ೪.೨೨ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೪.೨೨

ಮಾಹಿತಿದಾರರ ಉಳಿತಾಯ ಮಾಹಿತಿ

ಅ.ನಂ	ವಿವರ	ಸಂಖ್ಯೆ	ಪ್ರತಿಶತ
೧	ಹಣ ಉಳಿತಾಯ ಮಾಡಿದವರು	೭೭	೧೩.೨೮
೨	ಹಣ ಉಳಿತಾಯ ಮಾಡದೆ ಇರುವವರು	೫೦೩	೮೬.೭೨
	ಒಟ್ಟು	೫೮೦	೧೦೦.೦೦

ಮೇಲಿನ ಕೋಷ್ಟಕ ೪.೨೨ನ್ನು ಗಮನಿಸಿದಾಗ ಪ್ರತಿಶತ ೧೩.೨೮ರಷ್ಟು ಮಾಹಿತಿದಾರರು ಮಾತ್ರ ಉಳಿತಾಯ ಮಾಡಿದ್ದು ಉಳಿದ ೮೬.೭೨ರಷ್ಟು ಮಾಹಿತಿದಾರರು ಯಾವುದೇ ಉಳಿತಾಯ ಮಾಡಿಲ್ಲ ಎಂಬುದು ಕಂಡು ಬರುತ್ತದೆ.

ಉಳಿತಾಯ ಮಾಡಿರುವ ಸಂಸ್ಥೆ :

ಈಗಿನ ಪರಿಸ್ಥಿತಿಯಲ್ಲಿ ಉಳಿತಾಯದ ಹಣವನ್ನು ಯಾವ ಸಂಸ್ಥೆಗಳಲ್ಲಿ ತೊಡಗಿಸಿದ್ದೇವೆ ಎಂಬುದು ಪ್ರಮುಖ. ಬ್ಲೇಡ ಕಂಪನಿಗಳು ಗ್ರಾಮೀಣ ಸಮುದಾಯಗಳಿಗೂ ಕಾಲಿಡುತ್ತಿವೆ. ಗಳಿಸಿ ಉಳಿತಾಯ ಮಾಡಿದ ಹಣವನ್ನು ಸುರಕ್ಷಿತವಾಗಿ ಕಾಯ್ದುಕೊಂಡು ಹೋಗುವುದು, ಉಳಿತಾಯ ಮಾಡಿದಷ್ಟೇ ಜವಾಬ್ದಾರಿಯುತವಾದ ಅಂಶ. ಈ ಅಂಶವನ್ನು ತಿಳಿಯಲು ಪ್ರಯತ್ನಿಸಲಾಯಿತು. ಇದರ ಮಾಹಿತಿಯನ್ನು ಕೋಷ್ಟಕ ೪.೨೩ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೪.೨೩

ಮಾಹಿತಿದಾರರ ಉಳಿತಾಯ ವಿವರ

ಅ.ನಂ	ಉಳಿತಾಯ ಮಾಡಿದ ಸಂಸ್ಥೆ	ಸಂಖ್ಯೆ	ಪ್ರತಿಶತ
೧	ಬ್ಯಾಂಕುಗಳಲ್ಲಿ	೫೧	೮.೭೯
೨	ಪೋಸ್ಟ್‌ಗಳಲ್ಲಿ	೧೭	೨.೯೩
೩	ಬೇರೆಯವರಿಗೆ ಕೊಟ್ಟಿದ್ದು	೦೧	೦.೧೭
೪	ಜೀವ ವಿಮೆಯಲ್ಲಿ ತೊಡಗಿಸಿದ್ದು	೦೮	೧.೩೮
೫	ಉಳಿತಾಯ ಮಾಡದಿರುವವರು	೫೦೩	೮೬.೭೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೨೩ನ್ನು ಗಮನಿಸಿದಾಗ ಮಾಹಿತಿದಾರರಲ್ಲಿ ಪ್ರತಿಶತ ೮.೭೯ ಬ್ಯಾಂಕುಗಳಲ್ಲಿ ಉಳಿತಾಯ ಮಾಡಿದ್ದರೆ, ಪೋಸ್ಟ್‌ಗಳಲ್ಲಿ ಶೇಕಡಾ ೨.೯೩, ಬೇರೆಯವರಿಗೆ ಸಾಲ ಶೇಕಡಾ ೦.೧೭, ಮತ್ತು ಜೀವವಿಮೆಯಯಲ್ಲಿ ಶೇಕಡಾ ೧.೩೮ ಉಳಿತಾಯ ಮಾಡಿರುವುದು ತಿಳಿಯುತ್ತದೆ. ಯಾವುದೇ ಉಳಿತಾಯ ಮಾಡದಿರುವವರ ಪ್ರಮಾಣ ೮೬.೭೩ರಷ್ಟು ಇರುತ್ತದೆ.

ಋಣಗ್ರಸ್ತತೆ ಮಾಹಿತಿ :

ಋಣಗ್ರಸ್ತತೆ ಗ್ರಾಮೀಣ ಸಮುದಾಯಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಲ್ಲಿ ಒಂದು. ಇದು ಅವರ ಸರ್ವತೋಮುಖ ಬೆಳವಣಿಗೆಗೆ ಮಾರಕವಾಗಿದೆ. ಭಾರತದ ರೈತರು ಸಾಲದಲ್ಲಿಯೇ ಹುಟ್ಟಿ ಸಾಲದಲ್ಲಿಯೇ ಬೆಳೆದು ಸಾಲದಲ್ಲಿಯೇ ಸಾವನ್ನಪ್ಪಿ ಮುಂದಿನ ಪೀಳಿಗೆಗೆ ಸಾಲವನ್ನು ಬಳುವಳಿಯಾಗಿ ಕೊಡುತ್ತಾರೆಂದು ಕೃಷಿಗೆ ಸಂಬಂಧಿಸಿದ ರಾಯಲ್ ಸಮಿತಿ ತಿಳಿಸಿದೆ.

ಯಾವುದೇ ಆಸ್ತಿ ಬಳುವಳಿಯಾಗಿ ಬರದೆ ಇದ್ದರೂ ಸಾಲ ಮಾತ್ರ ಬಂದೇ ಬರುತ್ತದೆ. ರೈತರು, ವಿವಾಹ, ಧಾರ್ಮಿಕ ಕ್ರಿಯಾ, ವಿಧಿಗಳ ಆಚರಣೆ, ಯಂತ್ರೋಪಕರಣಗಳ ಖರೀದಿ, ನೀರಾವರಿ, ಮನೆ ಕಟ್ಟಿಸಲು ಮುಂತಾದ ಕಾರಣಗಳಿಗೆ ಸಾಲವನ್ನು ಮಾಡುತ್ತಾರೆ. ಆದರೆ ಕಳಪೆ ಬೀಜ, ನಕಲಿ ಕೀಟನಾಶಕ, ಮಾನ್ಸೂನ್ ಮಾರುತಗಳ ವೈಫಲ್ಯ, ಕೃಷಿ ಉತ್ಪನ್ನಗಳಿಗೆ ನ್ಯಾಯೋಚಿತ ಬೆಲೆ ಸಿಗದಿರುವುದು ಇದೇ ಮುಂತಾದ ಕಾರಣಗಳಿಂದ ಸಾಲ, ಬಡ್ಡಿ ಮರುಪಾವತಿಸಲು ಸಾಧ್ಯವಾಗದಿದ್ದಲ್ಲಿ ಸಾಲದ ಪ್ರಮಾಣ ಹೆಚ್ಚಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಪ್ರವಾಹದ ಕಾರಣ ಬೆಳೆಗಳು ನಾಶವಾಗಿ ಆದಾಯ ಕಡಿಮೆಯಾಗಿ ಜನರ ಸಾಲದ ಪ್ರಮಾಣದಲ್ಲಿ ಹೆಚ್ಚಳವಾಗುವ ಸಾಧ್ಯತೆಗಳಿರುತ್ತವೆ. ಇಂತಹ ಸಾಲದ ಕುರಿತು ಮಾಹಿತಿಯನ್ನು ಕೋಷ್ಟಕ ೪.೨೪ರಲ್ಲಿ ಪಡೆದುಕೊಳ್ಳಲಾಗಿದೆ.

ಕೋಷ್ಟಕ ೪.೨೪

ಮಾಹಿತಿದಾರರ ಋಣಗ್ರಸ್ತತೆ ವಿವರ

ಅ.ನಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಸಾಲಗಾರರು	೩೦೨	೫೨.೦೭
೨	ಸಾಲ ಹೊಂದದೆ ಇರುವವರು	೨೭೮	೪೭.೯೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೨೪ನ್ನು ಗಮನಿಸಿದಾಗ ಮಾಹಿತಿದಾರರಲ್ಲಿ ಪ್ರತಿಶತ ೫೨.೦೭ರಷ್ಟು ಮಾತ್ರ ಸಾಲ ಪಡೆದಿರುವುದು ತಿಳಿಯುತ್ತದೆ. ಇನ್ನೂಳಿದ ಪ್ರತಿಶತ ೪೭.೯೩ ರಷ್ಟು ಮಾಹಿತಿದಾರರು ಯಾವುದೇ ಸಾಲ ಹೊಂದಿರುವುದಿಲ್ಲ.

ಋಣಗ್ರಸ್ತತೆ ಪ್ರಮಾಣ :

ಕೋಷ್ಟಕ ೪.೨೩ನ್ನು ಗಮನಿಸಿದಾಗ ಪ್ರತಿಶತ ೫೨.೦೭ ಮಾಹಿತಿದಾರರು ಸಾಲಗಾರರಿರುವುದು ತಿಳಿಯುತ್ತದೆ. ಯಾವ ಪ್ರಮಾಣದಲ್ಲಿ ಸಾಲ ಹೊಂದಿದ್ದಾರೆ ಎಂದು ತಿಳಿಯಲು ಕೆಳಗಿನ ವಿವರ ಪಡೆಯಲಾಯಿತು.

ಕೋಷ್ಟಕ ೪.೨೫

ಮಾಹಿತಿದಾರರ ಋಣಗ್ರಸ್ತತೆ ಪ್ರಮಾಣ

ಅ.ನಂ	ಸಾಲದ ಪ್ರಮಾಣ	ಸಂಖ್ಯೆ	ಪ್ರತಿಶತ
೧	ಸಾಲ ರಹಿತರು	೨೭೮	೪೭.೯೩
೨	೫೦೦೦ದ ವರೆಗೆ	೩೨	೫.೫೨
೩	೫೦೦೧ ರಿಂದ ೧೦,೦೦೦	೪೮	೮.೨೮
೪	೧೦,೦೦೧ ರಿಂದ ೨೫,೦೦೦	೬೮	೧೧.೭೨
೫	೨೫,೦೦೦ರ ಮೇಲ್ಪಟ್ಟು	೧೫೪	೨೬.೫೫
	ಒಟ್ಟು	೫೮೦	೧೦೦.೦೦

ಕೋಷ್ಟಕ ೪.೨೫ನ್ನು ಗಮನಿಸಿದಾಗ ಪ್ರತಿಶತ ೪೭.೯೩ರಷ್ಟು ಮಾಹಿತಿದಾರರಿಗೆ ಯಾವುದೇ ಸಾಲ ಇಲ್ಲದಿರುವುದು ತಿಳಿಯುತ್ತದೆ. ಪ್ರತಿಶತ ೫.೫೨ ರಷ್ಟು ೫೦೦೦ದ ವರೆಗೆ ಪ್ರತಿಶತ ೮.೨೮ ರಷ್ಟು ೧೦,೦೦೦ದ ವರೆಗೆ, ಪ್ರತಿಶತ ೧೧.೭೨ರಷ್ಟು ೨೫೦೦೦ದ ವರೆಗೆ, ಮತ್ತು ಪ್ರತಿಶತ ೨೬.೫೫ ರಷ್ಟು ಮಾಹಿತಿದಾರರು ೨೫೦೦೦ ಮೇಲ್ಪಟ್ಟು ಸಾಲ ಬಾಧೆಯಿಂದ ಬಳಲುತ್ತಿರುವುದು ತಿಳಿಯುತ್ತದೆ.

ಋಣಗ್ರಸ್ತತೆ ಕಾರಣ :

ಸಾಲಗಳಿಗೆ ಹಲವಾರು ಕಾರಣಗಳಿವೆ. ಬಡತನ, ನಿರುದ್ಯೋಗ, ಲೇವಿದಾರರ ಅವ್ಯವಹಾರ, ಶಾಸನಗಳ ವೈಫಲ್ಯ, ಅನಾವಶ್ಯಕ ಖರ್ಚು, ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕುಗಳು ಸ್ಥಾಪನೆಯಾಗದಿರುವುದು, ಸಹಕಾರಿ ಆಂದೋಲನ ಸಾಕಷ್ಟು ಜನಪ್ರಿಯವಾಗದಿರುವುದು. ಕೃಷಿ ಉತ್ಪನ್ನಗಳಿಗೆ ನ್ಯಾಯೋಚಿತ ಬೆಲೆ ಸಿಗದೆ ಇರುವುದು, ಆರೋಗ್ಯ, ಶಿಕ್ಷಣ, ವಿವಾಹ ಮುಂತಾದ ಕಾರಣಗಳಿಗಾಗಿ ಸಾಲ ಮಾಡುವುದು ತಿಳಿಯುತ್ತದೆ. ಸಾಲದ ಕಾರಣ ತಿಳಿಯಲು ಕೆಳಗಿನ ಮಾಹಿತಿ ಪಡೆಯಲಾಯಿತು.

ಕೋಷ್ಟಕ ೪.೨೬

ಮಾಹಿತಿದಾರರ ಋಣಗ್ರಸ್ತತೆ ಕಾರಣಗಳು

ಅ.ನಂ	ಋಣಗ್ರಸ್ತತೆ ಕಾರಣ	ಋಣಗ್ರಸ್ತರ ಸಂಖ್ಯೆ	ಪ್ರತಿಶತ
೧	ಕೃಷಿ	೧೩೩	೨೨.೯೩
೨	ಉಪ ಜೀವನಕ್ಕಾಗಿ	೪೫	೭.೭೬
೩	ಆರೋಗ್ಯಕ್ಕಾಗಿ	೩೧	೫.೩೫
೪	ಶಿಕ್ಷಣಕ್ಕಾಗಿ	೪೧	೭.೦೮
೫	ವಾಸಕ್ಕಾಗಿ	೨೨	೩.೭೯
೬	ವಿವಾಹಕ್ಕಾಗಿ	೨೨	೩.೭೯
೭	ಚಟಗಳಿಗಾಗಿ	೦೨	೦.೩೪
೮	ವಾಹನ ಖರೀದಿಸಲು	೦೨	೦.೩೪
೯	ವ್ಯಾಪಾರ ಕೈಗೊಳ್ಳಲು	೦೪	೦.೬೯
೧೦	ಸಾಲ ರಹಿತರು	೨೭೮	೪೭.೯೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೪.೨೬ನ್ನು ವೀಕ್ಷಿಸಿದಾಗ ಪ್ರತಿಶತ ೨೨.೯೩ ಮಾಹಿತಿದಾರರು ಕೃಷಿ ಸಂಬಂಧಿತ ಕಾರ್ಯಗಳಿಗಾಗಿ ಸಾಲಗಾರರಾಗಿರುವುದು, ಶೇಕಡಾ ೭.೭೬ರಷ್ಟು ಉಪಜೀವನಕ್ಕಾಗಿ, ಶೇಕಡಾ ೫.೩೫ ಆರೋಗ್ಯಕ್ಕಾಗಿ, ಶೇಕಡಾ ೭.೦೮ ಶಿಕ್ಷಣಕ್ಕಾಗಿ, ಶೇಕಡಾ ೩.೭೯ ವಾಸಕ್ಕಾಗಿ, ಶೇಕಡಾ ೩.೭೯ ವಿವಾಹಕ್ಕಾಗಿ, ಶೇಕಡಾ ೦.೩೪ ಚಟಗಳಿಗಾಗಿ, ಶೇಕಡಾ ೦.೩೪ ವಾಹನಕ್ಕಾಗಿ, ವ್ಯಾಪಾರಕ್ಕಾಗಿ ಶೇಕಡಾ ೦.೬೮ ಮತ್ತು ಪ್ರತಿಶತ ೪೭.೯೩ ಮಾಹಿತಿದಾರರು ಯಾವುದೇ ಸಾಲ ಮಾಡದಿರುವುದು ತಿಳಿಯುತ್ತದೆ.

ಇದನ್ನೆಲ್ಲ ಗಮನಿಸಿದಾಗ ಉಳಿದ ಭಾಗಗಳಲ್ಲಿ ಜನರು ವಿವಾಹಕ್ಕಾಗಿ ಸಾಲವನ್ನು ಹೆಚ್ಚು ಮಾಡಿದರೆ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಜನರು ವಿವಾಹಕ್ಕಾಗಿ ಕಡಿಮೆ ಸಾಲ ಮಾಡಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಭಾಗದಲ್ಲಿ 'ಯಾದಿ ಮೇ ಶಾದಿ' ಮಾದರಿ ವಿವಾಹ ಆಚರಣೆ ಎಂದು ಹೇಳಬಹುದು.

ಋಣದ ಮೂಲಗಳು :

ಸಾಲ ಒಂದು ಸಮಸ್ಯೆಯಾಗಿರುವಂತೆ ಇದೊಂದು ತೆರನಾದ ಸೌಕರ್ಯವೂ ಹೌದು. ಸಮಾಜದಲ್ಲಿ ಸಾಲದ ವ್ಯವಸ್ಥೆ ಇಲ್ಲದೆ ಇದ್ದರೆ ಅನೇಕ ಕುಟುಂಬಗಳ ಜೀವನ ಸಮಾಪ್ತಿಗೊಳಿಸಬೇಕಾಗುತ್ತಿತ್ತು. ಸಾಲ ಸಮಸ್ಯೆಯಾಗಿರುವುದಕ್ಕೆ ಯಾವ ಮೂಲಗಳಿಂದ ಸಾಲ ಪಡೆದುಕೊಳ್ಳುತ್ತಿದ್ದಾರೆ ಎಂಬುದು ಪ್ರಮುಖ. ಜನರಿಗೆ ರಾಷ್ಟ್ರೀಕೃತ ಬ್ಯಾಂಕಗಳು, ಸಹಕಾರಿ

ಸಂಘಗಳು ಮತ್ತು ಲೇವಾದೇವಿದಾರರು ಸಾಲದ ಮೂಲಗಳಾಗಿವೆ. ಜನರ ಸಾಲದ ಮೂಲ ತಿಳಿದುಕೊಳ್ಳಲು ಕೋಷ್ಟಕ ೪.೨೬ರಲ್ಲಿ ಪ್ರಯತ್ನಿಸಲಾಗಿದೆ.

ಕೋಷ್ಟಕ ೪.೨೭

ಮಾಹಿತಿದಾರರ ಋಣದ ಮೂಲಗಳು

ಅ.ನಂ	ಋಣದ ಮೂಲಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ರಾಷ್ಟ್ರೀಕೃತ ಬ್ಯಾಂಕುಗಳು	೮೬	೧೪.೮೩
೨	ಸಹಕಾರಿ ಬ್ಯಾಂಕುಗಳು	೧೫೨	೨೬.೨೧
೩	ಲೇವಾದೇವಿದಾರರು	೧೯	೩.೨೮
೪	ಸಂಬಂಧಿಕರು	೪೧	೭.೦೬
೫	ಮಹಿಳಾ ಸಂಘಗಳು	೦೮	೦.೬೯
೬	ಸಾಲ ರಹಿತರು	೨೭೮	೪೭.೬೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೪.೨೭ನ್ನು ಗಮನಿಸಿದಾಗ ಪ್ರತಿಶತ ೧೪.೮೩ರಷ್ಟು ಮಾಹಿತಿದಾರರು ರಾಷ್ಟ್ರೀಕೃತ ಬ್ಯಾಂಕಗಳಿಂದ ಸಾಲ ಪಡೆದಿದ್ದರೆ, ಪ್ರತಿಶತ ೨೬.೨೧ ಸಹಕಾರಿ ಬ್ಯಾಂಕುಗಳಲ್ಲಿ ಇನ್ನುಳಿದಂತೆ ಲೇವಿದಾರರಿಂದ ಶೇಕಡಾ ೩.೨೮, ಸಂಬಂಧಿಕರಿಂದ ಶೇಕಡಾ ೭.೦೬, ಮಹಿಳಾ ಸಂಘಗಳಿಂದ ಶೇಕಡಾ ೦.೬೯ ಮತ್ತು ಪ್ರತಿಶತ ಶೇಕಡಾ ೪೭.೯೩ರಷ್ಟು ಮಾಹಿತಿದಾರರು ಯಾವುದೇ ಸಾಲ ಹೊಂದದೆ ಇರುವುದು ತಿಳಿಯುತ್ತದೆ.

ದುಶ್ಚಟಗಳು :

'ಹೆಣ್ಣಿಗೆ ಹಟ ಗಂಡಿಗೆ ಚಟ' ಎಂಬುದೊಂದು ಗ್ರಾಮೀಣ ಲೋಕೋಕ್ತಿಯಾಗಿದೆ. ಗ್ರಾಮಗಳಲ್ಲಿ ಜನರು ವಿವಿಧ ಚಟಗಳಿಗೆ ದಾಸರಾಗಿರುವುದು ಕಂಡು ಬರುತ್ತದೆ. ಸಾಮಾಜಿಕ ಗಂಡಾಂತರಗಳಲ್ಲಿ ಮತ್ತು ಸ್ಥಳಾಂತರದ ನಂತರ ದಿನಗಳಲ್ಲಿ ಜನರು ವಿವಿಧ ದುಶ್ಚಟಗಳಲ್ಲಿ ತೊಡಗಿರುವುದು ಸ್ಥಳಾಂತರದ ಅಧ್ಯಯನಗಳಲ್ಲಿ ತಿಳಿಯುತ್ತದೆ. ಇದರ ಕುರಿತು ಮಾಹಿತಿ ಪಡೆಯಲಾಯಿತು. ಅದನ್ನು ಕೋಷ್ಟಕ ೪.೨೮ರಲ್ಲಿ ನೋಡಬಹುದು.

ಕೋಷ್ಟಕ ೪.೨೮

ಮಾಹಿತಿದಾರರ ದುಶ್ಚಟಗಳ ಮಾಹಿತಿ

ಅ.ನಂ	ವಿವಿಧ ದುಶ್ಚಟಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ತಂಬಾಕು	೧೮೬	೩೨.೦೭
೨	ಮಧ್ಯಪಾನ	೭೨	೧೨.೪೧
೩	ಚಟ ರಹಿತರು	೩೨೨	೫೫.೫೨
	ಒಟ್ಟು	**೫೮೦**	**೧೦೦.೦೦**

ಮೇಲಿನ ೪.೨೮ರ ಕೋಷ್ಟಕವನ್ನು ಗಮನಿಸಿದಾಗ ಪ್ರತಿಶತ ೩೨.೦೭ರಷ್ಟು ಮಾಹಿತಿದಾರರು ತಂಬಾಕು ತಿನ್ನುವುದು, ಶೇಕಡಾ ೧೨.೪೧ರಷ್ಟು ಮಾಹಿತಿದಾರರು ಮಧ್ಯಪಾನ ಸೇವನೆಯಲ್ಲಿ ತೊಡಗಿದ್ದರೆ, ಶೇಕಡಾ ೫೫.೫೨ರಷ್ಟು ಮಾಹಿತಿದಾರರು ಯಾವುದೇ ದುಶ್ಚಗಳನ್ನು ಹೊಂದಿಲ್ಲದಿರುವುದು ತಿಳಿಯುತ್ತದೆ.

ΦΦΦΦ

ಅಧ್ಯಾಯ : ಐದು

ಪ್ರವಾಹ ಸೃಷ್ಟಿಸಿದ ಸಾಮಾಜಿಕ ಸಮಸ್ಯೆಗಳು

ಅಧ್ಯಾಯ : ಐದು

ಪ್ರವಾಹ ಸೃಷ್ಟಿಸಿದ ಸಾಮಾಜಿಕ ಸಮಸ್ಯೆಗಳು

ಈ ಅಧ್ಯಾಯದಲ್ಲಿ ಪ್ರವಾಹದ ಸಾಮಾಜಿಕ ಪರಿಣಾಮಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಹದ ಅವಧಿಯಲ್ಲಿ ಜನರು ವಾಸ್ತವ್ಯ ಮಾಡಿದ ಸ್ಥಳ, ನೆರೆಹೊರೆಯವರ ಸಹಾಯ, ಜನರ ವೈವಾಹಿಕ ಮತ್ತು ಕೌಟುಂಬಿಕ ಸ್ಥಿತಿಗತಿಗಳ ಮೇಲೆ ಪ್ರವಾವ ಬೀರಿದ ಪರಿಣಾಮ, ಸಾಂಕ್ರಾಮಿಕ ರೋಗಗಳು ಹರಡುವಿಕೆ, ಅವುಗಳನ್ನು ನಿಯಂತ್ರಿಸಲು ಸರಕಾರ ಕೈಗೊಂಡ ಕ್ರಮಗಳು, ಮಕ್ಕಳ ಶಿಕ್ಷಣ, ಮಹಿಳೆಯರ ಮೇಲಾದ ಪ್ರಭಾವ, ಹಿರಿಯರ ಸಮಸ್ಯೆಗಳು, ಸರಕಾರದ ಕ್ರಮಗಳು, ಧರ್ಮ ಸಂಸ್ಕೃತಿಗಳ ಮೇಲಾದ ಪರಿಣಾಮ ಮುಂತಾದ ವಿಷಯಗಳ ಕುರಿತು ವಿಶ್ಲೇಷಿಸಲಾಗಿದೆ.

ಗ್ರಾಮದ ಜನರು ಮನೆ, ಭೂಮಿ ಇನ್ನಾವುದೇ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ ಕಾರಣ "ನಮ್ಮನ್ನು ಸರ್ಕಾರ ಯಾವಾಗ ಒಕ್ಕಲೆಬ್ಬಿಸುತ್ತಾರೆ ಹೇಳಲಿಕ್ಕಾಗುವುದಿಲ್ಲ" ಎನ್ನುತ್ತಿದ್ದಾರೆ.

ದೇಶದ ವಿವಿಧ ಸ್ಥಳಾಂತರ ಯೋಜನೆಗಳನ್ನು ಅವಲೋಕಿಸಿದಾಗ ಯೋಜನೆಗಳಿಂದ ಬಾಧಿತ ಜನರು ತಮ್ಮ ಮೂಲ ವಾಸಸ್ಥಳಗಳನ್ನು ಬಿಡಲು ಹಿಂಜರಿಯುವುದನ್ನು ಕಾಣುತ್ತೇವೆ. ಆದರೆ ಖವಟಕೊಪ್ಪದ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾದುದು. ನಮ್ಮನ್ನು ಬೇಗನೆ ಇಲ್ಲಿಂದ ಒಕ್ಕಲೆಬ್ಬಿಸಿ ಸರಕಾರ ಬೇರೆ ಕಡೆ ಸ್ಥಳಾಂತರಿಸಲಿ ಎಂದು ಜನರು ವಿಚಾರಿಸುತ್ತಿದ್ದಾರೆ. ಸರಕಾರದ ಯೋಜನೆಗಳು, ಸ್ಥಳಾಂತರದ ಕಾರಣ ಗ್ರಾಮದಲ್ಲಿ ಸ್ಥಗಿತಗೊಂಡಿದ್ದವು ಮತ್ತೆ ಜನರ ಒತ್ತಾಯದ ಕಾರಣ ಪುನಃ ಪ್ರಾರಂಭವಾದವು. ಶುದ್ಧ ಕುಡಿಯುವ ನೀರು ದೊರೆಯುತ್ತಿಲ್ಲ. ಜನರು ಇದಕ್ಕೆಲ್ಲ ಬೇಸತ್ತು ಸ್ಥಳಾಂತರಗೊಳ್ಳಲು ಇಚ್ಛಿಸುತ್ತಿದ್ದಾರೆ. ಸರಕಾರ ಇದರ ಕುರಿತು ದೃಢ ನಿರ್ಧಾರ ಕೈಗೊಳ್ಳುತ್ತಿಲ್ಲ.

ಅಣೆಕಟ್ಟುಗಳಿಂದ ಸಮಾಜದ ಮೇಲಾಗುವ ಸಾಮಾಜಿಕ ಮತ್ತು ಪರಿಸರಾತ್ಮಕ ಪರಿಣಾಮಗಳನ್ನು ಪ್ರಮುಖವಾಗಿ ಭೌತಿಕ, ಜೈವಿಕ ಮತ್ತು ಮಾನವಿಕ ಪರಿಣಾಮಗಳೆಂದು ಮೂರು ವಿಧವಾಗಿ ವಿಂಗಡಿಸಬಹುದು. ಆಸ್ವಾನ ಅಣೆಕಟ್ಟೆಯಿಂದ ಮೀನುಗಾರಿಕೆ ವೃತ್ತಿಯನ್ನು ಅವಲಂಭಿಸಿದ ಜನಸಂಖ್ಯೆ ಕಡಿಮೆಯಾಯಿತು. ಈಜಿಪ್ತಿನಲ್ಲಿ ನೈಲ ನದಿ ಯೋಜನೆಯಿಂದ ಭೂಫಲವತ್ತತೆ ಕುಸಿದು ಭೂಮಿಯ ಕ್ಷಾರತೆ ಹೆಚ್ಚಿತು, ಕೊಯ್ನಾದಂಥ ಬೃಹತ್ ಅಣೆಕಟ್ಟುಗಳಿಂದ ಭೂಕಂಪಗಳು ಸಂಭವಿಸುತ್ತವೆ ಎಂಬುದು ಇಂಜಿನೀಯರುಗಳ ಗಮನಕ್ಕೆ ಬಂದಿತು. ನೀರಾವರಿ ಯೋಜನೆಗಳಿಂದ ಮಲೇರಿಯಾ, ಕಾಲರಾ, ವಾಂತಿಭೇದಿ, ಚರ್ಮರೋಗ ಮತ್ತು ಫೈಲಾರಿಯಾಸಿಸ್‌ನಗಳಂತಹ ಸಾಂಕ್ರಾಮಿಕ ರೋಗಗಳು ಹರಡಲು ಸಹಕಾರಿಯಾಗಿತ್ತೆಂದು ತಿಳಿಸಿದ್ದಾರೆ.

ಸಾಮಾಜಿಕ ಪರಿಣಾಮಗಳು :

ಕೃಷ್ಣಾ ಕೊಳ್ಳ ಪ್ರದೇಶದ ಜನರು ವಿಫುಲವಾದ ನೀರು, ಫಲವತ್ತಾದ ಜಮೀನುಗಳನ್ನು ಹೊಂದಿ ನೆಮ್ಮದಿಯಿಂದ ಕೂಡಿದ ಸ್ವಾಭಿಮಾನದ ಜೀವನವನ್ನು ಸಾಗಿಸುತ್ತಿದ್ದರು. ಸುತ್ತಮುತ್ತಲಿನ ಗ್ರಾಮಗಳ ಜನರು ನೀರಿನ ಬರ ಎದುರಿಸುತ್ತಿದ್ದರೆ ಈ ಭಾಗದ ಜನತೆ ಕೃಷ್ಣೆಯ ಕೃಪೆಯಿಂದ ಸಮೃದ್ಧ ಬೆಳೆಗಳನ್ನು ಬೆಳೆದು ಸಂಬಂಧಿಕರಿಗೆ ಸಹಾಯ ಸವಲತ್ತುಗಳನ್ನು ನೀಡುವ ಉದಾರಿಗಳಾಗಿದ್ದರು.

ಕೌಟುಂಬಿಕ ಬಿರುಕು :

೨೦೦೫ ಮತ್ತು ೨೦೦೬ರಲ್ಲಿ ಕೃಷ್ಣೆಯ ಅವಕೃಪೆಯಿಂದ ಎರಗಿದ ಪ್ರವಾಹಗಳು ಇವರ ಜೀವನವನ್ನು ಅಸ್ಥವ್ಯಸ್ಥ ಮಾಡಿ ಭವಿಷ್ಯವನ್ನು ಕರಾಳಗೊಳಿಸಿದ್ದವು. ಮುನ್ಸೂಚನೆಗಳಿಲ್ಲದ ಪ್ರವಾಹದಿಂದ ಗ್ರಾಮ ಬಿಡುವ ಪ್ರಸಂಗ ಬಂದೋದಗಿತು. ಸ್ವಾಭಿಮಾನದಿಂದ ಜೀವನವನ್ನು ಸಾಗಿಸಿದ ಜನರು ಮನೆಗಳನ್ನು ತೊರೆದು ಸರಕಾರದ ಶೆಡ್‌ಗಳಲ್ಲಿ ವಾಸಿಸುವ ಪರಿಸ್ಥಿತಿ ಬಂದಿತು. ಸರಕಾರದ ಶೆಡ್‌ಗಳಲ್ಲಿ ವಾಸಿಸಲು ಮನಸ್ಸಿಲ್ಲದ ಜನರು ತಮ್ಮ ಜನ ಜಾನುವಾರುಗಳೊಂದಿಗೆ ಸಂಬಂಧಿಕರ ಮನೆಗೆ ಹೋದರು. ಸರಕಾರದ ಶೆಡ್‌ಗಳಲ್ಲಿ ಕನಿಷ್ಠ ಸೌಲಭ್ಯಗಳ ಕೊರತೆಗಳ ಮಧ್ಯೆ ಎಲ್ಲ ಧರ್ಮ, ಜಾತಿಯ ಜನರು ಒಟ್ಟಿಗೆ ವಾಸಿಸಿದರು, ಸಂಬಂಧಿಕರ ಮನೆಗಳಲ್ಲಿ ವಾಸಿಸಿದ ಜನರು ಅನೇಕ ಸಮಸ್ಯೆಗಳನ್ನು ಎದುರಿಸಿದರು. ಪ್ರವಾಹ ಗ್ರಾಮದ ಸಂಬಂಧಿಕರಿಗೂ ಸಮಸ್ಯೆಯಾಯಿತು. ೨೦೦೫ರಲ್ಲಿ ಒಳ್ಳೆಯ ರೀತಿಯಿಂದ ಉಪಚರಿಸಿದ ಸಂಬಂಧಿಕರು

೨೦೦೬ರಲ್ಲಿ ಮತ್ತೆ ಪ್ರವಾಹ ಬಂದಾಗ ಇವರನ್ನು ಆಹ್ವಾನಿಸಲು ಹಿಂದೇಟು ಹಾಕಿದರು. ತಿಂಗಳುಗಟ್ಟಲೆ ಸಂತ್ರಸ್ತರನ್ನು ಉಪಚರಿಸುವುದು ಕಠಿಣವಾಯಿತು. ಸಂತ್ರಸ್ತರು ನೆಂಟರ ಮನೆಗಳಲ್ಲಿ ವಾಸಿಸುತ್ತಿರುವುದರಿಂದ ಯಾವುದೇ ಕಾರ್ಯಗಳನ್ನು ನಿರ್ವಹಿಸಲಿಲ್ಲ. ಕೆಲಸ ನಿರ್ವಹಿಸದೆ ಕುಳಿತು ಊಟ ಮಾಡುತ್ತಾರೆಂದು ನೆಂಟರು ಗೊಣಗಿದರು. ಅಲ್ಲದೆ ಅವರ ಜಾನುವಾರುಗಳಿಗೆ ಮೇವು, ನೀರನ್ನು ಒದಗಿಸುವುದು ಕಷ್ಟದ ಕೆಲಸವಾಯಿತೆಂದು ತಿಳಿಸುತ್ತಾರೆ. ಸೌಲಭ್ಯಗಳನ್ನು ಒದಗಿಸಿದ ನೆಂಟರ ಸಂಬಂಧಗಳಲ್ಲಿ ಬಿರುಕು ಮೂಡಿದವು. ನಾವೇನು ಇವರ ಮನೆಗಳಿಗೆ ಯಾವಾಗ್ಲೂ ಹೋಗುತ್ತೇವೇನು? ಕರೆದರೂ ಹೋಗುವುದಿಲ್ಲ. ನಮಗೆ ಪ್ರಸಂಗ ಬಂದಾಗ ಇವರು ಸಹಾಯ ಮಾಡಲಿಲ್ಲವೆಂದು ಕೋಪಿಸಿಕೊಂಡರು. ಹೀಗೆ ಪ್ರವಾಹದಿಂದ ಕೌಟುಂಬಿಕ ಸಂಬಂಧಗಳಲ್ಲಿ ಬಿರುಕು ಕಾಣಿಸಿಕೊಂಡಿತು.

ಅಧ್ಯಯನಕ್ಕೆ ಪ್ರತಿಶತ ೧೦೦ರಷ್ಟು ಪ್ರವಾಹದಿಂದ ಪ್ರಭಾವಿತವಾಗುವ ಗ್ರಾಮವನ್ನು ಆಯ್ದುಕೊಳ್ಳಲು ನಿರ್ಧರಿಸಿ ಖವಟಕೊಪ್ಪ ಗ್ರಾಮವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿತ್ತು. ಗ್ರಾಮದ ಪ್ರವಾಹ ಬಾಧಿತ ಪ್ರಮಾಣವನ್ನು ತಿಳಿಯಲು ಮಾಹಿತಿದಾರರನ್ನು ಪ್ರವಾಹದಿಂದ ಗ್ರಾಮ ಬಿಡುವ ತೀವ್ರತೆ ಇತ್ತೆ? ಎಂದು ಪ್ರಶ್ನಿಸಲಾಯಿತು. ಎಲ್ಲ ೫೮೦ ಮಾಹಿತಿದಾರರು ಹೌದು ಎಂದು ಉತ್ತರಿಸಿದರು. ಇದರಿಂದ ಪ್ರವಾಹದಿಂದ ಇಡೀ ಗ್ರಾಮ ಬಾಧಿತವಾಗುತ್ತದೆಂದು ತಿಳಿಯುತ್ತದೆ.

ಪ್ರವಾಹದ ತೀವ್ರತೆ ಹೆಚ್ಚಾದಾಗ ಮತ್ತು ಹಿನ್ನೀರು ಬಹುದಿನಗಳವರೆಗೆ ಸಂಗ್ರಹವಾಗಿ ನಿಂತಾಗ ಜನರು ಗ್ರಾಮ ಬಿಡುವ ಪ್ರಸಂಗ ಬಂದೊದಗುತ್ತದೆ. ಪ್ರವಾಹದ ಪರಿಣಾಮವನ್ನು ಅವಲೋಕಿಸಿದಾಗ ಎತ್ತರದ ಪ್ರದೇಶಗಳಲ್ಲಿ ವಾಸಿಸುವ ಜನರಿಗಿಂತ ತಗ್ಗು ಪ್ರದೇಶದಲ್ಲಿ ಮತ್ತು ಗ್ರಾಮದ ಹೊರವಲಯಗಳಲ್ಲಿ ವಾಸಿಸುವ ಪ್ರದೇಶದ ಜನರ ಮೇಲೆ ಹೆಚ್ಚು ದುಷ್ಪರಿಣಾಮ ಬೀರಿರುವುದು ಕಂಡು ಬರುತ್ತದೆ. ಕೆಳವರ್ಗದ ಬದುಕಿನಲ್ಲಿ ತಲ್ಲಣವಾಗಿತ್ತು. ಇದಕ್ಕೆ ಪೂರಕವಾಗಿ ಮಾಹಿತಿದಾರರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದನ್ನು ಕೋಷ್ಟಕ ೫.೧ರಲ್ಲಿ ಕಾಣಬಹುದು.

ಕೋಷ್ಟಕ ೫.೧
ಪ್ರವಾಹದ ಕಾರಣ ಎಷ್ಟು ದಿನ ಗ್ರಾಮ ಬಿಡಬೇಕಾಯಿತು?

ಕ್ರಸಂ	ಗ್ರಾಮ ತೊರೆದ ದಿನಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧ ರಿಂದ ೧೦ ದಿನ	೪೧	೭.೦೬
೨	೧೧ ರಿಂದ ೨೦ ದಿನ	೩೩೮	೫೮.೨೮
೩	೨೧ ದಿನಕ್ಕೆ ಮೇಲ್ಪಟ್ಟು	೨೦೧	೩೪.೬೬
	ಒಟ್ಟು	೫೮೦	೧೦೦.೦೦

ಕೋಷ್ಟಕ ೫.೧ರಲ್ಲಿ ಪ್ರತಿಶತ ೭.೦೬ರಷ್ಟು ಮಾಹಿತಿದಾರರು ೧ರಿಂದ ೧೦ ದಿನಗಳ ಕಾಲ ಪ್ರವಾಹದ ಕಾರಣ ಗ್ರಾಮ ಬಿಡುವ ಪರಿಸ್ಥಿತಿ ಬಂದಿತೆಂದು ತಿಳಿಸುತ್ತಾರೆ. ಇವರು ಗ್ರಾಮದ ಎತ್ತರದ ಪ್ರದೇಶದಲ್ಲಿ ವಾಸಿಸುವ ಜನರು. ಇನ್ನು ಪ್ರತಿಶತ ೫೮.೨೭ರಷ್ಟು ಮಾಹಿತಿದಾರರು ೧೧ರಿಂದ ೨೦ ದಿನಗಳ ಕಾಲ ಎಂದು ತಿಳಿಸಿದ್ದರೆ, ಪ್ರತಿಶತ ೩೪.೬೬ರಷ್ಟು ಮಾಹಿತಿದಾರರು ೨೧ ದಿನಕ್ಕೆ ಮೇಲ್ಪಟ್ಟು ಎಂದು ತಿಳಿಸಿದ್ದಾರೆ. ಇವರು ಗ್ರಾಮದ ಹೊರವಲಯದ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಕೆಳವರ್ಗದ ಜನರು. ಇವರು ಮೂರು ತಿಂಗಳವರೆಗೆ ಗ್ರಾಮಕ್ಕೆ ಬಂದಿರಲಿಲ್ಲ. ಇದರಿಂದ ಪ್ರವಾಹವು ಊರ ಹೊರವಲಯದಲ್ಲಿನ ಪ.ಜಾ, ಪ.ಪಂ.ದ ಜನರ ಮೇಲೆ ಹೆಚ್ಚು ಪರಿಣಾಮ ಬೀರಿರುವುದು ಕಂಡು ಬರುತ್ತದೆ.

ಪ್ರವಾಹದಿಂದ ಗ್ರಾಮ ಪೂರ್ತಿ ಮುಳುಗಡೆಯಾಗುವವರೆಗೆ ಗ್ರಾಮಸ್ಥರು ಗ್ರಾಮ ಬಿಡಲು ಸಿದ್ಧರಿರಲಿಲ್ಲ. ಕೊನೆಗೆ ದಿಕ್ಕು ತೋಚದೆ ಗ್ರಾಮದಿಂದ ಹೊರಗೆ ಹೋಗುವ ಯೋಚನೆ ಮಾಡಿದರು. ಸರಕಾರ ಶಂಕರಹಟ್ಟಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ದಲಿತರಿಗೆ, ಇನ್ನುಳಿದ ಜನರಿಗೆ ಅನುದಾನಿತ ಪ್ರೌಢಶಾಲೆಯಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿ ಕೊಟ್ಟಿತ್ತು.

ಪ್ರವಾಹ ಬಂದಾಗ ಗ್ರಾಮಸ್ಥರು ವಿವಿಧ ಕಡೆಗೆ ವಾಸಿಸಿದರು. ಕೆಲವೊಂದು ಜನರು ಸಂಬಂಧಿಕರ ಮನೆಗಳಿಗೆ ಹೋದರೆ ಇನ್ನೂ ಕೆಲವೊಂದು ಜನರು ಬಾಡಿಗೆ ಮನೆಗಳಲ್ಲಿ ವಾಸಿಸಿದರು. ಪ್ರವಾಹದ ಸಮಯದಲ್ಲಿಯ ವಿವಿಧ ವಾಸ್ತವ್ಯಗಳ ಮಾಹಿತಿಯನ್ನು ಮಾಹಿತಿದಾರರಿಂದ ಮಾಹಿತಿ ಪಡೆದು ಕೋಷ್ಟಕ ೫.೨ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೫.೨

ಪ್ರವಾಹ ಬಂದಾಗ ವಾಸಸ್ಥಳದ ವಿವರ

ಕ್ರ.ಸಂ	ವಾಸಸ್ಥಳ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಅದೇ ಗ್ರಾಮದಲ್ಲಿ	೬೯	೧೧.೯೦
೨	ಸರಕಾರದ ಶೆಡ್‌ಗಳಲ್ಲಿ	೩೩೭	೫೮.೧೦
೩	ಸಂಬಂಧಿಕರಲ್ಲಿ	೧೭೧	೨೯.೪೮
೪	ಇತರೆ (ಬಾಡಿಗೆ ಮನೆ)	೦೩	೦.೫೨
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೨ರಿಂದ ಪ್ರತಿಶತ ೧೧.೯೦ರಷ್ಟು ಮಾಹಿತಿದಾರರು ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದರು. ಇವರು ಜನ ಜಾನುವಾರುಗಳನ್ನು ನೋಡಿಕೊಳ್ಳಲು, ವಸ್ತುಗಳು ಮತ್ತು ಮನೆಯ ಸುರಕ್ಷತೆಗೆ ಅಲ್ಲಿಯೇ ವಾಸವಾಗಿದ್ದರು. ೫೮.೧೦ರಷ್ಟು ಸರಕಾರದ ಶೆಡ್‌ಗಳಲ್ಲಿ ಮತ್ತು ೨೯.೪೮ರಷ್ಟು ಸಂಬಂಧಿಕರ ಮನೆಯಲ್ಲಿ ವಾಸಿಸಿದರೆ, ೦.೫೨ರಷ್ಟು ಮಾಹಿತಿದಾರರು ಬಾಡಿಗೆ

ಮನೆಯನ್ನು ಮಾಡಿಕೊಂಡು ವಾಸವಾಗಿದ್ದು ತಿಳಿಯುತ್ತದೆ. ಸಾಮಾನ್ಯವಾಗಿ ಕೆಳ ಜಾತಿಯವರು, ಗಂಡಸರು ಸರಕಾರದ ಶೆಡ್‌ಗಳಲಿದ್ದರೆ, ಉಚ್ಛಜಾತಿಯವರು, ಶ್ರೀಮಂತರ ಹೆಣ್ಣು ಮಕ್ಕಳು ಸಂಬಂಧಿಕರ ಮನೆಗಳಿಗೆ ಹೋಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಪ್ರವಾಹದ ಭೀಕರತೆ ಮತ್ತು ದೀರ್ಘಾವಧಿ ಕಾರಣ ಗ್ರಾಮದ ಎಲ್ಲ ಜನರು ಗ್ರಾಮವನ್ನು ತೊರೆದರು. ಆದರೆ ಎತ್ತರದ ಪ್ರದೇಶಗಳಲ್ಲಿ ಮನೆಗಳಿರುವವರು, ಜಾನುವಾರುಗಳನ್ನು ಹೊಂದಿದವರು ಗ್ರಾಮವನ್ನು ತೊರೆಯಲಿಲ್ಲ. ಭೀಕರ ಪ್ರವಾಹದ ಹೊರತಾಗಿಯೂ ಕೆಲವೊಂದು ಜನರು ಗ್ರಾಮ ತೊರೆಯದೇ ಇರುವುದಕ್ಕೆ ಕಾರಣಗಳೇನು ಎಂಬುದರ ಕುರಿತು ಮಾಹಿತಿ ಪಡೆಯಲಾಗಿ.

ಪ್ರತಿಶತ ೯.೮೩ರಷ್ಟು ಮಾಹಿತಿದಾರರು ಅವರ ಮನೆಗಳು ಗ್ರಾಮದ ಎತ್ತರದ ಸ್ಥಳಗಳಲಿದ್ದು ಮನೆಗಳಿಗೆ ನೀರು ಬರದೆ ಇರುವ ಕಾರಣ ಗ್ರಾಮದಲ್ಲಿಯೇ ವಾಸವಾಗಿದ್ದರು. ಇನ್ನೂ ೨.೦೭ರಷ್ಟು ಮಾಹಿತಿದಾರರು ಗ್ರಾಮ ಬಿಡಲು ಮನಸ್ಸಿಲ್ಲದ ಕಾರಣ ಮತ್ತು ಮನೆಗಳನ್ನು ಕಾವಲು ಮಾಡುವುದರ ಜೊತೆಗೆ ಜಾನುವಾರುಗಳನ್ನು ನೋಡಿಕೊಳ್ಳಲು ಗ್ರಾಮದಲ್ಲಿಯೇ ವಾಸವಾಗಿದ್ದರು. ಇನ್ನುಳಿದ ಪ್ರತಿಶತ ೮೮.೧೦ರಷ್ಟು ಮಾಹಿತಿದಾರರು ಸರಕಾರದ ಶೆಡ್‌ಗಳಲ್ಲಿ ಮತ್ತು ಸಂಬಂಧಿಕರಲ್ಲಿ ವಾಸಿಸುತ್ತಿದ್ದರು. ಇವರು ಇತರರಿಗಿಂತ ಪ್ರವಾಹದಿಂದ ಹೆಚ್ಚು ಬಾಧಿತರಾದವರು ಮತ್ತು ಹೊರವಲಯಗಳಲ್ಲಿ ವಾಸಿಸುವವರಾಗಿದ್ದಾರೆ.

ಪ್ರವಾಹದ ದುಷ್ಪರಿಣಾಮ ಹೆಚ್ಚು ಕಡಿಮೆ ಗ್ರಾಮದ ಎಲ್ಲ ವರ್ಗದ ಜಾತಿ-ಧರ್ಮದ ಜನರ ಮೇಲಾಯಿತು. ಆದರೆ ಬಾಧಿತ ಜನರ ವಾಸಸ್ಥಳಗಳಲ್ಲಿ ಮಾತ್ರ ವೈವಿಧ್ಯತೆ ಕಂಡು ಬರುತ್ತದೆ. ಈ ಅವಧಿಯಲ್ಲಿ ಎಲ್ಲಿಯೇ ವಾಸವಾಗಿದ್ದರೂ ನೆಮ್ಮದಿಯಿಂದ ಇರಲಿಲ್ಲ ಎಂಬುದು ತಿಳಿಯುತ್ತದೆ. ಇಂತಹ ಖಿನ್ನತೆಯನ್ನು ಅರಿಯಲು ಜನರನ್ನು ಸಂದರ್ಶಿಸಿದಾಗ ಅವರಿಂದ ವಿವಿಧ ಉತ್ತರಗಳು ಗಮನಕ್ಕೆ ಬಂದವು ಆ ಹೇಳಿಕೆಗಳನ್ನು ಕೋಷ್ಠಕ ೫.೩ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೫.೩

ವಿವಿಧ ಸ್ಥಳಗಳಲ್ಲಿ ವಾಸ್ತವ್ಯ ಮಾಡಿದ ಮಾಹಿತಿದಾರರ ನೆಮ್ಮದಿ ಕುರಿತು ಮಾಹಿತಿ

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಹೌದು	ಇಲ್ಲ	ಪ್ರತಿಶತ
೧	ಗ್ರಾಮದಲ್ಲಿ ವಾಸ್ತವ್ಯ ಮಾಡಿದವರು	೬೯	೦.೫೨	೧೧.೩೮	೧೧.೯೦
೨	ಸರಕಾರದ ಶೆಡ್‌ಗಳಲ್ಲಿ ವಾಸ್ತವ್ಯ ಮಾಡಿದವರು	೩೩೭	೦.೧೭	೫೭.೯೩	೫೮.೧೦
೩	ಸಂಬಂಧಿಕರ ಮನೆಗಳಲ್ಲಿ ವಾಸ್ತವ್ಯ ಮಾಡಿದವರು	೧೭೧	೫.೧೭	೨೪.೩೧	೨೯.೪೮
೪	ಬಾಡಿಗೆ ಮನೆಗಳಲ್ಲಿ ವಾಸ್ತವ್ಯ ಮಾಡಿದವರು	೦೩	--	೦.೫೨	೦.೫೨
	ಒಟ್ಟು	೫೮೦	೫.೮೬	೯೪.೧೪	೧೦೦.೦೦

ಕೋಷ್ಟಕ ೫.೩ನ್ನು ಗಮನಿಸಿದಾಗ ಪ್ರತಿಶತ ೦.೫೨ರಷ್ಟು ಗ್ರಾಮದಲ್ಲಿ ವಾಸ್ತವ್ಯ ಮಾಡಿದ, ಶೇಕಡಾ ೦.೧೭ರಷ್ಟು ಸರಕಾರದ ಶೆಡ್‌ಗಳಲ್ಲಿ ವಾಸ್ತವ್ಯ ಮಾಡಿದ, ಶೇಕಡಾ ೫.೧೭ರಷ್ಟು ಸಂಬಂಧಿಕರ ಮನೆಗಳಲ್ಲಿ ವಾಸ್ತವ್ಯ ಮಾಡಿದ ಮಾಹಿತಿದಾರರು ನೆಮ್ಮದಿಯಿಂದ ಇದ್ದೆವೆಂದು ತಿಳಿಸಿದರೆ, ಗ್ರಾಮದಲ್ಲಿ ವಾಸ್ತವ್ಯ ಮಾಡಿದ ಪ್ರತಿಶತ ೧೧.೩೮ರಷ್ಟು ಸರಕಾರದ ಶೆಡ್‌ಗಳಲ್ಲಿ ವಾಸ್ತವ್ಯ ಮಾಡಿದ ಪ್ರತಿಶತ ೫೭.೯೩ರಷ್ಟು, ಸಂಬಂಧಿಕರ ಮನೆಗಳಲ್ಲಿ ವಾಸ್ತವ್ಯ ಮಾಡಿದ ಪ್ರತಿಶತ ೨೪.೩೧ ಮತ್ತು ಬಾಡಿಗೆ ಮನೆಗಳಲ್ಲಿ ವಾಸ್ತವ್ಯ ಮಾಡಿದ ೦.೫೨ರಷ್ಟು ಮಾಹಿತಿದಾರರು ತಾವು ಎಲ್ಲಿಯೂ ನೆಮ್ಮದಿಯಿಂದ ಇರಲಿಲ್ಲವೆಂದು ತಿಳಿಸಿದರು.

ಪ್ರವಾಹ ಬಂದಾಗ ಗ್ರಾಮದ ಜನತೆ ಸರಕಾರದ ನಿರ್ಮಿಸಿದ ಶೆಡ್‌ಗಳಲ್ಲಿ, ಸಂಬಂಧಿಕರಲ್ಲಿ ಮತ್ತು ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದರು. ಹೀಗೆ ಬೇರೆ ಬೇರೆ ಕಡೆ ವಾಸಿಸುವ ಜನರು ಇಡೀ ಕುಟುಂಬದ ಸದಸ್ಯರೆಲ್ಲ ಒತ್ತಟ್ಟಿಗೆ ವಾಸಿಸುತ್ತಿದ್ದರೋ ಅಥವಾ ಬೇರೆ ಬೇರೆ ಕಡೆ ವಾಸಿಸುತ್ತಿದ್ದರೋ ಎಂಬ ಮಾಹಿತಿ ಪಡೆದುಕೊಂಡು ಕೋಷ್ಟಕ ೫.೪ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೫.೪

ಪ್ರವಾಹ ಬಂದಾಗ ಕುಟುಂಬದ ಎಲ್ಲ ಸದಸ್ಯರು ಒತ್ತಟ್ಟಿಗೆ ಇದ್ದೀರಾ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೫೮	೬೧.೭೨
೨	ಇಲ್ಲ	೨೨೨	೩೮.೨೮
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೪ರಲ್ಲಿ ಪ್ರತಿಶತ ೬೧.೭೨ ಮಾಹಿತಿದಾರರು ಮನೆಯವರೆಲ್ಲರೂ ಒತ್ತಟ್ಟಿಗೆ ವಾಸಿಸುತ್ತಿದ್ದೇವೆಂದು ತಿಳಿಸಿದರೆ ೩೮.೨೮ ರಷ್ಟು ಮಾಹಿತಿದಾರರು ಎಲ್ಲರೂ ಒತ್ತಟ್ಟಿಗೆ ಇರಲಿಲ್ಲವೆಂದು ತಿಳಿಸುತ್ತಾರೆ. ಕುಟುಂಬದಲ್ಲಿಯೇ ಕೆಲವೊಂದು ಜನರು ಗ್ರಾಮದಲ್ಲಿ, ಕೆಲವರು ಸಂಬಂಧಿಕರಲ್ಲಿ ಇನ್ನೂ ಕೆಲವರು ಶೆಡ್‌ಗಳಲ್ಲಿ ಇರುವುದು ತಿಳಿಯುತ್ತದೆ.

ಪ್ರವಾಹ ಬಂದಾಗ ಗ್ರಾಮದ ಎಲ್ಲ ಜನತೆ ತೊಂದರೆಯಲ್ಲಿ ಇದ್ದರು. ಪ್ರವಾಹ ಮತ್ತು ಸ್ಥಳಾಂತರ ಸಮಯದಲ್ಲಿ ನೆರೆಹೊರೆಯವರ ಪಾತ್ರದ ಕುರಿತು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಯಿತು. ನೆರೆಹೊರೆ ಎಂದರೆ ಮನೆಯ ಎದುರು–ಬದುರಿನ ಜನ. ಗ್ರಾಮೀಣ ಸಮುದಾಯಗಳಲ್ಲಿ ನೆರೆಹೊರೆ ಪ್ರಮುಖ ಪಾತ್ರ ವಹಿಸುತ್ತದೆ. ನೆರೆಹೊರೆಯಿಂದ ಏನಾದರೂ ಸಹಾಯ ದೊರಕಿದ ಕುರಿತು ಮಾಹಿತಿದಾರರಿಂದ ಮಾಹಿತಿ ಪಡೆಯಲಾಗಿ.

ಪ್ರತಿಶತ ೧೪.೪೮ ಮಾಹಿತಿದಾರರು ನೆರೆಹೊರೆ ಸಹಾಯ ಮಾಡಿತ್ತೆಂದು ತಿಳಿಸಿದರೆ, ಶೇಕಡಾ ೮೫.೫೨ ಮಾಹಿತಿದಾರರು ನೆರೆಹೊರೆಯಿಂದ ಯಾವುದೇ ಸಹಾಯ ದೊರಕಿಲ್ಲವೆಂದು ತಿಳಿಸಿದರು. ಸಹಾಯ ಮಾಡದಿರುವ ಪ್ರಮಾಣ ಹೆಚ್ಚಿಗಿರಲು ಕಾರಣವೇನು ಎಂದು ವಿಚಾರಿಸಿದಾಗ ಎಲ್ಲರೂ ತೊಂದರೆ ಇರುವಾಗ ಒಬ್ಬರಿಗೊಬ್ಬರು ಸಹಾಯ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸುತ್ತಿದ್ದುದು ಅಧ್ಯಯನದಿಂದ ತಿಳಿದು ಬಂದಿತು.

ಜನರು ಸಂಕಷ್ಟದಲ್ಲಿದ್ದಾಗ ಸಮಾಜದಲ್ಲಿಯ ಮಾನವೀಯ ಗುಣಗಳನ್ನು ಹೊಂದಿದ ಕೆಲವರು ತೊಂದರೆಯಲ್ಲಿರುವವರಿಗೆ ಸಹಾಯ ಮಾಡಲು ಮುಂದೆ ಬರುತ್ತಾರೆ. ಅದರಂತೆ ಪ್ರವಾಹದಿಂದಾಗಿ ಸಾಕಷ್ಟು ಜನರು ವಿವಿಧ ತೊಂದರೆಗಳಿಗೆ ಗುರಿಯಾದರು. ಇವರ ಅಸಹಾಯಕ ಸ್ಥಿತಿಯನ್ನು ಗಮನಿಸಿದ ನೆರೆಹೊರೆಯವರು ಅಭಯ ಹಸ್ತ ನೀಡಲು ಮುಂದೆ ಬಂದರು. ಈ ನಿಟ್ಟಿನಲ್ಲಿ ಮಾಹಿತಿದಾರರನ್ನು ನೆರೆಹೊರೆಯಿಂದ ಯಾವ ತೆರನಾದ ಸಹಾಯಗಳು ದೊರೆತವು ಎಂಬುದರ ಕುರಿತು ವಿಚಾರಿಸಿ ಮಾಹಿತಿಯನ್ನು ಕೋಷ್ಟಕ ೫.೫ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೫.೫

ನೆರೆಹೊರೆಯಿಂದಾದ ಸಹಾಯದ ರೂಪ

ಕ್ರಸಂ	ನೆರೆಹೊರೆ ಸಹಾಯದ ಸ್ವರೂಪ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ವಸ್ತುಗಳ ರೂಪದಲ್ಲಿ	೭೭	೧೩.೨೭
೨	ಹಣದ ರೂಪದಲ್ಲಿ	--	--
೩	ಆರೋಗ್ಯಕ್ಕೆ ಸಂಬಂಧಿಸಿದಂತೆ	೦೭	೧.೨೧
೪	ನೆರೆಹೊರೆಯಿಂದ ಸಹಾಯ ಪಡೆಯದೆ ಇರುವವರು	೪೯೬	೮೫.೫೨
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೫ರಿಂದ ಪ್ರತಿಶತ ೧೩.೨೭ರಷ್ಟು ಮಾಹಿತಿದಾರರಿಗೆ ವಸ್ತುಗಳ ರೂಪದಲ್ಲಿ ಸಹಾಯ ದೊರೆತರೆ ಶೇಕಡಾ ೧.೨೧ರಷ್ಟು ಮಾಹಿತಿದಾರರು ಆರೋಗ್ಯಕ್ಕೆ ಸಂಬಂಧಿಸಿದಂತೆ ಸಹಾಯ ಸಿಕ್ಕಿತ್ತೆಂದು ಉಳಿದ ಶೇಕಡಾ ೮೫.೫೨ರಷ್ಟು ಮಾಹಿತಿದಾರರು ನೆರೆಹೊರೆಯಿಂದ ಯಾವುದೇ ಸಹಾಯ ದೊರಕಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಜಾತಿಯು ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಕಾರಣದಿಂದ ಅಂಬೇಡ್ಕರರು "ಭಾರತೀಯ ಗ್ರಾಮಗಳು ಜಾತಿಯತೆಯ ಬಿಲಗಳಾಗಿವೆ" ಎಂದಿದ್ದರು. ಜಾತಿ ಹೆಚ್ಚುತ್ತಿದೆ ಎನ್ನುವುದಕ್ಕೆ ಸ್ಪಷ್ಟ ಉತ್ತರ ಹೇಳುವುದು ಕಠಿಣ. ಅಭಿಪ್ರಾಯ ಸಂಗ್ರಹಣೆ ಸುಲಭವಾಗಿ ದೊರೆಯಲಾರದು. ಜಾತೀಯತೆ

ಹೆಚ್ಚುತ್ತಿರುವ ಬಗ್ಗೆ ಆಗಾಗ್ಗೆ ಟೀಕೆಗಳು ಕೇಳಿ ಬರುತ್ತಿವೆ. ರಾಜಕಾರಣಿಗಳು ಮತ್ತು ಅಧಿಕಾರಿಗಳ ಬಗೆಗೆ ಆರೋಪಗಳು ಕೇಳಿ ಬರುತ್ತಿವೆ. ವಿಶ್ವವಿದ್ಯಾಲಯ ವ್ಯವಹಾರಗಳಲ್ಲಿ ಜಾತೀಯತೆ, ಅಧಿಕಾರ, ಹಣ, ಸೌಲಭ್ಯಗಳ ಹಂಚಿಕೆಯಲ್ಲಿ ಮತ್ತು ನಗರಗಳಲ್ಲಿ ವಿದ್ಯಾವಂತರಲ್ಲಿ ಜಾತಿಯ ಪ್ರಭಾವಗಳು ಹೆಚ್ಚಾಗುತ್ತಿವೆ. ಸ್ಥಳಾಂತರ ಸಮಯದಲ್ಲಿ ಮೇಲ ಜಾತಿ, ಕೆಳ ಜಾತಿ ಜನರಿಗೆ ಪ್ರತ್ಯೇಕವಾದ ವಾಸಸ್ಥಳದ ವ್ಯವಸ್ಥೆ ಮಾಡಲಾಗಿತ್ತು. ಇವುಗಳಲ್ಲಿ ಉಪಪಂಗಡದ ಜನರು ಮಾತ್ರ ಒಂದೇ ಕಡೆಗೆ ವಾಸಿಸುತ್ತಿದ್ದರು. ಗಂಡಾಂತರ ಸಮಯಗಳಲ್ಲಿ ಜಾತಿಯ ಭಾವನೆಗಳು ಗೌಣವಾಗುತ್ತವೆ ಎನ್ನುತ್ತಾರೆ. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಒಂದೇ ಜಾತಿಯ ಜನರು ಒತ್ತಟ್ಟಿಗೆ ಇದ್ದೀರಾ? ಎಂದು ಪ್ರಶ್ನಿಸಲಾಗಿ, ಪ್ರತಿಶತ ೬೭.೦೭ರಷ್ಟು ಮಾಹಿತಿದಾರರು ಒಂದೇ ಜಾತಿಯ ಜನರು ಒತ್ತಟ್ಟಿಗೆ ಇದ್ದೆವೆಂದು ತಿಳಿಸುತ್ತಾರೆ. ಇವರಲ್ಲಿ ಹೆಚ್ಚಿನ ಜನರು ಗ್ರಾಮದಲ್ಲಿ ಮತ್ತು ಸಂಬಂಧಿಕರ ಮನೆಗಳಲ್ಲಿ ವಾಸ್ತವ್ಯ ಮಾಡದವರಾಗಿದ್ದಾರೆ. ಇನ್ನುಳಿದ ಪ್ರತಿಶತ ೩೨.೯೩ರಷ್ಟು ಮಾಹಿತಿದಾರರು ಯಾರು ಶೆಡ್‌ಗಳಲ್ಲಿ ವಾಸ್ತವ್ಯ ಮಾಡಿದವರಾಗಿದ್ದರೋ ಅವರೆಲ್ಲರೂ ಒಂದೇ ಜಾತಿಯ ಜನರು ಒತ್ತಟ್ಟಿಗೆ ಇರಲಿಲ್ಲವೆಂದು ತಿಳಿಸುತ್ತಾರೆ.

೫.೧.೧ ವಿವಾಹದ ಮೇಲಾದ ಪರಿಣಾಮಗಳು :

ಗ್ರಾಮದ ಜನತೆ ವೈವಾಹಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದಕ್ಕೆಲ್ಲ ಒಕ್ಕಲುತನ ಕುಟುಂಬಗಳ ಜೊತೆ ವೈವಾಹಿಕ ಸಂಬಂಧಗಳನ್ನು ಹೊಂದಲು ಹಿಂದೇಟು ಹಾಕುವುದು, ಗ್ರಾಮಗಳಿಗೆ ಹೆಣ್ಣು ಮಕ್ಕಳನ್ನು ಕೊಡದೆ ಇರುವುದು, ಹೆಣ್ಣು ಗಂಡುಗಳ ಪ್ರಮಾಣದಲ್ಲಿ ವ್ಯತ್ಯಾಸ ಹೆಚ್ಚಾಗುತ್ತಿರುವುದರ ಜೊತೆಗೆ ಪ್ರವಾಹದಿಂದ ಭೂಮಿಯ ಫಲವತ್ತತೆ ನಾಶವಾಗಿ ಒಕ್ಕಲುತನದಲ್ಲಿಯ ಆದಾಯ ಕಡಿಮೆಯಾಗುತ್ತಿರುವುದು ಪ್ರಮುಖ ಕಾರಣಗಳಾಗಿವೆ. ಗ್ರಾಮದಲ್ಲಿ ಜೈನ ಸಮುದಾಯದ ಜನರ ಸಂಖ್ಯೆ ಹೆಚ್ಚಿಗೆ ಇದ್ದು ಇವರು ತೀವ್ರವಾದ ವೈವಾಹಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಮೊದಲು ಜೈನ ಕುಟುಂಬಗಳಲ್ಲಿ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ಹೆಮ್ಮೆಯ, ಸ್ಥಾನಮಾನದ ಸೂಚಕಗಳಾಗಿದ್ದವು. ಆದರೆ ಈಗ ವಿವಾಹ ಮಾಡಿಕೊಳ್ಳುವುದು ಸಮಸ್ಯೆಯಾಗುತ್ತಿದೆ. ತಮ್ಮ ಪಂಗಡಗಳಲ್ಲಿ ಹೆಣ್ಣು ಮಕ್ಕಳು ಕೊರತೆಯ ಕಾರಣ ಬೇರೆ ಕಡೆ ಎಲ್ಲಿಯೋ ಹೋಗಿ ಮಧ್ಯವರ್ತಿಗಳಿಗೆ ಹಣ ಕೊಟ್ಟು ವಿವಾಹ ಮಾಡಿಕೊಂಡು ಬರುವುದು ಸಾಮಾನ್ಯವಾಗುತ್ತಿದೆ. ವಿವಾಹ ಶ್ರೀಮಂತ ಕುಟುಂಬಗಳಿಗೂ ಸಮಸ್ಯೆಯಾಗುತ್ತಿದೆ. ಅಂತಹವರಿಗೆ ನೀವು ಬಡಕುಟುಂಬದವರ ಜೊತೆಗೆ ಸಂಬಂಧ ಬೆಳೆಸಿದರೆ ಒಳಿತು ಎಂದು ತಿಳಿಸಿದರೆ, ಬಡಕುಟುಂಬಗಳ ಹೆಣ್ಣು ಮಕ್ಕಳ ಪಾಲಕರು ತಮ್ಮ ಮಕ್ಕಳನ್ನು

ನೌಕರಿಯವರಿಗೆ ಕೊಡುತ್ತೇವೆಂದು ತಿಳಿಸುತ್ತಾರೆಂದು ಹೇಳುತ್ತಾರೆ. ಇನ್ನು ಬಡ ಗಂಡು ಮಕ್ಕಳ ಪಾಡು ಭಿನ್ನ. ಇವರ ಸಮಸ್ಯೆ ಎಂದರೆ ಹೆಣ್ಣು ಮಕ್ಕಳ ಪಾಲಕರು ತಮ್ಮ ಮಗಳಿಗೆ ಬೇಡುವ ಬಂಗಾರ, ಹಣ ನೀಡಲಾಗದ ಅಸಹಾಯಕ ಸ್ಥಿತಿ. ಇನ್ನುಳಿದ ಸಮುದಾಯಗಳಲ್ಲಿ ಹೊಸ ಸಂಬಂಧ ವಿವಾಹವಾಗುತ್ತಿಲ್ಲ, ಹಳೆಯ ಸಂಬಂಧಿಕರು ಅರೆ ಮನಸ್ಸುಗಳಿಂದ ವಿವಾಹ ಸಂಬಂಧಗಳನ್ನು ಬೆಳೆಸುತ್ತಿದ್ದಾರೆ. ಗ್ರಾಮದ ಸರಕಾರಿ ನೌಕರಿ, ಕೃಷಿಯೇತರ ಉದ್ಯೋಗಗಳಲ್ಲಿ ಕೆಲಸ ನಿರ್ವಹಿಸುವ, ಕೆಳಜಾತಿ ಜನರಲ್ಲಿ ಈ ಸಮಸ್ಯೆ ಅಷ್ಟೊಂದು ತೀವ್ರತರ ಇಲ್ಲದಿರುವುದು ತಿಳಿಯುತ್ತದೆ. ವಿವಾಹ ಮತ್ತು ವಿವಾಹ ಸಂಬಂಧದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನೇಕ ಕಾರಣಗಳಿದ್ದು ಅವುಗಳಲ್ಲಿ ಪ್ರವಾಹದ ಪರಿಣಾಮದ ಕುರಿತು ವಿಚಾರಿಸಲಾಯಿತು. ಗ್ರಾಮದಲ್ಲಿಯ ವಿವಾಹ ಸಮಸ್ಯೆಯ ತೀವ್ರತೆಯನ್ನು ತಿಳಿದುಕೊಳ್ಳಲು ಮಾಹಿತಿದಾರರನ್ನು ಸಂದರ್ಶಿಸಿ ಅವರಿಂದ ಬಂದ ಅಭಿಪ್ರಾಯಗಳನ್ನು ಕೋಷ್ಟಕ ೫.೧.೧ ರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೫.೧.೧

ಮಾಹಿತಿದಾರರ ವಿವಾಹ ಸಂಬಂಧದ ಮೇಲೆ ಪ್ರವಾಹದ ಪರಿಣಾಮ ವಿವರ

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೯೨	೬೭.೫೯
೨	ಇಲ್ಲ	೧೮೭	೩೨.೨೪
೩	ತಿಳಿದಿಲ್ಲ	೦೧	೦.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೧.೧ ರಿಂದ ವಿವಾಹ ಸಂಬಂಧದ ಮೇಲೆ ಪ್ರತಿಶತ ೬೭.೫೯ರಷ್ಟು ಮಾಹಿತಿದಾರರು ದುಷ್ಪರಿಣಾಮ ಬೀರಿದೆ ಎಂದರೆ, ಇನ್ನುಳಿದ ೩೨.೨೪ರಷ್ಟು ಮಾಹಿತಿದಾರರು ಯಾವುದೇ ಪರಿಣಾಮ ಬೀರಿಲ್ಲ ಎಂದು ಹೇಳುತ್ತಾರೆ. ಇನ್ನು ತಮಗೇನು ಗೊತ್ತಿಲ್ಲ ಎಂದು ಹೇಳುವವರ ಸಂಖ್ಯೆ ತೀರಾ ಅತ್ಯಲ್ಪವಾಗಿದೆ.

ಸಾಮಾನ್ಯವಾಗಿ ವಿವಾಹವು ಎರಡು ಕುಟುಂಬಗಳ ಮತ್ತು ಎರಡು ಗ್ರಾಮಗಳ ಸಂಬಂಧಗಳನ್ನು ಬೆಳೆಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಿವಾಹವು ಕೇವಲ ಎರಡು ಕುಟುಂಬಗಳ ನಡುವಿನ ಸಂಬಂಧವಲ್ಲ, ಎರಡು ಗ್ರಾಮಗಳ ಸಂಬಂಧವೂ ಹೌದು. ಆದರೆ ಪ್ರವಾಹ ಪೀಡಿತ ಪ್ರದೇಶದಿಂದಾಗಿ ಈ ಸಂಬಂಧದಲ್ಲಿ ಬಿರುಕುಗಳು ಕಂಡು ಬರುತ್ತಿವೆ. ಇದನ್ನು ತಿಳಿಯಲು ಮಾಹಿತಿದಾರರಿಗೆ ಸಂದರ್ಶಿಸಿದಾಗ ಅವರು ವಿಭಿನ್ನವಾದ ಹೇಳಿಕೆಗಳನ್ನು ಕೊಟ್ಟಿರುವುದು ಕಂಡು ಬರುತ್ತದೆ. ಗ್ರಾಮದ ಕೃಷಿ ಕುಟುಂಬಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಲು ಬೇರೆ

ಗ್ರಾಮದ ಜನತೆ ಇಚ್ಛಿಸುತ್ತಾರೆಯೇ? ಎಂದು ಪ್ರಶ್ನಿಸಿದಾಗ, ಪ್ರತಿಶತ ೩೭.೯೩ ರಷ್ಟು ಮಾಹಿತಿದಾರರು ಬೇರೆ ಗ್ರಾಮಗಳ ಜನತೆ ಕೃಷಿ ಕುಟುಂಬಗಳೊಂದಿಗೆ ವಿವಾಹ ಸಂಬಂಧ ಬೆಳೆಸಲು ಇಚ್ಛಿಸುತ್ತಾರೆ ಎಂದು ಪ್ರತಿಕ್ರಿಯೆ ನೀಡಿದರೆ, ಇನ್ನುಳಿದ ೬೨.೦೭ರಷ್ಟು ಮಾಹಿತಿದಾರರು ಬೇರೆ ಗ್ರಾಮಗಳ ಜನರು ವಿವಾಹ ಸಂಬಂಧ ಬೆಳೆಸಲು ಹಿಂಜರಿಯುತ್ತಾರೆ ಎಂದು ತಿಳಿಸಿದರು. ಈ ಹೇಳಿಕೆಗಳಿಂದ ಪ್ರವಾಹದ ದುಷ್ಪರಿಣಾಮವು ವೈವಾಹಿಕ ಸಂಬಂಧಗಳ ಮೇಲೆಯೂ ಬೀರಿದೆ ಎಂದು ಮನದಟ್ಟಾಗುತ್ತದೆ.

ವಿವಾಹ ಸಂಬಂಧ ಬೆಳೆಸಲು ಆಸ್ತಿ–ಪಾಸ್ತಿ ಉದ್ಯೋಗ ಮತ್ತಿತ್ತರ ಅಂಶಗಳು ಕಾರಣವಾಗುತ್ತವೆ. ಆಸ್ತಿ–ಪಾಸ್ತಿ ಹೊಂದಿದವರಿಗೂ ವಿವಾಹ ಸಂಬಂಧ ಬೆಳೆಸಲು ಸಮಸ್ಯೆಯಾಗುತ್ತಿದೆ. ಯಾವ ಕಾರಣಕ್ಕಾಗಿ ಜನರು ವಿವಾಹ ಸಂಬಂಧ ಬೆಳೆಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ವಿಚಾರಿಸಲಾಗಿ ಅವರು ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಕೋಷ್ಟಕ ೫.೧.೨ರಲ್ಲಿ ಕಾಣಬಹುದು.

ಕೋಷ್ಟಕ ೫.೧.೨

ಕೃಷಿ ಕುಟುಂಬಗಳೊಂದಿಗೆ ವಿವಾಹ ಸಂಬಂಧ ಬೆಳೆಸದಿರಲು ಕಾರಣ

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಪ್ರವಾಹ ಮತ್ತು ಭೂಮಿ ಫಲವತ್ತತೆ ಕಳೆದುಕೊಂಡಿರುವುದು	೩೬೦	೬೨.೦೭
೨	ಯಾವ ಪರಿಣಾಮವಿಲ್ಲ	೨೨೦	೩೭.೯೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೧.೨ರಲ್ಲಿ ಪ್ರವಾಹ ಮತ್ತು ಭೂಮಿ ಫಲವತ್ತತೆ ಕಳೆದುಕೊಂಡಿರುವುದರಿಂದ ಬೇರೆ ಗ್ರಾಮದ ಜನರು ಈ ಗ್ರಾಮದ ಕೃಷಿ ಕುಟುಂಬಗಳೊಂದಿಗೆ ವಿವಾಹ ಸಂಬಂಧ ಬೆಳೆಸಲು ಹಿಂಜರಿಯುತ್ತಿದ್ದಾರೆಂದು ಪ್ರತಿಶತ ೬೨.೦೭ ಮಾಹಿತಿದಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ, ಇನ್ನುಳಿದ ಶೇಕಡಾ ೩೭.೯೩ರಷ್ಟು ಮಾಹಿತಿದಾರರು ವಿವಾಹ ಸಂಬಂಧಗಳಲ್ಲಿ ಯಾವುದೇ ಪರಿಣಾಮವಾಗಿಲ್ಲವೆಂದು ತಿಳಿಸುತ್ತಾರೆ.

ವಿವಾಹ ಸಂಬಂಧಗಳಲ್ಲಿ ಬದಲಾವಣೆಯಾಗುತ್ತಿರುವಂತೆ ವಿವಾಹದ ಆಚರಣೆಯಲ್ಲಿಯೂ ಬದಲಾವಣೆಗಳಾಗುತ್ತಿವೆ. ಮೂರು ದಿನಗಳವರೆಗೆ ನಡೆಯುತ್ತಿದ್ದ ವಿವಾಹಗಳು ಮೂರು ಘಂಟೆಗಳಲ್ಲಿ ಮುಗಿದು ಹೋಗುತ್ತಿವೆ. ಇದನ್ನು 'ಯಾದಿ ಮೇ ಶಾದಿ' ಎಂದು ಕರೆಯುತ್ತಾರೆ. ಇದರ ಪ್ರಭಾವ ಗ್ರಾಮದ ಜೈನ ಸಮುದಾಯದಲ್ಲಿ ಹೆಚ್ಚಿಗೆ ಕಾಣುತ್ತೇವೆ. ಉಳಿದ ಸಮುದಾಯದವರು ಇದನ್ನೇ ಅನುಸರಿಸುತ್ತಿದ್ದಾರೆ. ಗ್ರಾಮೀಣರ ಅನಾವಶ್ಯಕ

ಖರ್ಚುಗಳಲ್ಲಿ ವಿವಾಹವು ಒಂದು. ಜೀವನದಲ್ಲಿ ಒಮ್ಮೆ ವಿವಾಹವಾಗುತ್ತದೆ. ಅದಕ್ಕೆ ಖರ್ಚಿನ ವಿಚಾರ ಮಾಡಬಾರದೆಂಬ ಜನರೂ ಇದ್ದಾರೆ. ವಿವಾಹಕ್ಕಾಗಿ ಖರ್ಚಿನ ವಿಚಾರದಲ್ಲಿ ಜನರ ವಿಚಾರಗಳು ಏನು ಎಂಬುದನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಮಾಹಿತಿದಾರರನ್ನು ಸಂದರ್ಶಿಸಿ ವಿವಾಹ ಸಮಾರಂಭದ ಆಚರಣೆಯ ಮಾಹಿತಿ ಪಡೆಯಲಾಗಿ, ಪ್ರತಿಶತ ೧೦೦ಕ್ಕೆ ೧೦೦ರಷ್ಟು ಮಾಹಿತಿದಾರರು ವಿವಾಹಗಳನ್ನು ಸರಳ ಶೈಲಿಯಲ್ಲಿ ಆಚರಿಸುತ್ತಿರುವುದನ್ನು ತಿಳಿಸುತ್ತಾರೆ. ಇದು ಒಂದು ವಿಧದ ಆರ್ಥಿಕ ಉಳಿತಾಯ ಎನ್ನಬಹುದು.

೫.೨ ಆರೋಗ್ಯದ ಮೇಲಾದ ಪರಿಣಾಮಗಳು

"Health is Wealth" ಎಂಬಂತೆ ವ್ಯಕ್ತಿಯ ಎಲ್ಲ ಸಂಪತ್ತಿಗಳಿಗಿಂತ ಆರೋಗ್ಯ ಸಂಪತ್ತು ಮಿಗಿಲಾದುದು. ಪ್ರವಾಹದಿಂದ ಹಿನ್ನೀರು ಬಹುದಿನಗಳವರೆಗೆ ನಿಲ್ಲುವುದರಿಂದ ವಿವಿಧ ರೋಗಗಳಿಗೆ ಕಾರಣವಾಗುತ್ತದೆ. ಇದರಿಂದ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಇದನ್ನು ತಿಳಿಯಲು ಮಾಹಿತಿದಾರರಿಂದ ವಿವರಗಳನ್ನು ಸಂಗ್ರಹಿಸಲಾಗಿದೆ.

ನೈಸರ್ಗಿಕ ವಿಕೋಪಗಳು ಮಾನವನ ಮನೋಸಾಮಾಜಿಕ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಬಡತನ ಪ್ರಮಾಣದಲ್ಲಿ ಹೆಚ್ಚಳ, ಶೋಷಣೆ, ಕುಟುಂಬ ವಿಭಜನೆ, ಸಾಮಾಜಿಕ ಸಂಬಂಧಗಳ ಕಡಿತ, ನಿರುದ್ಯೋಗ, ವಸತಿ ಸಮಸ್ಯೆ, ಲಿಂಗಾಧರಿತ ಶೋಷಣೆಗಳು ಹೆಚ್ಚುತ್ತವೆ. ಇದರಿಂದ ಜನರು ಮಾನಸಿಕ ತೊಂದರೆಗಳಿಂದ ಬಳಲುತ್ತಾರೆ. ಇದರ ಪರಿಣಾಮವಾಗಿ ಮಾನಸಿಕ ತೊಂದರೆ, ಕುಡಿತ, ಮಾದಕ ವಸ್ತುಗಳ ಸೇವನೆ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ. ನೈಸರ್ಗಿಕ ವಿಕೋಪಗಳಿಂದಾದ ಮಾನಸಿಕ ತೊಂದರೆಗಳ ಕುರಿತು ರಾಷ್ಟ್ರೀಯ ಮಟ್ಟದಲ್ಲಿ (ಸೇಕರ ೨೦೦೭, ಜೋಸೇಫ್ ೨೦೦೬, ಜಸವಾಲ ಮತ್ತು ಜೋಸೆಫ್ ೨೦೦೮ ಡಬ್ಲ್ಯೂ, ಎಚ್,ಓ ೨೦೦೮) ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ (ವಿವೊ ೨೦೦೩, ೨೦೦೫ ಎ, ೨೦೦೫ ಬಿ, ಸೋಮ ಸುಂದರಂ ೨೦೦೧) ಅಧ್ಯಯನ ಮಾಡಿದ್ದಾರೆ. ಖವಟಕೊಪ್ಪ ಗ್ರಾಮದ ಸಂತ್ರಸ್ತರು ಪ್ರವಾಹದ ನಂತರ ಸಾಂಕ್ರಾಮಿಕ ರೋಗಗಳಿಂದ ಬಳಲಿದುದರ ಕುರಿತು ವಿಚಾರಿಸಲಾದ, ಪ್ರತಿಶತ ೭೨.೪೧ರಷ್ಟು ಮಾಹಿತಿದಾರರು ಪ್ರವಾಹದ ನಂತರ ಸಾಂಕ್ರಾಮಿಕ ರೋಗಗಳಿಂದ ಬಳಲಿರುವುದು ಕಂಡು ಬಂದರೆ ಇನ್ನುಳಿದ ೨೭.೫೯ರಷ್ಟು ಮಾಹಿತಿದಾರರು ಯಾವುದೇ ರೋಗಗಳಿಂದ ಬಳಲದಿರುವುದು ತಿಳಿಯುತ್ತದೆ. ಇದರಿಂದ ಪ್ರವಾಹವು ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಕಾರಣವಾಗುತ್ತದೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.

ಪ್ರವಾಹ ದೀರ್ಘಕಾಲ ಬಾಧಿಸಿದಾಗ ಅದರಿಂದ ವಿವಿಧ ಸಾಂಕ್ರಾಮಿಕ ರೋಗಗಳು ಕಂಡು ಬರುತ್ತವೆ. ಅದರಂತೆ ಬಾಧಿತ ಪ್ರದೇಶದ ಜನರು ಕೂಡಾ ವಿವಿಧ ಸಾಂಕ್ರಾಮಿಕ

ರೋಗಗಳಿಗೆ ತುತ್ತಾಗಿರುವುದು ಕಂಡು ಬರುತ್ತದೆ. ಅದರ ಬಗ್ಗೆ ಕೋಷ್ಟಕ ೫.೨.೧ ರಲ್ಲಿ ನೋಡಬಹುದು.

ಕೋಷ್ಟಕ ೫.೨.೧

ಸಾಂಕ್ರಾಮಿಕ ರೋಗಗಳ ಮಾಹಿತಿ

ಕ್ರ.ಸಂ	ಸಾಂಕ್ರಾಮಿಕ ರೋಗಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ವಾಂತಿ, ಬೇಧಿ, ವಿಷಮಶೀತ ಜ್ವರ, ಮಲೇರಿಯಾ	೪೨೦	೭೨.೪೧
೨	ರೋಗಗಳಿಂದ ಬಾಧಿತರಾಗದವರು	೧೬೦	೨೭.೫೯
	ಒಟ್ಟು	೫೮೦	೧೦೦.೦೦

ಕೋಷ್ಟಕ ೫.೨.೧ ರಿಂದ ಪ್ರತಿಶತ ೭೨.೪೧ ಮಾಹಿತಿದಾರರು ವಾಂತಿ ಬೇಧಿ, ವಿಷಮಶೀತಜ್ವರ, ಮಲೇರಿಯಾದಂತಹ ರೋಗದಿಂದ ಬಾಧಿತರಾಗಿರುವುದು ತಿಳಿಯುತ್ತದೆ. ಉಳಿದ ಪ್ರತಿಶತ ೨೭.೫೯ ಮಾಹಿತಿದಾರರು ಯಾವುದೇ ರೋಗಗಳಿಂದ ಬಾಧಿತರಾಗಿಲ್ಲದಿರುವುದು ತಿಳಿದು ಬರುತ್ತದೆ.

ಜನರ ಆರೋಗ್ಯ, ಆಸ್ತಿ–ಪಾಸ್ತಿ ಮತ್ತಿತರ ಅಂಶಗಳನ್ನು ಕಾಪಾಡಬೇಕಾದದ್ದು ಸರ್ಕಾರದ ಆಧ್ಯ ಕರ್ತವ್ಯವಾಗಿದೆ ಅದರಂತೆ ಪ್ರವಾಹದಿಂದ ಬಾಧಿತವಾದ ಜನರ ಆರೋಗ್ಯವನ್ನು ಕಾಪಾಡಲು ಸರ್ಕಾರ ಪ್ರತಿಯೊಂದು ಪುನರ್ವಸತಿ ಕೇಂದ್ರಗಳಿಗೆ ವೈದ್ಯಾಧಿಕಾರಿಗಳನ್ನು ನಿಯಮಿಸಿತ್ತು. ವೈದ್ಯಾಧಿಕಾರಿಗಳು ಸಂತ್ರಸ್ತರಿಗೆ ಸರಿಯಾಗಿ ಸೇವೆ ಒದಗಿಸಿದರೆ? ಎಂಬುದರ ಕುರಿತು ಮಾಹಿತಿಯನ್ನು ಸಂಗ್ರಹಿಸಿದಾಗ, ಸರಕಾರಿ ಶೆಡ್‌ಗಳನ್ನು ನಿರ್ಮಿಸಿದ ಶಂಕರಹಟ್ಟಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿರುವುದರಿಂದ ವೈದ್ಯಧಿಕಾರಿಗಳು ದಿನನಿತ್ಯ ಭೇಟಿ ಕೊಡುತ್ತಿದ್ದರೆಂದು ಪ್ರತಿಶತ ೪೭.೭೬ ಮಾಹಿತಿದಾರರು ತಿಳಿಸಿದರೆ, ಪ್ರತಿಶತ ೧೦.೩೪ ಮಾಹಿತಿದಾರರು ಭೇಟಿ ನೀಡುತ್ತಿರಲಿಲ್ಲವೆಂದು ತಿಳಿಸಿದರು. ಇನ್ನುಳಿದವರು ೪೧.೯೦ರಷ್ಟು ಮಾಹಿತಿದಾರರು ಅದೇ ಗ್ರಾಮದಲ್ಲಿ ಸಂಬಂಧಿಕರ ಮನೆಗಳಲ್ಲಿ ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದರು ಅವರಿಗೆ ಇದರ ಬಗ್ಗೆ ತಮಗೇನು ಗೊತ್ತಿಲ್ಲವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಸರಕಾರದಿಂದ ಔಷಧಿಗಳ ಪೂರೈಕೆಯಾದರೂ ವೈದ್ಯಾಧಿಕಾರಿಗಳು ರೋಗಿಗಳಿಗೆ ತಮ್ಮಲ್ಲಿಯ ಔಷಧಿಗಳನ್ನು ನೀಡದೆ ಹೊರಗಿನಿಂದ ಔಷಧಿ ತರಲು ತಿಳಿಸುವುದು ಸಾಮಾನ್ಯ. ಸರಕಾರಿ

ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಪೂರೈಕೆ ಸರಿಯಾಗಿ ಇರುವುದಿಲ್ಲವೆಂದು ಜನರು ಘೂಷಿಸುತ್ತಾರೆ. ಇದರ ಕುರಿತು ಮಾಹಿತಿ ಪಡೆಯಲಾಗಿ, ಔಷಧ ಪೂರೈಕೆ ಸರಿಯಾಗಿತ್ತು ಎಂದು ಪ್ರತಿಶತ ೫೪.೧೪ ಮಾಹಿತಿದಾರರು ತಿಳಿಸಿದರೆ ಪ್ರತಿಶತ ೨೩ರಷ್ಟು ಮಾಹಿತಿದಾರರು ಸರಿಯಾಗಿರಲಿಲ್ಲವೆಂದು ತಿಳಿಸಿದರು. ಇನ್ನುಳಿದ ಪ್ರತಿಶತ ೪೧.೯೦ರಷ್ಟು ಮಾಹಿತಿದಾರರು ಸರಕಾರದ ಶೆಡ್‌ಗಳನ್ನು ಬಿಟ್ಟು ಹೊರಗಡೆ ವಾಸಿಸುವುದರಿಂದ ಇದರ ಬಗೆಗೆ ಅವರಿಗೆ ಮಾಹಿತಿ ಇಲ್ಲವೆಂದು ತಿಳಿಸುತ್ತಾರೆ.

ಸರಕಾರ ಜನರನ್ನು ಸಂರಕ್ಷಿಸಲು ಸೌಲಭ್ಯಗಳನ್ನು ಕಲ್ಪಿಸುವುದು ಸಹಜ. ಆದರೆ ಸೌಲಭ್ಯಗಳು ಸಮಾಜದ ಕೆಲವೊಂದು ವರ್ಗಗಳಿಗೆ ಮಾತ್ರ ತಲುಪುತ್ತವೆ. ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಆರೋಗ್ಯದ ಸೌಲಭ್ಯಗಳು ಯಾವ ವರ್ಗಕ್ಕೆ ದೊರೆತವು ಎಂಬುದರ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೫.೨.೨ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೨.೨

ಆರೋಗ್ಯ ಸೌಲಭ್ಯಗಳು ಯಾವ ವರ್ಗಕ್ಕೆ ದೊರೆತ ಮಾಹಿತಿ

ಕ್ರಸಂ	ವರ್ಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಮೇಲ ವರ್ಗ	--	--
೨	ಕೆಳ ವರ್ಗ	೦೧	೦.೧೭
೩	ಪ್ರಭಾವಿತರಿಗೆ	೦೮	೧.೩೮
೪	ಎಲ್ಲರಿಗೂ	೩೩೬	೫೭.೯೩
೫	ಸಂಬಂಧವಿಲ್ಲ	೨೩೫	೪೦.೫೨
	ಒಟ್ಟು	೫೮೦	೧೦೦.೦೦

ಕೋಷ್ಟಕ ೫.೨.೨ನ್ನು ಗಮನಿಸಿದಾಗ ಆರೋಗ್ಯ ಸೌಲಭ್ಯಗಳು ಪ್ರತಿಶತ ೦.೧೭ರಷ್ಟು ಕೆಳವರ್ಗದವರಿಗೆ, ಪ್ರತಿಶತ ೧.೩೮ರಷ್ಟು ಪ್ರಭಾವಿತರಿಗೆ, ಶೇಕಡಾ ೫೭.೯೩ ರಷ್ಟು ಎಲ್ಲರಿಗೂ ದೊರೆತವು ಎಂದು ತಿಳಿಸಿದರೆ, ಉಳಿದ ೪೦.೫೨ರಷ್ಟು ಮಾಹಿತಿದಾರರು ತಾವು ಬೇರೆ ಕಡೆ ಇರುವುದರಿಂದ ತಮಗೇನು ತಿಳಿದಿಲ್ಲವೆಂದು ತಿಳಿಸಿದರು.

೫.೩) ಮಕ್ಕಳ ಮೇಲಾದ ಪರಿಣಾಮಗಳು :

ತಿಂದುಂಡು ನಲೆದಾಡುತ ಶಾಲೆ ಕಲಿಯಬೇಕಾದ ಮಕ್ಕಳ ಮೇಲೂ ಪ್ರವಾಹ ಪರಿಣಾಮ ಬೀರಿತು. ತಿಂಗಳುಗಳ ಕಾಲ ಶಾಲೆಗಳು ಮುಚ್ಚಿದವು. ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಯಿತು.

ಸರಕಾರ ಮಕ್ಕಳ ಶಿಕ್ಷಣದ ಬಗ್ಗೆ ಯಾವುದೇ ಕಾಳಜಿ ತೋರಿಸಲಿಲ್ಲ. ಅಷ್ಟೇ ಅಲ್ಲದೆ ಖವಟಕೊಪ್ಪ ಗ್ರಾಮದ ಸಂತ್ರಸ್ತರಿಗೆ ಶಂಕರಹಟ್ಟಿ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಿದ ಕಾರಣ ಶಂಕರಹಟ್ಟಿ ಗ್ರಾಮದ ಮಕ್ಕಳ ಶಿಕ್ಷಣಕ್ಕೂ ಇದರಿಂದ ತೊಂದರೆಯಾಯಿತು. ಸಂತ್ರಸ್ತರು ಬಹಳ ದಿನಗಳ ಕಾಲ ಶಂಕರಹಟ್ಟಿ ಪ್ರಾಥಮಿಕ ಶಾಲೆಯಲ್ಲಿ ವಾಸ್ತವ್ಯ ಮಾಡುವ ಪರಿಸ್ಥಿತಿ ಬಂದಾಗ ಈ ಗ್ರಾಮಗಳ ಜನತೆ ಸಂತ್ರಸ್ತರನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಒತ್ತಾಯಿಸಲು ಪ್ರಾರಂಭಿಸಿದರು. ಇಲ್ಲಿ ಗ್ರಾಮದ ಕೆಳವರ್ಗದ ಜನರಿಗೆ ವಾಸ್ತವ್ಯ ವ್ಯವಸ್ಥೆ ಮಾಡಲಾಗಿತ್ತು. ನಂತರ ಇವರಿಗೆ ಅಥಣಿ ತಾಲೂಕಿನ ಕರ್ಲಟ್ಟಿ ಗ್ರಾಮದಲ್ಲಿ ಸರಕಾರ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿ ಅವರನ್ನು ಅಲ್ಲಿಗೆ ಸ್ಥಳಾಂತರಿಸಿತು. ಮಾನವ ಸಂಪನ್ಮೂಲದ ಹಾನಿಯನ್ನು ತುಂಬಿಕೊಡುವ ಪ್ರಯತ್ನ ಮಾಡಲಿಲ್ಲ. ಪ್ರವಾಹ, ಸ್ಥಳಾಂತರ ಮತ್ತು ಪುನರ್ವಸತಿಗಳಲ್ಲಿ ಮಕ್ಕಳ ಮೇಲಾದ ಪರಿಣಾಮಗಳ ಕುರಿತಾದ ಕೆಲವು ಅಧ್ಯಯನಗಳು ಕೆಳಗಿನಂತಿವೆ.

ಅಮಿತಾಬ್ ಶ್ರೀವಾಸ್ತವ (೨೦೦೯)ರಲ್ಲಿ ಬಿಹಾರ ಪ್ರವಾಹದಿಂದ ಸಹಾರ್ಸಾ, ಮಧೇಪುರ, ಸುಫೌರಾ, ಪುರ್ನಿಯಾ, ಅರೇರಿಯಾ ಮತ್ತು ಕಾತಿಹಾರ ಜಿಲ್ಲೆಗಳಲ್ಲಿ ಸುಮಾರು ೧೨೦೦೦ಕ್ಕೂ ಹೆಚ್ಚು ಮಕ್ಕಳು ಮಾರಾಟವಾಗಿರುವುದನ್ನು ಅಂದಾಜಿಸಿದ್ದಾರೆ. ಕೆಲವೊಂದು ಮಕ್ಕಳು ಅಪಹರಣಕ್ಕೆ ಒಳಗಾಗಿದ್ದರೆ, ಇನ್ನೂ ಕೆಲವೊಂದು ಮಕ್ಕಳನ್ನು ಸ್ವತಃ ಅವರ ಪಾಲಕರೇ ಮಾರಿರುವುದು ಪ್ರವಾಹದ ಕಠೋರತೆಯನ್ನು ತೋರಿಸುತ್ತದೆ ಎಂದಿದ್ದಾರೆ.

ಎನಾಕ್ಷಿ, ಗಂಗೂಲಿ ಮತ್ತು ಥುಕರಲ್ (೨೦೦೯) ಅವರು ಸ್ಥಳಾಂತರಗಳಿಂದ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿಸಿದ್ದಾರೆ. ಅಗರ್‌ವಾಲ್(೧೯೮೮), ಸೇನ(೧೯೮೧) ಅವರು ಬಡ ಜನರು ಮಕ್ಕಳ ಮೇಲೆ ಸ್ಥಳಾಂತರಗಳು ಹೆಚ್ಚಿನ ದುಷ್ಪರಿಣಾಮ ಬೀರುತ್ತವೆ. ಸಂವಿಧಾನದಲ್ಲಿ ಮಕ್ಕಳನ್ನು ದೇಶದ ಪ್ರಜೆಗಳೆಂದು ಪರಿಗಣಿಸಿ ಸ್ವಾತಂತ್ರ್ಯ ಅಭಿವೃದ್ಧಿ ಮತ್ತು ಶಿಕ್ಷಣದಲ್ಲಿ ತಾರತಮ್ಯ ಸಲ್ಲದೆಂದು ಅಭಿಪ್ರಾಯಪಟ್ಟಿದ್ದಾರೆ. ಸ್ಥಳಾಂತರಗಳು ಸಾಮಾನ್ಯ ಜನಸಂಖ್ಯೆ ಮೇಲೆ ಪರಿಣಾಮ ಬೀರುವಂತೆ ಮಕ್ಕಳ ಮೇಲೂ ದುಷ್ಪರಿಣಾಮ ಬೀರುತ್ತವೆ (ಪಾಂಡೆ ೧೯೯೮) ಎಂದಿದ್ದಾರೆ. ರಾಮಯ್ಯ ಮತ್ತು ಆರೋಗ್ಯ ಸಂಸ್ಥೆಗಳ ವರದಿ ಪ್ರಕಾರ (೧೯೯೬) ಸ್ಥಳಾಂತರಗಳಲ್ಲಿ ಮಹಿಳೆಯರು ಕಾರ್ಯಗಳು ಹೆಚ್ಚಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಅವರ ಅಧ್ಯಯನ ತಿಳಿಸುತ್ತದೆ.

ಮಕ್ಕಳ ಮೇಲೆ ಅನೇಕ ಪರಿಣಾಮಗಳನ್ನು ಕಾಣುತ್ತೇವೆ. ಇಂತಹ ಪರಿಣಾಮಗಳ ಕುರಿತು ಮಾಹಿತಿದಾರರನ್ನು ವಿಚಾರಿಸಲಾಯಿತು.

ನೈಸರ್ಗಿಕ ವಿಕೋಪಗಳಲ್ಲಿ ಮಕ್ಕಳು ಮತ್ತು ಮಹಿಳೆಯರ ಮೇಲೆ ಹೆಚ್ಚು ದುಷ್ಪರಿಣಾಮ ಬೀರುತ್ತವೆ ಎಂಬುದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಇದನ್ನು ತಿಳಿದುಕೊಳ್ಳಲು ಪ್ರವಾಹದಿಂದ ಮಕ್ಕಳ ಮೇಲಾದ ಪರಿಣಾಮವನ್ನು ವಿಚಾರಿಸಿದಾಗ ಒಬ್ಬ ಮಾಹಿತಿದಾರನನ್ನು

ಹೊರತುಪಡಿಸಿ ಎಲ್ಲ ಶೇಕಡಾ ೯೯.೮೩ರಷ್ಟು ಮಾಹಿತಿದಾರರು ಪ್ರವಾಹ ಮಕ್ಕಳ ಮೇಲೆ ಪರಿಣಾಮ ಬೀರಿತ್ತೆಂದು ತಿಳಿಸಿರುವುದು ಕಂಡು ಬರುತ್ತದೆ.

ಕುಟುಂಬ/ಸಮುದಾಯಗಳು ಮೂಲಸ್ಥಾನದಿಂದ ಆಕಸ್ಮಿಕ ಹೊರ ಬೀಳಬೇಕಾಗಿ ಬಂದು ನಿರಾಶ್ರಿತರಾದರೆ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು. ಸ್ಥಳೀಯ ಸರಕಾರಗಳು ಇದನ್ನು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ರಾಜ್ಯ, ಕೇಂದ್ರ ಸರಕಾರಗಳು ಇಲ್ಲವೆ ಸ್ವಯಂ ಸೇವಾ ಸಂಸ್ಥೆಗಳು ಸಹ ಈ ಜವಾಬ್ದಾರಿಯನ್ನು ತೆಗೆದುಕೊಳ್ಳಬಹುದು. ಮಕ್ಕಳ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು ಅತೀ ಅವಶ್ಯಕ. ಸಂತ್ರಸ್ತ ಮಕ್ಕಳು ಮೂರು ವಾರುಗಳಿಂದ ಮೂರು ತಿಂಗಳವರೆಗೆ ಗ್ರಾಮದ ಹೊರಗೆ ವಾಸಿಸಬೇಕಾಯಿತು. ಈ ಸಂದರ್ಭದಲ್ಲಿ ಮಕ್ಕಳ ಶಿಕ್ಷಣದ ಸಮಸ್ಯೆಯಾಯಿತು. ಮಕ್ಕಳ ಶಿಕ್ಷಣಕ್ಕೆ ಸರಕಾರ ಏನಾದರು ಕ್ರಮ ಕೈಗೊಂಡಿತ್ತೇ ಎಂಬುದರ ಕುರಿತು ಪ್ರಶ್ನಿಸಿದಾಗ, ಪ್ರತಿಶತ ನೂರರಷ್ಟು ಮಾಹಿತಿದಾರರು ಪ್ರವಾಹದಿಂದ ಮಕ್ಕಳ ಶಿಕ್ಷಣಕ್ಕೆ ಸರಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲವೆಂದು ತಿಳಿಸಿದ್ದು ಕಂಡು ಬರುತ್ತದೆ. ಇದರಿಂದ ಮಕ್ಕಳ ಶಿಕ್ಷಣಕ್ಕೆ ಸರಕಾರ ಯಾವದೇ ಕ್ರಮ ಕೈಗೊಳ್ಳದಿರುವುದು ತಿಳಿಯುತ್ತದೆ.

ಮಕ್ಕಳ ಆರೋಗ್ಯ

ಸ್ಥಳಾಂತರಗಳಿಂದ ಸತ್ವಯುತವಾದ ಆಹಾರದ ಕೊರತೆಯಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರಿತ್ತೆಂದು (ಸೆರೆನಾ ೧೯೯೯), ಗುಡ್ (೧೯೯೬), ಮೇಹ್ತಾ ಮತ್ತು ಪುಂಜ (೨೦೦೯) ತಿಳಿಸಿದ್ದಾರೆ. ಸೌಲಭ್ಯಗಳಿಲ್ಲದ ಸರಕಾರದ ಶೆಡ್‌ಗಳಲ್ಲಿ ವಾಸ, ಸುರಿಯುತ್ತಿರುವ ಮಳೆಯ ಕಾರಣ ಶೆಡ್‌ಗಳಲ್ಲಿ ವಾಸ ಮಾಡಿದ ಕುಟುಂಬಗಳ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿತು. ಮಕ್ಕಳ ಆರೋಗ್ಯದ ಮೇಲಾದ ಪರಿಣಾಮದ ವಿವರ ತಿಳಿಯಲು ಮಾಹಿತಿದಾರರನ್ನು ಪ್ರಶ್ನಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರತಿಶತ ೯೨.೫೯ರಷ್ಟು ಮಕ್ಕಳು ಪ್ರವಾಹದ ಕಾರಣ ರೋಗಗಳಿಂದ ಬಳಲಿದರೆ, ಉಳಿದ ಶೇಕಡಾ ೭.೪೧ರಷ್ಟು ಮಕ್ಕಳು ಆರೋಗ್ಯದಿಂದ ಇರುವುದು ತಿಳಿದು ಬರುತ್ತದೆ.

ಸರಕಾರ ವೈದ್ಯಕೀಯ ಸೇವಾ ವ್ಯವಸ್ಥೆ ಮಾಡಿತ್ತು. ಸರಕಾರೇತರ ಸಂಸ್ಥೆಗಳೂ ಕೂಡ ವೈದ್ಯಕೀಯ ನೆರವನ್ನು ನೀಡಿದ್ದವು. ೨೦೦೬ ಅಗಸ್ಟ ೧೫ರಂದು ಹಾರೂಗೇರಿ ರೋಟರಿ ಸಂಸ್ಥೆ ಕೃಷ್ಣಾ ಪ್ರವಾಹದಿಂದ ಸಂತ್ರಸ್ತ ಜನರಿಗೆ ವೈದ್ಯಕೀಯ ಸೌಲಭ್ಯ ಒದಗಿಸಿತ್ತು. ಮಾಹಿತಿದಾರರಿಂದ ಸರಕಾರದ ವೈದ್ಯಕೀಯ ಸೇವಾ ಸೌಲಭ್ಯದ ಮಾಹಿತಿ ಪಡೆದುಕೊಳ್ಳಲಾಗಿ, ಸರಕಾರದ ಶೆಡ್‌ಗಳಲ್ಲಿ ವಾಸಿಸುವ ಹೆಚ್ಚಿನ ಮಾಹಿತಿದಾರರಿಗೆ ಅಂದರೆ ಪ್ರತಿಶತ ೫೯.೪೪ರಷ್ಟು ಜನರು ವೈದ್ಯಕೀಯ

ಸೇವಾ ಸೌಲಭ್ಯಗಳು ದೊರೆತಿದ್ದವು ಎಂದರೆ ಸರಕಾರದ ಶೆಡ್‌ಗಳ ಹೊರಗಡೆ ವಾಸಿಸುವ ಪ್ರತಿಶತ ೪೦.೫೨ರಷ್ಟು ಜನರು ಇದರ ಬಗೆಗೆ ತಿಳಿಸಲು ಇಷ್ಟಪಡಲಿಲ್ಲ.

ಸರಕಾರದ ಶೆಡ್‌ಗಳಲ್ಲಿ ವಾಸಿಸುವ ಮಾಹಿತಿದಾರರಿಗೆ ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವ ತೆರನಾದ ವೈದ್ಯಕೀಯ ಸೌಲಭ್ಯಗಳು ದೊರೆತವು ಎಂಬುದರ ಕುರಿತು ಮಾಹಿತಿ ಪಡೆದಕೊಳ್ಳಲಾಯಿತು ಅದನ್ನು ೫.೩.೧ರಲ್ಲಿ ಕೋಷ್ಟಕದಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೫.೩.೧

ಮಕ್ಕಳಿಗೆ ವೈದ್ಯಕೀಯ ಸೇವೆಯ ಸ್ವರೂಪ

ಕ್ರಸಂ	ವೈದ್ಯಕೀಯ ಸೇವೆಯ ಸ್ವರೂಪ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಔಷಧೋಪಚಾರ	೩೪೫	೫೯.೪೮
೨	ಡಾಕ್ಟರರ ದಿನ ನಿತ್ಯ ಭೇಟಿ	--	--
೩	ಯಾವುದೇ ಸೌಲಭ್ಯಗಳಿಲ್ಲ	೨೩೫	೪೦.೫೨
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೩.೧ರಲ್ಲಿ ಪ್ರತಿಶತ ೫೯.೪೮ರಷ್ಟು ಜನರು ಸರಕಾರದ ಔಷಧೋಪಚಾರಗಳು ತಲುಪಿದವು ಎಂದು ತಿಳಿಸಿದರೆ, ಪ್ರತಿಶತ ೪೦.೫೨ರಷ್ಟು ಜನರು ತಮಗೇನು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಹೀಗೆ ಅಭಿಪ್ರಾಯ ವ್ಯಕ್ತಪಡಿಸಿರುವವರು ಅವರ ಸಂಬಂಧಿಕರ ಮನೆಗಳಲ್ಲಿ ವಾಸವಾಗಿರುವವರಾಗಿದ್ದಾರೆ.

೫.೪ ಪ್ರವಾಹದಿಂದ ಮಹಿಳೆಯರ ಮೇಲಾದ ಪರಿಣಾಮಗಳು

ಪ್ರವಾಹ ಮಹಿಳೆಯರು ಮೇಲೂ ಪ್ರಭಾವ ಬೀರಿತು. ಅವರು ಎದುರಿಸಿದ ಸಮಸ್ಯೆಗಳು ಅನೇಕ. ಮಹಿಳೆಯರು 'ತಮ್ಮ ಕಷ್ಟ ದೇವರಿಗೆ ಗೊತ್ತು' ಎನ್ನುತ್ತಾರೆ. ಹಂಪಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರ "ನೆರೆ ಹಾವಳಿ ಪರಿಣಾಮ ಮತ್ತು ಪರಿಹಾರ ಅಧ್ಯಯನ ವರದಿ ೨೦೦೯"ರಲ್ಲಿ ಪ್ರವಾಹದಿಂದ ಮಹಿಳೆಯರ ಮೇಲಾದ ಪರಿಣಾಮಗಳ ಬಗೆಗೆ ತಿಳಿಸಿದ್ದಾರೆ. ಪ್ರವಾಹದಿಂದ ಎಲ್ಲ ಬಗೆಯ ಜನರು ಕಷ್ಟಕ್ಕೆ ಸಿಲುಕಿದ್ದರು. ಮಹಿಳೆಯರ ಕಷ್ಟಗಳು ವಿಶೇಷವಾಗಿವೆ ಎಂದು ತಿಳಿಸಿದೆ. ಸಾಮಾನ್ಯವಾಗಿ ಅವರಿಗೆ ಈಜಲು ಬರುವುದಿಲ್ಲ. ಅವರ ಉಡುಪುಗಳು ನೀರಿನಲ್ಲಿ ನಡೆದು ಹೋಗುವುದಕ್ಕಾಗಲಿ, ಓಡಿ ಹೋಗುವುದಕ್ಕಾಗಲಿ ಪೂರಕವಾಗಿರುವುದಿಲ್ಲ. ಮನೆಯ ವಸ್ತುಗಳೊಂದಿಗಿನ ಅವರ ಆಪ್ತ ಸಂಬಂಧ, ಅವುಗಳನ್ನು

ತೆಗೆದುಕೊಂಡು ಹೋಗಲು ಅವರು ತೊಂದರೆ ಅನುಭವಿಸಿದ್ದನ್ನು ತಿಳಿಸಿದ್ದಾರೆ. ಈ ಅವಧಿಯಲ್ಲಿ ಮಹಿಳೆಯರು ಸ್ನಾನ, ಶೌಚಕ್ಕಾಗಿ ಅದರಲ್ಲೂ ತರುಣಿಯರು ತೊಂದರೆ ಅನುಭವಿಸಿದ ಬಗೆಗೆ ವಿವರಿಸಿದ್ದಾರೆ. ಶೌಚದ ಸಮಸ್ಯೆಯ ಕಾರಣ ಹುಡುಗಿಯರು ಹೊಟ್ಟೆ ತುಂಬ ಊಟ ಮಾಡಿರಲಿಲ್ಲವೆಂಬುದನ್ನು ಉಲ್ಲೇಖಿಸಿದ್ದಾರೆ. ಶೆಡ್‌ಗಳಲ್ಲಿ ಮಹಿಳೆಯರು ಮಾನಸಿಕ ತೊಂದರೆ ಅನುಭವಿಸಿದ್ದನ್ನು ತಿಳಿಸಿದ್ದಾರೆ.

ದಿ ವರ್ಲ್ಡ್ ಬ್ಯಾಂಕ್ ವಾಶಿಂಗಟನ್ ಡಿ.ಸಿ (೨೦೦೦)

ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಹಣಕಾಸಿನ ಕೊರತೆ, ವಿಕೋಪ ನಿಯಂತ್ರಿಸುವ ಜ್ಞಾನದ ಕೊರತೆ, ಸಾಂಸ್ಥಿಕ ಅಂಶಗಳ ಕೊರತೆಗಳ ಕಾರಣ ಬಡವರು ಅದರಲ್ಲೂ ಬಡಮಕ್ಕಳು ಮತ್ತು ಮಹಿಳೆಯರ ಮೇಲೆ ಹೆಚ್ಚಿನ ದುಷ್ಪರಿಣಾಮ ಕಾಣುತ್ತದೆ ಎಂದು ತಿಳಿಸಿದೆ.

ಫಾದರ್ ಗಿಲ್ ಎ (೧೯೯೬)

"ನೈಸರ್ಗಿಕ ವಿಕೋಪಗಳಿಂದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಪರುಷರಿಗಿಂತ ಹೆಚ್ಚು ತೊಂದರೆಗಳನ್ನು ಅನುಭವಿಸುತ್ತಾರೆ ಎನ್ನುತ್ತಾರೆ.

ಮಾಕೊ. ಬಿ. ಮತ್ತು ಫಿಲಿಪ್ಸ್ (೧೯೯೯)

"ನೈಸರ್ಗಿಕ ವಿಪತ್ತುಗಳಿಂದ ಮಹಿಳೆಯರು ಮತ್ತು ಮಕ್ಕಳ ಸಾವಿನ ಪ್ರಮಾಣದಲ್ಲಿ ಹೆಚ್ಚಿಗೆ ಕಾಣುತ್ತೇವೆ ಎಂದು ತಿಳಿಸಿದ್ದಾರೆ.

ವಿಸ್ಪೆ ಮತ್ತು ಇತರರು (೧೯೯೯)

"ಮಹಿಳೆಯರು ಮತ್ತು ಮಕ್ಕಳಿಗೆ ವಿಕೋಪಗಳ ಅವಧಿಯಲ್ಲಿ ಗಮನ ಹರಿಸದೆ ಅವರಿಗೆ ಕಡಿಮೆ ಸಂಪನ್ಮೂಲ ಒದಗಿಸಬೇಕಾಗಿರುವುದರಿಂದ ಪುನಶ್ಚೇತನಗೊಳಿಸಲು ವಿಳಂಬತೆಯನ್ನು ಕಾಣುತ್ತೇವೆ" ಎಂದು ಅಭಿಪ್ರಾಯಪಡುತ್ತಾರೆ.

ಮಾಕೊ. ಬಿ. ಮತ್ತು ಇ ಎನಾರ್ಸನ್ (೧೯೯೬)

"ವಿಕೋಪಗಳ ಪರಿಣಾಮದಿಂದ ಸುಧಾರಿಸಿಕೊಳ್ಳಲು ಮಹಿಳೆಯರು ಹೆಚ್ಚು ತೊಂದರೆಗಳನ್ನು ಅನುಭವಿಸುತ್ತಾರೆ" ಎಂದಿದ್ದಾರೆ.

ಎಸ್ಪೆ ಇ. ಜೆ, ಎಸ್, ಪಿ. ಮಾಸಲೀನ್ ಮತ್ತು ಡಿ. ಟಿ., ಡಿ. ಟಿ. ಮಾಟಿಸ್ (೧೯೯೪)

"ಇತ್ತೀಚಿನ ದಿನಗಳಲ್ಲಿ ಮಾತ್ರ ತಜ್ಞರು ಮಹಿಳೆ ಮತ್ತು ಮಕ್ಕಳ ಮೇಲಿನ ವಿಕೋಪಗಳ ಪರಿಣಾಮ ಕುರಿತು ತಮ್ಮ ಗಮನ ಹರಿಸಿದ್ದಾರೆ" ಎಂದಿದ್ದಾರೆ.

ಮೇಲಿನ ಎಲ್ಲ ತಜ್ಞರ ವಿಚಾರಗಳನ್ನು ಗಮನಿಸಿದಾಗ ವಿಕೋಪಗಳಲ್ಲಿ ಮಹಿಳೆಯರು ಹೆಚ್ಚು ದುಷ್ಪರಿಣಾಮಕ್ಕೆ ಒಳಗಾಗುತ್ತಾರೆ ಎಂಬುದು ತಿಳಿಯುತ್ತದೆ.

ಸಮಾಜ ಸುಧಾರಕರು, ವಕೀಲರು ಮತ್ತು ಸಂಶೋಧಕರು ವಿಕೋಪಗಳಿಂದ ಮಹಿಳೆಯರ ಮೇಲಾಗುವ ದುಷ್ಪರಿಣಾಮ ಕಡಿಮೆಗೊಳಿಸಲು ಸಲಹೆ ಮತ್ತು ಯೋಜನೆಗಳನ್ನು ತಿಳಿಸಿದ್ದಾರೆ.

೧) ಯೋಜನೆಗಳಲ್ಲಿ ಮಹಿಳೆಯರ ಸಹಭಾಗಿತ್ವ (ಎನಾರ್ಸನ್ ೧೯೯೯) ಹೆಚ್ಚಿಸಬೇಕು.

೨) ಸಮುದಾಯ ವಿಕೋಪ ಪ್ರಕ್ರಿಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಒಳ್ಳೆಯ ಆಶ್ರಯ ಮತ್ತು ಸೇವೆ ಒದಗಿಸುವ ಸಂಸ್ಥೆಗಳನ್ನು ವಿನಿಯೋಗಿಸಿಸಬೇಕು. (ಮ್ಯಾರೋ ಮತ್ತು ಫಿಲಿಪ್ಸ್ ೧೯೯೯)

೩) ವಿಕೋಪಗಳಿಗೆ ಸಂಬಂಧಿಸಿದ ಅಧಿಕಾರಿಗಳು ವಿಕೋಪಗಳಿಂದ ತೊಂದರೆಗೆ ಒಳಗಾದ ಮಹಿಳೆಯರ ಜೊತೆ ಸಂವಾದಿಸಬೇಕು (ಡೊಮೆಸನ್ ೧೯೯೭) ಎಂದಿದ್ದಾರೆ.

ಪುನರ್ವಸತಿ ಯೋಜನೆಗಳಲ್ಲಿಯೂ ಮಹಿಳೆಯರನ್ನು ಕಡೆಗಣಿಸಲಾಗಿತ್ತು ಎಂದು ಬಸು(೨೦೦೯) ಮೇಹ್ತಾ (೨೦೦೦) ಪರಶುರಾಮ(೧೯೯೯), ಅವರ ಅಧ್ಯಯನಗಳು ತಿಳಿಸಿರುವುದನ್ನು ಪುನರ್ವಸತಿ ಯೋಜನೆಗಳಲ್ಲಿ ಮಹಿಳೆಯರಿಗೆ ಯಾವುದೇ ಅನುಕೂಲತೆಗಳಿರುವುದಿಲ್ಲ ಮತ್ತು ಪುನರ್ವಸತಿ ಯೋಜನೆಗಳಲ್ಲಿ ಮಹಿಳೆಯರು ಹೊಂದಿಕೊಳ್ಳಲು ಅಸಮರ್ಥರಾಗಿರುತ್ತಾರೆ ಎಂದು ಮೇಹ್ತಾ (೨೦೦೦), ಝುಕರರ್(೧೯೯೯) ಇವುಗಳ ಕುರಿತು ಸಾಹಿತ್ಯ ಪುನರಾವಲೋಕನದಲ್ಲಿ ಚರ್ಚಿಸಲಾಗಿದೆ.

ಯೋಜನೆಗಳಲ್ಲಿ ಮಹಿಳಾ ತಾರತಮ್ಯಗಳನ್ನು ಹೋಗಲಾಡಿಸಲು ಏಷಿಯಾ ಅಭಿವದ್ಧಿ ಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ, ಅಣೆಕಟ್ಟುಗಳ ಜಾಗತಿಕ ಆಯೋಗ, ರಾಷ್ಟ್ರೀಯ ಉಷ್ಣ ಸ್ಥಾವರ ಸಂಸ್ಥೆಗಳು ಅನೇಕ ಸಲಹೆಗಳನ್ನು ನೀಡಿವೆ. ಇವುಗಳ ವಿವರಣೆ ಅಧ್ಯಯನ ಸಾಹಿತ್ಯ ಪುನರಾವಲೋಕನದಲ್ಲಿದೆ.

ಪರಿಹಾರ, ಪುನರ್ವಸತಿಗಳಲ್ಲಿ ಮಹಿಳೆಯರನ್ನು ಕಡೆಗಣಿಸುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದ ತಿಳಿದು ಬರುತ್ತದೆ. ಈ ದೃಷ್ಟಿಕೋನದಲ್ಲಿ ಸರಕಾರ ಒದಗಿಸಿದ ತಾತ್ಕಾಲಿಕ ಶೆಡ್‌ಗಳಲ್ಲಿ ಸರಕಾರದಿಂದ ಮಹಿಳೆಯರಿಗೆ ಯಾವ ತೆರನಾದ ಸೌಲಭ್ಯಗಳು ದೊರೆತವು ಎಂಬುದರ ಕುರಿತು ವಿಚಾರಿಸಲಾಯಿತು. ಅದನ್ನು ಕೋಷ್ಟಕ ೫.೪.೧ರಲ್ಲಿ ಕಂಡುಕೊಳ್ಳಬಹುದು.

ಕೋಷ್ಟಕ ೫.೪.೧

ಸರಕಾರದ ತಾತ್ಕಾಲಿಕ ಶೆಡ್‌ಗಳಲ್ಲಿ ಮಹಿಳೆಯರಿಗೆ ದೊರೆತ ಸೌಲಭ್ಯಗಳು

ಕ್ರಸಂ	ವಿವರ	ಹೌದು	ಇಲ್ಲ
೧	ಶೌಚಾಲಯ ವ್ಯವಸ್ಥೆ	--	೫೬೦
೨	ಪ್ರತ್ಯೇಕ ಸ್ನಾನದ ವ್ಯವಸ್ಥೆ	--	೫೬೦
೩	ಪ್ರತ್ಯೇಕ ಮಲಗುವ ವ್ಯವಸ್ಥೆ	--	೫೬೦

ಕೋಷ್ಟಕ ೫.೪.೧ರಲ್ಲಿ ಮಹಿಳೆಯರಿಗೆ ಒದಗಿಸಿದ ಸೌಲಭ್ಯಗಳ ಕುರಿತು ವಿಚಾರಿಸಿದಾಗ ಮೇಲಿನ ಯಾವುದೇ ಸೌಲಭ್ಯಗಳನ್ನು ಸರಕಾರ ತಾತ್ಕಾಲಿಕ ಶೆಡ್‌ಗಳಲ್ಲಿ ಒದಗಿಸದಿರುವುದು ತಿಳಿಯುತ್ತದೆ.

ಸರಕಾರದ ತಾತ್ಕಾಲಿಕ ಶೆಡ್‌ಗಳಲ್ಲಿ ಮಹಿಳೆಯರಿಗೆ ಯಾವುದೇ ಪ್ರತ್ಯೇಕ ಸೌಲಭ್ಯಗಳಿಲ್ಲದಿರುವುದು ತಿಳಿಯುತ್ತದೆ. ಕಾರಣ ಶೆಡ್‌ಗಳಲ್ಲಿ ಯಾವ ತೆರನಾದ ಸುಧಾರಣೆಗಳಾಗಬೇಕು ಎಂಬುದರ ಕುರಿತು ಜನರನ್ನು ವಿಚಾರಿಸಿದಾಗ ಸಂತಸ್ತರು ಸರಕಾರದ ತಾತ್ಕಾಲಿಕ ಶೆಡ್‌ಗಳಲ್ಲಿ ಮಾಡಬೇಕಾದ ಕೆಲವೊಂದು ಸುಧಾರಣೆಗಳನ್ನು ಸೂಚಿಸಿದರು ಅವುಗಳೆಂದರೆ,

೧) ಸ್ತ್ರೀಯರಿಗೆ ಶೌಚಾಲಯ ವ್ಯವಸ್ಥೆ ಮಾಡಬೇಕು.

೨) ವಾಸಿಸಲು ಪ್ರತ್ಯೇಕ ಕೋಣೆಗಳಿರಬೇಕು.

೩) ಸ್ನಾನದ ವ್ಯವಸ್ಥೆ ಮಾಡಬೇಕು.

೪) ಕುಡಿಯುವ ನೀರಿನ ಸೌಲಭ್ಯ.

೫) ಸಣ್ಣ ಮಕ್ಕಳಿಗೆ ಆಹಾರದ ಪೂರೈಕೆ.

ಮುಂತಾದ ಸಲಹೆ ಸೂಚನೆಗಳನ್ನು ನೀಡಿರುವುದು ಕಂಡು ಬರುತ್ತದೆ.

೫.೫) ಹಿರಿಯರ ಮೇಲಾದ ಪರಿಣಾಮಗಳು

ಪ್ರವಾಹ ಕುಟುಂಬಗಳ ಹಿರಿಯರ ಮೇಲೂ ಪರಿಣಾಮ ಬೀರಿತು. ಹಿರಿಯರು ತಮ್ಮ ಜೀವಮಾನದಲ್ಲಿ ಕಂಡರಿಯದ ಪ್ರವಾಹವನ್ನು ಕಂಡರು. ಪ್ರವಾಹಗಳು ಅವರ ಜೀವನದಲ್ಲಿ ಹಾಸುಹೊಕ್ಕಾಗಿದ್ದವು. ಅವುಗಳ ಬಗೆಗೆ ಅವರಿಗೆ ಯಾವುದೇ ಭಯ ಇರಲಿಲ್ಲ. ವರ್ಷಕ್ಕೊಮ್ಮೆ ಪ್ರವಾಹ ಬಂದು ಹೋದರೆ ಒಳಿತು ಎನ್ನುವ ಮನಃಸ್ಥಿತಿ ಅವರದು. ಏಕೆಂದರೆ ಈ ಮೊದಲಿನ ಪ್ರವಾಹಗಳಿಂದ ಜನಜೀವನದ ಮೇಲೆ ಅಷ್ಟೊಂದು ದುಷ್ಪರಿಣಾಮ ಬೀರುತ್ತಿರಲಿಲ್ಲ. ಬದಲಿಗೆ

ಭೂಮಿಯಲ್ಲಿ ರೇವೆ ಮಣ್ಣನ್ನು ಬಿಟ್ಟು ಭೂಮಿಯನ್ನು ಫಲವತ್ತಾಗಿಸುತ್ತಿದ್ದವು. ಮೇ ತಿಂಗಳಲ್ಲಿ ನದಿ ಒಣಗಿ ಕುಡಿಯುವ ನೀರಿನ ಕೊರತೆ ಇರುತ್ತಿತ್ತು ಇದರಿಂದ ನದಿಗೆ ನೀರು ಬಂದರೆ ಒಳಿತು ಎಂಬ ಭಾವನೆ ಇರುತ್ತಿತ್ತು. ಆದರೆ ೨೦೦೫ ಮತ್ತು ೨೦೦೬ರ ಪ್ರವಾಹಗಳು ಕುಟುಂಬದಲ್ಲಿಯ ಸದಸ್ಯರಿಗೆ ಒಬ್ಬೊಬ್ಬರಾಗಿ ಒಂದೊಂದು ತೆರನಾಗಿ ಪರಿಣಾಮ ಬೀರಿತು. ಮಕ್ಕಳ ಮೇಲೆ ಒಂದು ತೆರನಾದ ಪರಿಣಾಮ ಬೀರಿದರೆ, ಮಹಿಳೆಯರ ಮೇಲೆ ಇನ್ನೊಂದು ತೆರನಾದ ಪರಿಣಾಮ. ಇನ್ನು ಕುಟುಂಬದ ಹಿರಿಯರ ಮೇಲೆ ಇದರ ಪರಿಣಾಮ ಮತ್ತಷ್ಟು ತೀವ್ರ. ಏಕೆಂದರೆ ಕುಟುಂಬದ ಎಲ್ಲ ಜವಾಬ್ದಾರಿಗಳು ಇವರ ಮೇಲಿರುವುದರಿಂದ ಕೆಲವೊಂದು ಕುಟುಂಬದ ಹಿರಿಯರು ಪ್ರವಾಹವನ್ನು ನೋಡಿ ನಮ್ಮ ಕೈ ಕಾಲು, ಹೃದಯಗಳು ನಡುಗಿದವು ಎನ್ನುತ್ತಾರೆ.

ಇವರಿಗೆ ಆದಾಯದ ಚಿಂತೆ ಮಾತ್ರ ಇರದೆ ಸಾಲದ ಮರುಪಾವತಿ, ಮಕ್ಕಳ ಶಿಕ್ಷಣ, ಕುಟುಂಬದಲ್ಲಿಯ ವಿವಾಹಗಳು ಮುಂತಾದ ಸಮಸ್ಯೆಗಳು ಎದುರು ಕಾಣುತ್ತಿದ್ದವು. ಹಿರಿಯರು ಗ್ರಾಮಗಳನ್ನು ಬಿಟ್ಟು ಹೋಗಲು ಹಿಂದೇಟು ಹಾಕಿದರು. ಸತ್ತರೆ ಇದೇ ಗ್ರಾಮದಲ್ಲಿ ಸಾಯುತ್ತೆವೆಂದು ಹಟ ಹಿಡಿದರು. ಕೆಲವೊಂದು ಜನರು ತಮ್ಮ ಜಾನುವಾರುಗಳ ಜೊತೆ ಗ್ರಾಮದಲ್ಲಿ ಉಳಿದರೆ ಇನ್ನು ಕೆಲವೊಂದು ಜನರು ಅರೆ ಮನಸ್ಸುಗಳಿಂದ ಶೆಡ್‌ಗಳಲ್ಲಿ ವಾಸಿಸಿದರು. ದೈಹಿಕ, ಮಾನಸಿಕ ತೊಂದರೆಗಳಿಂದ ಬಳಲಿದರು. ಭೂಮಿ, ಬೆಳೆ, ಮನೆಗಳು ಮತ್ತು ಜಾನುವಾರುಗಳು ನೀರಿನಲ್ಲಿ ತೇಲಾಡುವುದನ್ನು ನೋಡಿ ಕಣ್ಣೀರಿಟ್ಟರು. ಹೀಗೆ ಪ್ರವಾಹ ಹಿರಿಯರ ಮೇಲೆ ಕುಟುಂಬದ ಎಲ್ಲ ಸದಸ್ಯರುಗಳಿಗಿಂತ ಹೆಚ್ಚಿನ ಪರಿಣಾಮ ಬೀರಿತು.

ಹಂಪಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರ ೨೦೦೯ರಲ್ಲಿ ತನ್ನ 'ನೆರೆ ಹಾವಳಿ ಪರಿಣಾಮ ಮತ್ತು ಪರಿಹಾರ ಅಧ್ಯಯನ' ವರದಿಯಲ್ಲಿ ಕುಟುಂಬದ ಹಿರಿಯರ ಮೇಲಾದ ಪರಿಣಾಮಗಳ ಬಗೆಗೆ ಈ ಕೆಳಗಿನಂತೆ ತಿಳಿಸಿದೆ.

'ನೆರೆ ಬಂದಾಗ ಅವಸರದಲ್ಲಿ ಮನೆಯನ್ನು ಖಾಲಿ ಮಾಡುವಾಗ ವಯಸ್ಸಾದವರು ಹಾಗೂ ವಿಭಿನ್ನ ಸಾಮರ್ಥ್ಯದವರು (ಅಂಗವಿಕಲರು) ವಿಶೇಷ ಕಷ್ಟ ಅನುಭವಿಸಿದರು. ಮನೆ ಸದಸ್ಯರು ಮನೆಯ ವ್ಯಕ್ತಿಗಳನ್ನು, ವಸ್ತು ಮತ್ತು ಜಾನುವಾರುಗಳನ್ನು ಸಾಗಿಸುವಾಗ ಮುದಕರನ್ನು ಅಲಕ್ಷಿಸಿರುವುದು, ತಮ್ಮ ಮಕ್ಕಳು ಹೆಂಡಿರ ಮಕ್ಕಳನ್ನು ಪಾರು ಮಾಡುವ ಉತ್ಸಾಹವನ್ನು ತಮ್ಮನ್ನು ಪಾರು ಮಾಡುವಲ್ಲಿ ತೋರಲಿಲ್ಲ' ಎಂಬ ಬೇಸರ ವ್ಯಕ್ತಪಡಿಸಿರುವುದನ್ನು ತಿಳಿಸಿದ್ದಾರೆ. ಸಾಮಾನ್ಯವಾಗಿ ಪ್ರವಾಹವು ಮಹಿಳೆಯರು, ಮಕ್ಕಳು, ಹಿಂದುಳಿದ ವರ್ಗಗಳು ಮತ್ತು ಹಿರಿಯರ ಮೇಲೆ ಇತರರಿಗಿಂತ ಹೆಚ್ಚು ದುಷ್ಪರಿಣಾಮ ಬೀರುತ್ತದೆ. ಪ್ರವಾಹದಿಂದ ಸಮುದಾಯದ ಹಿರಿಯರ ನೆಮ್ಮದಿ, ಆರೋಗ್ಯ, ಆತಂಕ, ರೋಗಗಳ ಕುರಿತು ಮಾಹಿತಿ ಪಡೆಯಲಾಗಿ, ಪ್ರತಿಶತ ೨.೯೩ರಷ್ಟು ಮಾತ್ರ ಕುಟುಂಬದ ಯಜಮಾನರು

ಪ್ರವಾಹದ ಸಮಯದಲ್ಲಿ ನೆಮ್ಮದಿಯಿಂದ ಇದ್ದರೆಂದು ತಿಳಿಸಿದರೆ ಹೆಚ್ಚಿನ ಜನರು ಅಂದರೆ ಶೇಕಡಾ ೯೭.೦೭ರಷ್ಟು ಹಿರಿಯರು ನೆಮ್ಮದಿಯಿಂದ ಇರಲಿಲ್ಲವೆಂದು ತಿಳಿಯುತ್ತದೆ.

ಹಿರಿಯರು ನೆಮ್ಮದಿಯಿಂದ ಇರಲಿಲ್ಲವೆಂಬುದನ್ನು ತಿಳಿದುಕೊಂಡ ನಂತರ ಅವರು ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಬೀರಿತ್ತು ಎಂಬುದರ ಕುರಿತು ವಿಚಾರಿಸಲಾಗಿ, ಪ್ರತಿಶತ ೮೭.೪೧ರಷ್ಟು ಮಾಹಿತಿದಾರರು ಪ್ರವಾಹ ಹಿರಿಯರ ಆರೋಗ್ಯದ ಮೇಲೆ ಪರಿಣಾಮ ಬೀರಿತ್ತೆಂದು ತಿಳಿಸುತ್ತಾರೆ. ಶೇಕಡಾ ೧೨.೫೯ರಷ್ಟು ಮಾತ್ರ ಯಾವುದೇ ಪರಿಣಾಮ ಇರಲಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಇದರಿಂದ ಪ್ರವಾಹ ಹಿರಿಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿತ್ತೆಂದು ತಿಳಿದು ಬರುತ್ತದೆ.

ಹಿರಿಯರು ಪ್ರವಾಹದ ಸಮಯದಲ್ಲಿ ಆರಾಮದಿಂದ ಇಲ್ಲದಿರುವುದನ್ನು ಕಂಡುಕೊಂಡ ನಂತರ ಅವರು ಯಾವ ತೆರನಾದ ರೋಗ ರುಜುನಿಗಳಿಂದ ಬಳಲಿದರು ಎಂಬುದನ್ನು ಕೋಷ್ಟಕ ೫.೫.೧ರಲ್ಲಿ ನೋಡಬಹುದು.

ಕೋಷ್ಟಕ ೫.೫.೧

ರೋಗ ರುಜುನಿಗಳ ವಿವರ

ಕ್ರಸಂ	ವಿವಿಧ ರೋಗಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಮಾನಸಿಕ ಖಿನ್ನತೆ	೨೪೫	೪೨.೨೪
೨	ಚಿಕುನ ಗುನ್ಯಾ	೩೩	೫.೬೯
೩	ಜ್ವರ, ಕೆಮ್ಮು, ನೆಗಡಿ, ಕಣ್ಣು ಬೇನೆ	೨೨೯	೨೯.೪೮
೪	ಯಾವುದೇ ರೋಗಗಳಿಲ್ಲ	೭೩	೧೨.೫೯
	ಒಟ್ಟು	೫೮೦	೧೦೦.೦೦

ಕೋಷ್ಟಕ ೫.೫.೧ನ್ನು ಗಮನಿಸಿದಾಗ ಪ್ರತಿಶತ ೪೨.೨೪ರಷ್ಟು ಹಿರಿಯರು ಮಾನಸಿಕ ರೋಗಗಳಿಂದ, ಶೇಕಡಾ ೫.೬೯ರಷ್ಟು ಹಿರಿಯರು ಸೊಳ್ಳೆಗಳ ಸಂಬಂಧಿತ ಚಿಕುನ ಗುನ್ಯಾದಂತ ರೋಗಗಳಿಂದ ಮತ್ತು ಜಲ, ವಾಯು ಮಾಲಿನ್ಯದಿಂದ ಬರುವಂತಹ ಜ್ವರ, ನೆಗಡಿ, ಕೆಮ್ಮು, ಮತ್ತು ಕಣ್ಣು ಬೇನೆಗಳಂತಹ ರೋಗಗಳಿಂದ ಪ್ರತಿಶತ ೩೯.೪೮ರಷ್ಟು ಬಳಲಿದರೆ, ಪ್ರತಿಶತ ೧೨.೫೯ರಷ್ಟು ಹಿರಿಯರು ಯಾವುದೇ ರೋಗಗಳಿಂದ ಬಳಲದಿರುವುದು ತಿಳಿಯುತ್ತದೆ.

ಹಿರಿಯರಿಗೆ ಅಲ್ಲಿಯ ವಾತಾವರಣ ಅವರಿಗೆ ಒಗ್ಗೀತೆ ಎಂಬುದರ ಬಗೆಗೆ ವಿಚಾರಿಸಿದಾಗ ಪ್ರತಿಶತ ೧೦೦ರಷ್ಟು ಮಾಹಿತಿದಾರರು ಇಲ್ಲವೆಂದು ತಿಳಿಸಿದರು. (ಸ್ಥಳಾಂತರಗಳಿಂದ ಜನರು ಮಾನಸಿಕ ತೊಂದರೆಗಳನ್ನು ಅನುಭವಿಸುತ್ತಾರೆಂದು (ಅಗರ್‌ವಾಲ್ ೧೯೯೯) ತಿಳಿಸಿದ್ದಾರೆ.

೫.೬) ಧರ್ಮ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ಪ್ರವಾಹದ ಪರಿಣಾಮಗಳು

ಪ್ರವಾಹ ಇನ್ನುಳಿದ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿದಂತೆ ಧಾರ್ಮಿಕ ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ. ಗ್ರಾಮೀಣ ಸಮುದಾಯಗಳಲ್ಲಿ ಧರ್ಮ, ದೇವರು, ದೈವಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವರ ಸಾಂಸ್ಕೃತಿಕ ಚಟುವಟಿಕೆಗಳು ದೇವಾಲಯಗಳ ಮುಖಾಂತರ ನಡೆಯುತ್ತಿವೆ. "ಭಾರತೀಯ ಸಂಸ್ಕೃತಿ ದೇವಾಲಯಗಳಿಂದ ರಕ್ಷಣೆಗೊಂಡು ಜೀವಂತವಾಗಿದೆ" (ರಾಜೇಂದ್ರ ಪ್ರಸಾದ-೧೯೬೮) ಎಂದಿದ್ದಾರೆ. ಗ್ರಾಮೀಣ ಸಮುದಾಯಗಳು ದೇವಾಲಯಗಳ ಮುಖಾಂತರ ಭಾರತೀಯ ಸಂಸ್ಕೃತಿಯನ್ನು ಕಾಯ್ದುಕೊಂಡು, ಮುಂದುವರೆಸಿಕೊಂಡು ಸಾಗುತ್ತಿವೆ. ಗ್ರಾಮೀಣ ಸಮುದಾಯಗಳಲ್ಲಿ ದೇವಾಲಯಗಳು ಬರೀ ಧಾರ್ಮಿಕ ಕಾರ್ಯಗಳಿಗೆ ಸೀಮಿತವಾಗಿರದೆ ಗ್ರಾಮದ ಎಲ್ಲ ಕಾರ್ಯಗಳ ಕೇಂದ್ರ ಬಿಂದುವಾಗಿರುತ್ತದೆ. ಸಮುದಾಯದ ಮನರಂಜನೆಯ ಕೇಂದ್ರಗಳು, ಕೆಲವರಿಗೆ ವಾಸಸ್ಥಳಗಳನ್ನು ಒದಗಿಸುತ್ತವೆ. ಸಮುದಾಯಕ್ಕೆ ಸಂಬಂಧಿಸಿದ ಮಹತ್ವದ ನಿರ್ಣಯಗಳನ್ನು ಇಲ್ಲಿಯೇ ತೆಗೆದುಕೊಳ್ಳಲಾಗುತ್ತದೆ. ಮಾಹಿತಿದಾರರನ್ನು ಸಂದರ್ಶನಕ್ಕೆ ಹುಡುಕಾಡುವುದು ಈ ದೇವಾಲಯಗಳಲ್ಲಿಯೇ. ಪ್ರತಿಯೊಂದು ಜಾತಿ, ಧರ್ಮದ ಜನರು, ತಮ್ಮದೆ ಆದ ದೇವಾಲಯಗಳನ್ನು ಹೊಂದಿದ್ದು ಆಯಾ ಸಮುದಾಯದ ಜನರು ಅವುಗಳಿಗೆ ವಿಧೇಯರಾಗಿರುತ್ತಾರೆ. ಅದರಂತೆ ಗ್ರಾಮ ದೇವರೊಂದು ಇರುತ್ತದೆ. ಅದು ಎಲ್ಲ ಜಾತಿ, ಸಮುದಾಯಗಳಿಗೆ ಸಂಬಂಧಿಸಿದ್ದು. ಖವಟಕೊಪ್ಪ ಗ್ರಾಮದಲ್ಲಿ 'ಹನುಮಂತ' ಗ್ರಾಮ ದೇವರು. ಪ್ರತಿ ಕುಟುಂಬದಲ್ಲಿ ಪವನ, ಆಂಜನೇಯ, ಹಣಮಂತ ಎಂಬ ಹೆಸರಿನವರನ್ನು ಕಾಣುತ್ತೇವೆ. ಪ್ರತಿವರ್ಷ 'ಹನುಮ ಜಯಂತಿ'ಯ ದಿನ ಗ್ರಾಮದ ವಿವಿಧ ಸಮುದಾಯಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸತ್ಕರಿಸಲಾಗುತ್ತದೆ. ಎಲ್ಲ ಸಮುದಾಯ, ಜಾತಿ, ಧರ್ಮದ ಜನರು ಸಾಮರಸ್ಯ ಜೀವನ ಸಾಗಿಸಲು ಸಹಾಯಕವಾಗುತ್ತದೆ. ಕಲ್ಪನಾ ಶರ್ಮಾರವರು ಸರದಾರ ಸರೋವರ ಅಣೆಕಟ್ಟೆಯಿಂದ ಸಾವಿರ ವರ್ಷ ಪ್ರಾಚೀನವಾದ ಶೂರ್ಪನೇಶ್ವರ ದೇವಾಲಯ ಮುಳುಗಡೆಯಿಂದ ಜನರ ಮೇಲಾದ ಮಾನಸಿಕ ಪರಿಣಾಮಗಳ ಕುರಿತು ತಿಳಿಸಿದ್ದಾರೆ. ಡಾ. ಎಂ. ಸಿ. ನಿಗಶೆಟ್ಟಿ ಅವರು ಆಲಮಟ್ಟಿ ಅಣೆಕಟ್ಟೆಯಿಂದ ದೇವಾಲಯಗಳ ಮುಳಗಡೆ ಅವುಗಳ ಪುನರ್ ನಿರ್ಮಾಣ ಮತ್ತು ಜನರ ಅಭಿಪ್ರಾಯಗಳ ಕುರಿತು ಅಧ್ಯಯನ ಮಾಡಿದ್ದಾರೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಪ್ರವಾಹದಿಂದ ಧಾರ್ಮಿಕ ಕ್ಷೇತ್ರದ ಮೇಲಾದ ಪರಿಣಾಮಗಳನ್ನು ಚರ್ಚಿಸಲಾಗಿದೆ.

ಗ್ರಾಮಗಳ ದೇವಾಲಯಗಳನ್ನು ಪ್ರವಾಹ ನೀರಿನಲ್ಲಿ ಮುಳುಗಿಸಿತು. ದೇವರು, ದೇವಾಲಯ ಮತ್ತು ದೈವಗಳಲ್ಲಿ ನಂಬಿಕೆ ಇಟ್ಟಿರುವ ಗ್ರಾಮಗಳ ಜನತೆ ಮಾನಸಿಕ ಸಮಸ್ಯೆಯಿಂದ

ಬಳಲುವಂತಾಯಿತು. ಕೆಲವೊಂದು ದೇವಾಲಯಗಳು ಬಿದ್ದು ಹೋದರೆ ಇನ್ನೂ ಕೆಲವೊಂದು ದೇವಾಲಯಗಳು ಶಿಥಿಲಾವಸ್ಥೆ ತಲುಪಿದವು. ದೇವಾಲಯಗಳ ಜೀರ್ಣೋದ್ಧಾರಕ್ಕೆ ಹಣ ಕೊಡಬೇಕೆಂದು ಜನರು ಅಪೇಕ್ಷಿಸಿದರು.

ಪ್ರವಾಹ ದೇವಾಲಯ ಆಚರಣೆಗಳ ಮೇಲೆ ಯಾವ ರೀತಿ ಪರಿಣಾಮ ಬೀರಿತು ಎಂಬುದು ತಿಳಿದುಕೊಳ್ಳಲು ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಯಿತು. ಪ್ರವಾಹದಿಂದ ದೇವಾಲಯಗಳಲ್ಲಿ ನೀರು ಬಂದಿತ್ತೇ? ಎಮದು ವಿಚಾರಿಸಿದಾಗ, ಪ್ರತಿಶತ ೧೦೦ರಷ್ಟು ಮಾಹಿತಿದಾರರು ಪ್ರವಾಹದಿಂದ ಗ್ರಾಮದ ಎಲ್ಲ ದೇವಾಲಯಗಳಲ್ಲಿ ನೀರು ಬಂದಿತ್ತು ಎಂಬುದನ್ನು ತಿಳಿಸಿರುವುದು ಕಂಡು ಬರುತ್ತದೆ.
ಪ್ರವಾಹದಿಂದ ದೇವಾಲಯಗಳಲ್ಲಿ ನೀರು ಬಂದಿರುವುದನ್ನು ಖಚಿತಪಡಿಸಿಕೊಂಡ ನಂತರ ಪ್ರವಾಹದ ಅವಧಿಯಲ್ಲಿ ದೇವಾಲಯಗಳಲ್ಲಿ ಧಾರ್ಮಿಕ ಕಾರ್ಯಗಳಿಗೆ ತೊಂದರೆಯಾಗಿತ್ತೆ? ಎಂಬುದರ ಕುರಿತು ಮಾಹಿತಿದಾರರನ್ನು ವಿಚಾರಿಸಿದಾಗ, ನೂರಕ್ಕೆ ನೂರರಷ್ಟು ಮಾಹಿತಿದಾರರು ಪ್ರವಾಹದಿಂದ ಧಾರ್ಮಿಕ ಕಾರ್ಯಗಳಿಗೆ ತೊಂದರೆಯಾಗಿತ್ತೆಂದು ತಿಳಿಸಿರುವುದು ಕಂಡು ಬರುತ್ತದೆ.

ಪ್ರವಾಹದ ನೀರು ದೇವಾಲಯಗಳಲ್ಲಿ ನುಗ್ಗಿತು. ಅನೇಕ ದಿನಗಳ ಕಾಲ ದೇವಾಲಯಗಳ ನೀರಿನಲ್ಲಿಯೇ ಉಳಿದವು. ಗ್ರಾಮ ಎರಿ ಮಣ್ಣನ್ನು ಹೊಂದಿರುವುದರಿಂದ ಪ್ರವಾಹದ ನೀರಿನಿಂದ ದೇವಾಲಯಗಳು ಬಿರುಕು ಬಿಟ್ಟವು. ಕೆಲವೊಂದು ಕುಸಿದು ಬಿದ್ದವು. ಕಾರಣ ಸರಕಾರ ಪ್ರವಾಹದ ನಂತರ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಹಾಯ ಒದಗಿಸಿತೆ ಎಂಬುದರ ಮಾಹಿತಿಯನ್ನು ಕೋಷ್ಟಕ ೫.೬.೧ರಲ್ಲಿ ಪಡೆಯಲಾಯಿತು.

ಕೋಷ್ಟಕ ೫.೬.೧

ಪ್ರವಾಹದ ನಂತರ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರಕಾರದಿಂದ ಸಿಕ್ಕ ಸಹಾಯ

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೨	೮.೯೭
೨	ಇಲ್ಲ	೨೬೩	೪೫.೩೪
೩	ತಿಳಿದಿಲ್ಲ	೨೬೫	೪೫.೬೯
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೫.೬.೧ನ್ನು ಅವಲೋಕಿಸಿದಾಗ ಪ್ರವಾಹದ ನಂತರ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರಕಾರದ ಸಹಾಯದ ಕುರಿತು ಮಾಹಿತಿ ಪಡೆಯಲಾಯಿತು. ಅದರಲ್ಲಿ

ಪ್ರತಿಶತ ೮.೯೭ರಷ್ಟು ಮಾಹಿತಿದಾರರು ಮಾತ್ರ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಹಾಯ ಸಿಕ್ಕಿತ್ತೆಂದು ತಿಳಿಸಿದರೆ ಇನ್ನುಳಿದ ಶೇಕಡಾ ೪೫.೩೪ರಷ್ಟು ಮಾಹಿತಿದಾರರು ಇಲ್ಲವೆಂದು, ಉಳಿದ ಶೇಕಡಾ ೪೫.೬೯ರಷ್ಟು ಮಾಹಿತಿದಾರರು ಇದರ ಬಗೆಗೆ ಮಾಹಿತಿ ಇಲ್ಲದಿರುವುದನ್ನು ತಿಳಿಸಿದ್ದಾರೆ.

ಪ್ರವಾಹದಿಂದ ಬಾಧಿತವಾದ ಧಾರ್ಮಿಕ ಕೇಂದ್ರಗಳ ಜೀರ್ಣೋದ್ಧಾರಕ್ಕೆ ಸರಕಾರವು ಅನುದಾನ ನೀಡಿದೆ ಎಂಬುದನ್ನು ತಿಳಿದುಕೊಂಡ ನಂತರ ಆ ಅನುದಾನ ಎಷ್ಟರ ಮಟ್ಟಿಗೆ ಸದುಪಯೋಗವಾಗಿದೆ ಎಂಬುದನ್ನು ತಿಳಿದುಕೊಳ್ಳಲು ಮಾಹಿತಿದಾರರಿಂದ ಅದರ ಸದುಪಯೋಗದ ಕುರಿತು ವಿಚಾರಿಸಲಾಯಿತು. ಸರಕಾರದಿಂದ ದೇವಾಲಯಗಳ ಜೀರ್ಣೋದ್ಧಾರಕ್ಕೆ ದೊರೆತ ಅನುದಾನ ಸರಿಯಾಗಿ ಉಪಯೋಗವಾಗಿದೆ ಎಂದು ಪ್ರತಿಶತ ೮.೭೯ರಷ್ಟು ಮಾಹಿತಿದಾರರು ತಿಳಿಸಿದರೆ ಒಬ್ಬರು ಮಾತ್ರ ಇಲ್ಲ ಎಂದು ತಿಳಿಸಿದರು. ಇನ್ನುಳಿದವರು ಶೇಕಡಾ ೯೧.೦೪ರಷ್ಟು ಮಾಹಿತಿದಾರರು ತಮಗೇನು ಅದರ ಬಗೆಗೆ ಮಾಹಿತಿ ಇಲ್ಲವೆಂದು ತಿಳಿಸಿದರು.

ಗ್ರಾಮೀಣ ಸಮುದಾಯಗಳಲ್ಲಿ ಜನರಿಗೆ ಏನೇ ಕಷ್ಟ ನಷ್ಟಗಳು ಎದುರಾದರು ಧಾರ್ಮಿಕ ಆಚರಣೆಗಳಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ. ಇದನ್ನು ಮನವರಿಕೆ ಮಾಡಿಕೊಳ್ಳಲು ಮಾಹಿತಿದಾರರಿಂದ ಪ್ರವಾಹದಿಂದ ತಮ್ಮ ಗ್ರಾಮದ ಜಾತ್ರೆ ಉತ್ಸವಗಳಲ್ಲಿ ಬದಲಾವಣೆಯಾಗುತ್ತಿದೆಯೇ ಎಂಬುದರ ಮಾಹಿತಿಯನ್ನು ಪಡೆಯಲಾಗಿ, ಪ್ರತಿಶತ ೭೦.೧೭ರಷ್ಟು ಮಾಹಿತಿದಾರರು ಪ್ರವಾಹದ ನಂತರ ಜಾತ್ರೆ ಉತ್ಸವಗಳಲ್ಲಿ ಬದಲಾವಣೆ ಆಗಿಲ್ಲವೆಂದು ಅಭಿಪ್ರಾಯಪಟ್ಟರೆ ಉಳಿದ ಶೇಕಡಾ ೨೯.೮೩ ರಷ್ಟು ಮಾಹಿತಿದಾರರು ಬದಲಾವಣೆಯಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಗ್ರಾಮದ ಜನರು ಆರೋಗ್ಯ, ಮಳೆ-ಬೆಳೆ ಚನ್ನಾಗಿ ಇರಲಿ ಎನ್ನುವ ಕಾರಣ ಧಾರ್ಮಿಕ ಉತ್ಸವಗಳನ್ನು ಅದ್ದೂರಿಯಾಗಿ ಆಚರಿಸಲು ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಪ್ರವಾಹ ಭೂಮಿ, ಬೆಳೆ, ಜೀವನಕ್ರಮ ಇತ್ಯಾದಿಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಇದರಿಂದ ಜಾತ್ರೆ ಉತ್ಸವಗಳನ್ನು ಜನರು ಅದ್ದೂರಿಯಾಗಿ ಆಚರಿಸುವುದಿಲ್ಲವೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರನ್ನು ವಿಚಾರಿಸಿ ಅದರಿಂದ ಬಂದ ಮಾಹಿತಿಯನ್ನು ಕೋಷ್ಟಕ ೫.೬.೨ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೫.೬.೨

ಪ್ರವಾಹದ ನಂತರ ಜಾತ್ರೆ, ಉತ್ಸವಗಳಲ್ಲಿ ಯಾವ ಸ್ವರೂಪದ ಬದಲಾವಣೆ

ಕ್ರ.ಸಂ	ಸ್ವರೂಪ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಗರಿಷ್ಠ ಆಡಂಬರ	೦೧	೦.೧೭
೨	ಸರಳತೆ	೧೭೩	೨೯.೮೩
೩	ಬದಲಾವಣೆಗಳಿಲ್ಲ	೪೦೬	೭೦.೦೦
	ಒಟ್ಟು	೫೮೦	೧೦೦.೦೦

ಕೋಷ್ಟಕ ೫.೬.೨ರಲ್ಲಿ ಪ್ರವಾಹದಿಂದ ಜಾತ್ರೆ ಉತ್ಸವಗಳಲ್ಲಿ ಯಾವ ಸ್ವರೂಪದ ಬದಲಾವಣೆಯಾಗುತ್ತಿದೆ ಎಂದು ವಿಚಾರಿಸಿದಾಗ ಪ್ರತಿಶತ ೦.೧೭ರಷ್ಟು ಮಾತ್ರ ಗರಿಷ್ಠ ಆಡಂಬರವೆಂದರೆ ಪ್ರತಿಶತ ೨೯.೮೩ರಷ್ಟು ಮಾಹಿತಿದಾರರು ಸರಳತೆ ಕಂಡು ಬರುತ್ತಿದೆ ಎಂದು ತಿಳಿಸಿದರೆ, ಪ್ರತಿಶತ ೭೦ರಷ್ಟು ಮಾಹಿತಿದಾರರು ಬದಲಾವಣೆಗಳಿಲ್ಲವೆಂದರು.

ಪ್ರವಾಹ ಭೌತಿಕ ಪರಿಣಾಮ ಮಾತ್ರ ಬೀರದೆ ಒಂದು ಗ್ರಾಮದ ಸಮಗ್ರ ಲಯವನ್ನು ಎದುರಿಸುತ್ತದೆ. ಸಾಮಾನ್ಯವಾಗಿ ಸರಕಾರ, ಸರಕಾರೇತರ ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಪ್ರವಾಹದ ಸಾಂದರ್ಭಿಕ ಸಮಸ್ಯೆಗಳ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡುತ್ತವೆ. ಆದರೆ ಪ್ರವಾಹ ನಂತರದ ದೀರ್ಘಕಾಲೀನ ಸಮಸ್ಯೆಗಳ ಕಡೆಗೆ ಒಲವು ತೋರುವುದಿಲ್ಲ. ಏಕೆಂದರೆ ಅವು ತತ್ಕಾಲದಲ್ಲಿ ಗಮನಕ್ಕೆ ಬರುವುದಿಲ್ಲ. ಹೀಗಾಗಿ ಪ್ರವಾಹ ದೀರ್ಘಕಾಲೀನ ಪರಿಣಾಮ ಬೀರುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಬಹಳಷ್ಟು ಸಂತ್ರಸ್ತರಲ್ಲಿಯೂ ಈ ಪರಿಣಾಮಗಳ ಅರಿವು ಇರುವುದಿಲ್ಲ. ಆದ್ದರಿಂದ ಪ್ರವಾಹದಂತ ಪ್ರಾಕೃತಿಕ ವಿಕೋಪದ ಹಾನಿಯನ್ನು ಜೀವ, ವಿತ್ತ ಹಾನಿಗಳಿಗೆ ಮಾತ್ರ ಮಿತಗೊಳಿಸದೆ ಜನರ ದೈನಂದಿನ ಹಾಗೂ ದೀರ್ಘಕಾಲೀನ ಪರಿಣಾಮಗಳನ್ನು ಅಧ್ಯಯನಗಳು ಶೋಧಿಸಿ ಪರಿಹಾರಗಳನ್ನು ಸೂಚಿಸುವುದು ಅಗತ್ಯವೆನಿಸುತ್ತದೆ.

ΞΞΞΞΞΞ

ಅಧ್ಯಾಯ : ಆರು

ಪ್ರವಾಹ ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳು

ಅಧ್ಯಾಯ : ಆರು

ಪ್ರವಾಹ ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳು

ಪ್ರವಾಹದಿಂದ ಆರ್ಥಿಕ ಕ್ಷೇತ್ರದ ಮೇಲಾದ ಪರಿಣಾಮ ತೀವ್ರತರವಾದುದು. ಇದು ಜಮೀನು ಬೇಸಾಯ ಪದ್ಧತಿ, ಬೆಳೆಗಳ ಸ್ವರೂಪ, ಉದ್ಯೋಗ, ಆದಾಯ, ಕೃಷಿ ಕಾರ್ಮಿಕರ ಸಂಬಳ, ರಸಗೊಬ್ಬರಗಳ ಬಳಕೆ, ಜನ ಜಾನುವಾರುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಈ ಅಧ್ಯಾಯ ಒಳಗೊಂಡಿದೆ.

ಸಾಹಿತ್ಯ ಪುನರಾವಲೋಕನದಲ್ಲಿ ಪ್ರವಾಹದ ಪರಿಣಾಮದ ಕುರಿತಾದ ವಿವಿಧ ಅಧ್ಯಯನಗಳಲ್ಲಿ ಆರ್ಥಿಕ ಕ್ಷೇತ್ರದ ಮೇಲಾದ ಪರಿಣಾಮಗಳನ್ನು ತಿಳಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಉಲ್ಲೇಖಿಸಿದ್ದೇನೆ.

೧೯೯೮ರಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ವಿಪತ್ತುಗಳಿಂದ ೬೫ ಬಿಲಿಯನ್ ಅಮೇರಿಕನ್ ಡಾಲರ ಹಾನಿಯಾಯಿತು ಇದಕ್ಕೆ ಯಾಂಜೆಕ್ಟೆ ನದಿಯ ಪ್ರವಾಹ ಕಾರಣವೆಂದು (ಫ್ರೀಮ್ಯಾನ್ ೧೯೯೯) ಎಂದಿದ್ದಾರೆ.

ಜಗತ್ತಿನ ಅರ್ಧದಷ್ಟು ವಿಕೋಪಗಳು ಏಷಿಯಾದಲ್ಲಿ ಸಂಭವಿಸುತ್ತವೆ. ಇವುಗಳಲ್ಲಿ ಶೇಕಡಾ ೭೦ ರಷ್ಟು ಪ್ರವಾಹಗಳ ಕಾರಣದಿಂದ. ಇದರಿಂದ ೧೫ ಮಿಲಿಯನ್ ಅಮೇರಿಕನ್ ಡಾಲರ ಹಣ ಖರ್ಚಾಗುತ್ತದೆಂದು (ಮುನಿಕ ರೇ ೧೯೯೮) ತಿಳಿಸಿದ್ದಾರೆ.

ಅಮಿತಾಬ ಶ್ರೀ ವಾತ್ಸವ (೨೦೦೯) ಬಿಹಾರದಲ್ಲಿ ಸಂಭವಿಸುತ್ತಿರುವ ಪ್ರವಾಹಗಳಿಂದ ಬಡತನ ನಿರುದ್ಯೋಗಗಳು ಹೆಚ್ಚಿ ಮಕ್ಕಳು ಮಾರಾಟವಾಗಿರುವುದನ್ನು ಉಲ್ಲೇಖಿಸಿದ್ದಾರೆ. ಪ್ರವಾಹ ಪೀಡಿತ ಸಹರ್ಸಾ, ಮಧೇಪುರ, ಸಫೌಲಾ, ಫರ್ನಿಯಾ, ಅರೇರಿಯಾ, ಮತ್ತು ಕಾತಿಹಾರ ಜಿಲ್ಲೆಗಳಲ್ಲಿ ಸುಮಾರು ೧೨೦೦೦ಕ್ಕೂ ಹೆಚ್ಚು ಮಕ್ಕಳು ಮಾರಾಟವಾಗಿರುವುದನ್ನು ಅಂದಾಜಿಸಿದ್ದಾರೆ. ಅತೀ ಕಡಿಮೆ ಅಂದರೆ ೫೦೦ ರೂ.ಗಳಿಗೆ ಮಕ್ಕಳು

ಮಾರಾಟವಾಗುತ್ತಿರುವುದನ್ನು ಕಂಡುಕೊಂಡಿದ್ದಾರೆ. ಇದು ಪ್ರವಾಹದ ಆರ್ಥಿಕ ಕ್ಷೇತ್ರದ ಮೇಲೆ ಬೀರಿದ ಪರಿಣಾಮವನ್ನು ತೋರಿಸುತ್ತದೆ.

ಆಸ್ಸಾಂದಲ್ಲಿ ಪ್ರತಿವರ್ಷ ಸಂಭವಿಸುತ್ತಿರುವ ಪ್ರವಾಹಗಳಿಂದ ಭೂ ಸವಕಳಿ, ಕಡಿಮೆ ಇಳುವರಿ, ಕೃಷಿ ಪದ್ಧತಿ ಮೇಲೆ ಪರಿಣಾಮ, ರಸಗೊಬ್ಬರಗಳ ಕಡಿಮೆ ಉಪಯೋಗ, ಸುಧಾರಿತ ಬೀಜಗಳ ಉಪಯೋಗದಲ್ಲಿ ಹಿಂಜರಿತ, ಕಡಿಮೆ ತಾಂತ್ರಿಕತೆ, ಪ್ರವಾಹಕ್ಕೆ ಒಳಪಡುವ ಪ್ರದೇಶಗಳು ಒಂದೆರಡು ವರ್ಷಗಳಲ್ಲಿ ಫಲವತ್ತತೆ ಕಳೆದುಕೊಂಡು ಒಕ್ಕಲುತನಕ್ಕೆ ಸೂಕ್ತವೆನಿಸುವದಿಲ್ಲ, ಪ್ರವಾಹ ಫಲವತ್ತಾದ ಜಮೀನುಗಳನ್ನು ನೀರಿನ ಹೊಂಡಗಳನ್ನಾಗಿ ಮಾಡುತ್ತದೆಂದು (ಮನೀಶ ಠಾಕೂರ ೨೦೦೯) ಅಭಿಪ್ರಾಯಪಡುತ್ತಾರೆ. ಆಸ್ಸಾಂದ ಬಾರ್ಪೆಟಾ, ಧೇಮಾಜಿ, ಲಕ್ಷೀಪುರ ಜಿಲ್ಲೆಗಳಲ್ಲಿ ಅಸಹಜವಾದ ನೆರೆಹಾವಳಿ ಬಂದು ಬೆಳೆ, ಜೀವ ಮತ್ತು ವಿತ್ತಹಾನಿಗೆ ಕಾರಣವಾಯಿತೆಂದು ಹಿರೆನ್ ಗೈನ (೨೦೦೮) ತಿಳಿಸಿದ್ದಾನೆ. ಹೀಗೆ ಅನೇಕ ತಜ್ಞರು ಪ್ರವಾಹದಿಂದ ಆರ್ಥಿಕ ಕ್ಷೇತ್ರದ ಮೇಲಾದ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ.

ಮೇಲಿನ ಅಧ್ಯಯನಗಳನ್ನು ಆಧರಿಸಿ ಮಾಹಿತಿದಾರರ ಮೇಲಾದ ಆರ್ಥಿಕ ಪರಿಣಾಮಗಳ ಬಗೆಗೆ ವಿಚಾರಿಸಲಾಗಿ ವರ್ಧಮಾನ ದುರ್ಗಣ್ಣವರೆಂಬ ರೈತ ೨೦೦೫ರ ನಂತರ ಬೆಳೆಗಳು ಸರಿಯಾಗಿ ಬರುತ್ತಿಲ್ಲಾ ಅದಕ್ಕಿಂತ ಪೂರ್ವದಲ್ಲಿ ಕಬ್ಬುಗಳು ೨೬ ಗಣಿಕೆವರೆಗೆ ಬೆಳೆಯುತ್ತಿದ್ದವು. ಆದರೆ ಈಗ ಕಬ್ಬಿನ ಜಿಲ್ಲೆ ಎತ್ತರವಾಗುತ್ತಿಲ್ಲ ಎಂದರು. ಲಕ್ಷ್ಮಣ ಉಗಾರೆ ಎಂಬ ರೈತ ೨೦೦೫ರಲ್ಲಿ ಪ್ರವಾಹ ಸಮಯದಲ್ಲಿ ಬಂದ ನೀರು ಕಾರ್ಖಾನೆಗಳ ಮಲೀನ ನೀರಿನಂತಿತ್ತು. ಅದು ಜಮೀನುಗಳಲ್ಲಿ ಇಂಗಿ ಭೂಮಿ ಫಲವತ್ತತೆ ಕುಸಿಯುತ್ತಿದೆ ಎಂದು ಅಭಿಪ್ರಾಯಪಟ್ಟರು. ಆನಂದ ಕುಲಕರ್ಣಿಯವರು ನದಿಗೆ ಅಣೆಕಟ್ಟು ಕಟ್ಟುವದರಿಂದ ನೀರಿನ ಮಟ್ಟ ಹೆಚ್ಚುತ್ತಿದೆ. ಕಾರಣ ಜಮೀನುಗಳಲ್ಲಿ ನೀರಿನ ಮಟ್ಟ ಹೆಚ್ಚಿ ಜವಳಿಗೆ ಕಾರಣವಾಗುತ್ತಿದೆ. ಇದರಿಂದ ಭೂಮಿಯ ಫಲವತ್ತತೆ ಕುಸಿಯುತ್ತಿದೆ ಎನ್ನುತ್ತಾರೆ.

ಗ್ರಾಮ ಜನರ ಮುಖ್ಯ ಉದ್ಯೋಗ ಒಕ್ಕಲುತನ, ಶೇಕಡಾ ೯೦ರಷ್ಟು ಜನರು ಒಕ್ಕಲುತನವನ್ನು ಅವಲಂಬಿಸಿದ್ದಾರೆ. ಪ್ರವಾಹ ವಸತಿ, ಉದ್ಯೋಗ, ಬೇಸಾಯದ ಮೇಲೆ ಪರಿಣಾಮ ಬೀರಿತು. ಜೂನ ಜುಲೈ ತಿಂಗಳುಗಳಲ್ಲಿ ಬಿತ್ತನೆ ಕಾರ್ಯಗಳು ಮುಗಿದಿರುತ್ತವೆ. ಪ್ರವಾಹ ಅಗಷ್ಟ ತಿಂಗಳಲ್ಲಿ ಅಪ್ಪಳಿಸಿದ ಕಾರಣ ಎಲ್ಲಾ ಬೆಳೆಗಳು ನೀರು ಪಾಲಾದವು ಎಂದು ಬಸಪ್ಪ ಎಂಬ ರೈತ ತಿಳಿಸಿದ. ತಿಂಗಳುಗಟ್ಟಲೇ ಜಮೀನುಗಳಲ್ಲಿ ನೀರು ನಿಂತ ಕಾರಣ ಉದ್ಯೋಗ ಅವಕಾಶಗಳು ದೊರೆಯದೆ ಸಾಮಾನ್ಯ ಜನತೆ ಕಂಗಾಲಾದರು. ಜನರು ಹಳ್ಳ ಹರಿಗಳನ್ನು ಮುಚ್ಚಿರುವ ಕಾರಣ ನೀರು ಹಳ್ಳಗುಂಟ ಹರಿಯದೆ ಜಮೀನುಗಳಲ್ಲಿ ನಿಂತು ಜಮೀನುಗಳು

ನೀರಿನ ಗುಂಡಿಗಳಾಗಿ ಪರಿವರ್ತನೆಗೊಂಡವು. ಹೈನುಗಾರಿಕೆ ಇಲ್ಲಿಯ ಜನರ ಉಪಕಸುಬು. ಜಾನುವಾರುಗಳಿಗೆ ಮೇವು ದೊರೆಯದ ಕಾರಣ ಜಾನುವಾರುಗಳನ್ನು ಮಾರುಕಟ್ಟೆಗೆ ಸಾಗಿಸಿದರು. ಸುರೇಂದ್ರ ಕುರುಬರ ಎಂಬ ವ್ಯಕ್ತಿ ಮೇವು ಇಲ್ಲದ ಕಾರಣ ತನ್ನ ಎಮ್ಮೆಯನ್ನು ತನ್ನ ಸಂಬಂಧಿಕರ ಮನೆಗೆ ಕಳುಹಿಸಿದ. ಆದರೆ ಎಮ್ಮೆ ಅಲ್ಲೇ ಸಾವನ್ನಪ್ಪಿತು. ಬೇರೆ ಕಡೆಗೆ ಸತ್ತ ಕಾರಣ ಪರಿಹಾರವು ಸಿಗಲ್ಲಿಲ್ಲವೆಂದು ನೊಂದು ಹೇಳುತ್ತಾನೆ. ಜಮೀನುಗಳಲ್ಲಿ ನೀರು ಬಹಳ ದಿನಗಳವರೆಗೆ ನಿಲ್ಲುತ್ತದೆ, ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯಾಗುತ್ತಿದೆ, ಕಾರಣ ಭೂಮಿಯ ಫಲವತ್ತತೆ ಕುಸಿಯುತ್ತಿದೆ. ಇದರಿಂದ ಆದಾಯಕ್ಕಿಂತ ಖರ್ಚಿನ ಪ್ರಮಾಣ ಹೆಚ್ಚಾಗುತ್ತಿದೆ ಎಂದು ಸುರೇಶ ಎಂಬ ರೈತ ತಿಳಿಸಿದ. ಜಮೀನುಗಳು ಮುಳುಗಡೆಯಾಗಬಹುದೆಂಬ ಭೀತಿಯಿಂದ ಜನರು ಜಮೀನುಗಳಿಗೆ ಹೆಚ್ಚು ಹಣ ತೊಡಗಿಸಲು ಹಿಂಜರಿಯುತ್ತಿದ್ದಾರೆ. ಹವಾಮಾನ ಇಲಾಖೆಯ ಮುನ್ಸೂಚನೆಗಳು ತಿರು–ಮುರುವಾಗುತ್ತಿವೆ. ಅದನ್ನು ನಂಬಿ ಬೇಸಾಯ ಮಾಡುವುದು ಕಠಿಣವಾಗುತ್ತಿದೆ. ಮಳೆಗಾಲದ ಬಗೆಗೆ ಹವಾಮಾನ ಇಲಾಖೆಯ ವರದಿಗಳನ್ನು ಸರಕಾರಗಳು ನಂಬದೆ ನೀರನ್ನು ನದಿಗಳಲ್ಲಿ ಸರಿಯಾಗಿ ಹರಿಯಲು ಬಿಡದೆ ಅಣೆಕಟ್ಟುಗಳಲ್ಲಿ ನೀರನ್ನು ಸಂಗ್ರಹಿಸುತ್ತವೆ. ಮಳೆಗಾಲದಲ್ಲಿ ಮಳೆಯ ಪ್ರಮಾಣ ಹೆಚ್ಚಿಗೆಯಾದರೆ ಅಣೆಕಟ್ಟುಗಳಿಂದ ನೀರಿನ ಅನಿಯಂತ್ರಿತ ಬಿಡುಗಡೆಯಿಂದ ಈ ಭಾಗದ ಜನತೆ ಬೆಳೆ ಹಾನಿಯಂಥ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರವಾಹದ ಆರ್ಥಿಕ ಪರಿಣಾಮಗಳನ್ನು ತಿಳಿಯಲು ಮಾಹಿತಿದಾರರನ್ನು ಅನೇಕ ಪ್ರಶ್ನೆಗಳನ್ನು ಕೇಳಲಾಯಿತು. ಅವುಗಳ ವಿವರ ಈ ಕೆಳಗಿನಂತಿದೆ.

ಪ್ರವಾಹದಿಂದ ಜನರ ಮೇಲೆ ಆರ್ಥಿಕ ಪರಿಣಾಮಗಳು ಆಗುತ್ತಿರುವ ಕುರಿತು ಮಾಹಿತಿದಾರರನ್ನು ವಿಚಾರಿಸಿದಾಗ, ಪ್ರತಿಶತ ೯೯.೮೩ರಷ್ಟು ಮಾಹಿತಿದಾರರು ಮೇಲಿಂದ ಮೇಲೆ ಸಂಭವಿಸುತ್ತಿರುವ ಪ್ರವಾಹದಿಂದಾಗಿ ಆರ್ಥಿಕ ಸಮಸ್ಯೆಯಾಗಿದೆಯೆಂದು ತಿಳಿಸುತ್ತಾರೆ.

ಪ್ರವಾಹ ಅನೇಕ ದಿನಗಳ ಕಾಲ ಇರುವುದರಿಂದ ಜಮೀನುಗಳಲ್ಲಿ ನೀರು ನಿಲ್ಲುತ್ತದೆ. ಜಮೀನುಗಳಲ್ಲಿ ಅನೇಕ ದಿನ ನೀರು ನಿಲ್ಲುವುದರಿಂದ ಜಮೀನುಗಳು ಫಲವತ್ತತೆ ಕಳೆದುಕೊಳ್ಳುತ್ತಿವೆ. ಭೂಮಿ ಜವಳು ಹಿಡಿಯಲು ಅಸಮರ್ಪಕವಾದ ನೀರಿನ ಬಳಕೆ ಎಂದು ತಜ್ಞರ ವಿಚಾರ. ಆದರೆ ಇಲ್ಲಿ ಮಾಹಿತಿದಾರರ ವಿಚಾರಣೆಯಿಂದ ತಿಳಿದು ಬಂದ ವಿಷಯವೆಂದರೆ ಖುಷ್ಕಿ ಜಮೀನುಗಳು ಸಹಿತ ಜವಳು ಹತ್ತುತ್ತಿರುವುದು ಇದರ ಕುರಿತು ಮಾಹಿತಿ ಪಡೆಯಲು ಯಾವ ಸ್ವರೂಪದ ಜಮೀನುಗಳು ಹಾನಿಗೀಡಾಗುತ್ತಿವೆ ಎಂಬುದನ್ನು ವಿಚಾರಿಸಿ ಮಾಹಿತಿದಾರರಿಂದ ಬಂದ ಪ್ರತಿಕ್ರಿಯೆಯನ್ನು ಕೋಷ್ಟಕ ೬.೧ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೬.೧

ಪ್ರಶ್ನೆ : ಪ್ರವಾಹದಿಂದ ಯಾವ ಸ್ವರೂಪದ ಜಮೀನು ಹೆಚ್ಚು ಹಾನಿಗೀಡಾಗಿದೆ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ನೀರಾವರಿ	೧೯೫	೩೩.೬೨
೨	ಖುಷ್ಕಿ	೧೨೩	೨೧.೨೧
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧ರಲ್ಲಿ ಪ್ರವಾಹದಿಂದ ನೀರಾವರಿ ಭೂಮಿ ಹಾನಿಗೀಡಾಗಿದೆಯೆಂದು ಪ್ರತಿಶತ ೩೩.೬೨ರಷ್ಟು ಮಾಹಿತಿದರರು, ಖುಷ್ಕಿ ಜಮೀನುಗಳು ಹಾನಿಗೀಡಾಗುತ್ತಿವೆ ಎಂದು ಶೇಕಡಾ ೨೧.೨೧ ರಷ್ಟು, ಇನ್ನುಳಿದ ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ಜಮೀನು ರಹಿತರಿರುವುದರಿಂದ ತಮಗೆ ತಿಳಿದಿಲ್ಲವೆಂದರು.

ಕೃಷಿಕರಿಗೆ ಹೊತ್ತು ಹೊತ್ತಿಗೆ ಮಳೆ–ಬೆಳೆ ಚನ್ನಾಗಿ ಆದರೆ ಅವರ ಆದಾಯಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಅವರು ಯಾವ ತೊಂದರೆಯು ಇರದೆ ಜೀವನ ನಿರ್ವಹಿಸಬಹುದಾಗಿದೆ. ಆದರೆ ಪ್ರವಾಹದಿಂದ ನೀರು ರೈತರ ಭೂಮಿ ಸೀಮೆಗಳಲ್ಲಿ ಸಂಗ್ರಹವಾಗಿರುವುದರಿಂದ ಭೂಮಿಯು ಜವಳು ಹಿಡಿದು ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ. ಇದರಿಂದ ಅಧಿಕ ಇಳುವರಿ ಪಡೆಯಲು ಆಗುವುದಿಲ್ಲ. ಆಗ ರೈತರ ವಾರ್ಷಿಕ ಆದಾಯದಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿ, ಪ್ರತಿಶತ ೯೯.೮೩ರಷ್ಟು ಮಾಹಿತಿದಾರರು ಪ್ರವಾಹದಿಂದ ತಮ್ಮ ವರ್ಷವಾರು ಆದಾಯದ ಮೇಲೆ ಪ್ರಭಾವ ಬೀರಿದೆ ಎಂದರೆ, ಪ್ರತಿಶತ ೦.೧೭ರಷ್ಟು ಮಾಹಿತಿದಾರರು ಮಾತ್ರ ಇಲ್ಲವೆಂದು ತಿಳಿಸಿದ್ದಾರೆ.

ಪ್ರವಾಹದಿಂದ ನಿರುದ್ಯೋಗ, ಬೆಳೆಗಳ ನಾಶದಿಂದ ಸಾಕಷ್ಟು ಹಾನಿ ಉಂಟಾಯಿತು. ಈ ಹಾನಿ ಯಾವ ಪ್ರಮಾಣದಲ್ಲಿ ಆಯಿತು ಎಂಬುದರ ಬಗೆಗೆ ಮಾಹಿತಿ ಪಡೆಯಲಾಯಿತು. ಪ್ರವಾಹ ಜಮೀನುಗಳನ್ನು ಹೊಂದಿದವರ ಮೇಲೆ ಒಂದು ರೀತಿ ಪ್ರಭಾವ ಬೀರಿದರೆ ಜಮೀನುಗಳನ್ನು ಹೊಂದಿರದವರ ಮೇಲೆ ಇನ್ನೊಂದು ರೀತಿ ಪರಿಣಾಮ ಬೀರಿತು. ಜಮೀನುಗಳನ್ನು ಹೊಂದಿದ ಜನರು ಹೆಚ್ಚು ತೊಂದರೆಗೆ ಒಳಗಾದರು. ಇಂತಹ ಹಾನಿ ಪ್ರಮಾಣವನ್ನು ಕೋಷ್ಟಕ ೬.೨ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಠಕ ೬.೨

ಪ್ರವಾಹದಿಂದಾದ ಹಾನಿಯ ಪ್ರಮಾಣದ ಸಮೀಕ್ಷೆ

ಕ್ರಸಂ	ಉಂಟಾದ ಹಾನಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧,೦೦೦-೧೦ ಸಾವಿರ	೨೭೬	೪೭.೫೮
೨	೧೦,೦೦೦-೨೦ ಸಾವಿರ	೧೨೦	೨೦.೬೯
೩	೨೦,೦೦೦-೫೦ ಸಾವಿರ	೮೫	೧೪.೬೬
೪	೫೦,೦೦೧ ಕ್ಕಿಂತ ಮೇಲ್ಪಟ್ಟು	೯೯	೧೭.೦೭
	ಒಟ್ಟು	೫೮೦	೧೦೦.೦೦

ಕೋಷ್ಠಕ ೬.೨ರಿಂದ ಪ್ರತಿಶತ ೪೭.೫೮ ಮಾಹಿತಿದಾರರಿಗೆ ಹತ್ತು ಸಾವಿರದ ವರೆಗೆ ಹಾನಿ ಉಂಟಾಗಿದ್ದರೆ, ಶೇಕಡಾ ೨೦.೬೯ ಮಾಹಿತಿದಾರರಿಗೆ ಇಪ್ಪತ್ತು ಸಾವಿರದ ವರೆಗೆ, ಶೇಕಡಾ ೧೪.೬೬ ಮಾಹಿತಿದಾರರಿಗೆ ಐವತ್ತು ಸಾವಿರದವರೆಗೆ, ಶೇಕಡಾ ೧೭.೦೭ ಮಾಹಿತಿದಾರರಿಗೆ ಐವತ್ತು ಸಾವಿರಕ್ಕಿಂತ ಹೆಚ್ಚು ಹಾನಿ ಉಂಟು ಮಾಡಿದ್ದು ತಿಳಿಯುತ್ತದೆ.

ವರ್ಷಕ್ಕೊಮ್ಮೆ ಪ್ರವಾಹಗಳು ಬಂದು ಹೋಗುವುದರಿಂದ ಜಮೀನುಗಳಲ್ಲಿಯ ಕ್ಷಾರ ಕಡಿಮೆಯಾಗಿ ಫಲವತ್ತತೆ ಹೆಚ್ಚುತ್ತಿತ್ತು. ಈ ಮೊದಲಿನ ಪ್ರವಾಹಗಳು ಒಂದೆರಡು ದಿನ ಬಂದು ದಡ ಸೇರುತ್ತಿದ್ದವು. ಆದರೆ ಇತ್ತೀಚಿನ ಪ್ರವಾಹಗಳ ಅವಧಿ ಹೆಚ್ಚುತ್ತಿದೆ. ಇದರಿಂದ ಜಮೀನುಗಳು ನೀರಿನ ಹೊಂಡಗಳಾಗುವ ಸಾಧ್ಯತೆಗಳಿರುತ್ತವೆ. ಇದರ ಕುರಿತು ಪಡೆದ ಮಾಹಿತಿಯನ್ನು ಪಡೆಯಲಾಗಿ, ಪ್ರತಿಶತ ೫೨.೭೬ರಷ್ಟು ಮಾಹಿತಿದಾರರು ಜಮೀನುಗಳಲ್ಲಿ ನೀರು ನಿಲ್ಲುತ್ತದೆ ಎಂದರೆ, ಶೇಕಡಾ ೨.೦೭ರಷ್ಟು ಮಾಹಿತಿದಾರರು ಇಲ್ಲವೆಂದು ತಿಳಿಸಿದರು. ಇನ್ನುಳಿದ ಶೇಕಡಾ ೪೫.೧೭ರಷ್ಟು ಮಾಹಿತಿದಾರರು ಜಮೀನು ರಹಿತವಾಗಿರುವುದರಿಂದ ಯಾವುದೇ ಮಾಹಿತಿ ನೀಡಲಿಲ್ಲ.

ಪ್ರವಾಹದ ಅವಧಿಯಲ್ಲಿ ಹೆಚ್ಚಳವಾಗುತ್ತಿರುವುದರಿಂದ ಜಮೀನುಗಳಲ್ಲಿ ನೀರು ಹೆಚ್ಚಿನ ದಿನಗಳ ಕಾಲ ನಿಲ್ಲುತ್ತದೆ. ಜಮೀನುಗಳಲ್ಲಿ ಹೆಚ್ಚು ದಿನ ನೀರು ನಿಲ್ಲುವುದರಿಂದ ಜಮೀನುಗಳ ಫಲವತ್ತತೆ ಕುಸಿಯುತ್ತದೆ. ಪ್ರವಾಹದಿಂದ ಎಷ್ಟು ದಿನಗಳ ಕಾಲ ನೀರು ನಿಲ್ಲುತ್ತದೆ ಎಂಬುದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಠಕ ೬.೩ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಠಕ ೬.೩

ಸಮಸ್ಯೆ : ಪ್ರವಾಹದಿಂದ ಜಮೀನುಗಳಲ್ಲಿ ಎಷ್ಟು ದಿನಗಳ ಕಾಲ ನೀರು ನಿಲ್ಲುತ್ತದೆ.

ಕ್ರಸಂ	ದಿನಗಳ ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧ ರಿಂದ ೧೦ ದಿನ	೦೧	೦.೧೭
೨	೧೧ ರಿಂದ ೨೦ ದಿನ	೨೯೬	೫೧.೦೪
೩	೨೧ ದಿನಗಳ ಮೆಲ್ಪಟ್ಟು	೨೧	೩.೬೨
೪	ಪ್ರತಿಕ್ರಿಯಿಸಲಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೩ರಿಂದ ಪ್ರತಿಶತ ೦.೧೭ ಜನರು ಮಾತ್ರ ಹತ್ತು ದಿನ ಎಂದರೆ ಪ್ರತಿಶತ ೫೧.೦೪ರಷ್ಟು ಮಾಹಿತಿದಾರರು ೧೧ರಿಂದ ೨೦ ದಿನಗಳ ವರೆಗೆ ಪ್ರವಾಹದಿಂದ ಜಮೀನುಗಳಲ್ಲಿ ನೀರು ನಿಲ್ಲುತ್ತದೆ ಎಂದರೆ, ಶೇಕಡಾ ೩.೭ರಷ್ಟು ೨೧ ದಿನಗಳ ಮೇಲ್ಪಟ್ಟು ನಿಲ್ಲುತ್ತದೆ ಎಂಬ ವಿಚಾರ ವ್ಯಕ್ತಪಡಿಸುತ್ತಾರೆ. ಇನ್ನುಳಿದ ಪ್ರತಿಶತ ೪೫.೧೭ರಷ್ಟು ಭೂರಹಿತ ಮಾಹಿತಿದಾರರು ತಮಗೇನು ತಿಳಿದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪ್ರವಾಹದಿಂದ ಸಮುದಾಯದ ಎಲ್ಲ ಜಮೀನುಗಳು ಬಾಧಿತವಾಗುತ್ತವೆ ಬಾಧಿತವಾಗುವ ಜಮೀನುಗಳನ್ನು ಸಮೀಕ್ಷೆ ಮಾಡಿ, ಸಂಬಂಧಿಸಿದ ಜನರಿಗೆ ಪರಿಹಾರ ನೀಡುವುದು ಸರ್ಕಾರದ ಆದ್ಯ ಕರ್ತವ್ಯ, ಈ ನಿಟ್ಟಿನಲ್ಲಿ ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿಯನ್ನು ಕೋಷ್ಟಕ ೬.೪ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೬.೪

ಪ್ರಶ್ನೆ : ಪ್ರವಾಹದಿಂದ ಬಾಧಿತವಾಗುವ ಜಮೀನುಗಳನ್ನು ಸರಕಾರ ಸಮೀಕ್ಷೆ ಮಾಡಿದೆಯೇ?

ಕ್ರ.ಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೨	೮.೯೭
೨	ಇಲ್ಲ	೨೬೬	೪೫.೮೬
೩	ಏನು ತಿಳಿದಿಲ್ಲ	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೪ರಲ್ಲಿ ಪ್ರತಿಶತ ೮.೯೭ರಷ್ಟು ಮಾಹಿತಿದಾರರು ಸರ್ಕಾರವು ಬಾಧಿತ ಜಮೀನುಗಳನ್ನು ಸಮೀಕ್ಷೆ ಮಾಡಿದೆ ಎಂದರೆ, ಶೇಕಡಾ ೪೫.೮೬ರಷ್ಟು ಮಾಹಿತಿದಾರರು ಇಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹಾಗೆಯೇ ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ತಮಗೇನು ತಿಳಿದಿಲ್ಲವೆಂದರು.

ಮೇಲಿನ ೬.೪ನೇ ಕೋಷ್ಟಕವನ್ನು ಗಮನಿಸಿದಾಗ ಪ್ರತಿಶತ ೮.೯೭ರಷ್ಟು ಮಾಹಿತಿದಾರರು ಪ್ರವಾಹದಿಂದ ಮುಳುಗಡೆಯಾಗುವ ಜಮೀನುಗಳನ್ನು ಸರಕಾರ ಸಮೀಕ್ಷೆ ಮಾಡಿದೆ ಎಂದು ತಿಳಿಸಿದರು. ಆದರೆ ಅದು ಪ್ರವಾಹ ಬಾಧಿತವಾಗುವ ಎಲ್ಲ ಜಮೀನುಗಳನ್ನು ಸಮೀಕ್ಷೆ ಮಾಡದಿರುವುದು ಗಮನಕ್ಕೆ ಬಂದಿತು. ಪ್ರವಾಹ ಬಂದು ಹೋದ ನಂತರ ಅಣೆಕಟ್ಟು ಹಿನ್ನೀರು ಯಾವ ಮಟ್ಟಕ್ಕೆ ನಿಲ್ಲುತ್ತದೆಯೋ ಅಷ್ಟನ್ನು ಮಾತ್ರ ಪರಿಗಣಿಸಿ ನದಿ ಸಮೀಪದ (ಗಡ್ಡೆ) ಜಮೀನುಗಳನ್ನು ಅಣೆಕಟ್ಟೆ ಹಿನ್ನೀರಿನಿಂದ ಬಾಧಿತ ಜಮೀನುಗಳೆಂದು ಪ್ರಕಟಿಸಿ ಅವುಗಳಿಗೆ ಮಾತ್ರ ಪರಿಹಾರ ನೀಡಿದೆ. ಇದರ ಕುರಿತು ಮಾಹಿತಿದಾರರನ್ನು ವಿಚಾರಿಸಲಾಯಿತು. ಮುಳುಗಡೆ ಜಮೀನುಗಳ ಸಮೀಕ್ಷೆ ಕಾರ್ಯ ಸಮರ್ಪಕವಾಗಿದೆಯೇ? ಎಂದು ಪ್ರಶ್ನಿಸಿದಾಗ, ಪ್ರತಿಶತ

೦.೬೯ರಷ್ಟು ಮಾಹಿತಿದಾರರು ಮಾತ್ರ ಎಲ್ಲ ಜಮೀನುಗಳನ್ನು ಸಮೀಕ್ಷೆ ಮಾಡಿದ್ದಾರೆಂದು ತಿಳಿಸಿದರೆ, ಉಳಿದ ಶೇಕಡಾ ೫೪.೧೪ರಷ್ಟು ಮಾಹಿತಿದಾರರು ಎಲ್ಲ ಜಮೀನುಗಳನ್ನು ಸಮೀಕ್ಷೆ ಮಾಡಿಲ್ಲವೆಂದು, ಇನ್ನುಳಿದ ಶೇಕಡಾ ೪೫.೧೭ರಷ್ಟು ಮಾಹಿತಿದಾರರು ಅದರ ಬಗ್ಗೆ ತಮಗೇನು ತಿಳಿದಿಲ್ಲವೆಂದರು.

ಸರಕಾರವು ಅಣೆಕಟ್ಟೆಯಿಂದ ಬಾಧಿತವಾಗುವ ರೈತರ ಭೂಮಿ, ಸೀಮೆಗಳನ್ನು ಸಮೀಕ್ಷೆ ಮಾಡುವ ಕಾರ್ಯ ಕೈಗೊಂಡಿದೆ. ಆದರೆ ಅದು ಪ್ರವಾಹದಿಂದ ಬಾಧಿತವಾಗುವ ಎಲ್ಲ ಭೂಮಿ ಸೀಮೆಗಳ ಸಮೀಕ್ಷೆ ಮಾಡುತ್ತಿಲ್ಲವೆಂಬ ಕೂಗು ರೈತರಿಂದ ಕೇಳಿ ಬರುತ್ತಿದೆ. ಕಾರಣ ಸರಕಾರವನ್ನು ಬಾಧಿತ ಎಲ್ಲ ಜಮೀನುಗಳನ್ನು ಸಮೀಕ್ಷೆ ಮಾಡಲು ಒತ್ತಾಯಿಸುತ್ತಾರೆಯೆ ಎಂಬುದನ್ನು ಮಾಹಿತಿದಾರರನ್ನು ವಿಚಾರಿಸಿ ಮಾಹಿತಿಯನ್ನು ಸಂಗ್ರಹಿಸಿದಾಗ, ಪ್ರತಿಶತ ೫೪.೮೩ ಮಾಹಿತಿದಾರರು ಪ್ರವಾಹದಿಂದ ಬಾಧಿತವಾದ ತಮ್ಮ ಎಲ್ಲ ಭೂಮಿ, ಸೀಮೆಗಳನ್ನು ಸರಕಾರವು ಸಮೀಕ್ಷೆ ಮಾಡಬೇಕೆಂದು ಹೇಳಿದರೆ, ಪ್ರತಿಶತ ೪೫.೧೭ರಷ್ಟು ಜನರು ತಮಗೆ ಸಂಬಂಧವಿಲ್ಲವೆಂದು ಹೇಳಿರುವರು.

ಪ್ರವಾಹದಿಂದ ಜಮೀನುಗಳಲ್ಲಿ ನೀರು ಬಹಳ ದಿನಗಳ ಕಾಲ ನಿಲ್ಲುವುದರಿಂದ ಜಮೀನುಗಳು ಬೇಸಾಯಕ್ಕೆ ಯೋಗ್ಯವೆನಿಸುವುದಿಲ್ಲ. ಭೂಮಿ ಜವಳು ಭೂಮಿಗಳಾಗಿ ಪರಿವರ್ತನೆಗೊಂಡು ನಿರುಪಯುಕ್ತವಾಗಿ ಬಿಡುತ್ತವೆ. ಈ ಜಮೀನುಗಳಲ್ಲಿ ಯಾವುದೇ ಬೆಳೆಗಳು ಬೆಳೆಯುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿದಾಗ, ಪ್ರತಿಶತ ೫೨.೪೧ರಷ್ಟು ಮಾಹಿತಿದಾರರು ಪ್ರವಾಹದಿಂದ ತಮ್ಮ ಜಮೀನುಗಳು ನಿರುಪಯುಕ್ತವಾಗುತ್ತಿವೆ ಎಂದು ತಿಳಿಸಿದರೆ, ಪ್ರತಿಯಾಗಿ ಶೇಕಡಾ ೨.೪೨ರಷ್ಟು ಮಾಹಿತಿದಾರರು ಪ್ರವಾಹದಿಂದ ತಮ್ಮ ಭೂಮಿ ಸೀಮೆಗಳ ಮೇಲೆ ಯಾವುದೇ ಪರಿಣಾಮವಾಗಿಲ್ಲವೆಂದು ಹೇಳಿರುವರು. ಇನ್ನುಳಿದ ಶೇಕಡಾ ೪೫.೧೭ರಷ್ಟು ಮಾಹಿತಿದಾರರು ಭೂರಹಿತವಾಗಿರುವ ಕಾರಣ ಅವರಿಗೆ ಅನ್ವಯಿಸುವುದಿಲ್ಲ.

ಪ್ರವಾಹವು ಬಹುದಿನಗಳವರೆಗೆ ಇರುವುದರಿಂದ ಅಲ್ಲಲ್ಲಿ ನೀರು ಸಂಗ್ರಹವಾಗಿ ನಿಲ್ಲುತ್ತದೆ. ಇದರಿಂದ ಭೂಮಿಯು ಜವಳು(ಹಸಿ) ಹಿಡಿಯುವ ಸಾಧ್ಯತೆಯಿರುತ್ತದೆ. ಈ ಜವಳಿನಿಂದಾಗಿ ಬೆಳೆಗಳು ವಿಫುಲವಾಗಿ ಬೆಳೆಯುವುದಿಲ್ಲ. ಆಗ ಇಳುವರಿಯು ಕುಸಿಯುತ್ತದೆ. ಗ್ರಾಮದ ಒಟ್ಟು ಜಮೀನು ೨೯೦೦ ಎಕರೆ ಅದರಲ್ಲಿ ೧೦೧೫ ಎಕರೆ ಅಂದರೆ ಶೇಕಡಾ ೩೫ರಷ್ಟು ಜಮೀನು ಜವಳಾಗಿದೆ. ಇದರಲ್ಲಿ ಶೇಕಡಾ ೨೦ರಷ್ಟು ಪೂರ್ಣ ಪ್ರಮಾಣದ ಜವಳಾಗಿದ್ದರೆ, ಪ್ರತಿಶತ ೧೫ರಷ್ಟು ಅರೆ ಪ್ರಮಾಣದಲ್ಲಿದೆ. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೬.೫ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೬.೫

ಜಮೀನುಗಳ ಮೇಲೆ ಪ್ರವಾಹ ಯಾವ ರೀತಿ ಪರಿಣಾಮ ಬೀರುತ್ತಿದೆ?

ಕ್ರಸಂ	ಪರಿಣಾಮ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಜವಳು ಪ್ರಮಾಣದಲ್ಲಿ ಹೆಚ್ಚಳ ಮತ್ತು ಫಲವತ್ತತೆ ಕುಸಿತ	೩೦೪	೫೨.೪೧
೨	ಪರಿಣಾಮವಿಲ್ಲ	೧೪	೨.೪೨
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೫ರಲ್ಲಿ ೫೨.೪೧ರಷ್ಟು ಮಾಹಿತಿದಾರರು ಪ್ರವಾಹದಿಂದ ಭೂಮಿಯಲ್ಲಿ ಜವಳು ಪ್ರಮಾಣ ಹೆಚ್ಚಳವಾಗಿ ಭೂಮಿ ಫಲವತ್ತತೆ ಕುಸಿಯುತ್ತಿದೆ ಎಂದರೆ, ಶೇಕಡಾ ೨.೪೨ರಷ್ಟು ಮಾಹಿತಿದಾರರು ಪ್ರವಾಹದಿಂದ ಜಮೀನುಗಳ ಮೇಲೆ ಯಾವುದೇ ಪರಿಣಾಮವಿಲ್ಲವೆಂದರು. ಶೇಕಡಾ ೪೫.೧೭ರಷ್ಟು ಮಾಹಿತಿದಾರರು ಸಂಬಂಧವಿಲ್ಲವೆಂಬ ಅಭಿಪ್ರಾಯಗಳನ್ನು ತಿಳಿಸಿರುವರು.

ರೈತರ ಜಮೀನುಗಳಲ್ಲಿ ಗಿಡಮರಗಳಿರುವುದು ಸಹಜ. ಪ್ರವಾಹದಿಂದ ಜಮೀನುಗಳಲ್ಲಿ ಬಹಳ ದಿನಗಳ ಕಾಲ ನೀರು ನಿಲ್ಲುವುದರಿಂದ ಗಿಡಮರಗಳು ನಾಶವಾಗುವ ಸಾಧ್ಯತೆಗಳಿರುತ್ತವೆ. ನದಿ ಗ್ರಾಮದಲ್ಲಿ ೩ ಕಿ.ಮೀ.ಗಳವರೆಗೆ ಹರಿಯುತ್ತದೆ. ನದಿಯ ಇಕ್ಕೆಲಗಳಲ್ಲಿ ಗಿಡಮರಗಳಿವೆ. ನಂದಗಾಂವಿ ಎಂಬುವವರ ಗಡ್ಡೆಯಲ್ಲಿ ಸಾಕಷ್ಟು ಮರಗಳಿದ್ದು ಪ್ರವಾಹದ ರಭಸಕ್ಕೆ ಗಿಡಮರಗಳು ಕಿತ್ತು ಹೋದವು ಎಂದಿದ್ದಾರೆ. ಕೃಷಿಕರಿಗೆ ಗಿಡಮರಗಳು ಕೃಷಿಯ ಜೊತೆಗೆ ಬದಲಿ ಆದಾಯದ ಮೂಲಗಳಾಗಿವೆ. ಈ ಆದಾಯದ ಮೂಲಗಳಾದ ಗಿಡಮರಗಳಿಗೆ ಹಾನಿ ಸಂಭವಿಸಿದೆಯೇ ಎಂಬುದನ್ನು ಕುರಿತು ಮಾಹಿತಿದಾರರಿಗೆ ಕೇಳಿ ಅವರಿಂದ ಬಂದ ಮಾಹಿತಿಯನ್ನು ಕೋಷ್ಟಕ ೬.೬ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೬.೬

ಪ್ರಶ್ನೆ : ಪ್ರವಾಹದಿಂದ ತಮ್ಮ ಜಮೀನುಗಳಲ್ಲಿಯ ಬೆಲೆ ಬಾಳುವ ಗಿಡಮರಗಳಿಗೆ ಹಾನಿಯಾಗಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೮	೧೦.೦೦
೨	ಇಲ್ಲ	೫೨೨	೯೦.೦೦
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೬ರಲ್ಲಿ ಪ್ರತಿಶತ ಹತ್ತರಷ್ಟು ಮಾಹಿತಿದಾರರು ಪ್ರವಾಹದಿಂದ ತಮ್ಮ ಜಮೀನಿನಲ್ಲಿನ ಗಿಡಮರಗಳಿಗೆ ಹಾನಿಯಾಗಿದೆಯೆಂದರೆ, ಉಳಿದ ಪ್ರತಿಶತ ೯೦ರಷ್ಟು ಮಾಹಿತಿದಾರರು ಯಾವುದೇ ಹಾನಿಯಾಗಿಲ್ಲವೆಂಬ ವಿಚಾರಗಳನ್ನು ವ್ಯಕ್ತಪಡಿಸಿರುವುದು ಕಂಡು ಬರುತ್ತದೆ. ಹೆಚ್ಚಿನ ರೈತರು ಗಡ್ಡೆಗಳನ್ನು ಹೊಂದದಿರುವುದು ಮತ್ತು ಜಮೀನುಗಳಲ್ಲಿಯ ಗಿಡಮರಗಳನ್ನು ನಾಶಪಡಿಸಿರುವುದು ಪ್ರವಾಹದಿಂದ ಗಿಡಮರಗಳ ಹಾನಿ ಅಷ್ಟೊಂದು ಇಲ್ಲದಿರುವುದು ತಿಳಿಯುತ್ತದೆ.

ಅಧ್ಯಯನ ಕ್ಷೇತ್ರದಲ್ಲಿ ಜೂನ್‌ದಿಂದ ಸೆಪ್ಟೆಂಬರ್‌ವರೆಗೆ ಮಳೆಯಾಗುತ್ತದೆ. ಜೂನ್ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾದ ನಂತರ ಬಿತ್ತನೆ ಕಾರ್ಯಗಳು ಪ್ರಾರಂಭವಾಗುತ್ತಿದ್ದವು. ಈ ಹಿಂದೆ ಪ್ರವಾಹ ನಿಶ್ಚಿತವಿರುತ್ತಿರಲಿಲ್ಲ. ಅನೇಕ ವರ್ಷಗಳಲ್ಲಿ ಒಮ್ಮೆ ಬೆಳೆಗಳು ಪ್ರವಾಹಕ್ಕೆ ತುತ್ತಾಗುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಪ್ರತಿವರ್ಷ ಪ್ರವಾಹ ಬರುತ್ತಿರುವ ಕಾರಣ ಪ್ರವಾಹ ಬಂದು ಹೋದ ನಂತರ ಬಿತ್ತನೆ ಕಾರ್ಯ ಮಾಡಬೇಕು. ಇಲ್ಲವೆ ಧೈರ್ಯದಿಂದ ಬಿತ್ತನೆ ಮಾಡಿದರೆ ಬೆಳೆ ಕೃಷ್ಣಾರ್ಪಣವಾಗುವ ಸಾಧ್ಯತೆಗಳೇ ಹೆಚ್ಚು. ಕಾರಣ ಬೇಸಾಯ ವ್ಯವಸ್ಥೆಯಲ್ಲಿ ಏರುಪೇರಾಗುತ್ತದೆ. ಇದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಪಡೆಯಲಾಗಿ, ಪ್ರವಾಹವು ತಮ್ಮ ಬೇಸಾಯ ವ್ಯವಸ್ಥೆಯನ್ನು ಏರುಪೇರುಗೊಳಿಸಿದೆ ಎಂದು ಪ್ರತಿಶತ ೫೦ರಷ್ಟು ಮಾಹಿತಿದಾರರು ತಿಳಿಸಿದರೆ, ಶೇಕಡಾ ೪.೮೩ರಷ್ಟು ಮಾಹಿತಿದಾರರು ಇಲ್ಲವೆಂದರು. ಇನ್ನುಳಿದ ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ಈ ಪ್ರಶ್ನೆಗೆ ಪ್ರತಿಕ್ರಿಯಿಸಲಿಲ್ಲ.

ಅಧ್ಯಯನಕ್ಕೆ ಆಯ್ದುಕೊಂಡ ಗ್ರಾಮವು ಪ್ರತಿಶತ ೯೦ರಷ್ಟು ನೀರಾವರಿ ಪ್ರದೇಶ ಹೊಂದಿದೆ. ಇಲ್ಲಿ ಕಬ್ಬು ಪ್ರಮುಖ ಬೆಳೆ. ಈ ಮೊದಲು ರೈತರು ಕಬ್ಬಿನ ನಾಟಿಯನ್ನು ಜೂನ್ ತಿಂಗಳಲ್ಲಿ ಮಾಡಿದರೆ, ನಂತರ ಕಟಾವು ಕಾರ್ಯ ಮಾರ್ಚ್, ಏಪ್ರೀಲ್ ತಿಂಗಳಲ್ಲಿ ಮಾಡುತ್ತಿದ್ದರು. ಆದರೆ ಅಗಸ್ಟ್ ತಿಂಗಳಲ್ಲಿ ಬರುತ್ತಿರುವ ಪ್ರವಾಹದಿಂದ ಕಬ್ಬಿನ ಬೆಳೆ ನಾಶವಾಗುತ್ತಿರುವ ಕಾರಣ, ಪ್ರವಾಹ ಬಂದು ಹೋದ ನಂತರ ನಾಟಿ ಮಾಡಿ, ಪ್ರವಾಹಕ್ಕೆ ಪೂರ್ವ ಬೆಳೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಬಂದೊದಗಿದೆ. ಇದರ ಕುರಿತು ಜನರನ್ನು ವಿಚಾರಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೋಷ್ಟಕ ೬.೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೭

ಪ್ರವಾಹದಿಂದ ಸಾಗುವಳಿ ಪದ್ಧತಿ/ಬೆಳೆಯ ಸ್ವರೂಪದಲ್ಲಿ ಏನಾದರು ಬದಲಾವಣೆಯಾಗಿದೆಯೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಲಘು ಬೆಳೆ ಪದ್ಧತಿ/ಬಿತ್ತನೆ ಅವಧಿಯಲ್ಲಿ	೨೮೪	೪೮.೯೭
೨	ಜವಳು	೩೪	೫.೮೬
೩	ಸಂಬಂಧವಿಲ್ಲ	೧೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೭ರಲ್ಲಿ ಪ್ರವಾಹದಿಂದಾಗಿ ಬೆಳೆ ಬೆಳೆಯುವ ಸ್ವರೂಪದಲ್ಲಿ ಬದಲಾವಣೆಯಾಗುತ್ತಿದೆ ಎಂದು ಪ್ರತಿಶತ ೪೮.೯೭ರಷ್ಟು ಮಾಹಿತಿದಾರರು ತಿಳಿಸಿದರೆ, ಇನ್ನೂ ಶೇಕಡಾ ೫.೮೬ರಷ್ಟು ತಮ್ಮ ಜಮೀನುಗಳಲ್ಲಿ ಜವಳು ಹತ್ತಿವೆ ಎಂದು, ಇನ್ನುಳಿದ ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ಸಂಬಂಧವಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಕಂಡು ಬರುತ್ತದೆ.

ಪ್ರವಾಹದಿಂದ ಇತ್ತೀಚಿನ ದಿನಗಳಲ್ಲಿ ಇಳುವರಿ ಪ್ರಮಾಣದಲ್ಲಿ ಇಳಿಮುಖವಾಗುತ್ತಿದೆ ಎಂದು ವರ್ಧಮಾನ ಎಂಬ ರೈತ ತಿಳಿಸಿದ. ಈ ಹಿಂದೆ ಐವತ್ತರಿಂದ ಅರವತ್ತು ಟನ್‌ಗಳಾಗುತ್ತಿದ್ದ ಕಬ್ಬುಗಳು ಇಂದು ಮೂವತ್ತರಿಂದ ಮೂವತ್ತೈದು ಟನ್‌ಗೆ ಇಳಿಮುಖವಾಗಿವೆ ಎನ್ನುತ್ತಿದ್ದಾರೆ. ಈ ಕುರಿತು ಮಾಹಿತಿದಾರರನ್ನು ಸಂದರ್ಶಿಸಿ ಅವರಿಂದ ಬಂದ ಅಭಿಪ್ರಾಯಗಳನ್ನು ಕೋಷ್ಟಕ ೬.೮ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೬.೮

ಪ್ರವಾಹದಿಂದ ಇಳುವರಿಯಲ್ಲಿ ಬದಲಾವಣೆಯಾಗಿದೆಯೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೦೩	೫೨.೨೪
೨	ಇಲ್ಲ	೧೫	೨.೫೯
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೮ರಲ್ಲಿ ಪ್ರವಾಹವು ಇಳಿವರಿ ಮೇಲೆ ಪರಿಣಾಮ ಬೀರಿದೆಯೆಂದು ಪ್ರತಿಶತ ೫೨.೨೪ರಷ್ಟು ಮಾಹಿತಿದಾರರು ತಿಳಿಸಿದರೆ, ಶೇಕಡಾ ೨.೫೯ರಷ್ಟು ಮಾಹಿತಿದಾರರು ಪರಿಣಾಮವಿಲ್ಲವೆಂದು, ಇನ್ನು ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ತಮಗೆ ಸಂಬಂಧಿಸಿಲ್ಲ ಎಂದು ಹೇಳಿರುವುದು ತಿಳಿದು ಬರುತ್ತದೆ.

ಪ್ರವಾಹ ಸಂಭವಿಸಿದಾಗ ಅಪಾರ ಪ್ರಮಾಣದ ಆಸ್ತಿ-ಪಾಸ್ತಿಯು ಹಾನಿಗೀಡಾಗುತ್ತಿದೆ. ಇದರ ಪ್ರಯುಕ್ತ ಕೃಷಿ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ಆಗ ಕೃಷಿ ಕಾರ್ಮಿಕರಿಗೆ ಕೆಲಸ ಕಾರ್ಯಗಳು ಲಭಿಸುವುದಿಲ್ಲ. ಇದರಿಂದ ಕೃಷಿ ಕಾರ್ಮಿಕರ ಕೂಲಿ ದರದಲ್ಲಿ ಏರುಪೇರಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರನ್ನು ಸಂದರ್ಶಿಸಿ ಅವರಿಂದ ಬಂದ ಮಾಹಿತಿಯನ್ನು ಪಡೆಯಲಾಗಿ, ಪ್ರತಿಶತ ೮೮.೨೮ರಷ್ಟು ಮಾಹಿತಿದಾರರು ಪ್ರವಾಹದಿಂದ ಕೃಷಿ ಕಾರ್ಮಿಕರ ಕೂಲಿ ದರದಲ್ಲಿ ಬದಲಾವಣೆಯಾಗಿದೆಯೆಂದರೆ, ಶೇಕಡಾ ೧೧.೭೨ ಮಾಹಿತಿದಾರರು ಬದಲಾವಣೆ ಆಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ತಿಳಿದು ಬರುತ್ತದೆ. ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಕೂಲಿ ದರಗಳು ಹೆಚ್ಚಾಗಿದ್ದು ಇದಕ್ಕೆ ಪ್ರವಾಹವೇ ಕಾರಣವೆಂದು ಹೇಳಲು ಸಾಧ್ಯವಿಲ್ಲ.

ಪ್ರವಾಹದಿಂದ ಜನರ ಆಸ್ತಿ-ಪಾಸ್ತಿ, ಮನೆ-ಮಠ, ಕಲೆ-ಕೌಶಲ್ಯ ಇತ್ಯಾದಿ ಅಂಶಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಹೀಗೆ ಪ್ರವಾಹದಿಂದ ಬಾಧಿತವಾದ ಜನರಿಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. ಆಗ ಶೆಡ್‌ಗಳ ನಿರ್ಮಾಣ, ರಸ್ತೆಗಳ ನಿರ್ಮಾಣ ಮುಂತಾದ ಕೆಲಸ ಕಾರ್ಯಗಳು ಭರದಿಂದ ಸಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಅನೇಕ ಕೂಲಿ ಕಾರ್ಮಿಕರ ಅವಶ್ಯಕತೆ ಬೀಳುತ್ತದೆ. ಇದರಿಂದ ಕೂಲಿ ಕಾರ್ಮಿಕರ ವೇತನಗಳಲ್ಲಿ ವ್ಯತ್ಯಾಸವಾಗುವುದು ಕಂಡು ಬರುತ್ತದೆ. ಈ ಸಂಗತಿಯನ್ನು ಲಕ್ಷದಲ್ಲಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೬.೯ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೯

ಪ್ರವಾಹ ಕೂಲಿ ದರದ ಮೇಲೆ ಯಾವ ಸ್ವರೂಪದ ಪರಿಣಾಮ ಬೀರಿದೆ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಕೂಲಿ ದರ ಕಡಿಮೆಯಾಗಿದೆ	೨೨	೩.೭೯
೨	ಕೂಲಿ ದರ ಹೆಚ್ಚಾಗಿದೆ	೪೯೦	೮೪.೪೮
೩	ಯಥಾಸ್ಥಿತಿ	೬೮	೧೧.೭೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೯ರಲ್ಲಿ ಪ್ರತಿಶತ ೩.೭೯ರಷ್ಟು ಮಾಹಿತಿದಾರರು ಕೂಲಿ ದರದಲ್ಲಿ ಕಡಿತವಾಗಿದೆ ಎಂದು ತಿಳಿಸಿದರೆ ಶೇಕಡಾ ೮೪.೪೮ರಷ್ಟು ಹೆಚ್ಚಾಗಿದೆಯೆಂದು, ಶೇಕಡಾ ೧೧.೭೩ ರಷ್ಟು ಯಥಾಸ್ಥಿತಿ ಇದೆ ಎಂದು ತಿಳಿಸಿದ್ದಾರೆ. ಕೂಲಿ ದರ ಹೆಚ್ಚಾಗಲು ಪರಿಶಿಷ್ಟ ಜಾತಿಯ ಜನರು ಹೊರಗಡೆ ಇರುವುದು, ಬೇರೆ ಗ್ರಾಮಗಳಿಂದ ದುಡಿಯಲು ಬರುವ ಜನರು ತಮ್ಮ ಗ್ರಾಮಗಳಿಗೆ ಮರಳಿರುವುದರಿಂದ ಕೂಲಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುವುದು, ಕೆಲಸ ಕಾರ್ಯಗಳು ಹೆಚ್ಚಾಗಿರುವುದು ಕೂಲಿ ದರ ಹೆಚ್ಚಳಕ್ಕೆ ಪ್ರಮುಖ ಕಾರಣವೆಂದು ತಿಳಿದು ಬರುತ್ತದೆ.

ಪ್ರವಾಹ ಉದ್ಯೋಗಗಳ ಮೇಲೆ ಪರಿಣಾಮ ಬೀರಿತ್ತು. ಕೆಲವೊಂದು ಸಮಯದಲ್ಲಿ ಪ್ರವಾಹಗಳಿಂದ ಉದ್ಯೋಗಗಳು ಹೆಚ್ಚಾಗುವ ಸಾಧ್ಯತೆಗಳಿರುತ್ತವೆ. ಏಕೆಂದರೆ ಪ್ರವಾಹದಿಂದ ತುಂಬಿದ ಗುಂಡಿಗಳಲ್ಲಿಯ ನೀರನ್ನು ಹೊರಹಾಕುವುದು, ಗತಾರ ತೆಗೆಯುವುದು ಇನ್ನಿತರ ಕೆಲಸಗಳು ದೊರೆಯುವ ಸಾಧ್ಯತೆಗಳಿರುತ್ತವೆ. ಇದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೬.೧೦ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೬.೧೦

ಪ್ರವಾಹ ಪೂರ್ವಕ್ಕಿಂತ ಪ್ರವಾಹದ ನಂತರ ಕೃಷಿ ಉದ್ಯೋಗಗಳು ಹೆಚ್ಚಾಗಿವೆಯೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೦೯	೧.೫೫
೨	ಇಲ್ಲ	೫೭೧	೯೮.೪೫
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧೦ರಲ್ಲಿ ಪ್ರತಿಶತ ೯೮.೪೫ರಷ್ಟು ಮಾಹಿತಿದಾರರು ಪ್ರವಾಹದ ನಂತರ ಕೃಷಿ ಉದ್ಯೋಗಗಳು ಹೆಚ್ಚಾಗಿಲ್ಲವೆಂದರೆ, ಶೇಕಡಾ ೧.೫೫ರಷ್ಟು ಮಾತ್ರ ಹೆಚ್ಚಾಗಿವೆಯೆಂದರು. ಪ್ರವಾಹದ ನಂತರ ಒಡ್ಡುಗಳನ್ನು ಹಾಕುವುದು, ಗತಾರ ತೆಗೆಯುವಂತಹ ಕೆಲಸಗಳು ಹೆಚ್ಚಿದವು, ಆದರೆ ಅವುಗಳಿಗೆ ಯಂತ್ರಗಳನ್ನು ಬಳಸಿರುವುದರಿಂದ ಉದ್ಯೋಗಗಳು ಹೆಚ್ಚಲಿಲ್ಲ ಎಂಬುದು ತಿಳಿಯುತ್ತದೆ.

ಭಗವಂತ ಎಂಬ ರೈತ ಪ್ರವಾಹದ ಸಮಯದಲ್ಲಿ ಮೂರು ತಿಂಗಳವರೆಗೆ ನಿರುದ್ಯೋಗ ಅನುಭವಿಸಿದೇವೆಂದು ತಿಳಿಸುತ್ತಾನೆ. ಪ್ರವಾಹದ ಕಾರಣ ಗ್ರಾಮದಿಂದ ಹೊರಗುಳಿದ ಜನರು ಮರಳಿ ಗ್ರಾಮಕ್ಕೆ ಬಂದರೂ ಜಮೀನುಗಳಲ್ಲಿ ನೀರು ನಿಂತ ಕಾರಣ ಯಾವುದೇ ಕೆಲಸ ನಿರ್ವಹಿಸಲು ಸಾಧ್ಯವಿರಲಿಲ್ಲ. ಈ ಅಂಶವನ್ನು ಆಧರಿಸಿ ಮಾಹಿತಿದಾರರಿಂದ ಬಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೬.೧೧ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೬.೧೧

ಪ್ರವಾಹದ ನಂತರ ಎಷ್ಟು ದಿನಗಳ ಕಾಲ ನಿರುದ್ಯೋಗ ಅನುಭವಿಸಿದೀರಿ?

ಕ್ರಸಂ	ದಿನಗಳ ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೩೦ ದಿನ	೧೩	೨.೭೪
೨	೪೫ ದಿನ	೨೩೯	೪೧.೨೧
೩	೬೦ ದಿನ	೨೩೦	೩೯.೬೫
೪	೯೦ ದಿನ	೯೮	೧೬.೯೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧೧ರಲ್ಲಿ ಪ್ರವಾಹ ಉದ್ಯೋಗದ ಮೇಲೆ ಹೆಚ್ಚಿನ ಪರಿಣಾಮ ಬೀರಿದುದು ತಿಳಿಯುತ್ತದೆ. ಪ್ರತಿಶತ ೨.೭೪ರಷ್ಟು ಜನರು ೩೦ ದಿನ, ಪ್ರತಿಶತ ೪೧.೨೧ರಷ್ಟು ಜನರು ೪೫ ದಿನ ಪ್ರತಿಶತ ೩೯.೬೫ ರಷ್ಟು ಜನರು ೬೦ ದಿನ ಮತ್ತು ೧೬.೯೦ರಷ್ಟು ಮಾಹಿತಿದಾರರು ೯೦ ದಿನಗಳ ಕಾಲ ನಿರುದ್ಯೋಗ ಅನುಭವಿಸಿದರು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಸರಕಾರ ಏನಾದರೂ ಕ್ರಮ ಕೈಕೊಂಡುದರ ಕುರಿತು ಮಾಹಿತಿ ಪಡೆಯಲಾಯಿತು. ಸರಕಾರ ಉದ್ಯೋಗ ಸೃಷ್ಟಿಗೆ ಹಣ ಕಾಯ್ದಿರಿಸಿತ್ತು. ಬೆಳಗಾವಿ ಜಿಲ್ಲಾಡಳಿತ ಉದ್ಯೋಗ ಸೃಷ್ಟಿಗೆ ೧೨ ಕೋಟಿ ಹಣ ನೀಡಿತ್ತು. ಕಾರಣ ಉದ್ಯೋಗ ಸೃಷ್ಟಿಗೆ ಸರಕಾರ ಕ್ರಮ ಕೈಕೊಂಡಿದುದರ ಕುರಿತು ಮಾಹಿತಿಯನ್ನು ಪಡೆಯಲಾಗಿ, ನೂರಕ್ಕೆ ನೂರರಷ್ಟು ಪ್ರವಾಹದಿಂದ ಬಾಧಿತವಾದ ಮಾಹಿತಿದಾರರು ಮೂರು ತಿಂಗಳುಗಳವರೆಗೆ ನಿರುದ್ಯೋಗ ಅನುಭವಿಸಿದರೂ ನಿರುದ್ಯೋಗ ನಿವಾರಣೆಗೆ ಸರಕಾರ ಯಾವುದೇ ಕ್ರಮ ಕೈಕೊಂಡಿಲ್ಲ ಎಂಬ ಇಂಗಿತವನ್ನು ವ್ಯಕ್ತಪಡಿಸಿರುವುದು ತಿಳಿದು ಬರುತ್ತದೆ.

ಪ್ರವಾಹವು ಜನಜೀವನದ ಮೇಲೆ ಮೂರು ತಿಂಗಳುಗಳ ವರೆಗೆ ಪ್ರಭಾವ ಬೀರಿತು. ಈ ಪ್ರಭಾವದಿಂದಾಗಿ ಜನರು ಕೈಗೆ ಕೆಲಸಗಳಿಲ್ಲದೆ, ಹೊಟ್ಟೆಗೆ ಹಿಟ್ಟಿಲ್ಲದೆ ಇರುವಂತಾಯಿತು. ಜನರಿಗೆ ಆಹಾರ ಸರಬರಾಜು ಮಾಡಲು ಸರ್ಕಾರವು ಗಂಜಿ ಕೇಂದ್ರಗಳನ್ನು ತೆರೆದಿತ್ತು. ಕೆಲವೊಂದು ದಿನಗಳ ನಂತರ ಗಂಜಿ ಕೇಂದ್ರಗಳನ್ನು ಮುಚ್ಚಲಾಯಿತು. ಇದರಿಂದ ಜನರು ಈ ಮೊದಲು ಸರಿಯಾಗಿ ತಿಂದುಂಡವರು ಸಾಲ ಸೋಲ ಮಾಡಿಯಾದರೂ ಸರಿಯಾದ ಊಟ ಮಾಡಬೇಕೆಂದು ತಿಳಿದು ಸಾಲ ಮಾಡತೊಡಗಿದರು. ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಗೆ ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಯಿತು. ಅದನ್ನು ಕೋಷ್ಟಕ ೬.೧೨ರಲ್ಲಿ ಕಾಣಬಹುದು.

ಕೋಷ್ಠಕ ೬.೧೨

ಪ್ರವಾಹವು ನಿಮ್ಮನ್ನು ಸಾಲಗಾರರನ್ನಾಗಿ ಮಾಡಿದೆಯೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೯೯	೮೭.೭೬
೨	ಇಲ್ಲ	೭೧	೧೨.೨೪
	ಒಟ್ಟು	೫೮೦	೧೦೦.೦೦

ಕೋಷ್ಠಕ ೬.೧೨ರ ಪ್ರಕಾರ ಪ್ರತಿಶತ ೮೭.೭೬ರಷ್ಟು ಮಾಹಿತಿದಾರರು ಪ್ರವಾಹವು ಉಪಜೀವನಕ್ಕಾಗಿ ತಮ್ಮನ್ನು ಸಾಲಗಾರರನ್ನಾಗಿ ಮಾಡಿದೆ ಎಂದರೆ, ಶೇಕಡಾ ೧೨.೨೪ರಷ್ಟು ಮಾಹಿತಿದಾರರು ಪ್ರವಾಹ ತಮ್ಮನ್ನು ಸಾಲಗಾರರನ್ನಾಗಿ ಮಾಡಿಲ್ಲವೆಂದರು.

ಪ್ರವಾಹ, ನೀರಿನ ಸರಿಯಾದ ಬಳಕೆ ಇಲ್ಲದಿರುವುದು ಮತ್ತು ಅತಿಯಾದ ರಸಗೊಬ್ಬರಗಳ ಬಳಕೆ ಕಾರಣ ಜಮೀನುಗಳು ಫಲವತ್ತತೆ ಕಳೆದುಕೊಳ್ಳುತ್ತಿವೆ. ರಸಗೊಬ್ಬರಗಳ ಹೆಚ್ಚಿನ ಬಳಕೆಯಿಂದ ಖರ್ಚು ಹೆಚ್ಚು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೆ ಮನಿಷ ಠಾಕೂರರು ಪ್ರವಾಹದ ದುಷ್ಪರಿಣಾಮದ ಕಾರಣ ರಸಗೊಬ್ಬರಗಳ ಬಳಕೆ ಕಡಿಮೆಯಾಗುತ್ತಿರುವುದನ್ನು ತಿಳಿಸಿದ್ದರು. ಈ ನಿಟ್ಟಿನಲ್ಲಿ ಸಂದರ್ಶನಕಾರರನ್ನು ಸಂದರ್ಶಿಸಿ ಅವರಿಂದ ಬಂದ ಮಾಹಿತಿಯನ್ನು ಸಂಗ್ರಹಿಸಲಾಗಿ, ಪ್ರತಿಶತ ೫೪.೧೪ರಷ್ಟು ಮಾಹಿತಿದಾರರು ಭೂಮಿಯ ಫಲವತ್ತತೆ ಕುಸಿದಿರುವುದರಿಂದ ರಸಗೊಬ್ಬರಗಳನ್ನು ಬಳಸಿದರೆ ಮಾತ್ರ ಬೆಳೆಗಳು ಬರುತ್ತವೆ ಕಾರಣ ರಸಗೊಬ್ಬರಗಳ ಬಳಕೆ ಪ್ರಮಾಣ ಹೆಚ್ಚುತ್ತಿದೆ ಎಂದರೆ, ಶೇಕಡಾ ೦.೬೯ರಷ್ಟು ರಸಗೊಬ್ಬರಗಳ ಬಳಕೆಯ ಪ್ರಮಾಣದಲ್ಲಿ ಹೆಚ್ಚಳವಾಗಿಲ್ಲವೆಂದರು. ಇನ್ನು ಭೂರಹಿತರಾದ ೪೫.೧೭ರಷ್ಟು ಮಾಹಿತಿದಾರರು ಇದಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಗ್ರಾಮದಲ್ಲಿಯ ಶೇಕಡಾ ೪೦ರಷ್ಟು ಜಮೀನುಗಳು ಫಲವತ್ತತೆ ಕಳೆದುಕೊಳ್ಳುತ್ತಿರುವುದು ಮತ್ತು ಜವಳು ಪ್ರದೇಶಗಳಾಗುತ್ತಿವೆ. ಕಾರಣ ಗ್ರಾಮದ ಜನರು ಭೂಮಿ ಫಲವತ್ತತೆ ಸುಧಾರಿಸಲು ಇಚ್ಛಿಸುತ್ತಾರೆಯೇ ಎಂಬುದರ ಮಾಹಿತಿಯನ್ನು ತಿಳಿದುಕೊಳ್ಳಲು ಈ ಪ್ರಶ್ನೆಯನ್ನು ಕೇಳಲಾಯಿತು. ನಂತರ ಅವರಿಂದ ಬಂದ ಉತ್ತರಗಳನ್ನೆಲ್ಲ ಕೋಷ್ಠಕ ೬.೧೩ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೬.೧೩

ಭೂಮಿ ಫಲವತ್ತತೆ ಸುಧಾರಿಸಲು ಇಚ್ಛಿಸುತ್ತೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೧೦	೫೩.೪೫
೨	ಇಲ್ಲ	೦೮	೧.೩೮
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಮೇಲಿನ ೬.೧೩ರ ಕೋಷ್ಟಕವನ್ನು ಅವಲೋಕಿಸಿದಾಗ ಪ್ರತಿಶತ ೫೩.೪೫ರಷ್ಟು ಮಾಹಿತಿದಾರರು ತಮ್ಮ ಜಮೀನುಗಳ ಫಲವತ್ತತೆ ಕಳೆದುಕೊಂಡಿದ್ದು ಅವುಗಳನ್ನು ಸುಧಾರಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಹೆಚ್ಚಿನ ಮಾಹಿತಿದಾರರು ಕೃಷಿ ಭೂಮಿ ಸುಧಾರಿಸಲು ಇಚ್ಛಿಸಲು ಕಾರಣವೇನೆಂದರೆ ಗ್ರಾಮ ಸಂಪೂರ್ಣ ಮುಳಗಡೆ ಯಾದಿಯಲ್ಲಿ ಇದ್ದರೂ ಜಮೀನುಗಳಿಗೆ ಯಾವುದೇ ತೊಂದರೆಯಾಗುವುದಿಲ್ಲವೆಂಬ ಅನಿಸಿಕೆ ಇದೆ. ಅಲ್ಲದೆ ಸರಕಾರ ಮನೆಗೆಳಿಗೆ ಮಾತ್ರ ಶಾಶ್ವತ ಪರಿಹಾರ ನೀಡುತ್ತಿದೆ. ಶೇಕಡಾ ೧.೩೮ರಷ್ಟು ಮಾತ್ರ ಜಮೀನುಗಳನ್ನು ಸುಧಾರಿಸಲು ಇಚ್ಛೆ ವ್ಯಕ್ತಪಡಿಸಲಿಲ್ಲಾ. ಪ್ರತಿಶತ ೪೫.೧೭ರಷ್ಟು ಮಾಹಿತಿದಾರರು ತಮಗೆ ಇದರ ಬಗೆಗೆ ತಿಳಿದಿಲ್ಲವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಪ್ರವಾಹದಿಂದಾಗಿ ಸಾರ್ವಜನಿಕರ ಭೂಮಿ ಸೀಮೆಗಳು ಫಲವತ್ತತೆಯನ್ನು ಕಳೆದುಕೊಳ್ಳುತ್ತಿವೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿದರೆ ಮಾತ್ರ ಇಳುವರಿ ಪಡೆಯಲು ಸಾಧ್ಯ. ಕೆಲವೊಂದು ರೈತರು ಭೂಮಿ ಸುಧಾರಿಸಲು ಇಚ್ಛಿಸುತ್ತಿಲ್ಲ. ಈ ವಿಷಯವನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೋಷ್ಟಕ ೬.೧೪ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧೪

ಭೂಮಿ ಫಲವತ್ತತೆ ಸುಧಾರಿಸಲು ಇಚ್ಛಿಸುತ್ತಿಲ್ಲಾ ಏಕೆ?

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಆರ್ಥಿಕ ಹೊರೆ	೦೭	೧.೨೧
೨	ಪ್ರಯೋಜನವಿಲ್ಲ	೦೧	೦.೧೭
೩	ಸುಧಾರಿಸಲು ಇಚ್ಛಿಸಿದವರು	೩೧೦	೫೩.೪೫
೪	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧೪ರಲ್ಲಿ ಭೂಮಿಯ ಫಲವತ್ತತೆ ಸುಧಾರಿಸಲು ನಿರಾಕರಿಸಿದ ಬಹುತೇಕರು ಆರ್ಥಿಕ ಹೊರೆಯ ಕಾರಣವನ್ನು ತಿಳಿಸಿದ್ದಾರೆ. ಒಂದು ಎಕರೆ ಜಮೀನಿಗೆ ಜವಳು ಪೈಪುಗಳನ್ನು ಅಳವಡಿಸಲು ೬೦ ರಿಂದ ೭೦ ಸಾವಿರದವರೆಗೆ ಆರ್ಥಿಕ ಹೊರೆಯಾಗುತ್ತದೆ. ಅಲ್ಲದೆ ಸಣ್ಣ ಸಣ್ಣ ಹಿಡುವಳಿದಾರರು ಹೆಚ್ಚಿಗೆ ಹಣ ಹೂಡಬೇಕಾಗುತ್ತದೆ. ಪ್ರತಿಶತ ೦.೧೭ರಷ್ಟು ಮಾಹಿತಿದಾರರು ಮಾತ್ರ ಜಮೀನು ಸುಧಾರಿಸುವ ಹಂತದಲ್ಲಿ ಇಲ್ಲವೆಂದು ತಿಳಿಸುತ್ತಾರೆ.

ಇಳುವರಿ ಪ್ರಮಾಣ ಕಡಿಮೆಯಾಗುತ್ತಿರುವ ಕಾರಣ ರೈತರು ಜಮೀನುಗಳಿಗೆ ಹೆಚ್ಚಿನ ಹಣ ತೊಡಗಿಸಲು ಆಸಕ್ತಿ ತೋರಿಸುತ್ತಿಲ್ಲ. ಸುಧಾರಿತ ಬೀಜಗಳನ್ನು ಉಪಯೋಗಿಸುವುದರಿಂದ ಆದಾಯದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬಹುದು ಆದರೆ ರೈತರು ಸುಧಾರಿತ ತಳಿಗಳನ್ನು ಉಪಯೋಗಿಸುತ್ತಿಲ್ಲ ಇದು ಸ್ವಲ್ಪ ಖರ್ಚುದಾಯಕ ಕೆಲಸ. ಕಾರಣ ರೈತರು ಸುಧಾರಿತ ತಳಿಗಳನ್ನು ಬೆಳೆಯಲು ಇಚ್ಛಿಸುತ್ತಾರೆಯೇ ಎಂಬುದರ ಕುರಿತು ಮಾಹಿತಿ ಪಡೆದುಕೊಂಡಾಗ, ಪ್ರತಿಶತ ೮೭.೭೬ರಷ್ಟು ಮಾಹಿತಿದಾರರು ಸುಧಾರಿತ ತಳಿಗಳ ಬೆಳೆಗಳನ್ನು ಬೆಳೆಯಲು ಇಚ್ಛಿಸಿದರೆ, ಶೇಕಡಾ ೧೨.೨೪ ಮಾಹಿತಿದಾರರು ಮಾತ್ರ ಇಚ್ಛೆ ವ್ಯಕ್ತಪಡಿಸಲಿಲ್ಲ. ಅಧಿಕ ವೆಚ್ಚ ಆದರೆ ಲಾಭಾಂಶದ ಅನಿಶ್ಚಿಂತತೆ ಕಾರಣ ಇವರು ಸುಧಾರಿತ ತಳಿ ಬೆಳೆಯಲು ಇಚ್ಛಿಸುತ್ತಿಲ್ಲ ಎಂಬುದು ತಿಳಿಯುತ್ತದೆ.

ವಿವಿಧ ಕಾರಣಗಳಿಂದ ತಾಲೂಕಿನಲ್ಲಿ ಸುಮಾರು ೨೧ ಸಾವಿರ ಹೆಕ್ಟೇರ್ ಭೂಮಿ ಜವಳಾಗಿದೆ. ಗ್ರಾಮದ ಪ್ರತಿಶತ ೪೦ರಷ್ಟು ಜಮೀನು ಜವಳಾಗಿದ್ದು ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ ಇನ್ನು ಕೆಲವೊಂದು ವರ್ಷಗಳಲ್ಲಿ ಗ್ರಾಮದ ಇನ್ನುಳಿದ ಜಮೀನುಗಳು ಜವಳಾಗುತ್ತವೆ. ಅಣೆಕಟ್ಟೆಯಿಂದ ನೀರಿನ ಮಟ್ಟ ಹೆಚ್ಚುತ್ತಿದೆ, ರೈತರು ಹಳ್ಳಗಳನ್ನು ಮುಚ್ಚಿರುವುದರಿಂದ ಜಮೀನುಗಳಲ್ಲಿಯ ನೀರು ಬಸಿದು ಹೋಗುತ್ತಿಲ್ಲ. ಸವಳು ಜವಳು ತೆಗೆಯಲು ಸರಕಾರ ಏನಾದರೂ ಕ್ರಮ ಕೈಕೊಂಡಿದೆಯೇ ಎಂಬುದರ ಕುರಿತು ಮಾಹಿತಿ ಪಡೆಯಲಾಯಿತು. ಶಾಸಕರು ಇದರ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತೇವೆ ಎಂದು ತಿಳಿಸುತ್ತಾರೆ. ಆದರೆ ಇನ್ನೂ ಯಾವ ಕ್ರಮ ಕೈಗೊಂಡಿಲ್ಲ. ಇದೊಂದು ವೆಚ್ಚದಾಯಕ ಕೆಲಸವಾಗಿದ್ದು ಸರಕಾರದಿಂದಲೇ ಮಾತ್ರ ಸಾಧ್ಯ. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಕೋಷ್ಟಕ ೬.೧೫ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೬.೧೫

ಸರಕಾರ ಸವಳು-ಜವಳು ತೆಗೆಯುವ ಕಾರ್ಯಕ್ರಮ ಹಾಕಿಕೊಂಡಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೨೩	೩.೯೭
೨	ಇಲ್ಲ	೨೯೫	೫೦.೮೬
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧೫ರಲ್ಲಿ ಪ್ರತಿಶತ ೩.೯೭ರಷ್ಟು ಮಾಹಿತಿದಾರರು ಸವಳು-ಜವಳು ತೆಗೆಯಲು ಸರಕಾರ ಕ್ರಮ ಕೈಕೊಂಡಿದೆ ಎಂದು ತಿಳಿಸಿದರೆ, ಶೇಕಡಾ ೫೦.೮೬ರಷ್ಟು ಮಾಹಿತಿದಾರರು ಸರಕಾರ ಯಾವುದೇ ಕ್ರಮ ಕೈಕೊಂಡಿಲ್ಲವೆಂದಿರುವರು.

ಗ್ರಾಮದಲ್ಲಿ ಸವಳು ಜವಳು ಪ್ರಮಾಣ ಹೆಚ್ಚಾಗಿದ್ದರೂ ಸವಳು-ಜವಳು ತೆಗೆಯುವ ಕ್ರಮಗಳನ್ನು ಸರಕಾರ ಕೈಗೊಂಡಿಲ್ಲ ಈ ಕ್ರಮಗಳನ್ನು ಕೈಕೊಳ್ಳುವದರಿಂದ ಜಮೀನುಗಳು ಸುಧಾರಿಸಬಹುದು. ಕೆಲವೊಂದು ಜನರು ಸುಧಾರಿಸಬಹುದು ಎಂದರೆ ಇನ್ನು ಕೆಲವೊಂದು ಜನರು ಸುಧಾರಿಸಲು ಸಾಧ್ಯವಿಲ್ಲ ಎನ್ನತ್ತಾರೆ. ಈ ಹಿನ್ನೆಲೆಯಲ್ಲಿ ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೬.೧೬ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧೬

ಸವಳು-ಜವಳು ತೆಗೆಯುವುದರಿಂದ ಜಮೀನುಗಳು ಸುಧಾರಿಸಬಹುದೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೧೩	೫೩.೯೭
೨	ಇಲ್ಲ	೦೫	೦.೮೬
೩	ಸಂಬಂಧವಿಲ್ಲ	೨೬೨	೪೫.೧೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧೬ರಲ್ಲಿ ಸವಳು-ಜವಳು ತೆಗೆಯುವ ಕ್ರಮಗಳಿಂದ ಜಮೀನುಗಳನ್ನು ಸುಧಾರಿಸಬಹುದೆಂದು ಪ್ರತಿಶತ ೫೩.೯೭ರಷ್ಟು ಮಾಹಿತಿದಾರರು ತಿಳಿಸಿದರೆ, ಕೇವಲ ೦.೮೬ರಷ್ಟು ಈ ಜಮೀನುಗಳನ್ನು ಸುಧಾರಿಸಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ.

ಗ್ರಾಮಗಳಲ್ಲಿ ಕೃಷಿಕಾರ್ಮಿಕರ ಸೇವೆಗೆ ಹಣದ ರೂಪದ ಬದಲಿಗೆ ದವಸಧಾನ್ಯಗಳನ್ನು ನೀಡುವ ಪದ್ಧತಿಯು ಹೆಚ್ಚು ಪ್ರಚಲಿತದಲ್ಲಿತ್ತು. ರೈತಾಪಿ ಜನರಲ್ಲಿ ದಿನನಿತ್ಯ ಹಣಕಾಸಿನ ಚಲಾವಣೆ

ಇರುವುದಿಲ್ಲ. ಅದಕ್ಕೆ ಅವರು ತಮ್ಮ ಹೊಲಗದ್ದೆಗಳಲ್ಲಿ ಕೆಲಸಮಾಡುವ ಕೃಷಿ ಕಾರ್ಮಿಕರಿಗೆ ದವಸಧಾನ್ಯಗಳನ್ನು ಕೊಡುತ್ತಾರೆ. ಇದನ್ನು "ಆಯ ಪದ್ಧತಿ" ಅಥವಾ "ಆಯಗಾರ ಪದ್ಧತಿ" ಎಂದು ಕರೆಯುತ್ತಾರೆ. ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೬.೧೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧೭

ಗ್ರಾಮದಲ್ಲಿ ಆಯ ಪದ್ಧತಿ ಇದೆಯಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೩೦	೨೨.೪೧
೨	ಇಲ್ಲ	೪೫೦	೭೭.೫೯
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧೭ರಲ್ಲಿ ಗ್ರಾಮದಲ್ಲಿ ಇನ್ನು ಆಯ ಪದ್ಧತಿ ಇದೆ ಎಂದು ಪ್ರತಿಶತ ೨೨.೪೧ರಷ್ಟು ಮಾಹಿತಿದಾರರು ತಿಳಿಸಿದರೆ, ಶೇಕಡಾ ೭೭.೫೯ರಷ್ಟು ಮಾಹಿತಿದಾರರು ಆಯಾ ಪದ್ಧತಿ ಇಲ್ಲವೆಂದು ತಿಳಿಸುತ್ತಾರೆ. ವಿವಾಹ, ಮರಣಗಳಂತಹ ಪ್ರಸಂಗಗಳಲ್ಲಿ ಇನ್ನು ಕೆಳವರ್ಗದ ಜನರು ಕಾರ್ಯ ನಿರ್ವಹಿಸುತ್ತಾರೆಂದು ತಿಳಿದು ಬರುತ್ತದೆ.

೬.೧ ಜಾನುವಾರುಗಳ ಮೇಲಿನ ಪರಿಣಾಮ :

ಗ್ರಾಮೀಣ ಸಮುದಾಯಗಳಲ್ಲಿ ಪಶುಸಂಗೋಪನೆ ಕೃಷಿಯೇತರ ಆದಾಯ ಮೂಲಗಳಲ್ಲಿ ಒಂದು. ಕೃಷಿ ಅವಲಂಭಿತ ಜನರ ಆದಾಯಗಳು ಆರು ತಿಂಗಳು ಇಲ್ಲವೆ ವರ್ಷಕ್ಕೊಮ್ಮೆ ಬರುತ್ತವೆ. ಇವರು ದಿನನಿತ್ಯದ ಖರ್ಚಿಗಾಗಿ ಪಶುಸಂಗೋಪನೆಯನ್ನು ನೆಚ್ಚಿರುತ್ತಾರೆ. ಇನ್ನು ಉದ್ಯೋಗವನ್ನು ಅವಲಂಭಿಸಿದ ಜನರಿಗೆ ಇದೊಂದು ಉಪಕಸುಬು ಉದ್ಯೋಗಾವಕಾಶಗಳು ಇಲ್ಲದಿದ್ದರೂ ಇವರು ಪಶುಸಂಗೋಪನೆ ಮೇಲೆ ಜೀವನ ಸಾಗಿಸುತ್ತಾರೆ. ಪ್ರವಾಹ ಪಶು ಸಂಗೋಪನೆ ಮೇಲೆಯೂ ಪರಿಣಾಮ ಬೀರಿತು. ಪ್ರವಾಹದಲ್ಲಿ ಏಳು ರೈತರು ತಮ್ಮ ಜಾನುವಾರುಗಳನ್ನು ಕಳೆದುಕೊಂಡರು. ಮೇವಿನ ಕೊರತೆ ಉಂಟಾಗಿ ಬಂದಷ್ಟು ಬೆಲೆಗಳಿಗೆ ಮಾರುಕಟ್ಟೆಗೆ ಸಾಗಿಸಿದರು. ಕೆಲವೊಂದು ಆಹಾರದ ಕೊರತೆಯಿಂದ ಸಾವಿಗೀಡಾದವು. ಹೀಗೆ ಪ್ರವಾಹದಿಂದ ಜಾನುವಾರುಗಳ ಮೇಲಾದ ಪರಿಣಾಮಗಳನ್ನು ಕೆಳಗಿನ ಕೋಷ್ಟಕದಲ್ಲಿ ಪಡೆಯಲಾಗಿದೆ.

ಗ್ರಾಮಗಳಲ್ಲಿ ಪಶುಸಂಗೋಪನೆ ಕೃಷಿಯೇತರ ಆದಾಯದ ಮೂಲ. ಎಷ್ಟು ಕುಟುಂಬಗಳು ಜಾನುವಾರುಗಳನ್ನು ಹೊಂದಿವೆ ಎಂಬುದರ ಮಾಹಿತಿಯನ್ನು ಕೋಷ್ಟಕ ೬.೧.೧ರಲ್ಲಿ ಮಾಹಿತಿದಾರರನ್ನು ವಿಚಾರಿಸಿ ಸಂಗ್ರಹಿಸಲಾಗಿದೆ.

ಕೋಷ್ಟಕ ೬.೧.೧

ಗ್ರಾಮದಲ್ಲಿ ಜಾನುವಾರುಗಳನ್ನು ಹೊಂದಿದ ಕುಟುಂಬಗಳ ಸಂಖ್ಯೆ

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಜಾನುವಾರುಗಳನ್ನು ಹೊಂದಿದವರು	೫೩೩	೯೧.೯೦
೨	ಜಾನುವಾರುಗಳನ್ನು ಹೊಂದದೆ ಇರುವವರು	೪೭	೮.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧.೧ನ್ನು ಗಮನಿಸಿದಾಗ ಪ್ರತಿಶತ ೯೨ರಷ್ಟು ಮಾಹಿತಿದಾರರು ಜಾನುವಾರುಗಳನ್ನು ಹೊಂದಿದ್ದರೆ, ಶೇಕಡಾ ೮ರಷ್ಟು ಮಾತ್ರ ಜಾನುವಾರುಗಳನ್ನು ಹೊಂದಿಲ್ಲ.

ಕೋಷ್ಟಕ ೬.೧.೨

ವಿವಿಧ ಜಾನುವಾರುಗಳ ಮಾಹಿತಿ

ಕ್ರ.ಸಂ	ವಿವಿಧ ಜಾನುವಾರುಗಳು	ಅವುಗಳ ಪ್ರಮಾಣ
೧	ಎಮ್ಮೆ	೪೪೩
೨	ಆಕಳು	೬೫
೩	ಎತ್ತು	೪೬
೪	ಆಡು	೧೨೬
	ಒಟ್ಟು	**೬೮೦**

ಗ್ರಾಮದಲ್ಲಿ ಮಾಹಿತಿದಾರರು ಹೊಂದಿರುವ ಒಟ್ಟು ಜಾನುವಾರುಗಳ ಸಂಖ್ಯೆ ೬೮೦ ಎಂಬುದು ಕೋಷ್ಟಕ ೬.೧.೨ರ ಮುಖಾಂತರ ತಿಳಿಯುತ್ತದೆ.

ನದಿ ತೀರದ ಪ್ರದೇಶಗಳಲ್ಲಿ ಪ್ರವಾಹ ಸಹಜ ಕ್ರಿಯೆ. ಪ್ರವಾಹದ ಮುನ್ಸೂಚನೆ ಹೊರತಾಗಿಯೂ ಜನರು ಗ್ರಾಮ ಬಿಡಲಿಲ್ಲ. ಕೊನೆಯ ಗಳಿಗೆಯಲ್ಲಿ ಗಂಡಾಂತರದ ಮುನ್ಸೂಚನೆ ಕಾರಣ ಗ್ರಾಮ ಬಿಡಬೇಕಾಯಿತು. ಜನರೇ ಪಾರಾಗುವುದು ಕಠಿಣವಾದಾಗ ಜಾನುವಾರುಗಳ ಸಂರಕ್ಷಣೆ ಗಂಭೀರವಾಗಿತ್ತು. ಜಾನುವಾರುಗಳ ಕಾರಣ ಸಾಕಷ್ಟು ಜನರು ಗ್ರಾಮಗಳನ್ನು ಬಿಟ್ಟು

ಹೋಗಲಿಲ್ಲ. ಪ್ರವಾಹ ಸಮಯದಲ್ಲಿ ತಮ್ಮ ಜಾನುವಾರುಗಳ ಕಟ್ಟುವ ವ್ಯವಸ್ಥೆ ಹೇಗೆ ಮಾಡಿಕೊಂಡಿದ್ದರು ಎಂಬುದರ ಕುರಿತು ಅವರಿಂದ ಮಾಹಿತಿ ಪಡೆದು ಕೋಷ್ಟಕ ೬.೧.೩ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೬.೧.೩

ಪ್ರವಾಹ ಸಮಯದಲ್ಲಿ ಜಾನುವಾರುಗಳ ಕಟ್ಟುವ ವ್ಯವಸ್ಥೆ ಎಲ್ಲಿ ಮಾಡಿಕೊಂಡಿದ್ದೀರಿ?

ಕ್ರಸಂ	ಕಟ್ಟುವ ವ್ಯವಸ್ಥೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಸರಕಾರದ ಶೆಡ್‌ಗಳಲ್ಲಿ	೩೩೭	೫೮.೧೦
೨	ಸಂಬಂಧಿಕರಲ್ಲಿ	೧೦೦	೧೭.೨೪
೩	ಗ್ರಾಮದಲ್ಲಿ	೯೬	೧೬.೫೬
೪	ಹೊಂದದೆ ಇರುವವರು	೪೭	೮.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧.೩ರಲ್ಲಿ ಪ್ರತಿಶತ ೫೮.೧೦ರಷ್ಟು ಮಾಹಿತಿದಾರರು ಜಾನುವಾರುಗಳ ಸರಕಾರದ ಶೇಡ್‌ಗಳಲಿದ್ದರೆ, ಶೇಕಡಾ ೧೭.೨೪ರಷ್ಟು ಸಂಬಂಧಿಕರಲ್ಲಿ, ಶೇಕಡಾ ೧೬.೫೬ರಷ್ಟು ಅದೇ ಗ್ರಾಮದಲ್ಲಿ, ಶೇಕಡಾ ೮.೧೦ರಷ್ಟು ಜನ ಜಾನುವಾರುಗಳನ್ನು ಹೊಂದದವರು ಇರುವುದು ತಿಳಿದು ಬರುತ್ತದೆ.

ಸರಕಾರಕ್ಕೆ ಸಂತ್ರಸ್ತರಿಗೆ ತತ್ಕಾಲಿಕ ಪುನರ್ವಸತಿ ಒದಗಿಸುವುದು ಹರ ಸಾಹಸದ ಕೆಲಸ. ಆದರೆ ಗ್ರಾಮೀಣ ಜನರಿಗೆ ಜಾನುವಾರುಗಳೇ ಜೀವಾಳ. ಸಂತ್ರಸ್ತರು ತಮಗಿಂತಲೂ ಜಾನುವಾರುಗಳಿಗೆ ಆಶ್ರಯ ಅವಶ್ಯಕ ಎನ್ನುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ ಸರಕಾರ ಯಾವ ಕ್ರಮ ಕೈಕೊಂಡಿತ್ತು ಎಂಬುದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೬.೧.೪ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧.೪

ಸರಕಾರದ ತಾತ್ಕಾಲಿಕ ಶೆಡ್‌ಗಳಲ್ಲಿ ಜಾನುವಾರುಗಳನ್ನು ಕಟ್ಟಲು ವ್ಯವಸ್ಥೆ ಇತ್ತೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೦೭	೧.೨೦
೨	ಇಲ್ಲ	೩೩೦	೫೬.೯೦
೩	ಇನ್ನುಳಿದವರು	೨೪೩	೪೧.೯೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧.೪ರಲ್ಲಿ ಪ್ರತಿಶತ ೫೬.೫೦ರಷ್ಟು ಮಾಹಿತಿದಾರರು ಸರಕಾರ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳಲ್ಲಿ ತಮ್ಮ ಜಾನುವಾರುಗಳನ್ನು ಕಟ್ಟಲು ವ್ಯವಸ್ಥೆ ಇರಲಿಲ್ಲವೆಂದರೆ, ಶೇಕಡಾ ೧.೨೦ರಷ್ಟು ಮಾತ್ರ ಕಟ್ಟಲು ವ್ಯವಸ್ಥೆ ಇತ್ತು ಎಂದು ತಿಳಿಸಿದರು. ಇನ್ನುಳಿದ ಪ್ರತಿಶತ ೪೧.೯೦ರಷ್ಟು ಮಾಹಿತಿದಾರರು ಸಂಬಂಧಿಕರ ಮನೆಗಳಲ್ಲಿ, ಅದೇ ಗ್ರಾಮದಲ್ಲಿ ವ್ಯವಸ್ಥೆ ಮಾಡಿಕೊಂಡಿರುವುದು ತಿಳಿಯುತ್ತದೆ. ಅದೇ ಗ್ರಾಮದಲ್ಲಿ ಜಾನುವಾರುಗಳನ್ನು ಹೊಂದದ ಮಾಹಿತಿದಾರರು ತಮಗೇನು ತಿಳಿದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ತಿಳಿದು ಬರುತ್ತದೆ.

ಪ್ರವಾಹ ಸಂದರ್ಭದಲ್ಲಿ ಸರ್ಕಾರ ಜನರಿಗೆ ಗಂಜಿ ಕೇಂದ್ರಗಳನ್ನು ತೆರೆದಿತ್ತು. ಅದರಂತೆ ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಕೂಡಾ ಮಾಡಿತ್ತು. ಆ ವ್ಯವಸ್ಥೆ ಹೇಗಿತ್ತು ಎಂದು ತಿಳಿದುಕೊಳ್ಳಲು ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿಯನ್ನು ಕೋಷ್ಟಕ ೬.೧.೫ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೬.೧.೫

ತಾತ್ಕಾಲಿಕ ಶೆಡ್‌ಗಳಲ್ಲಿ ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಸರಿಯಾಗಿತ್ತೇ?

ಕ್ರಸಂ	ಪ್ರತಿಕ್ರಿಯೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧	ಹೌದು	೨೩೮	೪೧.೦೩
೨	ಇಲ್ಲ	೯೯	೧೭.೦೭
೩	ತಿಳಿದಿಲ್ಲ	೨೪೩	೪೧.೯೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧.೫ನ್ನು ಅವಲೋಕಿಸಿದಾಗ ಪ್ರತಿಶತ ೪೧.೦೩ರಷ್ಟು ಮಾಹಿತಿದಾರರು ಸ್ಥಳಾಂತರದ ಸಮಯದಲ್ಲಿ ಸರಕಾರ ದನ-ಕರುಗಳಿಗೆ ಮೇವಿನ ವ್ಯವಸ್ಥೆ ಸರಿಯಾಗಿತ್ತು ಎಂದು

ತಿಳಿಸಿದರೆ, ಶೇಕಡಾ ೧೭.೦೭ರಷ್ಟು ಮಾತ್ರ ಮೇವಿನ ವ್ಯವಸ್ಥೆ ಸರಿಯಾಗಿರಲಿಲ್ಲವೆಂದು ತಿಳಿಸುತ್ತಾರೆ. ಇನ್ನುಳಿದ ೪೧.೯೦ರಷ್ಟು ಮಾಹಿತಿದಾರರು ತಮಗೇನು ತಿಳಿದಿಲ್ಲವೆಂಬ ಅಭಿಪ್ರಾಯವನ್ನು ತಿಳಿಸಿರುವುದು ಕಂಡು ಬರುತ್ತದೆ.

ಪ್ರವಾಹ ಜಾನುವಾರುಗಳ ಆರೋಗ್ಯದ ಮೇಲೂ ಪರಿಣಾಮ ಬೀರಿತ್ತು. ಧಾರಾಕಾರವಾಗಿ ಸುರಿಯುತ್ತಿರುವ ಮಳೆ, ಉಕ್ಕಿ ಹರಿಯುತ್ತಿರುವ ಹಳ್ಳ-ಕೊಳ್ಳಗಳಿಂದ ಜಾನುವಾರುಗಳು ಹೊಟ್ಟೆ ತುಂಬ ಹುಲ್ಲು, ಕಣಿಕೆಗಳಿಲ್ಲದೇ ನರಳುವಂತಾಯಿತು. ಈ ನರಳುವಿಕೆ ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದೆಯೇ ಎಂಬ ವಿಚಾರದಿಂದ ಮಾಹಿತಿದಾರರನ್ನು ವಿಚಾರಿಸಿ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೫.೧.೬ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧.೬

ಜಾನುವಾರುಗಳಿಗೆ ರೋಗ ರುಜನುಗಳು ಬಂದಿದ್ದವಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೨೪೩	೪೧.೯೦
೨	ಇಲ್ಲ	೯೪	೧೬.೨೦
೩	ತಿಳಿದಿಲ್ಲ	೨೪೩	೪೧.೯೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೧.೬ರಲ್ಲಿ ಪ್ರತಿಶತ ೪೧.೯೦ರಷ್ಟು ಮಾಹಿತಿದಾರರು ಪ್ರವಾಹದ ಸಮಯದಲ್ಲಿ ತಮ್ಮ ಜಾನುವಾರುಗಳಿಗೆ ರೋಗಗಳು ಬಂದಿದ್ದವು ಎಂದರೆ, ಶೇಕಡಾ ೧೬.೨೦ರಷ್ಟು ಯಾವುದೇ ರೋಗಗಳು ತಗಲಿರಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ ಪ್ರತಶತ ೪೧.೯೦ರಷ್ಟು ಮಾಹಿತಿದಾರರು ರೋಗರುಜುನಿಗಳು ತಗಲಿರುವುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿರುವುದು ಕಂಡು ಬರುತ್ತದೆ.

ಪ್ರವಾಹ ಸಂದರ್ಭದಲ್ಲಿ ಸರಕಾರ ಜನರ ಆರೋಗ್ಯ ಕಾಪಾಡುವುದು ಎಷ್ಟು ಮುಖ್ಯವೋ ಅಷ್ಟೇ ಜಾನುವಾರುಗಳ ಆರೋಗ್ಯ ಕಾಪಾಡುವುದು ಕೂಡಾ ಪ್ರಮುಖವಾಗಿದೆ. ಜಾನುವಾರುಗಳು ರೈತರ ಒಡನಾಡಿಗಳು. ಜೊತೆಗೆ ಕೃಷಿ ಬದಲಿ ಮೂಲ ಆದಾಯಗಳಾಗಿವೆ. ಸಂತ್ರಸ್ತರ ಜಾನುವಾರುಗಳ ಆರೋಗ್ಯ ಕಾಪಾಡಲು ಸರಕಾರವು ಕ್ರಮ ಕೈಗೊಂಡಿತ್ತೇ ಎಂಬ ವಿಷಯವನ್ನು ತಿಳಿಯಲು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೬.೧.೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೬.೧.೭

ಜಾನುವಾರುಗಳ ಆರೋಗ್ಯ ನಿರ್ವಹಣೆಗೆ ಸರಕಾರ ಕ್ರಮ ಕೈಗೊಂಡಿತ್ತೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೦೫	೮೭.೦೭
೨	ಇಲ್ಲ	೭೫	೧೨.೯೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೧.೭ನ್ನು ಗಮನಿಸಿದಾಗ ಪ್ರತಿಶತ ೮೭.೦೭ರಷ್ಟು ಮಾಹಿತಿದಾರರು ಸರಕಾರ ಜಾನುವಾರುಗಳ ಆರೋಗ್ಯ ನಿರ್ವಹಣೆಗೆ ಕ್ರಮ ಕೈಗೊಂಡಿತ್ತೆಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಶೇಕಡಾ ೧೨.೫೩ರಷ್ಟು ಮಾಹಿತಿದಾರರು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ತಿಳಿಸಿರುವುದು ವ್ಯಕ್ತವಾಗುತ್ತದೆ.

ಪ್ರವಾಹದ ಸಮಯದಲ್ಲಿ ಖವಟಕೊಪ್ಪ ಗ್ರಾಮದ ಜನತೆಗೆ ಶಂಕರಹಟ್ಟಿ ಗ್ರಾಮದಲ್ಲಿ ಸರಕಾರ ತಾತ್ಕಾಲಿಕ ಶೆಡ್ ವ್ಯವಸ್ಥೆಯನ್ನು ಮಾಡಿತ್ತು. ಇಲ್ಲಿ ಪಶು ವೈದ್ಯಕೀಯ ದವಾಖಾನೆಯೂ ಇದೆ. ಇದರ ಮೇಲ್ವಿಚಾರಣೆಗೆ ಸರಕಾರ ಪಶು ವೈದ್ಯಧಿಕಾರಿಗಳನ್ನು ನಿಯಮಿಸಿತ್ತು. ಕಾರಣ ಪಶು ವೈದ್ಯರ ದಿನನಿತ್ಯದ ಭೇಟಿಯ ಕುರಿತು ಮಾಹಿತಿದಾರರೊಂದಿಗೆ ವಿಚಾರಿಸಿ ಅವರಿಂದ ಮಾಹಿತಿಯನ್ನು ಪಡೆಯಲಾಗಿ, ಪ್ರತಿಶತ ೩೬.೭೨ರಷ್ಟು ಮಾಹಿತಿದಾರರು ಪಶುವೈದ್ಯರು ತಮ್ಮ ಬಳಿ ನಿರಂತರ ಭೇಟಿಗಾಗಿ ಬರುತ್ತಿದ್ದರು ಎಂದು ಹೇಳಿದರೆ ಶೇಕಡಾ ೨೧.೩೮ರಷ್ಟು ಮಾಹಿತಿದಾರರು ಬರುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಶೇ ೪೧.೯೦ರಷ್ಟು ಮಾಹಿತಿದಾರರು ತಮಗೆನು ತಿಳಿದಿಲ್ಲವೆಂದರು.

ಸರಕಾರ ಪ್ರವಾಹ ಸಮಯದಲ್ಲಿ ಬಾಧಿತ ಪ್ರದೇಶಗಳಿಗೆ ಪಶು ವೈದ್ಯರನ್ನು ನಿಯಮಿಸುವುದರ ಜೊತೆಗೆ ಔಷದೋಪಚಾರಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಿತ್ತು. ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ಸಾಕಷ್ಟು ಕ್ರೀಯಾಶೀಲವಾಗಿ ಕೆಲಸ ಮಾಡಿದ್ದವು. ಈ ಹಿನ್ನೆಲೆಯಲ್ಲಿ ಮಾಹಿತಿದಾರರನ್ನು ಔಷಧೋಪಚಾರಗಳ ಪೂರೈಕೆ ಕುರಿತು ವಿಚಾರಿಸಿ ಅವರಿಂದ ಬಂದ ಅಭಿಪ್ರಾಯಗಳನ್ನು ಕೋಷ್ಟಕ ೬.೧.೮ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಠಕ ೬.೧.೮

ಔಷದೋಪಚಾರಗಳ ಪೂರೈಕೆ ಸರಿಯಾಗಿ ಇತ್ತೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೪೩೫	೭೫.೦೦
೨	ಇಲ್ಲ	೧೪೨	೨೫.೦೦
	ಒಟ್ಟು	೫೮೦	೧೦೦.೦೦

ಕೋಷ್ಠಕ ೬.೧.೮ರಲ್ಲಿ ಪ್ರತಿಶತ ೭೫.೦೦ರಷ್ಟು ಮಾಹಿತಿದಾರರು ಪ್ರವಾಹದ ಸಮಯದಲ್ಲಿ ಔಷದೋಪಚಾರಗಳ ಪೂರೈಕೆ ಸರಿಯಾಗಿ ಇತ್ತು ಎಂದರೆ, ಉಳಿದ ಶೇಕಡಾ ೨೫.೦೦ರಷ್ಟು ಮಾಹಿತಿದಾರರು ಸರಿಯಾಗಿ ಇರಲಿಲ್ಲವೆಂದು ತಿಳಿಸುತ್ತಾರೆ.

ಪ್ರವಾಹದಿಂದ ಪ್ರಾಣ ಹಾನಿ, ವಿತ್ತ ಹಾನಿಗಳಾದವು. ಸರಕಾರ ಜಾನುವಾರುಗಳ ಪ್ರಾಣ ಹಾನಿಗೆ ಹಣ ಖರ್ಚು ಮಾಡಿದೆ. ಈ ಗ್ರಾಮದಲ್ಲಿಯ ಸಂತ್ರಸ್ತರು ತಮ್ಮ ಜಾನುವಾರುಗಳನ್ನೇನಾದರು ಕಳೆದುಕೊಂಡಿದ್ದಾರೆಯೇ ಎಂಬುದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಕಲೆ ಹಾಕಲಾಗಿ ಪ್ರತಿಶತ ೧.೨೧ರಷ್ಟು ಮಾಹಿತಿದಾರರು ಜಾನುವಾರುಗಳನ್ನು ಕಳೆದುಕೊಂಡಿದ್ದೇವೆ ಎಂದು ಹೇಳಿದರೆ, ಇನ್ನುಳಿದ ಪ್ರತಿಶತ ೯೮.೭೯ರಷ್ಟು ಮಾಹಿತಿದಾರರು ಯಾವುದೇ ತಮ್ಮ ಜಾನುವಾರುಗಳ ಪ್ರಾಣ ಹಾನಿಯಾಗಿಲ್ಲವೆಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣ ಅವರು ಎತ್ತರ ಪ್ರದೇಶಗಳಲ್ಲಿ ಮತ್ತು ಊರಿನ ಮಧ್ಯಭಾಗದಲ್ಲಿ ವಾಸಿಸುತ್ತಿರುವುದು ಕಾರಣವಾಗಿದೆ. ೨೦೦೫ರಲ್ಲಿ ಏಳು ಜಾನುವಾರುಗಳನ್ನು ಕಳೆದುಕೊಂಡ ವರದಿ ಕಾಣುತ್ತೇವೆ.

ನೈಸರ್ಗಿಕ ದುರಂತಗಳು ಸಂಭವಿಸಿದಾಗ ಆಸ್ತಿ-ಪಾಸ್ತಿ, ಮನೆ-ಮಠ, ಜಾನುವಾರುಗಳಿಗೆ ತೊಂದರೆಯಾಗುವುದು ಸಹಜ. ಅದರಂತೆ ಪ್ರವಾಹ ಸಂದರ್ಭದಲ್ಲಿ ಅನೇಕ ಜಾನುವಾರುಗಳು ನೀರಿಗೆ ಆಹುತಿಯಾದವು. ಇದರಿಂದ ಸಾಕಷ್ಟು ರೈತರಿಗೆ ಹಾನಿಯಾಯಿತು. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರನ್ನು ಸಂದರ್ಶಿಸಿ ಕಳೆದುಕೊಂಡ ಜಾನುವಾರಗಳ ಹಾನಿ ಮೌಲ್ಯವೆಷ್ಟು? ಎಂದು ವಿಚಾರಿಸಿದಾಗ, ಪ್ರತಿಶತ ೦.೧೭ ಮಾಹಿತಿದಾರರು ಜಾನುವಾರುಗಳ ಮೌಲ್ಯ ೧ ರಿಂದ ಹತ್ತು ಸಾವಿರ ಎಂದು ಹಾಗೂ ಪ್ರತಿಶತ ೧.೦೪ ಮಾಹಿತಿದಾರರು ೧೧ ಸಾವಿರ ಮೇಲ್ಪಟ್ಟು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ ಜಾನುವಾರುಗಳ ಪ್ರಾಣ ಹಾನಿಗೆ ಪರಿಹಾರ ನೀಡಿದೆ. ಅದರಂತೆ ಖವಟಕೊಪ್ಪ ಗ್ರಾಮದಲ್ಲಿಯೂ ಜಾನುವಾರುಗಳ ಪ್ರಾಣ ಹಾನಿಗೆ ಪರಿಹಾರ ನೀಡಲಾಗಿದೆ. ಕಾರಣ ಜಾನುವಾರುಗಳನ್ನು ಕಳೆದುಕೊಂಡವರಿಗೆ ಪರಿಹಾರ ದೊರಕಿದೆಯೋ ಇಲ್ಲವೋ ಎಂಬುದರ

ಕುರಿತು ಮಾಹಿತಿದಾರರನ್ನು ಕೇಳಿ ಅವರಿಂದ ಬಂದ ಅಭಿಪ್ರಾಯಗಳನ್ನು ಪಡೆಯಲಾಗಿ, ಪ್ರತಿಶತ ೦.೩೫ ಜಾನುವಾರುಗಳ ಪ್ರಾಣಹಾನಿಗೆ ಪರಿಹಾರ ದೊರಕಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆ ಉಳಿದ ಪ್ರತಿಶತ ೦.೮೬ ಜನರು ಪರಿಹಾರ ದೊರೆತಿಲ್ಲ ಎಂದು ಹೇಳಿರುವುದು ಕಂಡು ಬರುತ್ತದೆ.

ಪ್ರವಾಹದ ಆರ್ಥಿಕ ಪರಿಣಾಮಗಳು ಭಯಾನಕವಾದವುಗಳು. ಆರ್ಥಿಕ ಪರಿಣಾಮಗಳನ್ನು ತಿಳಿಯಲು ೨೮ ಪ್ರಶ್ನೆಗಳು ಮತ್ತು ಜಾನುವಾರುಗಳು ಮೇಲಿನ ಪರಿಣಾಮ ತಿಳಿಯಲು ೧೧ ಪ್ರಶ್ನೆಗಳಿವೆ. ಇವುಗಳ ಮೂಲಕ ಗ್ರಾಮದ ಮೇಲಾದ ಆರ್ಥಿಕ ಪರಿಣಾಮಗಳನ್ನು ಅವಲೋಕಿಸಲಾಗಿದೆ.

೧) ಗ್ರಾಮ ಶೇಕಡಾ ನೂರರಷ್ಟು ನೀರಾವರಿ ಪ್ರದೇಶ ಹೊಂದಿದ್ದು ಕಬ್ಬು ಪ್ರಮುಖವಾದ ಬೆಳೆ ದೀರ್ಘಾವಧಿ ಪ್ರವಾಹದ ಕಾರಣ ಕಬ್ಬಿನ ಬೆಳೆ ನಾಶವಾಗಿರುವುದು ತಿಳಿಯುತ್ತದೆ.

೨) ಪ್ರವಾಹ ಮತ್ತು ಅತಿಯಾದ ನೀರಿನ ಬಳಕೆಯಿಂದ ಜಮೀನುಗಳು ಫಲವತ್ತತೆ ಕಳೆದುಕೊಳ್ಳುತ್ತಿವೆ.

೩) ಶೇಕಡಾ ೪೦ರಷ್ಟು ಜಮೀನುಗಳು ಜವಳಾಗಿರುವುದು ತಿಳಿಯುತ್ತದೆ.

೪) ಪ್ರವಾಹದಿಂದ ಬಾಧಿತವಾಗುವ ಜಮೀನುಗಳ ಸಮೀಕ್ಷೆ ಕಾರ್ಯ ಸಮರ್ಪಕವಾಗಿಲ್ಲದಿರುವುದು ತಿಳಿಯುತ್ತದೆ.

೫) ಜನರ ಆದಾಯದ ಮೇಲೆ ಪರಿಣಾಮ ಬೀರಿರುವುದು ತಿಳಿಯುತ್ತದೆ.

೬) ಸಂತ್ರಸ್ತರು ನಿರುದ್ಯೋಗ ಸಮಸ್ಯೆ ಎದುರಿಸಿರುವುದನ್ನು ಕಾಣಬಹುದು.

೭) ನಿರುದ್ಯೋಗಕ್ಕೆ ಸರಕಾರ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಕಂಡುಕೊಳ್ಳಬಹುದು.

೮) ಪ್ರವಾಹ ಸಂತ್ರಸ್ತರನ್ನು ಸಾಲಗಾರರನ್ನಾಗಿ ಮಾಡುವುದನ್ನು ಗಮನಿಸಬಹುದು.

೯) ಗ್ರಾಮದ ಸವಳು-ಜವಳು ತೆಗೆಯಲು ಸರಕಾರ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಕಂಡುಕೊಳ್ಳಲಾಗಿದೆ.

೧೦) ಪ್ರವಾಹದ ಸಮಯದಲ್ಲಿ ಜಾನುವಾರುಗಳನ್ನು ಕಟ್ಟಲು, ಮೇವಿನ ಪೂರೈಕೆ ಮುಂತಾದ ಸಮಸ್ಯೆಗಳನ್ನು ಎದುರಿಸಿರುವುದು ತಿಳಿಯುತ್ತದೆ.

****

ಅಧ್ಯಾಯ : ಏಳು

ಪ್ರವಾಹ ಸೃಷ್ಟಿಸಿದ ಪರಿಸರ ಸಂಬಂಧಿತ ಸಮಸ್ಯೆಗಳು

ಅಧ್ಯಾಯ : ಏಳು

ಪ್ರವಾಹ ಸೃಷ್ಟಿಸಿದ ಪರಿಸರ ಸಂಬಂಧಿತ ಸಮಸ್ಯೆಗಳು

ಪ್ರವಾಹ ಗ್ರಾಮದ ಭೂಪ್ರದೇಶ ಮತ್ತು ಪರಿಸರಗಳ ಮೇಲೂ ಪ್ರಭಾವ ಬೀರುವುದು. ಭೌಗೋಳಿಕ ಅಂಶಗಳಾದ ನದಿಯ ಪಾತ್ರದಲ್ಲಿಯ ಬದಲಾವಣೆ, ಭೂಮಿಯ ಕೊರೆತ, ಜಮೀನುಗಳು ಉಪ್ಪೇರುವುದು, ಹುಲ್ಲುಗಾವಲುಗಳ ನಾಶ, ನದಿ ಪಾತ್ರದ ಬದಲಾವಣೆಯಿಂದ ನದಿಯ ದಡದಲ್ಲಿರುವ ಪಂಪಸೆಟ್‌ಗಳಿಗೆ ಹಾನಿ, ಸೇತುವೆಗಳಿಗೆ ಹಾನಿ, ರಸ್ತೆಗಳ ನಾಶ, ಕಟ್ಟಡಗಳ ನಾಶ ಮುಂತಾದ ಅಂಶಗಳ ಸಮೀಕ್ಷೆಯನ್ನು ಈ ಅಧ್ಯಾಯ ಒಳಗೊಂಡಿದೆ.

೨೦೦೫ರಲ್ಲಿ ಕೊಂಕಣ ಪ್ರದೇಶದಲ್ಲಿ ವಿಪರೀತ ಮಳೆಯಾದ ಕಾರಣ ಮಹಾರಾಷ್ಟ್ರದ ಎಲ್ಲ ಅಣೆಕಟ್ಟುಗಳು ತುಂಬಿ ಹೋದವು. ಮಹಾರಾಷ್ಟ್ರ ಸರಕಾರ ಸದ್ದಿಲ್ಲದೆ ಅಣೆಕಟ್ಟುಗಳಲ್ಲಿ ತುಂಬಿದ ನೀರನ್ನು ಮುನ್ಸೂಚನೆ ನೀಡದೆ ಲಕ್ಷ ಲಕ್ಷ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡಲು ಪ್ರಾರಂಭಿಸಿತು. ನದಿ ಪಾತ್ರಗಳ ವಿಸ್ತಾರ ಕಡಿಮೆ ಇರುವ ಕಾರಣ ಬಿಟ್ಟ ಎಲ್ಲ ನೀರು ನದಿಗಳಲ್ಲಿ ಸರಿಯಾಗಿ ಹರಿಯದೇ ನದಿ ಪಾತ್ರ ವಿಶಾಲವಾಯಿತು. ಇದರಿಂದ ಈ ಭಾಗದ ಗ್ರಾಮಗಳು ನೀರಿನಲ್ಲಿ ತೇಲಾಡುವಂತಾಯಿತು. ಜಮೀನುಗಳಲ್ಲಿಯ ಬೆಳೆಗಳು ನಾಶವಾದವು. ಹುಲ್ಲುಗಾವಲು ನದಿಗೆ ಕೊಚ್ಚಿಕೊಂಡು ಹೋಯಿತು. ನದಿ ದಂಡೆಗಳಲ್ಲಿನ ನೀರಾವರಿ ಪಂಪಸೆಟ್‌ಗಳು ನದಿ ಪಾಲಾದವು. ಗಿಡಮರಗಳು ಉರುಳಿದವು. ಹಳ್ಳ ನಾಲೆಗಳು ತುಂಬಿಕೊಂಡು ಭೂಮಿ ಕೊಚ್ಚಿಕೊಂಡು ಹೋಗುವಂತೆ ಮಾಡಿದವು. ತಿಪ್ಪೆ ಗುಂಡಿಗಳು ನೀರಲ್ಲಿ ತೇಲಾಡಿದವು. ಊರಲ್ಲಿಯ ಹಾಳ ಹಗೆಗಳು ಬಿದ್ದವು. ಊರ ಸುತ್ತಲಿನ ಗುಂಡಿಗಳಲ್ಲಿ ನೀರು ತುಂಬಿದವು. ಊರ ಸುತ್ತಮುತ್ತಲು ನೀರು ನಿಂತು ಭೌತಿಕ ಪರಿಸರ ಕೆಟ್ಟು ಹೋಯಿತು. ಗುಂಡಿಗಳಲ್ಲಿ ನೀರು ನಿಂತ ಕಾರಣ ಸೊಳ್ಳೆಗಳ ಕಾಟ ಹೆಚ್ಚಿಗಾಯಿತು. ಊರ ಸುತ್ತಮುತ್ತ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಕೆಳಜಾತಿಯ ಜನರ ಸ್ಥಿತಿ ಚಿಂತಾಜನಕವಾಯಿತು. ಅವರ ವಾಸಸ್ಥಳಗಳು ನೀರಿನಿಂದ ಮುಕ್ತವಾಗಿ ವಾಸಿಸಲಿಕ್ಕೆ ಯೋಗ್ಯವಾಗಬೇಕಾದರೆ ಐದರಿಂದ ಆರು ತಿಂಗಳ ಬೇಕಾಯಿತು. ಅದಕ್ಕಾಗಿಯೇ

ಊರ ಹೊರಗಡೆ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರು ನಮ್ಮನ್ನು ಮೊದಲು ಊರು ಬಿಡಿಸಿರಿ, ನಮಗೆ ಎಲ್ಲಿಯಾದರೂ ಸ್ಥಳ ಕೊಡಿರಿ ಎಂದು ಕೇಳುತ್ತಿದ್ದಾರೆ. ಒಬ್ಬ ಮುಸ್ಲಿಂ ಮಹಿಳೆ ಎತ್ತರ ಮ್ಯಾಗ ಮನಿ ಇದ್ದವರು ಊರಾಗ ಇರ್ಲಿ ಆದರೆ ಹೊಳಿ ಬಾಯಾಗ ಇರುವ ನಮಗೆ ಬ್ಯಾರೆ ಊರಾಗ ಮನೆ ಕಟ್ಟಿಕೊಳ್ಳಲಿಕ್ಕೆ ಜಾಗ ಕೊಟ್ಟರೆ ಒಳ್ಳೆಯದು' ಎನ್ನುತ್ತಾರೆ. ಜಮೀನುಗಳು ಇದ್ದವರು ಕೂಡ 'ನಾವರೆ ಎನ ಊರಾಗ ಇದ್ದ ಮಣ್ಣು ತಿನ್ನುದ ಐತೆನ್ರಿ, ಬೇಗನೆ ನಮಗ ಎಲ್ಲೇರೆ ಜಾಗ ಕೊಡಿಸಿದ್ರ ಒಳ್ಳೆಯದು ಎನ್ನುತ್ತಾರೆ. ಕೆಲವೊಂದು ಜನರು 'ಮನೆಗಳಿಗೆ ಮಾತ್ರ ಪರಿಹಾರ ಕೊಟ್ರ ಏನಾತು ಹೊಲಗಳಿಗೂ ಸರಕಾರ ಪರಿಹಾರ ಕೊಡಬೇಕು' ಎನ್ನುತ್ತಾರೆ.

ಈ ಮೇಲಿನ ಮಾಹಿತಿಗಳನ್ನು ಆಧರಿಸಿ ಪ್ರವಾಹದಿಂದಾದ ಪರಿಸರ ಸಂಬಂಧಿತ ಪರಿಣಾಮವನ್ನು ತಿಳಿದುಕೊಳ್ಳಲು ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಸಮೂಹ ಜೀವನದಲ್ಲಿ ನದಿಯ ಪಾತ್ರ ಬಹುಮುಖ್ಯವಾದದ್ದು. ಈ ಕಾರಣದಿಂದಲೇ ಜನರು ನೀರಿನ ಅನುಕೂಲಕ್ಕಾಗಿ ನದಿ ದಂಡೆಗಳ ಮೇಲೆ ಇಲ್ಲವೆ ನದಿಗಳ ಸಮೀಪ ತಮ್ಮ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ. ಆದರೆ ಈ ನದಿಗಳು ಹಿಂದಿನ ಕಾಲದಲ್ಲಿ ಅಷ್ಟೊಂದು ಹಾನಿಯನ್ನುಂಟು ಮಾಡುತ್ತಿರಲಿಲ್ಲ. ಇತ್ತೀಚಿನ ನದಿಗಳಲ್ಲಿ ಹೂಳು ತುಂಬಿಕೊಂಡಿರುವುದು ಅಲ್ಲದೆ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸಿದ್ದಾರೆ. ಈ ಅಣೆಕಟ್ಟುಗಳಿಂದ ನದಿ ಪಾತ್ರಗಳಿಗೆ ಅನಿಯಂತ್ರಿತ ನೀರು ಬಿಟ್ಟಾಗ, ವಿಪರೀತ ಮಳೆಯಾದಾಗ, ನದಿಗಳಲ್ಲಿ ಹೂಳು ತುಂಬಿದ ಕಾರಣ ಅವುಗಳ ಹರಿವು ವಿಸ್ತಾರವಾಗುತ್ತದೆ. ಇದರಿಂದ ಪ್ರವಾಹ ಉಂಟಾಗಿ ಸಾಕಷ್ಟು ಹಾನಿ ಸಂಭವಿಸುತ್ತದೆ. ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ನದಿ ಪಾತ್ರ ಬದಲಾವಣೆಯಾಗುತ್ತಿರುವ ಕುರಿತು ಮಾಹಿತಿ ಸಂಗ್ರಹಿಸಿ ಕೋಷ್ಟಕ ೭.೧ರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೭.೧

ಪ್ರವಾಹದಿಂದ ನದಿ ಪಾತ್ರ ಬದಲಾವಣೆಯಾಗಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೪೬೮	೯೭.೯೩
೨	ಇಲ್ಲ	೧೨	೨.೦೭
	ಒಟ್ಟು	೪೮೦	೧೦೦.೦೦

ಕೋಷ್ಟಕ ೭.೧ರಲ್ಲಿ ಮಾಹಿತಿದಾರರ ಮಾಹಿತಿಯನ್ನು ಗಮನಿಸಿದಾಗ ಪ್ರತಿಶತ ೯೮ರಷ್ಟು ಮಾಹಿತಿದಾರರು ನದಿ ಪಾತ್ರದಲ್ಲಿ ಬದಲಾವಣೆಯಾಗಿದೆಯೆಂದರೆ ಉಳಿದ ಶೇಕಡ ೨ರಷ್ಟು

ಮಾತ್ರ ಯಾವುದೇ ಬದಲಾವಣೆಯಾಗಿಲ್ಲವೆಂದರು. ಇದರಿಂದ ಪ್ರವಾಹ ನದಿ ಹರಿಯುವ ದಿಕ್ಕಿನಲ್ಲಿ ಬದಲಾವಣೆ ಉಂಟು ಮಾಡಿದೆ ಎಂದು ಕಂಡು ಬರುತ್ತದೆ.

ಪ್ರತಿವರ್ಷ ಮಳೆಗಾಲದ ಅವಧಿಯಲ್ಲಿ ನದಿಗಳು ತುಂಬಿ ಹರಿಯುವುದು ಸರ್ವೆ ಸಾಮಾನ್ಯವಾದ ಸಂಗತಿ. ನೀರಿನ ರಭಸ ಅಷ್ಟೊಂದು ತೀವ್ರವಾಗಿ ಇಲ್ಲದಿರುವ ಕಾರಣ ನದಿ ದಡಗಳು ಕತ್ತರಿಸಿಕೊಂಡು ಹೋಗುತ್ತಿರಲಿಲ್ಲ. ಅಲ್ಲದೆ ಆ ಪ್ರವಾಹ ಒಂದೆರಡು ದಿನಗಳಲ್ಲಿ ಪುನಃ ಸಹಜ ಸ್ಥಿತಿಗೆ ಬರುತ್ತಿತ್ತು. ಆದರೆ ೨೦೦೫ ಮತ್ತು ೨೦೦೬ರಲ್ಲಿ ಪ್ರವಾಹದಿಂದ ನದಿಗಳಲ್ಲಿ ನೀರು ಬಹುದಿನಗಳವರೆಗೆ ರಭಸದಿಂದ ಕೂಡಿರುವ ಕಾರಣ ನದಿ ದಡಗಳು ನೆನೆದು ಕತ್ತರಿಸಿಕೊಂಡು ಹೋದವು. ಈ ನಿಟ್ಟಿನಲ್ಲಿ ಮಾಹಿತಿದಾರರನ್ನು ಪ್ರವಾಹದಿಂದ ನದಿದಡ ಕೊಚ್ಚಿ ಹೋಗಿದೆಯೇ? ಎಂದು ಪ್ರಶ್ನಿಸಿದಾಗ, ಪ್ರತಿಶತ ೫.೭೯ರಷ್ಟು ಮಾಹಿತಿದಾರರು ಪ್ರವಾಹದಿಂದ ನದಿ ದಡ ಕೊಚ್ಚಿ ಹೋಗಿದೆಯೆಂದು ತಿಳಿಸಿದರೆ, ಶೇಕಡಾ ಒಂದರಷ್ಟು ಮಾಹಿತಿದಾರರು ನದಿ ದಡ ಕೊಚ್ಚಿ ಹೋಗಿಲ್ಲವೆಂದು ತಿಳಿಸಿದರು. ಇದರಿಂದ ಪ್ರವಾಹದಿಂದ ನದಿ ದಡ ಕೊಚ್ಚಿ ಹೋಗುತ್ತಿದೆ ಎಂಬುದು ತಿಳಿಯುತ್ತದೆ.

ಪ್ರವಾಹ ದೀರ್ಘಕಾಲದವರೆಗೆ ಕಂಡು ಬಂದ ಕಾರಣ ನದಿ ದಡಗಳು ನೆನೆದು ಕುಸಿದು ಬಿದ್ದವು. ಇದರಿಂದ ನದಿ ದಡಗಳ ಪಾತ್ರದಲ್ಲಿ ಏರುಪೇರಾಯಿತು. ನದಿ ದಡಗಳು ಯಾವ ಪ್ರಮಾಣದಲ್ಲಿ ಕೊಚ್ಚಿ ಹೋದವು ಎಂಬ ಸತ್ಯವನ್ನು ತಿಳಿಯಲು ಮಾಹಿತಿದಾರರನ್ನು ವಿಚಾರಿಸಿ ಇದರ ಕುರಿತು ಮಾಹಿತಿದಾರರ ಅಭಿಪ್ರಾಯಗಳನ್ನು ಕೂಡಿ ಹಾಕಲಾಯಿತು. ಈ ಮಾಹಿತಿಯನ್ನು ಕೋಷ್ಟಕ ೭.೨ರಲ್ಲಿ ಕಾಣಬಹುದು.

ಕೋಷ್ಟಕ ೭.೨

ನದಿ ಪಾತ್ರ ಯಾವ ಪ್ರಮಾಣದಲ್ಲಿ ಕೊಚ್ಚಿ ಹೋಗಿದೆ.

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಸ್ವಲ್ಪ	೭೭	೧೩.೨೮
೨	ಬಹಳ	೫೦೩	೮೬.೭೨
	ಒಟ್ಟು	೫೮೦	೧೦೦.೦೦

೭.೨ ಉಪಕೋಷ್ಟಕವನ್ನು ಗಮನಿಸಿದಾಗ ನದಿ ದಡ ಬೃಹತ್ ಪ್ರಮಾಣದಲ್ಲಿ ಹೊಚ್ಚಿ ಹೋಗಿರುವುದು ತಿಳಿಯುತ್ತದೆ. ಇಲ್ಲಿ ಪ್ರತಿಶತ ೮೭ರಷ್ಟು ಮಾಹಿತಿದಾರರು ನದಿ ದಡ ಬೃಹತ್ ಪ್ರಮಾಣದಲ್ಲಿ ಕೊಚ್ಚಿ ಹೋಗಿದೆಯೆಂದು ತಿಳಿಸಿದರೆ, ಶೇಕಡಾ ೧೩ರಷ್ಟು ಮಾತ್ರ ನದಿ ದಡ ಸ್ವಲ್ಪ ಪ್ರಮಾಣ ಕೊಚ್ಚಿ ಹೋಗಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ.

ನದಿ ದಡಗಳ ಕುರಿತು ಮಾಹಿತಿದಾರರನ್ನು ವಿಚಾರಿಸಿದಾಗ ನದಿ ದಡಗಳು ಹೆಚ್ಚಿನ ಪ್ರಮಾಣದಲ್ಲಿ ಕೊಚ್ಚಿ ಹೋಗಿದೆಯೆಂದು ತಿಳಿಸಿದರು. ಸರಕಾರ ಹಿಪ್ಪರಗಿ ಯೋಜನೆಯಿಂದ ಬಾಧಿತವಾಗುವ ನದಿ ದಡಗಳ ಜಮೀನುಗಳಿಗೆ ಪರಿಹಾರ ಕೊಟ್ಟಿದೆ. ಆದರೆ ಈ ಪ್ರವಾಹಗಳಿಂದ ನದಿ ದಡಗಳು ಹೆಚ್ಚಿನ ಪ್ರಮಾಣದಲ್ಲಿ ಕೊಚ್ಚಿ ಹೋದವು ಅವುಗಳಿಗೆ ಸರಕಾರ ಪರಿಹಾರ ನೀಡಿದೆಯೇ ಎಂಬುದರ ಮಾಹಿತಿಯನ್ನು ಕೋಷ್ಟಕ ೭.೩ರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೭.೩

ನದಿ ದಡ ಕೊಚ್ಚಿ ಹೋದುದಕ್ಕೆ ಪರಿಹಾರ ದೊರಕಿದೆಯೇ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೧	೫.೭೯
೨	ಇಲ್ಲ	೨೬೭	೪೬.೦೪
೩	ತಿಳಿದಿಲ್ಲ	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೭.೩ನ್ನು ಗಮನಿಸಿದಾಗ ಪ್ರತಿಶತ ೮ರಷ್ಟು ಮಾಹಿತಿದಾರರು ಮಾತ್ರ ಪರಿಹಾರ ದೊರಕಿದೆಯೆಂದರೆ, ಶೇಕಡಾ ೪೬ರಷ್ಟು ಮಾಹಿತಿದಾರರು ಪರಿಹಾರ ದೊರಕಿಲ್ಲವೆಂದರು. ಇದರಿಂದ ಹೆಚ್ಚಿನ ಜನರಿಗೆ ನದಿ ದಡ ಕೊಚ್ಚಿ ಹೋದುದಕ್ಕೆ ಪರಿಹಾರ ದೊರಕಿಲ್ಲ ಎಂಬುದು ತಿಳಿದು ಬರುತ್ತದೆ. ಹಿಪ್ಪರಗಿ ಅಣೆಕಟ್ಟೆ ನೀರಿನ ಮಟ್ಟ ಅನುಸರಿಸಿ ಪರಿಹಾರವನ್ನು ಸರಕಾರ ನೀಡಿದೆ. ಇನ್ನುಳಿದ ಹಾನಿಗೊಳಗಾದ ಜಮೀನುಗಳಿಗೆ ಯಾವುದೇ ಪರಿಹಾರ ದೊರಕಿಲ್ಲ ಎಂಬುದು ತಿಳಿಯುತ್ತದೆ.

ಪ್ರವಾಹದಿಂದ ಹಳ್ಳಗಳು ಉಕ್ಕೇರಿ ಹರಿಯುವುದು ಸಹಜ. ಹಳ್ಳಗಳು ಉಕ್ಕೇರಿ ಹರಿಯುವುದರಿಂದ ಜನರಿಗೆ ವಿವಿಧ ತೊಂದರೆಗಳಾಗುತ್ತವೆ. ಈ ಪ್ರವಾಹಗಳಿಂದ ಹಳ್ಳಗಳು ಅಪಾಯ ಮಟ್ಟ ಮೀರಿ ಹರಿದವು. ನದಿಯ ನೀರು ಒತ್ತುಗಳಲ್ಲಿ ಬಂದು ಹಳ್ಳಿಗಳ ಮುಖಾಂತರ ಹರಿದು ಹೋಗುತ್ತಿತ್ತು. ಆದರೆ ಇತ್ತಿಚೀನ ದಿನಗಳಲ್ಲಿ ರೈತರು ಹಳ್ಳಗಳನ್ನು ಸಮಮಾಡಿ ಬಿತ್ತನೆಗೆ ಉಪಯೋಗಿಸುತ್ತಿದ್ದಾರೆ. ಇದರಿಂದ ಹಳ್ಳಗಳಲ್ಲಿ ನೀರು ಹರಿಯದೇ ಇರುವ ಕಾರಣ ಹಳ್ಳಗಳು ಉಕ್ಕೇರಿ ಹಾನಿಗೆ ಕಾರಣವಾದವು. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಪ್ರವಾಹದಿಂದ ಹಳ್ಳಗಳೇನಾದರು ಬಂದಿವೆಯಾ? ಎಂದು ವಿಚಾರಿಸಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಪ್ರವಾಹ ಬಂದಾಗ ಹಳ್ಳಗಳು ಬಂದಿವೆಯೆಂದು ತಿಳಿಸುತ್ತಾರೆ. ಇದರಿಂದ ಪ್ರವಾಹದಿಂದ ಹಳ್ಳಗಳ ನೀರಿನ ಮೇಲೂ ಪ್ರಭಾವ ಬೀರಿರುವುದು ತಿಳಿದು ಬರುತ್ತದೆ.

ಪ್ರವಾಹದ ಬೀಕರತೆಯಿಂದ ಕೇವಲ ನದಿ ದಡಗಳು ಕೊಚ್ಚಿಕೊಂಡು ಹೋಗಿರದೆ ಪ್ರವಾಹದಿಂದ ಬಂದ ಹಳ್ಳಗಳ ಕಾರಣ ಸಾರ್ವಜನಿಕರ ಭೂಮಿ ಸೀಮೆಗಳಲ್ಲಿನ ಮಣ್ಣು ಕೊಚ್ಚಿಕೊಂಡು ಹೋಯಿತು. ಇದರಿಂದ ಸಾಕಷ್ಟು ಜನರ ಭೂಮಿ-ಸೀಮೆಗಳು ನೀರಿನ ಹೊಂಡಗಳಾದವು. ಸರಕಾರಗಳು ಮನೆ, ಬೆಳೆ ನಾಶ ಅಂದಾಜಿಸಬಹುದು ಆದರೆ ಭೂಮಿ ಕೊಚ್ಚಿ ಹೋದ ನಷ್ಟ ಭರಿಸಲು ಸಾಧ್ಯವಿಲ್ಲ. ಒಂದು ಇಂಚು ಮಣ್ಣು ತಯಾರಿಕೆಗೆ ಅನೇಕ ಶತಮಾನಗಳು ಬೇಕು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಹಳ್ಳಗಳಿಂದ ಜಮೀನು ಕೊಚ್ಚಿ ಹೋಗಿದೆಯಾ? ಎಂದು ಕೇಳಿದಾಗ, ಪ್ರತಿಶತ ೯೮.೪೫ರಷ್ಟು ಮಾಹಿತಿದಾರರು ಹಳ್ಳಗಳು ಬರುವುದರಿಂದ ಭೂಮಿ ಕೊಚ್ಚಿ ಹೋಗಿದೆಯೆಂದು ತಿಳಿಸಿದರೆ, ಶೇಕಡಾ ೧.೫೫ರಷ್ಟು ಮಾತ್ರ ಹಳ್ಳಗಳಿಂದ ಯಾವುದೇ ಪರಿಣಾಮವಾಗಿಲ್ಲವೆಂದು ತಿಳಿಸಿದರು.

ಹಳ್ಳಗಳ ಎದುರು ಪ್ರವಾಹದಿಂದ ಸಾಕಷ್ಟು ಹಾನಿ ಉಂಟಾಯಿತು. ಸರಕಾರ ಮನೆ ಹಾನಿ, ಬೆಳೆ ಹಾನಿಗೆ ಪರಿಹಾರ ನೀಡಿತು. ಅದರಂತೆ ಈ ಹಾನಿಗೂ ಪರಿಹಾರ ನೀಡುವುದು ಅವಶ್ಯಕ. ಏಕೆಂದರೆ ರೈತರ ಜಮೀನುಗಳು ಕೊಚ್ಚಿಕೊಂಡು ಹೋಗಿರುವುದು ಕಂಡು ಬರುತ್ತದೆ. ಇದಕ್ಕೆ ಸರಕಾರ ಪರಿಹಾರ ನೀಡಿದೆಯೇ ಎಂಬುದರ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಯಿತು. ಹಳ್ಳ/ಒತ್ತುಗಳಿಂದ ಹಾನಿಗೆ ಪರಿಹಾರ ದೊರಕಿದೆಯೇ? ಎಂದು ಪ್ರಶ್ನಿಸಿದಾಗ ಪ್ರತಿಶತ ೫೪.೮೩ರಷ್ಟು ಮಾಹಿತಿದಾರರು ತಮಗೆ ಪರಿಹಾರ ದೊರಕಿಲ್ಲವೆಂದರೆ ಇನ್ನುಳಿದ ಶೇಕಡಾ ೪೫.೧೭ರಷ್ಟು ಮಾಹಿತಿದಾರರು ತಮಗೇನು ತಿಳಿದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಇದರಿಂದ ಹಳ್ಳಗಳ ಎದುರು ಪ್ರವಾಹದ ಹಾನಿಗೆ ಪರಿಹಾರ ದೊರಕಿಲ್ಲವೆಂಬುದು ತಿಳಿಯುತ್ತದೆ.

ಗ್ರಾಮಕ್ಕೆ ಕೃಷ್ಣಾ ನದಿ ನೀರಾವರಿ ಮೂಲ. ನದಿಯ ದಡಗಳಲ್ಲಿ ಪಂಪಸೆಟ್‌ಗಳನ್ನು ಕೂಡ್ರಿಸಿ ಗ್ರಾಮದ ಜನರು ನೀರವರಿ ಸೌಲಭ್ಯ ಪಡೆದುಕೊಳ್ಳುತ್ತಾರೆ. ಪ್ರತಿವರ್ಷದ ಪ್ರವಾಹಗಳು ನಿಧಾನಗತಿಯಿಂದ ಬರುತ್ತಿದ್ದವು. ಕಾರಣ ಪ್ರವಾಹದ ಮುನ್ಸೂಚನೆ ದೊರೆತ ಕ್ಷಣ ಜನರು ಅವುಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸುತ್ತಿದ್ದರು. ಆದರೆ ಈ ಪ್ರವಾಹಗಳ ತೀವ್ರತೆ ಹೆಚ್ಚಿಗೆ ಇರುವ ಕಾರಣ ನದಿ ದಡದಲ್ಲಿರುವ ಪಂಪಸೆಟ್‌ಗಳು ನೀರಿನಲ್ಲಿ ಮುಳುಗಿ ಸುಟ್ಟು ಹಾನಿಗೊಳಗಾದವು. ಇದರ ಕುರಿತು ಮಾಹಿತಿಯನ್ನು ಕೋಷ್ಟಕ ೭.೪ರಲ್ಲಿ ಪಡೆಯಲಾಗಿದೆ.

ಕೋಷ್ಟಕ ೭.೪

ನದಿ ದಡದಲ್ಲಿರುವ ಕೃಷಿ ನೀರಾವರಿ ಪಂಪಸೆಟ್‌ಗಳಿಗೆ ಹಾನಿ ಉಂಟಾಗಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೫೪	೨೬.೫೫
೨	ಇಲ್ಲ	೧೬೪	೨೮.೨೮
೩	ತಿಳಿದಿಲ್ಲ	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೭.೪ರಲ್ಲಿ ನದಿ ದಡದಲ್ಲಿರುವ ಕೃಷಿ ಪಂಪಸೆಟ್‌ಗಳಿಗೆ ಹಾನಿ ಕುರಿತು ವಿಚಾರಿಸಿದಾಗ ಪ್ರತಿಶತ ೨೬.೫೫ರಷ್ಟು ಮಾಹಿತಿದಾರರು ತಮ್ಮ ಮೋಟಾರಗಳಿಗೆ ಹಾನಿಯಾಗಿದೆಯೆಂದರೆ, ಶೇಕಡಾ ೨೮.೨೮ರಷ್ಟು ಮಾಹಿತಿದಾರರು ಯಾವುದೇ ಹಾನಿಯಾಗಿಲ್ಲವೆಂದರು. ಇನ್ನುಳಿದ ೪೫.೧೭ರಷ್ಟು ಮಾಹಿತಿದಾರರು ತಮಗೇನು ತಿಳಿದಿಲ್ಲವೆಂದು ತಿಳಿಸಿದರು.

ನದಿ ದಡಗಳಲ್ಲಿರುವ ಕೃಷಿ ಪಂಪಸೆಟ್‌ಗಳು ಪ್ರವಾಹದ ಕಾರಣ ನೀರಿನಲ್ಲಿ ಮುಳಗಿ ಹಾನಿಗೊಳಗಾದವು. ಅವುಗಳಿಗೆ ಯಾವ ಪ್ರಮಾಣದಲ್ಲಿ ಹಾನಿಯಾಯಿತು ಎಂಬುದರ ಕುರಿತು ಮಾಹಿತಿದಾರರನ್ನು ವಿಚಾರಿಸಲಾಯಿತು. ಅದನ್ನು ಕೋಷ್ಟಕ ೭.೫ರಲ್ಲಿ ಕಾಣಬಹುದು.

ಕೋಷ್ಟಕ ೭.೫

ಕೃಷಿ ಪಂಪಸೆಟ್‌ಗಳಿಗೆ ಯಾವ ಪ್ರಮಾಣದಲ್ಲಿ ನಷ್ಟವಾಗಿತ್ತು.

ಕ್ರಸಂ	ನಷ್ಟದ ಪ್ರಮಾಣ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧ ರಿಂದ ೨ ಸಾವಿರ	೧೦	೧.೭೨
೨	೩ ರಿಂದ ೫ ಸಾವಿರ	೬೭	೧೧.೫೫
೩	೬ ಸಾವಿರ ಮೇಲ್ಪಟ್ಟು	೭೭	೧೩.೨೮
೪	ಸಂಬಂಧವಿಲ್ಲ	೪೨೬	೭೩.೪೫
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೭.೫ರಲ್ಲಿ ನದಿಯ ದಡಗಳಲ್ಲಿರುವ ಕೃಷಿ ಪಂಪಸೆಟ್‌ಗಳಿಗಾದ ಹಾನಿಯ ಬಗೆಗೆ ವಿಚಾರಿಸಿದಾಗ ಪ್ರತಿಶತ ೧.೭೨ರಷ್ಟು ೧ರಿಂದ ೨ ಸಾವಿರ ಎಂದರೆ, ಶೇಕಡಾ ೧೧.೫೫ರಷ್ಟು ೩ರಿಂದ ೫ ಸಾವಿರ, ಪ್ರತಿಶತ ೧೩.೨೮ರಷ್ಟು ೬ ಸಾವಿರ ಮೇಲ್ಪಟ್ಟು ಎಂದು ತಿಳಿಸಿದರು. ಇನ್ನುಳಿದ ಪ್ರತಿಶತ ೭೩.೪೫ರಷ್ಟು ಮಾಹಿತಿದಾರರು ತಮಗೇನು ಸಂಬಂಧವಿಲ್ಲವೆಂದರು. ಇದರಿಂದ ಕೃಷಿ ಪಂಪಸೆಟ್‌ಗಳಿಗೆ ೬ ಸಾವಿರ ಮೇಲ್ಪಟ್ಟು ಹಾನಿಯಾಗಿರುವುದು ತಿಳಿಯುತ್ತದೆ.

ಹಿರೇನ್ ಗೈನ್ (೨೦೦೮) ಅವರು ಭೂತಾನದಲ್ಲಿಯ ನೆರೆಹಾವಳಿಗೆ ಮನಷ್ಯನೇ ಕಾರಣವಾಗಿದ್ದು ಮಳೆಗಾಲದಲ್ಲಿ ಹೆಚ್ಚಿನ ಮಳೆಯಾಗಿ ಅಣೆಕಟ್ಟೆಗೆ ತೊಂದರೆಯಾಗಬಾರದೆಂದು ಗಂಗಾನದಿಗೆ ನೀರು ಬಿಟ್ಟಿರುವುದೇ ಪ್ರವಾಹಕ್ಕೆ ಕಾರಣವಾಯಿತೆಂದು ತಿಳಿಸಿದ್ದಾರೆ. ಈ ಅವಧಿಯಲ್ಲಿ ಕೃಷ್ಣಾ ಪ್ರವಾಹಕ್ಕೆ ಅನೇಕ ಕಾರಣಗಳಿದ್ದವು.

ಪ್ರಸ್ತುತ ಅವಧಿಗಳಲ್ಲಿ ನದಿಗಳಿಗೆ ಪ್ರವಾಹ ಬರಲು ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ಪೂರ್ವ ಮಾಹಿತಿ ಇಲ್ಲದೆ ನದಿಗೆ ನೀರು ಬಿಟ್ಟಿರುವುದು ಪ್ರಮುಖ ಕಾರಣವೆಂದು ತಜ್ಞರು, ಕರ್ನಾಟಕ ಸರಕಾರ, ಸಾಮಾಜಿಕ ಹೋರಾಟಗಾರರು, ದೂಷಿಸಿದರು. ಬೇಸಿಗೆಯಲ್ಲಿ ಅವಶ್ಯಕತೆ ಇದ್ದಾಗ ಈ ಭಾಗದ ಜನರಿಗೆ ನೀರು ಬಿಡದ ಮಹಾರಾಷ್ಟ್ರ ಸರಕಾರ ಮಳೆಗಾಲದಲ್ಲಿ ಲಕ್ಷ, ಲಕ್ಷ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಟ್ಟು ಸಮಸ್ಯೆ ಸೃಷ್ಟಿಸಿತು. ಪೂರ್ವ ಮಾಹಿತಿ ಇಲ್ಲದೆ ಅಣೆಕಟ್ಟೆಗಳಿಂದ ಬಿಟ್ಟ ನೀರಿನಿಂದ ಪ್ರವಾಹ ಉಂಟಾಗಿದೆಯೇ? ಎಂದು ವಿವಾರಿಸಿದಾಗ, ಪ್ರತಿಶತ ೯೯.೬೬ರಷ್ಟು ಮಾಹಿತಿದಾರರು ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ಮಾಹಿತಿ ಇಲ್ಲದೆ ಬಿಟ್ಟ ನೀರಿನಿಂದ ಪ್ರವಾಹ ಉಂಟಾಯಿತೆಂದು ತಿಳಿಸಿದರು.

ಪ್ರವಾಹಕ್ಕೆ ವಿವಿಧ ಅಂಶಗಳು ಕಾರಣಗಳಾಗುತ್ತವೆ. ಕೃಷ್ಣಾ ನದಿಯ ಮಣ್ಣು ಕೊರೆತವನ್ನು ಸತತವಾಗಿ ಮಾಡುತ್ತದೆ. ಸುಮಾರು ೭೫ ಅಡಿಗಳಿಗೂ ಎತ್ತರ ಹರಿಯುವ ಭೀಕರ ನದಿ. ಜೂನದಿಂದ ಅಗಸ್ಟ್‌ವರೆಗೆ ಮಣ್ಣು ಕೊರೆದು ಸಾಗಿಸುತ್ತದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಫಲವತ್ತಾದ ಭೂಮಿಯನ್ನು ಕೊರೆದು ಒಯ್ದು ಡೆಲ್ಟಾ ಭಾಗಗಳಲ್ಲಿ ಶೇಖರಿಸುತ್ತದೆ. ಮೇಧಾ ಪಾಟ್ಕರ ಮಹಾರಾಷ್ಟ್ರ ಸರಕಾರ ಅಲ್ಲಿಯ ಸಾಮಾಜಿಕ ಹೋರಾಟಗಾರರು ಈ ಪ್ರದೇಶದಲ್ಲಿ ಪ್ರವಾಹ ಬರಲು ಆಲಮಟ್ಟಿ ಅಣೆಕಟ್ಟೆಯ ಅಚ್ಚುಕಟ್ಟು ಪ್ರದೇಶದಲ್ಲಿ ಹೂಳು ತುಂಬಿರುವುದೇ ಪ್ರಮುಖ ಕಾರಣವೆಂದು ತಿಳಿಸಿದರು. ನದಿಗಳ ದಡಗಳು ಕುಸಿದು ವಿಪರೀತ ಮಣ್ಣು ಕೊಚ್ಚಿಕೊಂಡು ಬಂದು ನದಿಗಳು ಹೂಳು ತುಂಬಿ ಸ್ವಲ್ಪ ಮಳೆಯಾದರೂ ಪ್ರವಾಹ ಕಂಡು ಬರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಕೋಷ್ಟಕ ೭.೬

ನದಿಗಳಲ್ಲಿ ಹೂಳು ತುಂಬಿರುವುದು ಪ್ರವಾಹಕ್ಕೆ ಕಾರಣವೆಂದು ಅನಿಸುತ್ತದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೭೨	೧೨.೪೧
೨	ಇಲ್ಲ	೫೦೮	೮೭.೫೯
	ಒಟ್ಟು	೫೮೦	೧೦೦.೦೦

ಕೋಷ್ಟಕ ೭.೬ನ್ನು ಗಮನಿಸಿದಾಗ ಪ್ರತಿಶತ ೧೨.೪೧ರಷ್ಟು ಮಾಹಿತಿದಾರರು ವಿಷಯವನ್ನು ಅನುಮೋದಿಸಿದರೆ, ಶೇಕಡಾ ೮೭.೫೯ರಷ್ಟು ಮಾಹಿತಿದಾರರು ವಿರೋಧಿಸಿದರು. ಇದರಿಂದ ಹೂಳು ತುಂಬಿರುವುದು ಪ್ರವಾಹಕ್ಕೆ ಕಾರಣವಲ್ಲವೆಂದು ಮಾಹಿತಿದಾರರ ಅಭಿಪ್ರಾಯ.

ನರೇಂದ್ರಕುಮಾರ ರಾಣಾ (೨೦೦೯) ಅವರು ನದಿಪಾತ್ರದಲ್ಲಿಯ ಮಳೆ ಕೋಸಿ ಪ್ರವಾಹಕ್ಕೆ ಕಾರಣವೆಂದು ತಿಳಿಸಿದ್ದರು. ಜಲಾನಯನ ಪ್ರದೇಶದಲ್ಲಿನ ವಿಪರೀತ ಮಳೆ ಪ್ರವಾಹಕ್ಕೆ ಕಾರಣವಾಯಿತೆ ಎಂಬುದರ ಕುರಿತು ಮಾಹಿತಿದಾರರನ್ನು ವಿಚಾರಿಸಲಾಯಿತು. ವಿಪರೀತ ಮಳೆಯಿಂದ ಅಣೆಕಟ್ಟುಗಳು ಭರ್ತಿಯಾಗಿ ನದಿ ಪಾತ್ರಗಳಿಗೆ ಅನಿಯಂತ್ರಿತ ನೀರು ಬಿಡುಗಡೆಯಾದ ಕಾರಣ ಪ್ರವಾಹ ಬಂದಿತೆಂದು ಕೆಲವು ತಜ್ಞರು ತಿಳಿಸಿದ ಕಾರಣ ಇದರ ಕುರಿತು ಜನರಿಂದ ಮಾಹಿತಿ ಪಡೆಯಲಾಯಿತು. ನದಿಯ ಜಲಾನಯನ ಪ್ರದೇಶದಲ್ಲಿಯ ವಿಪರೀತ ಮಳೆಯಿಂದ ಪ್ರವಾಹ ಬಂದಿತೇ? ಎಂದು ವಿಚಾರಿಸಿದಾಗ, ಪ್ರತಿಶತ ೧೦೦ರಷ್ಟು ಮಾಹಿತಿದಾರರು ನದಿಯ ಜಲಾನಯನ ಪ್ರದೇಶದಲ್ಲಿಯ ವಿಪರಿತ ಮಳೆಯೇ ಪ್ರವಾಹಕ್ಕೆ ಕಾರಣವೆಂದು ತಿಳಿಸಿರುವುದು ಕಂಡು ಬರುತ್ತದೆ.

ನದಿಗಳ ಅನುಕೂಲತೆಗಳ ಬಗೆಗೆ ಚರ್ಚಿಸುವಾಗ ನದಿಗಳಿಂದ ಶುದ್ಧ ಕುಡಿಯುವ ನೀರು ದೊರೆಯುತ್ತದೆ ಎಂದು ಹೇಳುತ್ತೇವೆ. ಈ ಪ್ರದೇಶದಲ್ಲಿ ಹಿಪ್ಪರಗಿ ಅಣೆಕಟ್ಟು ಕಟ್ಟಿರುವದರಿಂದ ನೀರು ಹರಿಯದೆ ನೀರು ಮಾಲಿನ್ಯವಾಗುತ್ತದೆ. ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಕುಡಿಯಲು ಶುದ್ಧ ನೀರು ದೊರೆಯುವದಿಲ್ಲ. ಪ್ರವಾಹಗಳ ಸಂದರ್ಭಗಳಲ್ಲಿ ನದಿಗಳ ನೀರು ಮಾಲಿನ್ಯಗೊಂಡಿರುತ್ತವೆ. ಇವು ಕುಡಿಯಲು ಯೋಗ್ಯವಾಗಿರುವದಿಲ್ಲ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನದಿಯ ನೀರು ಕುಡಿಯಲು ಯೋಗ್ಯವಾಗಿದೆಯೆ ಎಂಬುದನ್ನು ವಿಚಾರಿಸಲಾಗಿ, ಪ್ರತಿಶತ ೯.೬೬ರಷ್ಟು ಮಾಹಿತಿದಾರರು ಮಾತ್ರ ನದಿಯ ನೀರು ಕುಡಿಯಲು ಯೋಗ್ಯವಾಗಿರುತ್ತದೆ ಎಂದು ತಿಳಿಸಿದರೆ ಇನ್ನುಳಿದ ಶೇಕಡಾ ೯೦.೩೪ರಷ್ಟು ಮಾಹಿತಿದಾರರು ನದಿಯ ನೀರು ಕುಡಿಯಲು ಯೋಗ್ಯ ಇರುವದಿಲ್ಲವೆಂದು ತಿಳಿಸಿದರು.

ಪ್ರವಾಹ ಪೀಡಿತ ಜನರಿಗೆ ಸರಕಾರ ಶುದ್ಧ ಕುಡಿಯುವ ನೀರನ್ನು ಪೂರೈಸಲು ಜಿಲ್ಲಾಡಳಿತಕ್ಕೆ ಅನುದಾನ ನೀಡಿತ್ತು. ಆದರೆ ಜನರು ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡಿರಲ್ಲಿಲ್ಲಾ ಎಂದು ಸಂತ್ರಸ್ತರು ದೂರುತ್ತಿದ್ದರು. ಇದರಿಂದ ಪ್ರವಾಹ ಪೀಡಿತ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆ ಎದ್ದು ಕಾಣುತ್ತಿತ್ತು. ಈ ಹಿನ್ನೆಲೆಯಲ್ಲಿ ಮಾಹಿತಿದಾರರನ್ನು ಸಂದರ್ಶಿಸಿ, ಶುದ್ಧ ಕುಡಿಯುವ ನೀರು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? ಎಂದು ಪ್ರಶ್ನಿಸಿದಾಗ, ಪ್ರತಿಶತ ೦.೩೪ರಷ್ಟು ಮಾಹಿತಿದಾರರು ಮಾತ್ರ

ಸರಕಾರ ಕುಡಿಯುವ ನೀರಿಗಾಗಿ ಕ್ರಮ ಕೈಗೊಂಡಿದೆಯೆಂದು ತಿಳಿಸಿದರೆ ಹೆಚ್ಚಿನ ಮಾಹಿತಿದಾರರು ಅಂದರೆ ಪ್ರತಿಶತ ೯೪.೬೬ರಷ್ಟು ಸರಕಾರ ಕುಡಿಯುವ ನೀರಿಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ತಿಳಿಸಿದರು. ಇದರಿಂದ ಶುದ್ಧ ಕುಡಿಯುವ ನೀರಿಗೆ ಸರಕಾರ ಸರಿಯಾದ ಕ್ರಮ ಕೈಗೊಂಡಿಲ್ಲವೆಂಬುದು ತಿಳಿಯುತ್ತದೆ.

ಮಗು ಅತ್ತರೆ ಮಾತ್ರ ತಾಯಿ ಮಗುವಿಗೆ ಆಹಾರ ನೀಡುತ್ತಾಳೆ. ಅದರಂತೆ ಜನರು ತಮ್ಮ ಬೇಡಿಕೆಗಳ ಈಡೇರಿಕೆಗೆ ಸರಕಾರವನ್ನು ಒತ್ತಾಯಿಸಿದರೆ ಮಾತ್ರ ಬೇಡಿಕೆಗಳು ಈಡೇರಲು ಸಾಧ್ಯ. ಕೆಲವೊಂದು ಸಲ ಅನೇಕ ಬಾರಿ ಮನವಿ ಮಾಡಿಕೊಂಡರೂ ಬೇಡಿಕೆಗಳು ಈಡೇರುವದಿಲ್ಲ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಶುದ್ಧ ಕುಡಿಯುವ ನೀರಿಗಾಗಿ ಗ್ರಾಮದ ಜನತೆ ಸರಕಾರವನ್ನು ಒತ್ತಾಯಿಸಿದ್ದಾರಾ ಎಂಬುದರ ಕುರಿತು ಮಾಹಿತಿದಾರರನ್ನು ಕೋಷ್ಟಕ ೭.೭ರಲ್ಲಿ ವಿಚಾರಿಸಿ ವಿಷಯದ ಕುರಿತು ಮಾಹಿತಿ ಪಡೆಯಲಾಯಿತು.

ಕೋಷ್ಟಕ ೭.೭

ಕುಡಿಯುವ ನೀರಿಗಾಗಿ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೯೬	೧೬.೫೫
೨	ಇಲ್ಲ	೪೮೪	೮೩.೪೫
	ಒಟ್ಟು	೫೮೦	೧೦೦.೦೦

ಕೋಷ್ಟಕ ೭.೭ರನ್ನು ಗಮನಿಸಿದಾಗ ಪ್ರತಿಶತ ೧೬.೫೫ರಷ್ಟು ನೀರಿಗಾಗಿ ಸರಕಾರಕ್ಕೆ ಮನವಿ ಕೊಟ್ಟಿದ್ದೇವೆಂದು ತಿಳಿಸಿದರೆ, ಉಳಿದ ಶೇಕಡಾ ೮೩.೪೫ರಷ್ಟು ಮಾಹಿತಿದಾರರು ಮನವಿ ಮಾಡಿಕೊಂಡಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಲಕ್ಷ್ಮಣ ಉಗಾರ ಎಂಬ ಮಾಹಿತಿದಾರ 'ನೀವು ಅಧಿಕಾರಿಗಳು ಬಿಸಲೇರಿ ನೀರು ಕುಡಿಯುತ್ತೀರಿ. ನಮಗೆ ಕುಡಿಯುವ ನೀರಿಗೆ ಕ್ರಮ ಕೈಗೊಳ್ಳಿ' ಎಂದು ಕೇಳಿದ್ದೇವೆಂದು ತಿಳಿಸಿದರು.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರು ಗ್ರಾಮದ ಹೊರವಲಯಗಳ ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆದುದರಿಂದ ಪ.ಜಾತಿ ಮತ್ತು ಪ.ಪಂಗಡದ ಜನರು ಪ್ರವಾಹದ ಭೀತಿಯನ್ನು ಹೆಚ್ಚಿಗೆ ಅನುಭವಿಸಿದರು. ಆರು ತಿಂಗಳುಗಳವರೆಗೆ ಅವರ ವಾಸಸ್ಥಳಗಳು ವಾಸಿಸಲು ಯೋಗ್ಯವಾಗಿರಲಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರನ್ನು ಸಂದರ್ಶಿಸಿ ಅವರಿಂದ ಪ್ರವಾಹದಿಂದ ಗ್ರಾಮದ ಸುತ್ತಲಿನ ಗುಂಡಿಗಳಲ್ಲಿ ನೀರು ತುಂಬಿತ್ತೆ? ಎಂದು ಪ್ರಶ್ನಿಸಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು

ಪ್ರವಾಹದಿಂದ ಗ್ರಾಮದ ಸುತ್ತಮುತ್ತಲಿನ ಗುಂಡಿಗಳಲ್ಲಿ, ತಗ್ಗು ಪ್ರದೇಶಗಳಲ್ಲಿ ನೀರು ತುಂಬಿತ್ತೆಂದು ತಿಳಿಸಿರುವುದು ಕಂಡು ಬರುತ್ತದೆ. ಈ ನೀರು ವಿವಿಧ ನೀರು ಸಂಬಂಧಿತ ರೋಗಗಳು ಹರಡಲು ಮತ್ತು ಸೊಳ್ಳೆಗಳ ಕಾಟಕ್ಕೆ ಕಾರಣವಾಯಿತು.

ಪ್ರವಾಹದ ದೀರ್ಘ ಕಾಲಾವಧಿ ಕಾರಣ ಗ್ರಾಮದ ಸುತ್ತಮುತ್ತಲಿನ ತಗ್ಗು ಪ್ರದೇಶಗಳಲ್ಲಿ ತಿಪ್ಪೆ ಗುಂಡಿಗಳಲ್ಲಿ ನೀರು ಮಡುಗಟ್ಟಿ ನಿಂತಿತು. ಇದರಿಂದ ವಿವಿಧ ಸಾಂಕ್ರಾಮಿಕ ರೋಗಗಳು ಹರಡಲಾರಂಭಿಸಿದವು. ಸಾಮಾಜಿಕ ಸಂಪರ್ಕ ಮತ್ತು ನೆರೆಹೊರೆ ಸಂಬಂಧಗಳಲ್ಲಿ ತೊಂದರೆ ಕಂಡು ಬಂದಿತು. ಹೀಗೆ ಮಲಿತು ಮಡುಗಟ್ಟಿ ನಿಂತ ನೀರನ್ನು ಹೊರಹಾಕಲು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿತ್ತು ಎಂದು ತಿಳಿಯಲು ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಅದನ್ನು ಕೋಷ್ಟಕ ೭.೮ರಲ್ಲಿ ಕಾಣಬಹುದು.

ಕೋಷ್ಟಕ ೭.೮

ಗುಂಡಿಗಳಲ್ಲಿಯ ನೀರು ತೆರವುಗೊಳಿಸಲು ಸರಕಾರ ಕ್ರಮ ಕೈಕೊಂಡಿತ್ತೆ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೪೬	೯೪.೧೪
೨	ಇಲ್ಲ	೩೪	೫.೮೬
	ಒಟ್ಟು	೫೮೦	೧೦೦.೦೦

ಕೋಷ್ಟಕ ೭.೮ರಲ್ಲಿ ಪ್ರವಾಹದಿಂದ ಗ್ರಾಮದ ಸುತ್ತಮುತ್ತಲಿನ ಗುಂಡಿಗಳಲ್ಲಿ ನೀರು ತುಂಬಿತ್ತು ಅದನ್ನು ತೆರವುಗೊಳಿಸಲು ಸರಕಾರ ಕ್ರಮ ಕೈಗೊಂಡಿತ್ತೆಂದು ಪ್ರತಿಶತ ೯೪ರಷ್ಟು ಮಾಹಿತಿದಾರರು ತಿಳಿಸಿದರೆ, ಇನ್ನುಳಿದ ಶೇಕಡಾ ೬ರಷ್ಟು ಮಾಹಿತಿದಾರರು ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ತಿಳಿಸಿದರು. ಆರು ತಿಂಗಳುಗಳವರೆಗೆ ವಾಸಿಸಲು ಯೋಗ್ಯವಾಗದ ಮನೆಗಳನ್ನು ಹೊಂದಿದ ಕೆಲವೊಂದು ಪ.ಜಾತಿಯ ಜನರು ಆಕ್ರೋಶದಿಂದ ಈ ರೀತಿ ಪ್ರತಿಕ್ರಿಯೆ ನೀಡಿದರು.

ಪ್ರವಾಹ ಪೀಡಿತ ಜನರ ಸುರಕ್ಷತೆಗಾಗಿ ಸರಕಾರ ಯಾಂತ್ರಿಕ ದೋಣಿಗಳ ವ್ಯವಸ್ಥೆ ಮಾಡಿತ್ತು. ಇವು ಜನರನ್ನು ಸಾಗಿಸಲು ಮಹತ್ವದ ಪಾತ್ರ ವಹಿಸಿದ್ದವು. ಜಿಲ್ಲಾಡಳಿತ ಖವಟಕೊಪ್ಪ ಗ್ರಾಮಕ್ಕೆ ಒಂದು ಯಾಂತ್ರಿಕ ದೋಣಿ ನೀಡಿತ್ತು. ಇದರ ಕುರಿತು ಮಾಹಿತಿದಾರರನ್ನು ಸರ್ಕಾರ ಪ್ರವಾಹದ ಸಮಯದಲ್ಲಿ ಸ್ಥಳಾಂತರಕ್ಕೆ ದೋಣಿ ವ್ಯವಸ್ಥೆ ಮಾಡಿತ್ತೆ? ಎಂದು ವಿಚಾರಿಸಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಪ್ರವಾಹದ ಸಮಯದಲ್ಲಿ ಸರಕಾರ ಯಾಂತ್ರಿಕ ದೋಣಿ ವ್ಯವಸ್ಥೆ ಮಾಡಿತ್ತೆಂದು ತಿಳಿಸಿರುವುದು ಕಂಡು ಬರುತ್ತದೆ.

[illegible]

[illegible]

[illegible]

[illegible]

[illegible]

ಪ್ರವಾಹದಿಂದ ಬಾಧಿತವಾಗುವ ಎಲ್ಲ ಗ್ರಾಮಗಳಿಗೆ ಜಿಲ್ಲಾಡಳಿತ ಯಾಂತ್ರಿಕ ದೋಣಿಗಳನ್ನು ನೀಡಿತ್ತು. ಆ ವ್ಯವಸ್ಥೆ ಎಷ್ಟರ ಮಟ್ಟಿಗೆ ಸಮರ್ಪಕವಾಗಿತ್ತೆಂದು ತಿಳಿಯಲು ಮಾಹಿತಿದಾರರನ್ನು ವಿಚಾರಿಸಲಾಯಿತು. ಸಂಕಷ್ಟಕ್ಕೆ ಸಿಲುಕಿದ ಜನರನ್ನು ಸಾಗಿಸಲು ಸಹಕಾರಿಯಾದ ದೋಣಿಗಳು ಪ್ರಾಣಿಗಳ ಸಾಗಾಟಕ್ಕೆ ಸಹಾಯಕವಾಗಲಿಲ್ಲ ಎಂದು ಕೆಲವೊಂದು ಜನರು ಆರೋಪಿಸುತ್ತಾರೆ. ಯಾಂತ್ರಿಕ ದೋಣಿ ವ್ಯವಸ್ಥೆ ಸಮರ್ಪಕತೆ ಬಗೆಗೆ ವಿಚಾರಿಸಿದಾಗ, ಪ್ರತಿಶತ ೯೮ರಷ್ಟು ಮಾಹಿತಿದಾರರು ದೋಣಿ ವ್ಯವಸ್ಥೆ ಸಮರ್ಪಕವಾಗಿತ್ತೆಂದು ತಿಳಿಸಿದರೆ, ಉಳಿದ ಶೇಕಡಾ ೨ ರಷ್ಟು ಮಾಹಿತಿದಾರರು ಮಾತ್ರ ಸಮರ್ಪಕ ಇರಲಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ.

ಪ್ರವಾಹ ಪೀಡಿತ ಗ್ರಾಮಗಳ ದಾರಿಗಳನ್ನು ಎತ್ತರಿಸುವ ಮೂಲಕ ಪ್ರವಾಹಕ್ಕೆ ಪರಿಹಾರ ಕಂಡುಕೊಳ್ಳುವುದು ಸರಕಾರದ ಕ್ರಮ. ಈಗಾಗಲೇ ಗ್ರಾಮದ ದಾರಿಗಳನ್ನು ಎತ್ತರಿಸುವ ಕಾರ್ಯ ನಡೆದಿದ್ದು, ಇದರಿಂದ ಪ್ರವಾಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದೆಂದು ಕೆಲವು ಅಧಿಕಾರಿಗಳ ವಿಚಾರ. ಪ್ರವಾಹ ಸಮಯದಲ್ಲಿ ಗ್ರಾಮಕ್ಕೆ ಸಂಪರ್ಕ ಕಡಿತವಾಗದಂತೆ ನೋಡಿಕೊಳ್ಳುವ ಕ್ರಮವಿದು. ಈ ಕ್ರಮದ ಮೂಲಕ ಸಮಸ್ಯೆಗೆ ಪರಿಹಾರ ದೊರಕಬಹುದೆ ಎಂಬುದರ ಕುರಿತು ಮಾಹಿತಿದಾರರನ್ನು ವಿಚಾರಿಸಲಾಯಿತು. ಅದನ್ನು ಕೋಷ್ಟಕ ೭.೯ರಲ್ಲಿ ನೋಡಬಹುದು.

ಕೋಷ್ಟಕ ೭.೯

ಗ್ರಾಮದ ದಾರಿಗಳನ್ನು ಎತ್ತರಿಸುವುದರಿಂದ ಪ್ರವಾಹದ ಸಮಸ್ಯೆಗೆ ಪರಿಹಾರ ದೊರಕುತ್ತದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೭೩	೧೨.೫೯
೨	ಇಲ್ಲ	೫೦೭	೮೭.೪೧
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೭.೯ನ್ನು ಗಮನಿಸಿದಾಗ ಪ್ರತಿಶತ ೧೨.೫೯ರಷ್ಟು ಮಾಹಿತಿದಾರರು ಗ್ರಾಮದ ದಾರಿಗಳನ್ನು ಎತ್ತರಿಸುವುದರಿಂದ ಪ್ರವಾಹ ಸಮಸ್ಯಗೆ ಪರಿಹಾರ ಕಂಡುಕೊಳ್ಳಬಹುದೆಂದರೆ, ಹೆಚ್ಚಿನ ಶೇಕಡಾ ೮೭.೪೧ರಷ್ಟು ಮಾಹಿತಿದಾರರು ಈ ಕ್ರಮದ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದರು.

ಸರಕಾರ ಗ್ರಾಮಕ್ಕೆ ಸೇತುವೆಗಳನ್ನು ನಿರ್ಮಿಸುವ ಕಾರ್ಯ ಕೈಗೊಂಡಿದೆ. ಇದರಿಂದ ಪ್ರವಾಹಕ್ಕೆ ಪರಿಹಾರ ಕಂಡುಕೊಳ್ಳಬಹುದೆಂದು ಸರಕಾರ ಮತ್ತು ಅಧಿಕಾರಿಗಳ ವಿಚಾರ.

ಇದರಿಂದ ಪ್ರವಾಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವೆ ಎಂಬುದರ ಕುರಿತು ಜನರನ್ನು ವಿಚಾರಿಸಿ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೭.೧೦ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೭.೧೦

ಗ್ರಾಮಗಳಿಗೆ ಎತ್ತರದ ಸೇತುವೆಗಳನ್ನು ನಿರ್ಮಿಸುವುದರಿಂದ ಪರಿಹಾರ ದೊರಕುತ್ತದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೭೩	೧೨.೫೯
೨	ಇಲ್ಲ	೫೦೭	೮೭.೪೧
	ಒಟ್ಟು	೫೮೦	೧೦೦.೦೦

ಕೋಷ್ಟಕ ೭.೧೦ನ್ನು ಅವಲೋಕಿಸಿದಾಗ ಸೇತುವೆಗಳನ್ನು ನಿರ್ಮಿಸುವುದರಿಂದ ಪ್ರವಾಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲವೆಂದು ಪ್ರತಿಶತ ೮೭.೪೧ರಷ್ಟು ಮಾಹಿತಿದಾರರು ತಿಳಿಸಿದರೆ, ಇನ್ನುಳಿದ ಶೇಕಡಾ ೧೨.೫೯ರಷ್ಟು ಮಾಹಿತಿದಾರರು ಪರಿಹಾರ ಕಂಡುಕೊಳ್ಳಲು ಸಾಧ್ಯವೆಂದು ತಿಳಿಸುತ್ತಾರೆ.

ಪ್ರವಾಹ ಸಾಕಷ್ಟು ಮನೆಗಳಿಗೆ ಹಾನಿ ಮಾಡಿತು. ತಗ್ಗು ಪ್ರದೇಶಗಳಲ್ಲಿಯ ಗುಡಿಸಲುಗಳು ನೀರು ಪಾಲಾದವು. ಎತ್ತರದಲ್ಲಿಯ ಮನೆಗಳು ಬಿರುಕು ಬಿಟ್ಟವು. ಮನೆಗಳಲ್ಲಿ ಜವಳಾಡಿತು. ತಗ್ಗು ಪ್ರದೇಶಗಳಲ್ಲಿಯ ವಾಸಿಸುವ ಪರಿಶಿಷ್ಟ ಜಾತಿಯ ಜನರ ಗೋಳು ಹೇಳತೀರದು. ಸಮುದಾಯ ಭವನ, ಮಠ, ಮಂದಿರಗಳಲ್ಲಿ ಆಶ್ರಯ ಪಡೆದರು. ಈ ಎಲ್ಲ ಅಂಶಗಳನ್ನು ಗಮನಿಸಿದ ನಂತರ ಪ್ರವಾಹ ಮನೆಗಳು ಮತ್ತು ಗುಡಿಸಲುಗಳಿಗೆ ಹಾನಿ ಮಾಡಿದೆಯೇ ಎಂಬುದರ ಕುರಿತು ಮಾಹಿತಿ ಪಡೆಯಲಾಗಿ, ಪ್ರತಿಶತ ೮೯ರಷ್ಟು ಮಾಹಿತಿದಾರರು ಮನೆ ಮತ್ತು ಗುಡಿಸಲುಗಳಿಗೆ ಹಾನಿಯಾಗಿದೆಯೆಂದರೆ, ಉಳಿದ ಶೇಕಡಾ ೧೧ರಷ್ಟು ಮಾಹಿತಿದಾರರು ಮಾತ್ರ ಯಾವುದೇ ಹಾನಿಯಾಗಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಪ್ರವಾಹದಿಂದ ಮನೆಗಳ ಮೇಲಾದ ಹಾನಿ ಪ್ರಮಾಣವನ್ನು ವಿಚಾರಿಸಲಾಯಿತು. ತಗ್ಗು ಪ್ರದೇಶಗಳಲ್ಲಿಯ ಮನೆಗಳಿಗೆ ಹೆಚ್ಚಿನ ಹಾನಿಯಾದರೆ ಎತ್ತರದಲ್ಲಿಯ ಮನೆಗಳಿಗೆ ಹಾನಿಯ ಪ್ರಮಾಣ ಕಡಿಮೆಯಾಗಿರುವುದು ತಿಳಿದು ಬರುತ್ತದೆ. ಪರಿಶಿಷ್ಟ ಜಾತಿಯ ಜನರ ಮೇಲೆ ಇದರ ದುಷ್ಪರಿಣಾಮ ಹೆಚ್ಚಿನದಾಗಿತ್ತು. ಇದರ ಕುರಿತು ಮಾಹಿತಿ ಪಡೆದುಕೊಂಡು ಕೋಷ್ಟಕ ೭.೧೧ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೭.೧೧
ಮನೆಗಳಿಗೆ ಹಾನಿ ಯಾವ ಪ್ರಮಾಣದಲ್ಲಿ ಉಂಟಾಗಿದೆ.

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧ ರಿಂದ ೨ ಸಾವಿರ	೨೪	೪.೧೪
೨	೩ ರಿಂದ ೫ ಸಾವಿರ	೦೪	೦.೬೯
೩	೬ ಸಾವಿರ ಮೇಲ್ಪಟ್ಟು	೪೮೮	೮೪.೧೪
೪	ಹಾನಿ ಇಲ್ಲ	೬೪	೧೧.೦೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೭.೧೧ನ್ನು ಗಮನಿಸಿದಾಗ ಪ್ರತಿಶತ ೮೪.೧೪ರಷ್ಟು ಮಾಹಿತಿದಾರರು ೬ ಸಾವಿರ ಮೇಲ್ಪಟ್ಟು ಹಾನಿ ಉಂಟಾಗಿದೆ ಎಂದರೆ, ೧ ರಿಂದ ೨ ಸಾವಿರವೆಂದು ೪.೧೪ ಮಾಹಿತಿದಾರರು, ಪ್ರತಿಶತ ೧ ರಷ್ಟು ಮಾಹಿತಿದಾರರು ೩ ರಿಂದ ೫ ಸಾವಿರವೆಂದು ಹೇಳಿದರೆ, ಪ್ರತಿಶತ ೧೧ ರಷ್ಟು ಮಾಹಿತಿದಾರರು ಯಾವುದೇ ಹಾನಿಗಳಾಗಿಲ್ಲವೆಂದು ತಿಳಿಸಿದರು. ಇವರೆಲ್ಲ ಎತ್ತರದ ಪ್ರದೇಶಗಳಲ್ಲಿ ವಾಸಿಸುವವರು. ಇದರಿಂದ ಪ್ರವಾಹದಿಂದ ಮನೆ/ಗುಡಿಸಲುಗಳಿಗೆ ಹೆಚ್ಚಿನ ಹಾನಿಯಾಗಿರುವುದು ತಿಳಿಯುತ್ತದೆ.

ಸರಕಾರ ಪ್ರವಾಹದಿಂದ ಬಾಧಿತವಾದ ಮನೆಗಳಿಗೆ ಪರಿಹಾರ ನೀಡಿತು. ಯಾವ ಪ್ರಮಾಣದಲ್ಲಿ ಪರಿಹಾರ ನೀಡಿತು ಎಂಬುದರ ಕುರಿತು ವಿಚಾರಿಸಲಾಯಿತು. ಬಾಧಿತ ಎಲ್ಲ ಮನೆಗಳಿಗೆ ಸರಕಾರ ಒಂದೇ ರೀತಿಯಾದ ಪರಿಹಾರ ನೀಡಿತು. ಇದರಿಂದ ಹೆಚ್ಚು ಹಾನಿಗೀಡಾದ ಕುಟುಂಬಗಳು ಮನೆಗಳನ್ನು/ಗುಡಿಸಲುಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಈಗ ಒಂದು ಗುಡಿಸಲು ಕಟ್ಟಿಕೊಳ್ಳಬೇಕಾದರೆ ೧೫ ರಿಂದ ೨೦ ಸಾವಿರ ಹಣ ಬೇಕು. ಮನೆಗಳ ನಿರ್ಮಾಣಕ್ಕಂತು ಹೇಳತೀರದು. ಕಾರಣ ಸರಕಾರ ಯಾವ ಪ್ರಮಾಣದಲ್ಲಿ ಪರಿಹಾರ ನೀಡಿತು ಎಂಬುದರ ಮಾಹಿತಿ ಪಡೆಯಲಾಯಿತು. ಜಿಲ್ಲಾಡಳಿತ ಇದಕ್ಕಾಗಿ ೪೦ ಕೋಟಿ ಹಣ ಖರ್ಚು ಮಾಡಿತ್ತು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿ, ಎಲ್ಲ ೫೮೦ ಮಾಹಿತಿದಾರರ ಮನೆಗಳಿಗೆ ಪರಿಹಾರವಾಗಿ ಸರಕಾರ ೨ ಸಾವಿರ ನೀಡಿರುವುದು ತಿಳಿಯುತ್ತದೆ. ಇದು ಅತ್ಯಂತ ಕಡಿಮೆ ಪ್ರಮಾಣದ ಪರಿಹಾರವಾಗಿದ್ದು ಇದರಿಂದ ಪ್ರವಾಹದಿಂದ ಹಾನಿಗೊಳಗಾದ ಮನೆ/ಗುಡಿಸಲುಗಳನ್ನು ಕಟ್ಟಿಕೊಳ್ಳುವುದು ಅಸಾಧ್ಯ.

ಪ್ರವಾಹದಿಂದ ಪರಿಸರ ಸಂಬಂಧಿತ ಸಮಸ್ಯೆಗಳನ್ನು ತಿಳಿಯಲು ೨೪ ಪ್ರಶ್ನೆಗಳಿವೆ. ಇವುಗಳನ್ನು ಗಮನಿಸಿದಾಗ ನದಿ ಪಾತ್ರ ಕೊಚ್ಚಿ ಹೋಗಿರುವುದು ನದಿಯ ನೀರು ಕುಡಿಯಲು ಯೋಗ್ಯ ಇಲ್ಲದಿರುವುದು, ಗ್ರಾಮದ ಸುತ್ತಲಿನ ಗುಂಡಿಗಳಲ್ಲಿ ನೀರು ತುಂಬಿ ಸಾಂಕ್ರಾಮಿಕ ರೋಗಗಳು ಹರಡಿರುವುದು, ಹುಲ್ಲುಗಾವಲುಗಳ ನಾಶ ಮುಂತಾದ ಸಮಸ್ಯೆಗಳನ್ನು ಕಂಡುಕೊಳ್ಳಬಹುದಾಗಿದೆ.

****

ಅಧ್ಯಾಯ : ಎಂಟು

ಪರಿಹಾರ
ಸಂಬಂಧಿತ ಸಮಸ್ಯೆಗಳು

ಅಧ್ಯಾಯ : ಎಂಟು

ಪರಿಹಾರ ಸಂಬಂಧಿತ ಸಮಸ್ಯೆಗಳು

ಪರಿಹಾರಕ್ಕೆ ಸಂಬಂಧಿಸಿದ ಪರಿಹಾರ ಸಮಸ್ಯೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಖವಟಕೊಪ್ಪ ಗ್ರಾಮದ ಜನತೆ ಪ್ರವಾಹ ಸಮಯದಲ್ಲಿಯ ತಾತ್ಕಾಲಿಕ ಪರಿಹಾರ ದೊರಕಿದ್ದು ಶಾಶ್ವತ ಪರಿಹಾರ ಇನ್ನೂ ದೊರಕಿಲ್ಲ. ಈ ವಿವರಣೆಗಳು ತಾತ್ಕಾಲಿಕ ಪರಿಹಾರಕ್ಕೆ ಸಂಬಂಧಿಸಿದವುಗಳಾಗಿವೆ. ನೈಸರ್ಗಿಕ ವಿಕೋಪ ಇಲ್ಲವೆ ಸ್ಥಳಾಂತರಗಳಿಂದ ಜನರ ಜೀವನ ಅಸ್ಥವ್ಯಸ್ತಗೊಂಡು ಜೀವನವನ್ನು ನಡೆಸುವುದು ದುಸ್ತರವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಸರಕಾರ ಇಲ್ಲವೆ ಇತರ ಯಾವುದೇ ಮೂಲಗಳಿಂದ ಸಹಾಯ ಅತೀ ಅವಶ್ಯಕ ಮತ್ತು ಅನಿವಾರ್ಯವಾಗಿರುತ್ತದೆ. ಆದರೆ ಪರಿಹಾರ ವ್ಯವಸ್ಥೆ ವೈಜ್ಞಾನಿಕವಾಗಿಲ್ಲ ಎಂಬ ಟೀಕೆಗಳಿವೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹೇಳುವಂತೆ ಇದೊಂದು ಓಬೇರಾಯನ ಕಾಲದ ಪದ್ಧತಿಯಾಗಿದೆ. ಪ್ರಕೃತಿ ವಿಕೋಪಗಳ ನಿರ್ವಹಣೆಗೆ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ವಿಕೋಪ ಮೇಲ್ವಿಚಾರಣೆ ಪ್ರಾಧಿಕಾರವಿದ್ದು, ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ, ತಹಶೀಲ್ದಾರ ಅಧ್ಯಕ್ಷತೆಯಲ್ಲಿ ತಾಲೂಕಾ ಮಟ್ಟದ ಪ್ರಾಧಿಕಾರಗಳಿದ್ದು ಇವುಗಳ ಮುಖಾಂತರ ವಿಕೋಪಗಳನ್ನು ನಿರ್ವಹಣೆ ಮಾಡಲಾಗುತ್ತದೆ. ರಾಜ್ಯಗಳು ಕೇಳುವ ವಿಕೋಪಗಳ ಪರಿಹಾರ ಮೊತ್ತಕ್ಕೂ ಕೇಂದ್ರ ಕೊಡಮಾಡುವ ಮೊತ್ತಕ್ಕೂ ಅಜಗಜಾಂತರ ವ್ಯತ್ಯಾಸ ಕಾಣುತ್ತೇವೆ. ಅರ್ನಾಬ ಪ್ರತಿಮ ದತ್ತ ಮತ್ತು ಅಲೋಕ ಗುಪ್ತ (೨೦೦೮) ಅವರು ಬಿಹಾರ ಪ್ರವಾಹದ ದುಷ್ಪರಿಣಾಮದ ಅಂದಾಜಿನಲ್ಲಿ ಆಗಿದ್ದ ನ್ಯೂನ್ಯತೆಗಳನ್ನು ತಿಳಿಸಿದ್ದಾರೆ. ಪ್ರಧಾನ ಮಂತ್ರಿಗಳು ಬಿಹಾರ ಪ್ರವಾಹದ ದುಷ್ಪರಿಣಾಮ ಸಮೀಕ್ಷೆಗೆ ಎಸ್.ಸಿ.ಜಾ ಅವರ ಅಧ್ಯಕ್ಷತೆಯಲ್ಲಿ ಸಮಿತಿ ನಿಯಮಿಸಿತು. ಸಮಿತಿ ದುಷ್ಪರಿಣಾಮ ಅವಲೋಕಿಸಿ ಇದನ್ನು ನಿಭಾಯಿಸುವುದು ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಸಾಧ್ಯವಿಲ್ಲದ ಮಾತು. ಪರಿಹಾರ ಕಾರ್ಯ ೨೫೦೦೦ ಕೋಟಿ ತಲುಪಬಹುದು. ಕಾರಣ ಏಶಿಯಾ ಇಲ್ಲವೆ ಜಾಗತಿಕ ಬ್ಯಾಂಕಿನ ಸಹಾಯ ಕೇಳಬೇಕೆಂದು ವರದಿ ನೀಡಿತು. ಇದಕ್ಕೂ ಮೊದಲು ಬಿಹಾರ

ಸರಕಾರ ೯೦೦೦ ಕೋಟಿ ಪರಿಹಾರ ಅಂದಾಜಿಸಿ ಕೇಂದ್ರದ ಸಹಾಯಕ್ಕೆ ಮನವಿ ಸಲ್ಲಿಸಿತ್ತು. ಕೇಂದ್ರ ೧೦೦೦ ಕೋಟಿ ಹಣ ಬಿಡುಗಡೆ ಮಾಡಿತ್ತು. ಇದರಿಂದ ಕೇಂದ್ರದ ಪ್ರಕೃತಿ ವಿಕೋಪಗಳ ಅನುದಾನ ರೀತಿಯನ್ನು ತಿಳಿಸುತ್ತದೆ.

ಕೇಂದ್ರದಿಂದ ರಾಜ್ಯಗಳಿಗೆ ಕೊಡಮಾಡುವ ಅನುದಾನಗಳಲ್ಲಿ ತಾರತಮ್ಯಗಳಿರುವುದು ತಿಳಿಯುತ್ತದೆ. ಕೇಂದ್ರ ಸರಕಾರಗಳು ಮಲತಾಯಿ ಧೋರಣೆಗಳನ್ನು ಅನುಸರಿಸುತ್ತವೆ ಎಂದು ರಾಜ್ಯ ಸರಕಾರಗಳ ದೂರು ಸರ್ವೆ ಸಾಮಾನ್ಯ. ಸರಕಾರಗಳಿಂದ ಬಂದಂತಹ ಅನುದಾನಗಳು ಸಮರ್ಪಕವಾಗಿ ವಿತರಣೆಯಾಗಿಲ್ಲವೆಂಬ ಆಪಾದನೆಗಳಿವೆ. ಪರಿಹಾರ ವಿತರಣೆ ವ್ಯವಸ್ಥೆಯಲ್ಲಿ ಸಾಕಷ್ಟು ನ್ಯೂನ್ಯತೆಗಳಿವೆ. ಸ್ವಜನ ಪಕ್ಷಪಾತ, ಅಧಿಕಾರಿಗಳು ಮತ್ತು ಮಧ್ಯವರ್ತಿಗಳಿಂದ ಸಂತ್ರಸ್ತರ ಶೋಷಣೆ ಸರ್ವೆ ಸಾಮಾನ್ಯ. 'ತೊಂದರೆಗೆ ಒಳಗಾದವರಿಗೆ ಪರಿಹಾರ ಕೊಡಲು ಸರಕಾರಗಳು ವಿಮಾ ಕಂಪನಿಗಳಲ್ಲ' ಎಂಬ ಅಧಿಕಾರಿಗಳ ಮನೋಭಾವನೆ ಪರಿಹಾರ ಕೊಡುವುದು ಸರಕಾರಗಳ ಕಾರ್ಯವಲ್ಲವೆಂದು ಹೇಳಿಕೆ ನೀಡುತ್ತಾರೆ. (೩೦-೧೧-೨೦೦೯ರ ವಿಜಯ ಕರ್ನಾಟಕ) ದಿನಪತ್ರಿಕೆಯಲ್ಲಿ ಪರಿಹಾರದ ಕುರಿತು ಈ ರೀತಿಯಾಗಿ ತಿಳಿಸುತ್ತಾರೆ. ಸಹಾಯಧನ ಒದಗಿಸುವುದು ಎಂದರೆ ಪರಿಹಾರ ನೀಡುವುದು ಎಂದರ್ಥವಲ್ಲ. ಯಾವುದೇ ದೇಶದಲ್ಲಿ ೧೦೦ಕ್ಕೆ ೧೦೦ರಷ್ಟು ನಷ್ಟವನ್ನು ತುಂಬಿಕೊಡುವಂಥ ವ್ಯವಸ್ಥೆಯಿಲ್ಲ ಒಬ್ಬ ವ್ಯಕ್ತಿಗೆ ೧೦ ಲಕ್ಷ ನಷ್ಟವಾಗಿದಲ್ಲೆಂದರೆ ಅಷ್ಟನ್ನು ಸರಕಾರ ನೀಡಬೇಕು ಎಂದಾದರೆ ನಾಲ್ಕು ಸಾವಿರಕ್ಕೂ ಹೆಚ್ಚು ಹಳ್ಳಿಗಳು, ಲಕ್ಷಾಂತರ ಜನ, ಅವರ ನಷ್ಟಕ್ಕೆ ಸರಕಾರದ ಇಡೀ ಬಜೆಟ್ಟನ್ನು ತೆಗೆದಿಟ್ಟರೂ ಸಾಕಾಗುವುದಿಲ್ಲ. ಸಹಾಯಧನ ನೀಡುವುದೆಂದರೆ ನಷ್ಟಕ್ಕೆ ಪೂರ್ಣ ಪರಿಹಾರವಲ್ಲ. ಮರಳಿ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ನೀಡುವ ಸಹಾಯ. ತುರ್ತು ಪರಿಹಾರ ಕಾರ್ಯದ ಸಂದರ್ಭದಲ್ಲಿ ಜೀವ ಉಳಿಸುವುದು ನಮಗೆ ಮುಖ್ಯ ಸವಾಲಾಗಿರುತ್ತದೆಯೇ ಹೊರತು ಪಾಯಿಖಾನೆ ಕಟ್ಟುವುದು, ಬಂಡೆ ಹಾಕುವುದು, ಸಂಚಾರಿ ಆಸ್ಪತ್ರೆ ನಿರ್ಮಿಸುವುದು ಮುಖ್ಯವಾಗಿರುವುದಿಲ್ಲ. ಅವುಗಳೇನಿದ್ದರೂ ಅನಂತರ ನಾವು ಕೈಕೊಳ್ಳುವ ಕೆಲಸ ಕಾರ್ಯಗಳಾಗಿರುತ್ತವೆ ಎಂಬುದು ಪರಿಹಾರದ ಬಗೆಗೆ ಅಧಿಕಾರಿಗಳ ಮನೋಭಾವನೆ.

ಈ ಪ್ರದೇಶದಲ್ಲಿ ಕಬ್ಬು ಪ್ರಮುಖ ಬೆಳೆ ಈಗ ಫಲವತ್ತತೆ ಕಡಿಮೆಯಾಗಿರುವ ಕಾರಣ ಆದಾಯ ಕಡಿಮೆಯಾಗಿ ಎಕರೆವಾರು ಉತ್ಪನ್ನ ೨೫ ಸಾವಿರಕ್ಕೆ ಇಳಿದಿದೆ. ಆದರೆ ಸರಕಾರದಿಂದ ದೊರೆತ ಪರಿಹಾರ ಎಕರೆಗೆ ೨೦೦೦ ಮಾತ್ರ. ಅದನ್ನು ಪಡೆದುಕೊಳ್ಳಲು ಹರಸಾಹಸ ಪಡಬೇಕು. ಪ್ರವಾಹಗಳಿಂದ ಮನೆಗಳನ್ನು ಕಳೆದುಕೊಂಡರೂ ಅವುಗಳನ್ನು ಕಟ್ಟಿಕೊಳ್ಳಲು 50 ಸಾವಿರದಿಂದ ಲಕ್ಷ ಹಣ ಖರ್ಚುಮಾಡಬೇಕು. ಆದರೆ ಸರಕಾರ ಕೊಡಮಾಡಿದ್ದು ಅತೀ ಕಡಿಮೆ ಪರಿಹಾರ.

ಸರಕಾರ ಶ್ರೀಮಂತರ ಅನುಕೂಲಕ್ಕೆ ಕೋಟಿಗಟ್ಟಲೆ ಹಣಖರ್ಚು ಮಾಡುತ್ತದೆ. ಆದರೆ ವಿಕೋಪಗಳಿಂದ ಸಂತ್ರಸ್ತರಾದವರಿಗೆ ಪರಿಹಾರ ಕೊಡುವಲ್ಲಿ ಮೀನ ಮೇಷ ಎಣಿಸುವದನ್ನು ಗಮನಿಸಿದರೆ ಬಂಡವಾಳಶಾಹಿ ವ್ಯವಸ್ಥೆ ಜಾರಿಯಲ್ಲಿರುವದು ಗಮನಕ್ಕೆ ಬರುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದ 'ನೆರೆ ಹಾವಳಿ ಪರಿಣಾಮ ಮತ್ತು ಪರಿಹಾರ ಅಧ್ಯಯನ ವರದಿ 2009'ರಲ್ಲಿ ಪರಿಹಾರ ಕುರಿತು ಈ ಕೆಳಗಿನಂತೆ ತಿಳಿಸಿದ್ದಾರೆ. ಪರಿಹಾರ ಹಂಚಿಕೆಯಲ್ಲಿ ಪಕ್ಷಪಾತದ ಭ್ರಷ್ಟತೆಯ ದೂರುಗಳು ಕೇಳಿಬಂದಿರುವುದು. ನೆರೆ ಪರಿಹಾರದ ಚೆಕ್ ನೀಡುವಲ್ಲಿ ರಾಜಕಾರಣ ಮತ್ತು ಆಡಳಿತ ಅದಕ್ಷತೆ ಕೆಲವು ಕಡೆ ಹೊರ ಬಂದಿದೆ. ಮುಖ್ಯವಾಗಿ ಸರಕಾರ ನೆರೆ ಪ್ರದೇಶದಲ್ಲಿ ಬಿದ್ದ ಮನೆಗಳ, ಸತ್ತ ಜಾನುವಾರುಗಳ ಹಾಗೂ ಜನರ ಆರ್ಥಿಕ, ಜೀವ ನಷ್ಟಗಳ ಬಗ್ಗೆ ವೈಜ್ಞಾನಿಕ ವರದಿಗಳನ್ನು ಅಧಿಕೃತವಾಗಿ ಮಾಡದೆ ತಾತ್ಕಾಲಿಕವಾಗಿ ಸಿದ್ದಪಡಿಸಿದ ವರದಿಗಳ ಆಧಾರದ ಮೇಲೆ ಪರಿಹಾರ ಕೊಡುತ್ತಿರುವದು ಸಮಸ್ಯೆಗೆ ಕಾರಣವಾಗುತ್ತಿದೆ. ಅನ್ಯಾಯಕ್ಕೆ ಒಳಗಾದವರು ತಮಗೆ ಸೂಕ್ತ ಪರಿಹಾರ ಸಿಗದ ಬಗ್ಗೆ ಅಧ್ಯಯನ ವೇಳೆ ತಮ್ಮ ನೋವನ್ನು ಹೇಳಿಕೊಂಡರೆಂದು ತಿಳಿಸಿದೆ. ನೆರೆ ಪರಿಹಾರ 6ತಿಂಗಳು, ವರ್ಷಗಳಲ್ಲಿ ಮುಗಿಯುವ ಕಾರ್ಯವಲ್ಲ. ಲಕ್ಷಾಂತರ ಜನರ ಮುರಿದ ಬದುಕನ್ನು ಮತ್ತೆ ಕಟ್ಟುವದು ಅಥವಾ ಅವರೇ ಕಟ್ಟಿಕೊಳ್ಳುವದು ಸರಳವಾದ ಸಂಗತಿಯಲ್ಲ. ಊರುಗಳನ್ನು ಸ್ಥಳಾಂತರಿಸುವದು, ಅಲ್ಲಿ ಮನೆ ಕಟ್ಟಿಕೊಳ್ಳುವದು ಸ್ಥಳಾಂತರದ ವ್ಯಾಖ್ಯೆಯ ಚೌಕಟ್ಟಿಗೆ ಸೇರದ ಊರುಗಳಲ್ಲಿ ಬಿದ್ದ ಮನೆಗಳಿಗೆ ಪರಿಹಾರ ನೀಡುವದು ಮಾತ್ರ ಪರಿಹಾರವಾಗಬಾರದೆಂದು ತಿಳಿಸಿ ಅದು ತುರ್ತು ಕಾರ್ಯಕ್ರಮವಾಗದೆ ಸರಕಾರ ದೀರ್ಘಾವಧಿ ಕಾರ್ಯಕ್ರಮ ರೂಪಿಸಬೇಕೆಂದಿದೆ. ಈ ಕಾರ್ಯಕ್ರಮಕ್ಕಾಗಿ ಪ್ರತಿ ವರ್ಷ ಸರಕಾರಗಳು ತನ್ನ ಬಜೆಟ್ಟಿನಲ್ಲಿ ಹಣ ತೆಗೆದಿರಿಸಬೇಕು. ಕನಿಷ್ಠ ಹತ್ತು ವರ್ಷ ಮುಂದುವರಿಸಿಕೊಂಡು ಹೋಗಬೇಕೆಂದು ತಿಳಿಸಿದೆ. ಅಲ್ಲದೆ ಪರಿಹಾರ ಹಕ್ಕಿನ ಸಂತಿಯಾಗಿರಬೇಕು. ವಿನಾ ಹಂಗಿನ ಸಂಗತಿಯಲ್ಲವೆಂದು ತಿಳಿಸಿ, ಯಾವ ಕಾರಣಕ್ಕೂ ಜನರನ್ನು ಭಿಕ್ಷುಕರನ್ನಾಗಿ ಪರಿಗಣಿಸಬಾರದೆಂದು ತಿಳಿಸಿದೆ. ಆದರೆ ಇಂತಹ ಮನೋಭಾವಗಳು ಇಂದಿನ ಸರಕಾರ ಮತ್ತು ಅಧಿಕಾರಿಗಳಲ್ಲಿ ಇಲ್ಲದಿರುವುದು ದುರ್ದೈವದ ಸಂಗತಿ. ದಾನಿಗಳು ಧರ್ಮಾತ್ಮರು, ಸಂಘ ಸಂಸ್ಥೆಗಳು, ಧಾರ್ಮಿಕ ಪ್ರಮುಖರು ನೆರೆ ಪರಿಹಾರದಲ್ಲಿ ಸರಕಾರಕ್ಕೆ ಕೈ ಜೋಡಿಸಿರುವುದನ್ನು ಸ್ವಾಗತಿಸಿದ ವರದಿ ಅವರಿಗೆ ಪರಿಹಾರದ ಜವಾಬ್ದಾರಿ ನೀಡುವುದು ಸರಿಯಲ್ಲವೆಂದು ತಿಳಿಸಿದೆ. ರಾಜಕೀಯ ಪಕ್ಷಗಳು ಪ್ರವಾಹಕ್ಕೆ ಹಣ ಸಂಗ್ರಹಣೆ ಮಾಡಿರುವುದನ್ನು ಕಾಣುತ್ತೇವೆ. ಈ ರೀತಿಯಾಗಿ ಆಗಬಾರದು ಅದು ಸರಕಾರದ ಜವಾಬ್ದಾರಿಯೆಂದು ತಿಳಿಸಿದೆ.

ನೈಸರ್ಗಿಕ ವಿಕೋಪ ಸ್ಥಳಾಂತರಗಳಲ್ಲಿ ಪರಿಹಾರವನ್ನು ನೀಡುವುದು ಸರಕಾರಗಳ ಪ್ರಮುಖ ಕಾರ್ಯ. ಆದರೆ ಹಿಂದಿನ ಅನೇಕ ಪುನರ್ವಸತಿ ಯೋಜನೆಗಳನ್ನು ಅವಲೋಕಿಸಿದಾಗ ಸರಿಯಾದ ಪರಿಹಾರ ಧನ ನೀಡದಿರುವುದು ಅಧ್ಯಯನಗಳಿಂದ ಗಮನಕ್ಕೆ ಬರುತ್ತದೆ. ಅಧ್ಯಯನಗಳಾದ ಶತ್ರುಘ್ನ(1981), ವ್ಯಾಸ (1983), ವಿಜ್ಞಾನ ಮತ್ತು ಪರಿಸರ ಅಧ್ಯಯನ ಕೇಂದ್ರ (1985) ಗಾಂಧಿ ಮತ್ತು ಅಜೀತ ಕುಮಾರ (1986) ಮತ್ತು ಝುಕರಲ (1988) ಈ ಎಲ್ಲ ಅಧ್ಯಯನಗಳಲ್ಲಿ ಯೋಗ್ಯ ಪರಿಹಾರ ನೀಡದಿರುವ ಮಾಹಿತಿ ಇದ್ದರೆ ಇನ್ನುಳಿದ ಕೆಲವೊಂದು ಅಧ್ಯಯನಗಳಾದ ಗಜರಾಜನ್ (1970), ಮುತ್ತಯ್ಯ ಮಾಥುರ್ (1975), ವ್ಯಾಸ (1980) ಜೋಷಿ (1982) ಮುಂತಾದ ಅಧ್ಯಯನಗಳಲ್ಲಿ ಪರಿಹಾರದ ಹಣವನ್ನು ಮನೆಗಳ ನಿರ್ಮಾಣ, ಸಾಲ ಮರುಪಾವತಿ ಮತ್ತು ಹಬ್ಬ-ಹರಿದಿನ, ವಿವಾಹಗಳನ್ನು ಆಚರಿಸಲು ಉಪಯೋಗಿಸಿರುವುದನ್ನು ತಿಳಿಸುತ್ತಾರೆ.

ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಭೂಸ್ವಾಧೀನ ಮತ್ತು ಪರಿಹಾರ ಕಾರ್ಯಗಳಲ್ಲಿ ವಿಳಂಬವನ್ನು ಕಾಣುತ್ತೇವೆಂದು (ದಾಸ 2006)ರಲ್ಲಿ ತಿಳಿಸಿದ್ದಾರೆ. ಮ್ಯಾಕ್ಸ್ ಮಾರ್ಟಿನರು (1997) ಹಿರಾಕುಡ್ ಆಣೆಕಟ್ಟೆಯಿಂದ ಮಿಲಿಯನ್‌ಗಟ್ಟಲೇ ಜನರು ಸ್ಥಳಾಂತರಗೊಂಡರು ಇನ್ನೂ ಸಾವಿರಕ್ಕೂ ಹೆಚ್ಚಿನ ಜನರು ಯಾವುದೇ ಪರಿಹಾರ ಪಡೆಯುವಲ್ಲಿ ವಿಫಲರಾಗಿದ್ದಾರೆಂದು ತಿಳಿಸುತ್ತಾರೆ. ಫರ್ನಂಡಿಸ್ (1990)ರಲ್ಲಿ ಅಣೆಕಟ್ಟುಗಳ ನಿರ್ಮಣ ಪೂರ್ವದಲ್ಲಿಯೇ ಭೂಮಿ ವಶಪಡಿಸಿಕೊಳ್ಳಲಾಗುತ್ತದೆ. ಪರಿಹಾರ ವಿತರಣೆ ವಿಳಂಬವಾಗುತ್ತದೆ. ಆಸ್ತಿಗಳ ಮೌಲ್ಯಮಾಪನ ಸರಿಯಾಗಿರುವುದಿಲ್ಲವೆಂದು ತಿಳಿಸಿ 1894ರ ಭೂಸ್ವಾಧೀನ ಕಾಯ್ದೆಯಲ್ಲಿಯ ಆಸ್ತಿ ಮೌಲ್ಯಮಾಪನ, ಕುಟುಂಬದ ವ್ಯಾಖ್ಯೆ ಊಳುವವರಿಗೆ ಪರಿಹಾರ ಕೊಡದಿರುವ ನ್ಯೂನ್ಯತೆಗಳ ಕುರಿತು ತಿಳಿಸಿದ್ದಾರೆ. ಹಣದ ರೂಪದಲ್ಲಿ ಪರಿಹಾರ ಕೊಡುವುದಲ್ಲದೆ ಅನೇಕ ಕಂತುಗಳಲ್ಲಿ ವಿತರಿಸುವುದರಿಂದ ಬಾಧಿತ ಜನರು ಯಾವುದೇ ಆಸ್ತಿ ಖರೀದಿಸಲು ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಜೋಷಿ (1982) ಪರಿಹಾರ ಧನದ ದುರುಪಯೋಗದ ಕುರಿತು ತಿಳಿಸಿದ್ದಾರೆ. ಪರಿಹಾರವನ್ನು ಉತ್ಪಾದನಾ ಅಂಶಗಳಿಗೆ ಬಳಸುವ ಬದಲು ಕುಡಿತ, ಜೂಜಾಟ, ವೇಶ್ಯಾವಾಟಿಕೆಯಂತಹ ದುಶ್ಚಟಗಳಿಗೆ ಬಳಸಿರುವುದನ್ನು ಉಲ್ಲೇಖಿಸಿದ್ದಾರೆ. ನಂಜುಂಡಪ್ಪ (1976) ಸ್ಥಳಾಂತರದ ಸಮಯಗಳಲ್ಲಿ ಕಡಿಮೆ ಪರಿಹಾರ ಮೊತ್ತಕ್ಕಾಗಿ ಅಧಿಕಾರಿಗಳ ಭೇಟಿಗಾಗಿ ಅನೇಕ ವರ್ಷಗಳ ಕಾಲ ಕಾಯಬೇಕು. ಯೋಗ್ಯ ಪರಿಹಾರಕ್ಕಾಗಿ ತಮ್ಮ ಉತ್ಪಾದನಾ ಸಮಯ ಮತ್ತು ಹಣವನ್ನು ವ್ಯಯಿಸಬೇಕು. ಭೂಸ್ವಾಧೀನ ಮತ್ತು ಪುನರ್ವಸತಿ ಯೋಜನೆಗಳು ಅಧಿಕಾರಿಗಳ ವಿಚಾರದಂತಿರುತ್ತವೆ. ಸರಕಾರಿ ಅಧಿಕಾರಿಗಳು ಬಾಧಿತ ಜನರಿಗೆ ಸಹಾಯ ಮಾಡುವುದರ

ಬದಲು ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಸ್ಥಳಾಂತರಗೊಂಡ ಜನರು ಪುನರ್ವಸತಿ ಪ್ರದೇಶಗಳಲ್ಲಿ ಹೊಂದಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ. ಈ ದೀರ್ಘಾವಧಿ ಸಮಯದಲ್ಲಿ ಅನೇಕ ತೊಂದರೆಗೆ ಒಳಗಾಗಿ ಕರಾಳ ಭವಿಷ್ಯದ ಕಾರಣ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಾರೆ ಎಂದಿದ್ದಾರೆ.

ಸರಕಾರವು ಸಾಮಾನ್ಯವಾಗಿ ಎಲ್ಲ ಬಾಧಿತ ಜನರಿಗೆ ಪರಿಹಾರ ಧನವನ್ನು ವಿತರಿಸುತ್ತದೆ. ಆದರೆ ಹಲ ಕೆಲವು ಕುಟುಂಬಗಳಿಗೆ ಅದು ತಲುಪುವುದಿಲ್ಲ. ಹರ್ಷಾ, ಮಂಧೇರಾ (೨೦೦೫)ರಲ್ಲಿ ಯೋಜನೆಗಳಿಂದ ಪ್ರಭಾವಿತ ಜನರಿಗೆ ಸರಕಾರದ ಕಾನೂನುಗಳು ಮತ್ತು ಧೋರಣೆಗಳು ಪ್ರಯೋಜನವಾಗಿಲ್ಲ. ಕಾನೂನಿನಲ್ಲಿ ತಿಳಿಸಿದಂತೆಯೂ ಪರಿಹಾರ ಕ್ರಮಗಳು ಕಾರ್ಯಗತವಾಗುತ್ತಿಲ್ಲ ಎಂಬುದನ್ನು ತಿಳಿಸಿದ್ದಾರೆ. ಈ ಎಲ್ಲ ಅಧ್ಯಯನಗಳ ಮಾಹಿತಿಯನ್ನು ಆಧರಿಸಿ ಪರಿಹಾರ ಪಡೆದುಕೊಳ್ಳುವಲ್ಲಿ ಜನರು ಯಾವ ಸಮಸ್ಯೆ ಎದುರಿಸಿದರು ಎಂಬುದನ್ನು ಮಾಹಿತಿ ಪಡೆಯಲಾಯಿತು.

ಪ್ರವಾಹದ ನಂತರದ ಸಮಯದಲ್ಲಿ ಸರಕಾರಗಳು ಬಾಧಿತ ಜನರಿಗೆ ಪರಿಹಾರವನ್ನು ಘೋಷಿಸುತ್ತವೆ. ಆದರೆ ಆ ಪರಿಹಾರದ ಹಣ ಭ್ರಷ್ಟ ಅಧಿಕಾರಿಗಳು, ಸ್ವಜನಪಕ್ಷಪಾತ ಪಕ್ಷಪಾತ ರಾಜಕಾರಣಿಗಳು, ಊರಿನ ಮುಖಂಡರು, ದಲ್ಲಾಳಿಗಳು ಮತ್ತಿತ್ತರ ಜನರಿಂದ ಅದು ನಿರಾಶ್ರಿತರಿಗೆ ಕೆಲವೊಮ್ಮೆ ಸರಿಯಾಗಿ ತಲುಪುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾಹಿತಿದಾರರನ್ನು ಸಂದರ್ಶಿಸಿ, ಪ್ರವಾಹದ ಪರಿಹಾರ ಧನ ತಮಗೆ ಸರಿಯಾಗಿ ದೊರಕಿದೆಯೇ? ಎಂದು ಪ್ರಶ್ನಿಸಿದಾಗ, ಪ್ರವಾಹದ ಪರಿಹಾರ ಧನ ಪ್ರತಿಶತ ೯೭ರಷ್ಟು ಮಾಹಿತಿದಾರರಿಗೆ ದೊರಕಿದೆ ಎಂಬುದು ತಿಳಿಯುತ್ತದೆ. ಕೇವಲ ಶೇಕಡಾ ೩ರಷ್ಟು ಮಾಹಿತಿದಾರರು ಮಾತ್ರ ತಮಗೆ ಸರಿಯಾಗಿ ತಲುಪಿಲ್ಲವೆಂದು ತಿಳಿಸುತ್ತಾರೆ. ಇವರಿಗೆ (ಅಂದರೆ ಈ ಹದಿನೆಂಟು ಜನರಿಗೆ) ಪರಿಹಾರ ಧನ ದೊಕಿದ್ದರ ಕಾರಣ ಕೇಳಲಾಯಿತು.

ಸರಕಾರವು ಸಾಮಾನ್ಯವಾಗಿ ಎಲ್ಲ ಬಾಧಿತ ಜನರಿಗೆ ಪರಿಹಾರ ಧನ ವಿತರಿಸಿದೆ. ಆದರೂ ಸಮೀಕ್ಷಿಸಿದ ೧೮ ಜನರಿಗೆ ಅದು ತಲುಪದಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿಯನ್ನು ಕಲೆಹಾಕಿ ಕೋಷ್ಟಕ ೮.೧ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೮.೧

ಪರಿಹಾರದ ಧನ ದೊರಕದಿರಲು ಕಾರಣ

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಅವಿಭಕ್ತ ಕುಟುಂಬ	೧೨	೨.೦೭
೨	ಪರಸ್ಥಳಕ್ಕೆ ಹೋದ ಕಾರಣ	೦೬	೧.೦೩
೩	ದೊರಕಿದವರು	೫೬೨	೯೬.೯೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೧ರಿಂದ ಅವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಿರುವ ಕಾರಣ ತಮಗೆ ಪರಿಹಾರ ಧನ ಸಿಗಲಿಲ್ಲವೆಂದು ಪ್ರತಿಶತ ೨.೦೭ ಮಾಹಿತಿದಾರರು ತಿಳಿಸಿದರೆ, ಪರಸ್ಥಳಕ್ಕೆ ಹೋದ ಕಾರಣ ದೊರೆಯಲಿಲ್ಲವೆಂದು ಶೇಕಡಾ ೧.೦೩ರಷ್ಟು ಜನ ತಿಳಿಸಿದರು. ಉಳಿದ ಶೇಕಡಾ ೯೬.೯೦ರಷ್ಟು ಮಾಹಿತಿದಾರರಿಗೆ ಪರಿಹಾರ ಧನ ದೊರಕಿರುವುದು ತಿಳಿಯುತ್ತದೆ. ಹೆಚ್ಚಿನ ಜನರಿಗೆ ಪರಿಹಾರ ಧನ ದೊರಕಿರುವುದು ಗಮನಕ್ಕೆ ಬರುತ್ತದೆ.

ಸರಕಾರ ಪರಿಹಾರ ಧನ ನೀಡಿದೆ ನಿಜ. ಆದರೆ ಅದು ಹಸಿದ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬುದು ಸಂತ್ರಸ್ತರ ವಾದ. ಪ್ರವಾಹದಿಂದ ಸಾಕಷ್ಟು ಜನರು ತಮ್ಮ ಆಸ್ತಿ–ಪಾಸ್ತಿ, ಮನೆ–ಮಠಗಳನ್ನು ಕಳೆದುಕೊಂಡರೂ ಸರಕಾರ ಅವರ ಮೂಗಿಗೆ ತುಪ್ಪ ಸವರುವ ರೀತಿಯಲ್ಲಿ ಪರಿಹಾರ ಧನ ವಿತರಿಸಿದೆ ಪರಿಹಾರ ನೀಡುವಲ್ಲಿ ಜನರ ಜೀವನೋಪಾಯ ಮತ್ತು ಮರ್ಯಾದೆಯಿಂದ ಜೀವಿಸುವ ಹಕ್ಕನ್ನು ಪರಿಗಣಿಸದೆ, ಕಾನೂನಿನಲ್ಲಿ ನಮೂದಿಸಿದಂತೆ ಪರಿಹಾರ ನೀಡಲಾಗುತ್ತದೆಂದು (ಫರ್ನಾಂಡಿಸ್ ಮತ್ತು ನಾಯಕ ೧೯೯೮) ತಿಳಿಸಿದ್ದಾರೆ. ಈ ಅಂಶವನ್ನು ಪರಿಗಣಿಸಿ ಮಾಹಿತಿದಾರರಿಂದ ಬಂದ ಪ್ರತಿಕ್ರಿಯೆಯನ್ನು ಕೋಷ್ಟಕ ೮.೨ರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೮.೨

ಪರಿಹಾರ ಧನ ತಮಗೆ ಎಷ್ಟು ದೊರಕಿತು?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧೦೦೦೦	೫೬೨	೯೬.೯೦
೨	ಪರಿಹಾರ ಧನ ದೊರಕದಿರುವವರು	೧೮	೩.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೨ನ್ನು ಗಮನಿಸಿದಾಗ ಪ್ರತಿಶತ ೯೭ರಷ್ಟು ಮಾಹಿತಿದಾರರು ಸರಕಾರದಿಂದ ೧೦೦೦೦ಗಳ ಪರಿಹಾರ ಪಡೆದುಕೊಂಡಿದ್ದೇವೆಂದು ತಿಳಿಸಿದರೆ ಇನ್ನುಳಿದ ಶೇಕಡಾ ೩ರಷ್ಟು ಜನರಿಗೆ ಮಾತ್ರ ಪರಿಹಾರ ದೊರಕದಿರುವುದು ತಿಳಿಯುತ್ತದೆ.

ಸರಕಾರ ಪರಿಹಾರ ಧನವನ್ನು ವಿತರಿಸಿತು. ಪರಿಹಾರವನ್ನು ವೈಯಕ್ತಿಕವಾಗಿ ಅಥವಾ ಕುಟುಂಬಕ್ಕೆ ನೀಡಿದೆಯೇ ಎಂಬುದರ ಕುರಿತು ವಿಚಾರಿಸಲಾಯಿತು. ಕುಟುಂಬಕ್ಕೆ ವಿತರಿಸಿದರೆ ಕುಟುಂಬದ ಕೆಲವೊಂದು ಸದಸ್ಯರು ಪರಿಹಾರದಿಂದ ವಂಚಿತರಾಗಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದರೆ ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿರುವ ವಿವಾಹಿತ ಪ್ರತಿಯೊಬ್ಬ ಸದಸ್ಯರನ್ನು ಪ್ರತ್ಯೇಕ ಕುಟುಂಬವೆಂದು ಪರಿಗಣಿಸಿ ಅವರಿಗೆ ಪರಿಹಾರ ನೀಡಬೇಕು. ಇದನ್ನು ತಿಳಿಯಲು ಕೆಳಗಿನ ಮಾಹಿತಿ ಪಡೆಯಲಾಯಿತು. ಅದನ್ನು ಕೋಷ್ಟಕ ೮.೩ರಲ್ಲಿ ನೋಡಬಹುದು.

ಕೋಷ್ಟಕ ೮.೩

ಪರಿಹಾರ ಧನ ಕುಟುಂಬಕ್ಕೆ ದೊರಕಿದೆಯೇ ಅಥವಾ ವೈಯಕ್ತಿಕವಾಗಿ ದೊರಕಿದೆಯೇ?

ಕ್ರ.ಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ವೈಯಕ್ತಿಕವಾಗಿ	–	–
೨	ಕುಟುಂಬಕ್ಕೆ	೫೬೨	೯೬.೯೦
೩	ದೊರೆಯದೆ ಇರುವವರು	೧೮	೩.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೩ನ್ನು ನೋಡಿದಾಗ ಪರಿಹಾರವನ್ನು ಪಡೆದುಕೊಂಡ ಎಲ್ಲ ಮಾಹಿತಿದಾರರು ಪ್ರತಿ ಕುಟುಂಬಕ್ಕೆ ಪರಿಹಾರ ದೊರಕಿದೆ ಎಂದು ತಿಳಿಸಿದ್ದಾರೆ. ಶೇ೩.೧೦ರಷ್ಟು ಮಾಹಿತಿದಾರರು ತಮಗೆ ಪರಿಹಾರ ದೊರಕ್ಕಿಲ್ಲವೆಂದರು.

'ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಿಸಿತು' ಎಂಬ ಗಾದೆಯಂತೆ ಪರಿಹಾರದ ಮೊತ್ತ ಕೆಲವೊಂದು ಜನರಿಗೆ ಮಾತ್ರ ತಲುಪಿರುವುದರಿಂದ ಕೆಲವೊಂದು ಜನರು ವಂಚಿತರಾಗಿ ಅವರ ಕುಟುಂಬಗಳಲ್ಲಿ ಪರಿಹಾರದ ಹಣದಿಂದ ಅವರ ಕುಟುಂಬ ಸಂಬಂಧದ ಮೇಲೆ ಏನಾದರೂ ಪರಿಣಾಮ ಬೀರಿದೆಯೇ ಎಂಬುದರ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೮.೪ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೮.೪

ಪರಿಹಾರ ಧನ ಕುಟುಂಬ ಸಂಬಂಧದ ಮೇಲೆ ಬಿರುಕು ಉಂಟು ಮಾಡಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಸಹಕಾರ	–	–
೨	ಅಸಹಕಾರ	೧೫	೨.೫೯
೩	ಏನೂ ಇಲ್ಲ	೫೬೫	೯೭.೪೧
	ಒಟ್ಟು	೫೮೦	೧೦೦.೦೦

ಕೋಷ್ಟಕ ೮.೪ರಲ್ಲಿ ಪ್ರತಿಶತ ೩ರಷ್ಟು ಮಾಹಿತಿದಾರರು ಪರಿಹಾರ ಧನದಿಂದ ಕುಟುಂಬದ ಎಲ್ಲ ಸದಸ್ಯರಿಗೆ ದೊರೆಯದ ಕಾರಣ ಕುಟುಂಬದ ಪರಿಹಾರ ಧನ ದೊರಕದೆ ಇರುವವರು ಸ್ವಲ್ಪ ಅಸಹಕಾರ ಭಾವನೆ ತೋರಿಸುತ್ತಿದ್ದಾರೆ ಎಂದು ತಿಳಿಸಿದರು. ಅಲ್ಲದೇ ಈ ಮೊತ್ತವೇನು ದೊಡ್ಡದಲ್ಲ. ಆದರೆ ಇನ್ನು ಮುಂದೆ ಯಾವುದೇ ಪರಿಹಾರ ಹಣ ಈ ರೀತಿಯಾಗಬಾರದೆಂಬುದು ಮಾಹಿತಿದಾರರ ಅಳಲು. ಇನ್ನುಳಿದ ಶೇಕಡಾ ೯೭ರಷ್ಟು ಮಾಹಿತಿದಾರರು ಯಾವುದೇ ಪರಿಣಾಮವಿಲ್ಲವೆಂದು ತಿಳಿಸಿದರು.

ಸರಕಾರಗಳು ಪರಿಹಾರದ ಮೊತ್ತವನ್ನು ಅಧಿಕಾರಿಗಳ ಮುಖಾಂತರ ಇಲ್ಲವೆ ಬ್ಯಾಂಕುಗಳ ಮುಖಾಂತರ ನೀಡುತ್ತವೆ. ಕೆಲವೊಮ್ಮೆ ಪರಿಹಾರದ ಮೊತ್ತ ಸಂತ್ರಸ್ತರಿಗೆ ಸರಿಯಾಗಿ ತಲುಪುವುದಿಲ್ಲ. ಮಧ್ಯವರ್ತಿಗಳೇ ತಿಂದು ಹಾಕುವ ಸಾಧ್ಯತೆಗಳಿರುತ್ತವೆ. ಕಾರಣ ಪರಿಹಾರದ ಮೊತ್ತವನ್ನು ಯಾವ ರೀತಿಯಾಗಿ ವಿತರಿಸಬೇಕು ಎಂಬುದರ ಕುರಿತು ಮಾಹಿತಿದಾರರನ್ನು ವಿಚಾರಿಸಿದಾಗ, ಪ್ರತಿಶತ ೯೯ರಷ್ಟು ಮಾಹಿತಿದಾರರು ಬ್ಯಾಂಕುಗಳು ಮುಖಾಂತರವೇ ಪರಿಹಾರ ವಿತರಣೆಯಾಗಬೇಕೆಂದು ತಿಳಿಸಿದರೆ, ಶೇಕಡಾ ೦.೬೯ರಷ್ಟು ಮಾತ್ರ ಬ್ಯಾಂಕಿನ ಮುಖಾಂತರ ಬೇಡವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಪ್ರವಾಹದ ನಂತರದಲ್ಲಿ ಸರಕಾರ ಪಡಿತರ ವ್ಯವಸ್ಥೆ ಮಾಡಿತ್ತು. ಪಡಿತರ ಕಾರ್ಡುಗಳ ಮುಖಾಂತರ ಆಹಾರಧಾನ್ಯ, ಸೀಮೆ ಎಣ್ಣೆ ವಿತರಿಸಿತ್ತು. ಅವು ಸಂತ್ರಸ್ತರಿಗೆ ಸರಿಯಾಗಿ ತಲುಪಿದರ ಕುರಿತು ಮಾಹಿತಿ ಪಡೆಯಲಾಯಿತು. ಸರಕಾರ ಎರಡು ಹಂತಗಳ ಮೂಲಕ ೧೦ ಕೆ.ಜಿ. ಅಕ್ಕಿ, ೧೦ ಕೆ.ಜಿ. ಗೋಧಿ, ೧೦ ಲೀಟರ್ ಸೀಮೆ ಎಣ್ಣೆ ವಿತರಿಸಿತ್ತು. ಆಹಾರ ಧಾನ್ಯಗಳ ಪಡಿತರ ವ್ಯವಸ್ಥೆ ಸರಿಯಾಗಿತ್ತೇ? ಎಂಬುದನ್ನು ವಿಚಾರಿಸಿದಾಗ, ಪ್ರತಿಶತ ೯೭ರಷ್ಟು ಮಾಹಿತಿದಾರರು ಪಡಿತರ ವ್ಯವಸ್ಥೆ ಇತ್ತು ಎಂದು ತಿಳಿಸಿದರೆ, ಇನ್ನುಳಿದ ಶೇಕಡಾ ೩ರಷ್ಟು ಮಾಹಿತಿದಾರರು ತಮಗೆ ಆಹಾರ ಧಾನ್ಯ ಸಿಗದಿರುವ ಬಗೆಗೆ ತಿಳಿಸುತ್ತಾರೆ.

ಪ್ರವಾಹ ಸಮಯದಲ್ಲಿ ಮಹಿಳೆಯರು ಅಡುಗೆಗೆ ಉರವಲು ಸಮಸ್ಯೆ ಎದುರಿಸುತ್ತಾರೆ. ಸರಕಾರ ಪಡಿತರ ವ್ಯವಸ್ಥೆ ಮೂಲಕ ಪ್ರತಿ ಕುಟುಂಬಕ್ಕೆ ತಲಾ ೫ ಲೀಟರ್‌ನಂತೆ ಎರಡು ಹಂತಗಳಲ್ಲಿ ಸೀಮೆ ಎಣ್ಣೆ ಪೂರೈಸಿತ್ತು. ಸರಕಾರದ ಸೀಮೆ ಎಣ್ಣೆ ಪೂರೈಕೆ ಸರಿಯಾಗಿತ್ತೆ? ಎಂದು ಪ್ರಶ್ನಿಸಿದಾಗ, ಸರಕಾರ ಪಡಿತರ ವ್ಯವಸ್ಥೆ ಮೂಲಕ ಸೀಮೆ ಎಣ್ಣೆ ವಿತರಿಸಿತ್ತೆಂದು ಶೇಕಡಾ ೯೦ರಷ್ಟು ಮಾಹಿತಿದಾರರು ತಿಳಿಸಿದರೆ, ಪ್ರತಿಶತ ೩ರಷ್ಟು ಮಾಹಿತಿದಾರರು ಮಾತ್ರ ಪಡಿತರ ವ್ಯವಸ್ಥೆ ಬಗೆಗೆ ಪ್ರತಿಕ್ರಿಯೆ ನೀಡಲಿಲ್ಲ.

ಸರಕಾರ ಸಾರ್ವಜನಿಕರ ಹಿತಕ್ಕಾಗಿ ಪಡಿತರ ವ್ಯವಸ್ಥೆ ಮೂಲಕ ಸೀಮೆ ಎಣ್ಣೆ ಪೂರೈಕೆ ವ್ಯವಸ್ಥೆ ಮಾಡಿತ್ತು ಆದರೆ ಅದು ಸಂತ್ರಸ್ತರಿಗೆ ತೃಪ್ತಿ ತಂದಿದೆಯಾ ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿ ಅವರು ಕೆಳಗಿನಂತೆ ಪ್ರತಿಕ್ರಿಯೆ ನೀಡಿದರು. ಅದನ್ನು ಕೋಷ್ಟಕ ೮.೫ರಲ್ಲಿ ಕಾಣಬಹುದು.

ಕೋಷ್ಟಕ ೮.೫

ಸರಕಾರದ ಪಡಿತರ ವ್ಯವಸ್ಥೆ ತೃಪ್ತಿ ಒದಗಿಸಿತ್ತೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೬೨	೧೦.೬೯
೨	ಇಲ್ಲ	೫೧೮	೮೯.೩೧
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೫ರಲ್ಲಿ ಪ್ರತಿಶತ ೧೦.೬೯ರಷ್ಟು ಮಾಹಿತಿದಾರರು ಮಾತ್ರ ಪಡಿತರ ವ್ಯವಸ್ಥೆ ಬಗೆಗೆ ತೃಪ್ತಿ ವ್ಯಕ್ತಪಡಿಸಿದರೆ ಹೆಚ್ಚಿನ ಮಾಹಿತಿದಾರರು ಅಂದರೆ ಶೇಕಡಾ ೮೯.೩೧ರಷ್ಟು ಅಸಮಾಧಾನ ವ್ಯಕ್ತಪಡಿಸಿದರು.

ಸರಕಾರದ ಹಣ ಪಡೆಯಲು ಲಂಚ ನೀಡುವುದು ಮಾಮೂಲಾಗಿದೆ. ಪರಿಹಾರ ಧನದ ವಿತರಣಾ ಸಂದರ್ಭದಲ್ಲಿ ಲಂಚದ ಮಾಹಿತಿ ತಿಳಿದುಕೊಳ್ಳಲು ಪ್ರಯತ್ನಿಸಲಾಯಿತು. ಏಕೆಂದರೆ ಪರಿಹಾರ ಧನದ ಸಂದರ್ಭದಲ್ಲಿ ಅಧಿಕಾರಿಗಳು, ಮಧ್ಯವರ್ತಿಗಳು ಬಾಧಿತ ಜನರನ್ನು ಶೋಷಣೆ ಮಾಡುವುದು ಸಾಮಾನ್ಯ. ಕಾರಣ ಬಾಧಿತ ಜನರಿಂದ ಪರಿಹಾರ ಧನದ ವಿತರಣಾ ಸಂದರ್ಭದಲ್ಲಿ ತಾವು ಅಧಿಕಾರಿಗಳಿಗೆ ಹಣವನ್ನೇನಾದರೂ ನೀಡಿದ್ದೀರಾ? ಎಂದು ವಿಚಾರಿಸಲಾಗಿ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಪರಿಹಾರ ಧನದ ವಿತರಣಾ ಸಂದರ್ಭದಲ್ಲಿ ಅಧಿಕಾರಿಗಳಿಗೆ ಹಣವನ್ನು ನೀಡಿಲ್ಲವೆಂಬುದು ತಿಳಿಯುತ್ತದೆ.

ಪ್ರವಾಹವು ಎಲ್ಲ ಜಾತಿ, ಧರ್ಮ, ಲಿಂಗ ಮತ್ತು ಪ್ರದೇಶದ ಜನರ ಮೇಲೆ ಪ್ರಭಾವ ಬೀರಿದೆ. ಇದರಿಂದ ಎಲ್ಲರ ಬದುಕು ಚಿಂತಾಜನಕವಾಗಿರುವುದು ತಿಳಿಯುತ್ತದೆ. ಜನರ

ಚಿಂತೆಯನ್ನು ದೂರಮಾಡಲು ಸರಕಾರ ಪರಿಹಾರ ಧನ ನೀಡಿದೆ. ಆದರೆ ಅದು ಎಲ್ಲ ಜಾತಿ ಧರ್ಮದವರಿಗೆ ಪರಿಹಾರ ಸರಿಯಾಗಿ ವಿತರಣೆಯಾಗಿದೆಯೇ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೮.೬ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೮.೬

ಎಲ್ಲ ಜಾತಿ/ವರ್ಗದವರಿಗೆ ಪರಿಹಾರ ಸರಿಯಾಗಿ ವಿತರಣೆಯಾಗಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೬೮	೯೭.೯೩
೨	ಇಲ್ಲ	೧೨	೨.೦೭
	ಒಟ್ಟು	೫೮೦	೧೦೦.೦೦

ಕೋಷ್ಟಕ ೮.೬ರಲ್ಲಿ ಪ್ರತಿಶತ ೯೭.೯೩ರಷ್ಟು ಮಾಹಿತಿದಾರರು ಪರಿಹಾರ ವಿತರಣೆಯಲ್ಲಿ ಯಾವುದೇ ತಾರತಮ್ಯವಾಗಿಲ್ಲವೆಂದು ತಿಳಿಸಿದರೆ, ಶೇಕಡಾ ೨.೦೭ರಷ್ಟು ಮಾತ್ರ ತಾರತಮ್ಯವಾಗಿದೆಯೆಂದು ತಿಳಿಸಿರುವುದು ಕಂಡುಬರುತ್ತದೆ.

ಪ್ರತಿಯೊಂದು ಸಮುದಾಯದಲ್ಲಿ ಮುಖಂಡರು ಇರುತ್ತಾರೆ. ಇವರು ಗ್ರಾಮಸ್ಥರ ಹಿತವನ್ನು ಬಯಸುತ್ತಾರೆ. ಈ ಕಾರಣದಿಂದಲೇ ಅನಾದಿ ಕಾಲದಿಂದಲೂ ಗ್ರಾಮೀಣ ಮುಖಂಡರಿಗೆ ಗ್ರಾಮಗಳಲ್ಲಿ ಇತರರಿಗಿಂತ ಹೆಚ್ಚಿನ ಸ್ಥಾನಮಾನ ಗೌರವ, ಆದರಗಳು ಕಂಡು ಬರುತ್ತವೆ. ಈ ಗ್ರಾಮದ ಮುಖ್ಯಸ್ಥರು ಗ್ರಾಮದ ವ್ಯಾಜ್ಯಗಳನ್ನು ಬಗೆ ಹರಿಸುವದು, ಗ್ರಾಮಸ್ಥರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಮುಂತಾದ ಸಾಮಾಜಿಕ ಸೇವೆಗಳನ್ನು ಮಾಡುತ್ತಿರುತ್ತಾರೆ. ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರನ್ನು ವಿಚಾರಿಸಿ ಮಾಹಿತಿಯನ್ನು ಪಡೆದು ಕೋಷ್ಟಕ ೮.೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೮.೭

ಗ್ರಾಮದ ಪ್ರಮುಖರು ಪರಿಹಾರ ಧನ ಒದಗಿಸುವಲ್ಲಿ ಏನಾದರು ಪಾತ್ರ ನಿರ್ವಹಿಸಿದರೆ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೮೮	೧೫.೧೭
೨	ಇಲ್ಲ	೪೯೨	೮೪.೮೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೮.೭ರಲ್ಲಿ ಪ್ರತಿಶತ ೮೫ರಷ್ಟು ಮಾಹಿತಿದಾರರು ಪರಿಹಾರ ವಿತರಣೆಯ್ಲಲಿ ಗ್ರಾಮದ ಮುಖಂಡರು ತಮಗೆ ಯಾವುದೇ ಸಹಾಯ ಮಾಡಿಲ್ಲವೆಂದರೆ, ಉಳಿದ ಶೇಕಡಾ ೧೬ರಷ್ಟು ಮಾಹಿತಿದಾರರು ಮಾತ್ರ ಗ್ರಾಮ ಮುಖಂಡರಿಂದ ತಮಗೆ ಸಹಾಯವಾಗಿತ್ತೆಂದು ತಿಳಿಸುತ್ತಾರೆ. ಇದರಿಂದ ಪರಿಹಾರ ವಿತರಣೆ ಜವಾಬ್ದಾರಿಯನ್ನು ಸರಕಾರವೇ ತೆಗೆದುಕೊಂಡಿತ್ತೆಂದು ತಿಳಿಯುತ್ತದೆ.

ವಿವಿಧ ಅಭಿವೃದ್ಧಿ ಯೋಜನೆಗಳ ಸ್ಥಳಾಂತರಗಳನ್ನು ಅವಲೋಕಿಸಿದಾಗ ಸಂತ್ರಸ್ತರು ಪರಿಹಾರ ಧನವನ್ನು ಸರಿಯಾಗಿ ಬಳಸದೆ ಇರುವ ಸಂಗತಿ ಕಂಡು ಬರುತ್ತದೆ. ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರಿಂದ ಮಾಹಿತಿ ಪಡೆದು ಕೋಷ್ಟಕ ೮.೮ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೮.೮

ಪರಿಹಾರ ಧನ ಏತಕ್ಕಾಗಿ ಉಪಯೋಗಿಸಿದೀರಿ?

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಕುಟುಂಬ ನಿರ್ವಹಣೆ	೫೫೭	೯೬.೦೪
೨	ಚಟಗಳಿಗೆ	–	–
೩	ಪುನರ್ವಸತಿಗೆ	೦೫	೦.೮೬
೪	ಪರಿಹಾರ ದೊರೆತಿಲ್ಲ	೧೮	೩.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೮ನ್ನು ಗಮನಿಸಿದಾಗ ಪ್ರತಿಶತ ೯೬ರಷ್ಟು ಮಾಹಿತಿದಾರರು ಪರಿಹಾರ ಹಣವನ್ನು ಕುಟುಂಬದ ನಿರ್ವಹಣೆಗೆ ಉಪಯೋಗಿಸಿರುವುದು ತಿಳಿಯುತ್ತದೆ. ಉಳಿದ ೮೬ರಷ್ಟು ತಮ್ಮ ಪುನರ್ವಸತಿಗೆ, ಇನ್ನುಳಿದ ೩.೧೦ರಷ್ಟು ಮಾಹಿತಿದಾರರಿಗೆ ಪರಿಹಾರ ದೊರೆಯದಿರುವದು ತಿಳಿಯುತ್ತದೆ.

ಸರಕಾರ ಪ್ರತಿಕುಟುಂಬಕ್ಕೆ ೧೦೦೦ ರೂ.ದಂತೆ ಪರಿಹಾರ ಧನ ನೀಡಿತು. ಈ ಪರಿಹಾರ ಧನ ಸಾಕಷ್ಟು ಜನರಿಗೆ ತೃಪ್ತಿ ತಂದಿಲ್ಲವೆಂಬುದು ತಿಳಿಯುತ್ತದೆ. ಪರಿಹಾರದ ಮೊತ್ತವನ್ನು ಹೆಚ್ಚು ನೀಡಬೇಕಾಗಿತ್ತು ಎಂದು ಸಂತ್ರಸ್ತರ ಅಳಲಾಗಿದೆ. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಾಹಿತಿದಾರರನ್ನು ಸಂದರ್ಶಿಸಿ ಪರಿಹಾರ ಧನ ಹೆಚ್ಚುಬೇಕೆಂದು ಅನಿಸುತ್ತಿದೆಯೇ? ಎಂದು ಪ್ರಶ್ನಿಸಿದಾಗ, ಪರಿಹಾರ ಧನವನ್ನು ಹೆಚ್ಚಿಸಬೇಕೆಂದು ಪ್ರತಿಶತ ೯೭ರಷ್ಟು ಮಾಹಿತಿದಾರರ

ಅಭಿಪ್ರಾಯವಾಗಿದೆ, ಇನ್ನು ಪ್ರತಿಶತ ೨.೦೭ರಷ್ಟು ಮಾಹಿತಿದಾರರಿಗೆ ಪರಿಹಾರದ ಮೊತ್ತ ದೊರಕಿಲ್ಲದಿರುವುದು ತಿಳಿಯುತ್ತದೆ.

ವಲಸೆಯೆಂದರೆ ವ್ಯಕ್ತಿ ತಾನು ಹುಟ್ಟಿ ಬೆಳೆದ ಗ್ರಾಮ, ಪಟ್ಟಣ ಅಥವಾ ನಗರವನ್ನು ಬಿಟ್ಟು ಮತ್ತೊಂದು ಪ್ರದೇಶಕ್ಕೆ ನೆಲೆಸಲು ಹೋಗುವದು, ಅನೇಕ ಕಾರಣಗಳಿಗಾಗಿ ನಗರಗಳಿಂದ ಗ್ರಾಮಗಳಿಗೆ ವಲಸೆಯಾಗಬಹುದು. ಬೇರೆ ಗ್ರಾಮಗಳ ಅನೇಕ ಜನರು ಬಹಳ ದಿನಗಳಿಂದ ಗ್ರಾಮದಲ್ಲಿಯೇ ವಾಸವಾಗಿದ್ದಾರೆ. ಬೇರೆ ಗ್ರಾಮಗಳಿಂದ ವಲಸೆ ಬಂದ ಜನರಿಗೆ ಸರಕಾರದ ಪರಿಹಾರ ಧನವೇನಾದರೂ ದೊರಕಿದೆಯೇ ಎಂದು ಮಾಹಿತಿದಾರರಿಂದ ಮಾಹಿತಿ ಪಡೆಯಲಾಯಿತು. ಆ ಅಭಿಪ್ರಾಯಗಳನ್ನು ಕೋಷ್ಟಕ ೮.೯ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೮.೯

ವಲಸಿಗರು/ಗ್ರಾಮವಾಸಿಗಳಲ್ಲದವರಿಗೆ ಪರಿಹಾರ ದೊರಕಿದೆಯಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೯೯	೧೭.೦೭
೨	ಇಲ್ಲ	೩೫೧	೬೦.೫೨
೩	ತಿಳಿದಿಲ್ಲ	೧೩೦	೨೨.೪೧
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೮.೯ನ್ನು ಗಮನಿಸಿದಾಗ ಪ್ರತಿಶತ ೧೭.೦೭ರಷ್ಟು ಮಾಹಿತಿದಾರರು ವಲಸಿಗರು/ಗ್ರಾಮವಾಸಿಗಳಲ್ಲದವರಿಗೆ ಪರಿಹಾರ ಪಡೆದುಕೊಂಡಿದ್ದಾರೆಂದರೆ, ಪ್ರತಿಶತ ೬೦.೫೨ರಷ್ಟು ಜನರು ಇಲ್ಲವೆಂದರು, ಶೇಕಡಾ ೨೨.೪೧ರಷ್ಟು ಮಾಹಿತಿದಾರರು ತಮಗೇನು ತಿಳಿದಿಲ್ಲವೆಂದು ತಿಳಿಸಿದರು.

ತಾಲೂಕಿನಲ್ಲಿ ಶಾಶ್ವತವಾಗಿ ಪುನರ್ವಸತಿಗೊಳ್ಳತ್ತಿರುವ ಗ್ರಾಮಗಳ ಸಮೀಕ್ಷೆ ಕಾರ್ಯ ಮುಗಿದು ಪರಿಹಾರ ಧನ ಪಡೆದುಕೊಂಡಿದೆ. ಖವಟಕೊಪ್ಪ ಗ್ರಾಮದಲ್ಲಿ ಶಾಶ್ವತ ಸ್ಥಳಾಂತರಕ್ಕಾಗಿ ಮನೆಗಳ ಸಮೀಕ್ಷೆ ಕಾರ್ಯ ನಡೆದಿದ್ದು ಮನೆಗಳಿಗೆ ಶಾಶ್ವತ ಪರಿಹಾರ ಧನ ಇನ್ನು ದೊರಕಿಲ್ಲ ಎಂಬುದನ್ನು ತಿಳಿದು ಮನೆಗಳಿಗೆ ಶಾಸ್ವತ ಪರಿಹಾರ ಧನ ದೊರಕಿದೆಯೇ? ಎಂದು ಕೇಳಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಇನ್ನು ಶಾಶ್ವತ ಪರಿಹಾರ ಧನ ದೊರಕಿಲ್ಲವೆಂದು ತಿಳಿಸಿದ್ದಾರೆ.

ಬಾಧಿತ ಗ್ರಾಮಗಳ ಜನರಿಗೆ ಸರಕಾರದ ಪರಿಹಾರ ನೀಡಿ ಮಾಹಿತಿ ಇದ್ದರೆ ಒಳ್ಳೆಯದು. ಇದರಿಂದ ಪರಿಹಾರದ ಮೊತ್ತದ ಗೊಂದಲವಿರುವುದಿಲ್ಲ. ಅಧಿಕಾರಿಗಳಿಗೆ ಪರಿಹಾರದ ಮೊತ್ತ

ಹೆಚ್ಚು ಕಡಿಮೆ ಮಾಡಲು ಹಣ ನೀಡುವ ದಲ್ಲಾಳಿಗಳ ಮೊರೆ ಹೋಗುವ ಪ್ರಮೇಯ ಉದ್ಭವಿಸುವದಿಲ್ಲ. ಪರಿಹಾರದ ಮೊತ್ತ ನಿಗಧಿಗೊಳಿಸಲಿಕ್ಕೆ ಸಹಾಯಕವಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಜನರನ್ನು ಸರಕಾರದ ಪರಿಹಾರದ ನೀತಿಯ ಕುರಿತು ವಿಚಾರಿಸಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರಿಗೆ ಸರಕಾರದ ಪರಿಹಾರದ ನೀತಿ ತಿಳಿದಿಲ್ಲವೆಂಬುದು ತಿಳಿಯುತ್ತದೆ.

ಸಂತ್ರಸ್ತರ ಪರಿಹಾರಕ್ಕೆ ಸಂಬಂಧಿಸಿದ ೧೭ ಪ್ರಶ್ನೆಗಳಿವೆ. ಇವುಗಳ ಮುಖಾಂತರ ಪರಿಹಾರ ಸಮಸ್ಯೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಪರಿಹಾರಕ್ಕೆ ಸಂಬಂಧಿಸಿದ ಸಮೀಕ್ಷೆಗಳು ಸರಿಯಾಗಿಲ್ಲದಿರುವುದು, ಕಡಿಮೆ ಪರಿಹಾರ, ಪರಿಹಾರಗಳು ಸಂತ್ರಸ್ತರಿಗೆ ತಲುಪದಿರುವುದು ಮುಂತಾದ ಸಮಸ್ಯೆಗಳನ್ನು ಕಂಡುಕೊಂಡು ಬ್ಯಾಂಕುಗಳ ಮುಖಾಂತರ ಪರಿಹಾರ ನೀಡುವುದು ಸೂಕ್ತ ಎಂಬುದನ್ನು ಕಂಡುಕೊಳ್ಳಲಾಗಿದೆ. ಇದರಿಂದ ಬಾಧಿತ ಜನರಿಗೆ ಯಾವ ತೊಂದರೆಯಾಗದಂತೆ ನೋಡಿಕೊಳ್ಳಬಹುದಾಗಿದೆ.

ಅಧ್ಯಾಯ : ಒಂಬತ್ತು

ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳು

ಅಧ್ಯಾಯ : ಒಂಭತ್ತು

ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳು

ಸ್ಥಳಾಂತರವೆಂದರೆ ತಮ್ಮ ಮೂಲ ಮನೆ ಆಸ್ತಿ ಉದ್ಯೋಗಗಳನ್ನು ತೊರೆದು ಪರಿಚಯವಿಲ್ಲದ ಬೇರೆ ವಾಸಸ್ಥಳ ಮತ್ತು ಸಂಬಂಧಗಳನ್ನು ಹೊಂದುವದು ಭಾವನಾತ್ಮಕವಾಗಿ ಸುಲಭವಲ್ಲ. ಆದರೆ ಪ್ರಕೃತಿಯ ವಿಕೋಪದಿಂದಲೋ, ಯೋಜನಾ ಅನುಷ್ಠಾನದ ಕಾರಣವೋ ಸ್ಥಳಾಂತರ ಮತ್ತು ಪುನರ್ವಸತಿ ಅನಿವಾರ್ಯ. ಪುನರ್ವಸತಿ ಎಂದರೆ ಪುನಶ್ಚೈತನ್ಯವನ್ನು ಪಡೆಯಲು ಒದಗಿಸುವ ಮರುವಸತಿ.

ಸ್ವಾತಂತ್ರ್ಯದ ನಂತರ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ದೊರಕಿತು. ಆರ್ಥಿಕ ಅಭಿವೃದ್ಧಿ ಕಾರಣಕ್ಕೆ ಬೃಹತ್ ಅಣೆಕಟ್ಟುಗಳು, ಕೈಗಾರಿಕೆಗಳು, ವಿದ್ಯುತ್ ಮುಂತಾದ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಇವುಗಳ ಕಾರಣಕ್ಕಾಗಿ ಸಮಾಜದಲ್ಲಿಯ ಜನರನ್ನು ಒಕ್ಕಲೆಬ್ಬಿಸುವದು ಮತ್ತು ಪುನರ್ವಸತಿ ಸಮಸ್ಯೆಗಳು ಸರ್ವೆ ಸಾಮಾನ್ಯವಾಗಿ ಜನರು ಅವುಗಳ ಬಗೆಗೆ ಚಿಂತಿಸುವಂತೆ ಮಾಡಿವೆ. ಈ ಅಭಿವೃದ್ಧಿ ಯೋಜನೆಗಳಿಂದ ಸಂತ್ರಸ್ತ ಜನರ ಸ್ಥಳಾಂತರ ಅನಿವಾರ್ಯ. ಸ್ಥಳಾಂತರಗಳಿಂದ ಜನರ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ದುಷ್ಪರಿಣಾಮ ಕಾಣುತ್ತವೆ. ದೇಶದ ಅಭಿವೃದ್ಧಿ ಯೋಜನೆಗಳನ್ನು ಅವಲೋಕಿಸಿದಾಗ ಆದಿವಾಸಿಗಳು, ಗ್ರಾಮೀಣ ಜನರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಆರ್ಥಿಕವಾಗಿ ಹಿಂದುಳಿದವರು, ಭೂರಹಿತರು ನಿರಾಶ್ರಿತರಾಗಿ ತಮ್ಮದೆ ಆದ ಅನೇಕ ಸಮಸ್ಯೆಗಳನ್ನು ಎದುರಿಸುವದನ್ನು ಕಾಣುತ್ತೇವೆ. ಈ ವಿಷಯಗಳ ಕುರಿತ ವಿಸ್ತೃತ ಚರ್ಚೆ ಈ ಅಧ್ಯಾಯದಲ್ಲಿದೆ.

ಭಾರತದ ಪರಿಸರ ಕುರಿತಾದ ಎರಡನೆಯ ನಾಗರಿಕ ವರದಿ (೧೯೮೫) ಯಲ್ಲಿ ಭಾರತದಲ್ಲಿ ಬೃಹತ್ ಅಣೆಕಟ್ಟುಗಳ ನಿರ್ಮಾಣ ವಿವಾದಾತ್ಮಕ ವಿಷಯವಾಗಿದೆ. ಜನರ ಮೇಲಾಗುವ ದುಷ್ಪರಿಣಾಮಗಳಿಗಾಗಿ ಅನೇಕ ಸೇವಾ ಸಂಸ್ಥೆಗಳು ವಿರೋಧಿಸುತ್ತಿವೆ. ಯೋಜನಾಕಾರರು ಜಲ ವಿದ್ಯುತ್ ಮತ್ತು ಕಾಲುವೆ ನೀರಾವರಿಗೆ ಹೆಚ್ಚಿನ ಆಧ್ಯತೆ ನೀಡುತ್ತಾರೆ.

ಹೊರತಾಗಿ ಈ ಯೋಜನೆಗಳಿಂದ ಎಷ್ಟು ಜನಸಂಖ್ಯೆ ಸ್ಥಳಾಂತರಗೊಳ್ಳುತ್ತದೆ ಎಂಬುವದರ ಕುರಿತು ಹೆಚ್ಚು ವಿಚಾರಿಸುವದಿಲ್ಲ. ಸರಕಾರಿ ಅಧಿಕಾರಿಗಳು ಅಭಿವೃದ್ಧಿಗಾಗಿ ಕೆಲವೊಂದು ಜನರು ತೊಂದರೆಗೆ ಒಳಗಾಗಬೇಕಾಗುತ್ತದೆ ಎನ್ನುತ್ತಾರೆ. ಈ ಕೆಲವೊಂದು ಜನರು ಆದಿವಾಸಿಗಳು ಬಡವರು ಮತ್ತು ಅಧಿಕಾರ ಇಲ್ಲದವರಾಗಿರುತ್ತಾರೆ ಎಂದು ತಿಳಿಸಿದೆ. ಸ್ಥಳಾಂತರದಿಂದ ಉಂಟಾಗುವ ಸಮಸ್ಯೆಗಳ ಬಗೆಗೆ ಇತ್ತೀಚಿನ ದಿನಗಳಲ್ಲಿ ಸಮಾಜ ಚಿಂತಕರು ತೀವ್ರ ಗಮನ ಹರಿಸಿದ್ದಾರೆ.

ಭಾರತದಲ್ಲಿ ಪ್ರತಿ ವರ್ಷ ಒಂದು ಮಿಲಿಯನ್ ಜನರು ಸ್ಥಳಾಂತರಗೊಳ್ಳುತ್ತಾರೆ ಅವರಲ್ಲಿ ಹೆಚ್ಚಿನವರು, ಆದಿವಾಸಿಗಳು (ಸಾರಂಗಿ ಮತ್ತು ಬಿಲ್ಲೇರಿ ೧೯೮೮ ೮೭-೩೦] ಹಲವಾರು ವರ್ಷಗಳಿಂದ ವಾಸವಾಗಿರುವ ವಾಸಸ್ಥಳಗಳನ್ನು ತೊರೆದು ಅಪರಿಚಿತ ಸ್ಥಳಗಳಿಗೆ ಹೋಗುವ ಕನಸು ಮನ ನೋಯುವಂತದ್ದು. ಇವರ ತಮ್ಮ ಭೂಮಿಯನ್ನು ದೇಶದ ಅಭಿವೃದ್ಧಿಗೆ ಇತರ ಜನರ ಒಳತಿಗಾಗಿ ತ್ಯಾಗ ಮಾಡಬೇಕು. ಅನೇಕ ತೊಂದರೆಗಳನ್ನು ಅನುಭವಿಸಬೇಕು. (ಕೋಠಾರಿ ಸಮಿತ್ : ಡಿಸಪ್ಲೇಸ್ಡ್, ೧೯೮೮-೮೫)

ಠುಕರಲ್ ಅವರು ಸ್ಥಳಾಂತರದ ಸಮಸ್ಯೆಗಳು, ಸ್ಥಳಾಂತರದ ನಂತರ ಪ್ರಾರಂಭವಾಗದೆ ಅದಕ್ಕಿಂತಲೂ ಪೂರ್ವದಲ್ಲಿ ಪ್ರಾರಂಭವಾಗಿರುತ್ತವೆ ಎನ್ನುತ್ತಾರೆ. ಯೋಜನೆ ನಿರ್ಧಾರವಾದ ತಕ್ಷಣ ಆ ಪ್ರದೇಶದಲ್ಲಿಯ ಅಭಿವೃದ್ದಿ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ಜನರು ಭೂಮಿಗೆ ಹಣ ವಿನಿಯೋಗಿಸಲು ಹಿಂಜರಿಯುತ್ತಾರೆ. ಬ್ಯಾಂಕುಗಳು ಸಾಲ ಕೊಡಲು ಹಿಂದೇಟು ಹಾಕುತ್ತವೆ. ಶಾಲೆ ದವಾಖಾನೆಗಳಂತಹ ಸಾರ್ವಜನಿಕ ಸೌಲಭ್ಯ ಕಟ್ಟಡಗಳ ನಿರ್ಮಾಣ ಕಾರ್ಯಗಳನ್ನು ಸ್ಥಗಿತಗೊಳಿಸುತ್ತಾರೆ. ಅಣೆಕಟ್ಟು ಯೋಜನೆಗಳಲ್ಲಿ ಇಂತಹ ಪರಿಣಾಮಗಳು ದೀರ್ಘಾವಧಿಯಾಗಿರುತ್ತವೆ. ಅಭಿವೃದ್ದಿ ಕಾರ್ಯಗಳು ಸಮಾಜದ ಬೇರೆ ಬೇರೆ ಸಮೂಹದ ಮೇಲೆ ಬೇರೆ ಬೇರೆ ರೀತಿಯಿಂದ ಪ್ರಭಾವ ಬೀರುತ್ತವೆ. ಕೆಲವೊಂದು ಸಮೂಹಗಳಿಗೆ ಲಾಭವಾದರೆ ಇನ್ನೂ ಕೆಲವೊಂದು ಸಮೂಹಗಳಿಗೆ ಹಾನಿಯಾಗುತ್ತದೆ. ಸಾಮಾಜಿಕ, ಆರ್ಥಿಕ ಪ್ರಬಲ ಸಮೂಹಗಳಿಗೆ ಲಾಭವಾಗುತ್ತದೆ. ಆಂತರಿಕ ವಸಹಾತುಶಾಹಿ ಇರುತ್ತದೆ (ಅರಿಪರಂಫಲ್ಲಿ ಮಾಥ್ಯು ೧೯೮೯), ಸಮಾಜದ ಮೇಲು ವರ್ಗದವರು ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಂಡು ಜೀವನಮಟ್ಟ ಸುಧಾರಿಸಿಕೋಳ್ಳುವರು. ಆದಾಯ ಹೆಚ್ಚಿಸಿಕೊಂಡು ಉತ್ಪಾದನಾ ಅಂಶಗಳ ಮೇಲೆ ನಿಯಂತ್ರಣ ಸಾಧಿಸುವರು. [ಮಂಚ ಮತ್ತು ಇತರರು -೨೦೦೫], ಸ್ಥಳಾಂತರ ಪ್ರಾಚೀನ ಇತಿಹಾಸ ಹೊಂದಿದೆ. ವಸಹಾತುಶಾಹಿ ಕಾಲಾವಧಿಯಲ್ಲಿ ೩.೫ ಕೋಟಿ ಜನರು ಸ್ಥಳಾಂತರಗೊಂಡಿದ್ದರಂತೆ. (ಫರ್ನಾಡಿಸ್ ಮತ್ತು ಪರಾಂಜಪೆ ೧೯೯೭) ಸ್ಥಳಾಂತರದ ಬಗೆಗ

ಖಚಿತ ಮಾಹಿತಿ ದೊರೆಯುವುದಿಲ್ಲ. ೧೯೫೧ರಿಂದ ೧೯೯೦ರ ವರೆಗೆ ೨.೧೩ ರಿಂದ ಕೋಟಿ ಜನ ಸ್ಥಳಾಂತರಗೊಂಡಿದ್ದಾರೆ. ೨೦೦೦ದಿಂದ ೬ ಕೋಟಿವರೆಗೂ ಮೀರಿದೆ. (ಫರ್ನಾಂಡಿಸ್ ೨೦೦೬) ಸ್ಥಳಾಂತರ ಆದಿವಾಸಿಗಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರುತ್ತದೆ. ಸಾಲದ ಪ್ರಮಾಣ ಹೆಚ್ಚುತ್ತದೆ. ಒತ್ತಾಯದ ದುಡಿಮೆ ಆತ್ಮಾಭಿಮಾನಕ್ಕೆ ದಕ್ಕೆಯಿಂದ ಮಧ್ಯಪಾನ, ಅಪರಾಧ, ಬಾಲಾಪರಾಧ, ವೇಶ್ಯಾವೃತ್ತಿಗಿಳಿದು ಮಾನವೀಯತೆ ಕಳೆದುಕೊಳ್ಳುವ ಸ್ಥಿತಿಗೆ ಹೋಗುತ್ತಾರೆ. (ಪಾಂಡೆ ೧೯೯೮), ಸ್ಥಳಾಂತರಗಳು ಮಹಿಳೆಯರ ಮೇಲೆ ಪರಿಣಾಮ ಬೀರುತ್ತವೆ. ಮಹಿಳೆಯರು ಉದ್ಯೋಗ ಅವಕಾಶಗಳನ್ನು ಕಳೆದುಕೊಂಡು ಆದಾಯ ಇಲ್ಲದವರಾಗುತ್ತಾರೆ. ಕಡಿಮೆ ಸಂಬಳ, ಕೆಲಸದ ಸ್ಥಳಗಳಲ್ಲಿ ಸಾಮಾಜಿಕ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಪುನರ್ವಸತಿ ಯೋಜನೆಗಳಲ್ಲಿ ಮಹಿಳೆಯರನ್ನು ಕಡೆಗಣಿಸಲಾಗುತ್ತದೆ. (ಥುಕರಲ್ ೧೯೯೬, ಕೋಠಾರಿ ೧೯೯೬, ಪರಶುರಾಮ ೧೯೯೯, ಮಾಥುರ ೨೦೦೬) ಸ್ಕದ್ದರ (೧೯೭೨) ಸ್ಥಳಾಂತರದಿಂದಾಗುವ ದೈಹಿಕ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಣಾಮಗಳನ್ನು ಅವಲೋಕಿಸಿದ್ದಾರೆ. ಸ್ಥಳಾಂತರಗಳಿಂದ ತಮ್ಮ ಆಸ್ತಿ ಕಳೆದುಕೊಂಡಿರುವ ಬಗೆಗೆ ದುಃಖ, ಕರಾಳ ಭವಿಷ್ಯ ಮತ್ತು ಸ್ಥಳಾಂತರ ಅವಧಿಯಲ್ಲಿಯ ಆಹಾರದ ಕೊರತೆ, ಆದಾಯದಲ್ಲಿ ಇಳಿಕೆ ಕಾರಣ ರೋಗಗಳು ಹೆಚ್ಚಿ ಸಾವುಗಳ ಪ್ರಮಾಣ ಹೆಚ್ಚಳವಾಗುತ್ತವೆ. ಸಾಂಸ್ಕೃತಿಕ ಚಟುವಟಿಕೆಗಳು ಕಡಿಮೆಯಾಗುತ್ತವೆ. ಜನರು ಸಂಕಷ್ಟದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾರೆಂದು ಅಭಿಪ್ರಾಯಪಡುತ್ತಾರೆ.

ಪುನರ್ವಸತಿ

ಸ್ಥಳಾಂತರದಿಂದ ಜನರ ಮೇಲಾಗುವ ಮೇಲಿನ ಎಲ್ಲ ಅಂಶಗಳನ್ನು ಗಮನಹರಿಸಿ ಯೋಗ್ಯ ಪುನರ್ವಸತಿ ಒದಗಿಸಬೇಕು. ಪುನರ್ವಸತಿ ಎಂದರೆ ಆಕ್ಸಫರ್ಡ್ ನಿಘಂಟಿನ ಪ್ರಕಾರ ಪೂರ್ವದ ಸ್ಥಿತಿಗೆ ಮರಳುವಂತೆ ಮಾಡುವುದು. ಚೇಂಬರ್ಸ ನಿಘಂಟಿನಲ್ಲಿ ಸ್ಥಾನಮಾನ, ಹಕ್ಕು ಮತ್ತು ಸೌಲಭ್ಯಗಳನ್ನು ಮುಂಚಿನ ಸ್ಥಿತಿಯಲ್ಲಿರುವಂತೆ ಒದಗಿಸುವುದು ಎಂದು ತಿಳಿಸಿದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮೂಲ ನೆಲೆಗಳನ್ನು ಕಳೆದುಕೊಂಡು ಹೊಸದಾಗಿ ಪುನರ್ ನಿರ್ಮಿಸಲ್ಪಡುವ ಗ್ರಾಮಗಳು ಮತ್ತು ಪಟ್ಟಣಗಳು ಸಾವಿರಾರು, ವಿವಿಧ ಯೋಜನೆಗಳಿಂದ ಗ್ರಾಮಗಳನ್ನು ಮೂಲಸ್ಥಳದಿಂದ ಎತ್ತಂಗಡಿ ಮಾಡಿ ಬೇರೆಡೆ ಪುನರ್ ನಿರ್ಮಿಸಲಾಗುತ್ತದೆ. ಇಂತಹ ವಿಶೇಷ ಸಂದರ್ಭದಲ್ಲಿ ಚೀನಾದೇಶದ ಥೀನ್‌ಗೋರ್ಜಡ್ಯಾ ಅತಿ ಹೆಚ್ಚು ಮುಳುಗಡೆ ಪ್ರದೇಶವನ್ನು ಮತ್ತು ಸುಮಾರು ೨೦ ಲಕ್ಷ ಜನರನ್ನು ಸಂತ್ರಸ್ತರನ್ನಾಗಿ

ಮಾಡಿರುವುದರಿಂದ ಇದು ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿರುವುದು ಆಲಮಟ್ಟಿ ಯೋಜನೆ ಇದರಿಂದ ೫ ಲಕ್ಷ ಜನ ಸಂತ್ರಸ್ತರಾಗಿದ್ದಾರೆ.

ಅಭಿವೃದ್ಧಿ ಯೋಜನೆಗಳ ಉದ್ಧೇಶದಿಂದ ಜನರು ಸ್ಥಳಾಂತರಗೊಳ್ಳುವಾಗ ಯೋಜನಾಬದ್ಧವಾದ ಪುನರ್ವಸತಿ ಯೋಜನೆ ಅತಿ ಅವಶ್ಯ. ಪುನರ್ವಸತಿ ಯೋಜನೆಗಳು ಸರಕಾರಕ್ಕೆ ಮಾತ್ರ ಸಮಸ್ಯೆಯಾಗಿರದೆ ಯೋಜನೆಗಳಿಂದ ಪ್ರಭಾವಿತವಾಗುವ ಜನರ ಜೀವನದ ಮೇಲೂ ದುಷ್ಪರಿಣಾಮ ಬೀರುತ್ತವೆ. ಪುನರ್ವಸತಿ ಹಕ್ಕು ಎಂದು ಪರಿಗಣಿಸುವ ಕಾನೂನಿನ ಕೊರತೆ ಇದೆ ಎಂದು ವಿದ್ವಾಂಸರ ಅಭಿಪ್ರಾಯ.

ಹಿಪ್ಪರಗಿ ಯೋಜನೆಯಿಂದ ಖವಟಕೊಪ್ಪ ಗ್ರಾಮದ ಜನರು ಸ್ಥಳಾಂತರಗೊಳ್ಳುತ್ತಿದ್ದು ಜನರಿಗೆ ಯೋಗ್ಯ ಪುನರ್ವಸತಿ ಒದಗಿಸುವುದು ಸರಕಾರದ ಪ್ರಮುಖ ಕಾರ್ಯ. ಕೋಠಾರಿಯವರು ತಿಳಿಸಿದಂತೆ ಯೋಜನಾಕಾರರು ಸಾಮಾಜಿಕ ನಷ್ಟ ಕಡೆಗಣಿಸಿ, ಯೋಜನಾ ವೆಚ್ಚ ಕಡಿಮೆ ಮಾಡಿ, ಲಾಭದ ಪ್ರಮಾಣ ಹೆಚ್ಚಿಗೆ ತೋರಿಸಿ ಯೋಜನೆಗಳ ಬಗೆಗೆ ಒಳ್ಳೆಯ ಅಭಿಪ್ರಾಯ ಮೂಡಿಸುತ್ತಾರೆ. ಯೋಜನೆಗಳ ರಚನಾತ್ಮಕ ಕಾರ್ಯಗಳು ಮತ್ತು ಅಧಿಕಾರಿಗಳ ಖರ್ಚು ವೆಚ್ಚಕ್ಕಾಗಿ ಸಾಕಷ್ಟು ಖರ್ಚು ಮಾಡುವ ಸರಕಾರಗಳು ಪುನರ್ವಸತಿಗೆ ಗಮನ ನೀಡುವದಿಲ್ಲ. ಪುನರ್ವಸತಿ ಸ್ಥಳಗಳನ್ನು ಆಯ್ಕೆ ಮಾಡುವಲ್ಲಿ ಜನರ ಅಭಿಪ್ರಾಯ ಸಂಗ್ರಹಿಸದೇ ಇರುವುದು ಸರ್ವೆ ಸಾಮಾನ್ಯ. ಜನ-ಜಾನುವಾರುಗಳು ಮರಣ ಹೊಂದುವುದು, ಸಹಸ್ರಾರು ಎಕರೆ ಭೂಮಿ ಜಲಾವೃತಗೊಳ್ಳುವುದು, ಪ್ರವಾಹದ ಸಂದರ್ಭದಲ್ಲಿ ಮನೆ-ಮಠ ಬಿಟ್ಟು ಜನರು ಬೀದಿಯಲ್ಲಿ ವಾಸಿಸುವುದು ಇವೆಲ್ಲ ಯಾವುದೇ ಅಭಿವೃದ್ಧಿ ಯೋಜನೆಯ ತಪ್ಪದ ಸಮಸ್ಯೆಗಳು. ಇದರಿಂದಾಗಿ ಸರಕಾರಕ್ಕೆ ಸಾಕಷ್ಟು ಹಣವನ್ನು ಪರಿಹಾರಕ್ಕಾಗಿ ವೆಚ್ಚ ಮಾಡುವ ಅನೀವಾರ್ಯತೆ ಉಂಟಾಗುತ್ತದೆ. ಸರಕಾರದ ಖರ್ಚುಗಳು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಆಗುತ್ತದೆ. ನಷ್ಟದ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತದೆ. ಯೋಜನಾ ಆಯೋಗ ಪ್ರತಿ ವರ್ಷ ಪರಿಹಾರಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುವುದರ ಬದಲಾಗಿ ಶಾಶ್ವತ ಪುನರ್‌ವಸತಿ ಒದಗಿಸುವುದು ಒಳ್ಳೆಯ ಆರ್ಥಿಕ ಯೋಜನೆಯಾಗುವುದೆಂದು ಅಭಿಪ್ರಾಯಪಟ್ಟಿದೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿದ್ವಾಂಸರು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ಸಂತ್ರಸ್ತರ ಸ್ಥಳಾಂತರ ಮತ್ತು ಪುನರ್ವಸತಿಗಳ ಅಧ್ಯಯನದಲ್ಲಿ ನೀಡಿದ ಸಲಹೆಗಳನ್ನು ಅನುಲಕ್ಷಿಸಿ ಪ್ರಸ್ತುತ ಅಧ್ಯಯನ ಗ್ರಾಮದ ಸಂತ್ರಸ್ತರ ಪುನರ್ವಸತಿಗೆ ಸಂಬಂಧಿಸಿದ ಸಮಸ್ಯೆಗಳ ಸಮೀಕ್ಷೆ ಹಾಗೂ ಆ ಮೂಲಕ ಸ್ಥಳಾಂತರ ಮತ್ತು ಪುನರ್‌ವಸತಿ ಬಗೆಗೆ ಸರಕಾರದ ಕ್ರಮಗಳೇನು, ಜನರ ಅಭಿಪ್ರಾಯಗಳೇನು? ಪುನರ್‌ವಸತಿ ಒದಗಿಸುವಲ್ಲಿ ಗ್ರಾಮದ ನಾಯಕರ

ಪಾತ್ರವೇನು? ಪುನರ್‌ವಸತಿ ಯಾವ ರೀತಿ ಇರಬೇಕೆಂದು ಜನರು ಬಯಸುತ್ತಾರೆ ಮುಂತಾದ ಅಂಶಗಳ ಕುರಿತು ಜನರನ್ನು ಪ್ರಶ್ನಿಸಿ ಮಾಹಿತಿ ಪಡೆದುಕೊಂಡು ಅವುಗಳ ಕುರಿತು ವಿಸ್ತೃತವಾದ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಇದರಿಂದ ಕಂಡುಕೊಳ್ಳುವ ಫಲಿತಗಳನ್ನು ಮಹಾಪ್ರಬಂಧದ ಕೊನೆಯ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಪ್ರವಾಹವು ಜನರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ಕ್ಷೇತ್ರಗಳ ಮೇಲೆ ಗಾಢವಾದ ಪರಿಣಾಮ ಬೀರಿತು. ಇದರಿಂದ ಕುಟುಂಬದ ಆಹಾರ, ಉದ್ಯೋಗ ಅವಕಾಶಗಳ ಮೇಲಿನ ಪರಿಣಾಮಗಳು ತೀವ್ರತರವಾದವುಗಳು. ಮೇಲಿನ ಯಾವ ಕ್ಷೇತ್ರಗಳ ಮೇಲೆ ಪ್ರವಾಹದ ಪರಿಣಾಮಗಳು ಇದ್ದವು ಎಂಬುದರ ಕುರಿತು ಮಾಹಿತಿದಾರರಿಂದ ಮಾಹಿತಿ ಪಡೆದು ಕೋಷ್ಟಕ ೯.೧ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೯.೧

ಪ್ರವಾಹ ಯಾವ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತಿದೆ.

ಕ್ರ.ಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಆಸ್ತಿಪಾಸ್ತಿಗಳ ಮೇಲೆ	೧೬೮	೨೮.೯೭
೨	ಉದ್ಯೋಗಾವಕಾಶಗಳ ಮೇಲೆ	–	–
೩	ಬದುಕಿನ ಮೇಲೆ	–	–
೪	ಮೇಲಿನ ಎಲ್ಲವುಗಳ ಮೇಲೆ	೪೧೨	೭೧.೦೩
	ಒಟ್ಟು	೫೮೦	೧೦೦.೦೦

ಕೋಷ್ಟಕ ೯.೧ನ್ನು ಗಮನಿಸಿದಾಗ ಪ್ರತಿಶತ ೨೯ರಷ್ಟು ಮಾಹಿತಿದಾರರು ಪ್ರವಾಹ ಆಸ್ತಿಪಾಸ್ತಿಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದರೆ, ಶೇಕಡಾ ೭೧ರಷ್ಟು ಮಾಹಿತಿದಾರರು ಆಸ್ತಿಪಾಸ್ತಿ, ಉದ್ಯೋಗ, ಇಡಿ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ ಎಂದು ತಿಳಿಸಿದರು.
ಪ್ರವಾಹವು ಸಾಮಾಜಿಕ ಸಂಬಂಧ ಹಾಗೂ ಮಾನಸಿಕ ಅಂಶಗಳ ಮೇಲೆ ತೀವ್ರತೆರನಾದ ಪರಿಣಾಮ ಬೀರುತ್ತದೆ. ಪ್ರವಾಹ ಸಂಭವಿಸಿದಾಗ ಸಾಂಕ್ರಾಮಿಕ ರೋಗಗಳು ಹರಡುವುದು, ಸಾವು ನೋವುಗಳು ಸಂಭವಿಸುತ್ತವೆ. ಗ್ರಾಮ ವಾಸಕ್ಕೆ ಯೋಗ್ಯವಲ್ಲವೆಂಬ ಭಾವನೆ ಹುಟ್ಟುತ್ತದೆ. ಮಾಹಿತಿದಾರರಿಂದ ಮಾಹಿತಿದಾರರನ್ನು ನಿಮ್ಮ ಗ್ರಾಮ ವಾಸಕ್ಕೆ ಸುರಕ್ಷಿತವಲ್ಲವೆಂದು ತಿಳಿದಿರುವಿರಾ? ಎಂದು ಪ್ರಶ್ನಿಸಿದಾಗ, ಪ್ರತಿಶತ ೯೯.೮೩ರಷ್ಟು ಮಾಹಿತಿದಾರರು ತಮ್ಮ ಗ್ರಾಮ ವಾಸಕ್ಕೆ ಯೋಗ್ಯವಲ್ಲವೆಂದು ತಿಳಿಸಿದರೆ, ೦.೧೭ರಷ್ಟು ಮಾತ್ರ ಯೋಗ್ಯ ಇದೆ ಎಂದು ತಿಳಿಸಿದ್ದಾನೆ.

ಹಿಪ್ಪರಗಿ ಯೋಜನೆಯಿಂದ ಬಾಧಿತವಾದ ಗ್ರಾಮಗಳನ್ನು ಸರಕಾರ ಸ್ಥಳಾಂತರ ಮಾಡಲು ಯೋಚಿಸಿದೆ. ಇನ್ನೂ ಅದರ ಬಗೆಗೆ ದೃಢ ನಿರ್ಧಾರವಿಲ್ಲ. ಸರಕಾರ ಮತ್ತು ಅಧಿಕಾರಿಗಳು ಸ್ಥಳಾಂತರದ ಬಗೆಗೆ ನಿರ್ಧಾರ ತಿಳಿಸುತ್ತಿಲ್ಲ. ಇದರ ಬಗೆಗೆ ಊಹಾಪೋಹಗಳು ಏಳುತ್ತಿವೆ. ಯೋಜನೆಗಳ ಪರಿಣಾಮಗಳ ಕುರಿತು ಸರಕಾರಗಳು ಮುನ್ಸೂಚನೆ ನೀಡದಿರುವುದನ್ನು ತಜ್ಞರು ತಿಳಿಸಿದ್ದಾರೆ. ಗ್ರಾಮ ಮುಳಗಡೆ ವಿಷಯದ ಬಗೆಗೆ ಜನರಿಗೆ ಮಾಹಿತಿ ಕುರಿತು ವಿಚಾರಿಸಿದಾಗ, ಪ್ರತಿಶತ ೯೯.೮೩ರಷ್ಟು ಮಾಹಿತಿದಾರರಿಗೆ ಗ್ರಾಮ ಮುಳುಗಡೆ ವಿಷಯ ತಿಳಿದಿರುವುದು ಕಂಡು ಬರುತ್ತದೆ.

ಸ್ಥಳಾಂತರಗಳು ಜನರ ಜೀವನದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತವೆ. ದೊಡ್ಡ ದೊಡ್ಡ ರೈತರು ಸಣ್ಣ ಸಣ್ಣ ರೈತರಾಗುವುದು ಸಣ್ಣ ರೈತರು ಭೂರಹಿತರಾಗುವುದು, ಭೂರಹಿತರು ನಿರ್ಗತಿಕರಾಗುತ್ತಾರೆಂದು, ಪರಿಹಾರ ಹಣವನ್ನು ಸರಿಯಾಗಿ ಉಪಯೋಗಿಸುವುದಿಲ್ಲವೆಂದು ಅಧ್ಯಯನಗಳು ತಿಳಿಸುತ್ತವೆ. ಖವಟಕೊಪ್ಪ ಗ್ರಾಮದ ಮುಳುಗಡೆ ವಿಷಯ ತಿಳಿದ ನಂತರ ಭವಿಷ್ಯದ ಕುರಿತು ವಿಚಾರಿಸಿ ಜನರು ಬೇರೆ ಕಡೆ ಎಲ್ಲಾದರೂ ಜಮೀನುಗಳನ್ನು ಖರೀದಿಸಿದುದರ ಕುರಿತು ಮಾಹಿತಿ ಪಡೆದುಕೊಂಡಾಗ, ಪ್ರತಿಶತ ೨ರಷ್ಟು ಮಾಹಿತಿದಾರರು ಮಾತ್ರ ಬೇರೆ ಕಡೆ ಭೂಮಿ ಖರೀದಿಸಿದ್ದು ಉಳಿದ ಶೇಕಡಾ ೯೮ರಷ್ಟು ಮಾಹಿತಿದಾರರು ಭೂಮಿ ಖರೀದಿಸದೆ ಇರುವುದು ತಿಳಿಯುತ್ತದೆ.

ಗ್ರಾಮದ ಮುಳಗಡೆ ವಿಷಯ ತಿಳಿದು ಗ್ರಾಮದ ಹೊರಗಡೆಗಳಲ್ಲಿ ಕೆಲವೊಂದು ಜನರು ಮಾತ್ರ ಭೂಮಿ ಖರೀದಿಸಿದ್ದು ತಿಳಿಯುತ್ತದೆ. ಭೂಮಿ ಖರೀದಿಸಿದ ಮಾಹಿತಿದಾರರು ಯಾವ ಪ್ರಮಾಣದಲ್ಲಿ ಭೂಮಿ ಖರೀದಿಸಿದ್ದಾರೆ ಎಂಬುದರ ಕುರಿತು ವಿಚಾರಿಸಿ ಮಾಹಿತಿ ಪಡೆಯಲಾಯಿತು.

ಕೋಷ್ಟಕ ೯.೨
ಯಾವ ಪ್ರಮಾಣದಲ್ಲಿ ಭೂಮಿ ಖರೀದಿಸಿದ್ದೀರಿ?

ಕ್ರಸಂ.	ಭೂಮಿಯ ಪ್ರಮಾಣ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	೧ ರಿಂದ ೨ ಎಕರೆ	–	–
೨	೩ ರಿಂದ ೫ ಎಕರೆ	೦೫	೦.೮೬
೩	೬ ರಿಂದ ೧೦ ಎಕರೆ	೦೫	೦.೮೬
೪	೧೧ ಎಕರೆ ಮೇಲ್ಪಟ್ಟು	–	–
೫	ಭೂಮಿ ಖರೀದಿಸದೆ ಇರುವವರು	೫೭೦	೯೮.೨೮
	ಒಟ್ಟು	೫೮೦	೧೦೦.೦೦

ಕೋಷ್ಟಕ ೬.೨ರಲ್ಲಿ ಪ್ರತಿಶತ ೦.೮೬ರಷ್ಟು ಮಾಹಿತಿದಾರರು ೩ರಿಂದ ೫ ಎಕರೆ ಮತ್ತು ಶೇಕಡಾ ೦.೮೬ರಷ್ಟು ೬ರಿಂದ ೧೦ ಎಕರೆ ಜಮೀನುಗಳನ್ನು ಖರೀದಿಸಿರುವುದು ತಿಳಿಯುತ್ತದೆ. ಇನ್ನುಳಿದ ಶೇಕಡಾ ೯೮.೨೮ರಷ್ಟು ಮಾಹಿತಿದಾರರು ಯಾವುದೇ ಜಮೀನುಗಳನ್ನು ಖರೀದಿಸದೆ ಇರುವುದು ತಿಳಿಯುತ್ತದೆ. ಜಮೀನುಗಳನ್ನು ಖರೀದಿಸಿದವರ ಸಂಖ್ಯೆ ಕಡಿಮೆ ಇರುವುದರ ಜೊತೆಗೆ ಕಡಿಮೆ ಪ್ರಮಾಣದ ಜಮೀನುಗಳನ್ನು ಖರೀದಿಸಿದ್ದಾರೆ. ಇದಕ್ಕೆ ಕಾರಣ ಜಮೀನುಗಳ ಬೆಲೆಗಳು ಗಗನಕ್ಕೇರಿರುವುದು. ಮುಳಗಡೆ ಭೀತಿಯನ್ನು ಎದುರಿಸುತ್ತಿರುವ ಜನರು ಜಮೀನುಗಳನ್ನು ಖರೀದಿಸುವುದು ಕಠಿಣವಾಗುತ್ತಿದೆ. ಇನ್ನೂ ಶಾಶ್ವತ ಪರಿಹಾರದ ಮೊತ್ತ ದೊರಕದಿರುವುದು. ಪ್ರಮುಖ ಕಾರಣ.

ಗ್ರಾಮ ಮುಳಗಡೆ ವಿಷಯ ತಿಳಿದಿದ್ದರೂ ಹೆಚ್ಚಿನ ಮಾಹಿತಿದಾರರು ಬೇರೆ ಕಡೆಗೆ ಜಮೀನುಗಳನ್ನು ಖರೀದಿಸದೆ ಇರುವುದು ತಿಳಿದು ಬರುತ್ತದೆ. ಇವರಿಗೆ ಜಮೀನುಗಳನ್ನು ಕೊಂಡುಕೊಳ್ಳುವ ಆಸಕ್ತಿ ಕುರಿತು ವಿಚಾರಿಸಲಾಯಿತು. ಅವರ ವಿಚಾರಗಳನ್ನು ಕೋಷ್ಟಕ ೬.೩ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೬.೩

ಜಮೀನುಗಳನ್ನು ಖರೀದಿಸಲು ಬಯಸುತ್ತೀರಾ?

ಕ್ರ.ಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೩೧೮	೫೪.೮೩
೨	ಇಲ್ಲ	೨೬೨	೪೫.೧೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೬.೩ನ್ನು ಗಮನಿಸಿದಾಗ ಪ್ರತಿಶತ ೫೫ರಷ್ಟು ಮಾಹಿತಿದಾರರು ಜಮೀನುಗಳನ್ನು ಖರೀದಿಸಲು ಬಯಸಿದ್ದಾರೆ. ಇನ್ನೂಳಿದ ೪೫ರಷ್ಟು ಮಾಹಿತಿದಾರರು ಜಮೀನುಗಳನ್ನು ಖರೀದಿಸಲು ಇಚ್ಛೆ ವ್ಯಕ್ತಪಡಿಸದಿರುವುದು ತಿಳಿದು ಬರುತ್ತದೆ. ಇವರು ಭೂರಹಿತರಾಗಿರುವುದು ಮತ್ತು ಜಮೀನುಗಳ ಬೆಲೆ ಗಗನಕ್ಕೆ ಏರಿರುವುದರಿಂದ ಇಚ್ಛೆ ವ್ಯಕ್ತಪಡಿಸದಿರುವುದು ತಿಳಿಯುತ್ತದೆ.

ಖವಟಕೊಪ್ಪ ಗ್ರಾಮ ಕೃಷಿ ಪ್ರಧಾನವಾದ ಗ್ರಾಮ. ಪ್ರತಿಶತ ೯೦ರಷ್ಟು ಜನರು ಒಕ್ಕಲುತನವನ್ನು ಅವಲಂಭಿಸಿದ್ದಾರೆ. ಸರಕಾರ ಗ್ರಾಮದ ಸ್ಥಳಾಂತರಕ್ಕಾಗಿ ಯೋಚಿಸುತ್ತಿದೆ. ಆದರೆ ಅದು ವಾಸಸ್ಥಳಗಳನ್ನು ಮಾತ್ರ ಒದಗಿಸಲು ಯೋಚಿಸುತ್ತಿದೆ. ಭೂಮಿಗೆ ಪರಿಹಾರದ ಕುರಿತು ವಿಚಾರಿಸುತ್ತಿಲ್ಲ. ಹೀಗಾಗಿ ಸಂತ್ರಸ್ತರ ಭವಿಷ್ಯ ಅನಿಶ್ಚಿತತೆಯಿಂದ ಕೂಡಿದೆ. ಎಸ್. ಪರಶುರಾಮ (೧೯೯೭) ಅವರು ಸ್ಥಳಾಂತರಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಸ್ವಯಂ

ಉದ್ಯೋಗ ಯೋಜನೆ ಜಾರಿಗೊಳಿಸಬೇಕು. ಉದ್ಯೋಗ ಖಾತ್ರಿ ಯೋಜನೆ, ಜವಾಹರ ರೋಜಗಾರ ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆಂದು ತಿಳಿಸಿದ್ದಾರೆ. ಜನರು ಸ್ಥಳಾಂತರದ ನಂತರ ಯಾವ ಉದ್ಯೋಗಗಳನ್ನು ಮಾಡ ಬಯಸುತ್ತಾರೆ ಎಂಬುದರ ಕುರಿತು ವಿಚಾರಿಸಲಾಯಿತು.

ಕೋಷ್ಟಕ ೯.೪

ಸ್ಥಳಾಂತರದ ನಂತರ ನೀವು ಕೈಗೊಳ್ಳಬಯಸುವ ಉದ್ಯೋಗ ಯಾವುದು?

ಕ್ರಸಂ	ಉದ್ಯೋಗಗಳ ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಕುಟುಂಬದ ಮೂಲ ಉದ್ಯೋಗ	೯೬	೧೬.೫೫
೨	ವ್ಯಾಪಾರ	೯೨	೧೫.೮೬
೩	ಸರಕಾರಿ ಸೇವೆ	೩೯೨	೬೭.೫೯
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೪ನ್ನು ಅವಲೋಕಿಸಿದಾಗ ಪ್ರತಿಶತ ೧೬.೫೫ರಷ್ಟು ಕುಟುಂಬದ ಮೂಲ ಉದ್ಯೋಗ ಮಾಡುವುದಾಗಿಯೂ, ಶೇಕಡಾ ೧೫.೮೬ರಷ್ಟು ವ್ಯಾಪಾರ ಮಾಡುವುದಾಗಿಯೂ ಇನ್ನುಳಿದ ಪ್ರತಿಶತ ೬೭.೫೯ರಷ್ಟು ಸರಕಾರಿ ಉದ್ಯೋಗಗಳನ್ನು ಮಾಡುವ ಅಭಿಪ್ರಾಯ ವ್ಯಕ್ತಪಡಿಸಿದರು.

ಅಭಿವೃದ್ಧಿ ಯೋಜನೆಗಳು, ನೈಸರ್ಗಿಕ ವಿಕೋಪಗಳಿಗೆ ಸಿಲುಕಿದ ಜನರನ್ನು ಸರಕಾರ ಸಂತ್ರಸ್ತರೆಂದು ಪರಿಗಣಿಸಿ ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣ ಪತ್ರ ಒದಗಿಸುತ್ತದೆ. ಇದರಿಂದ ಸರಕಾರಿ ಉದ್ಯೋಗಗಳಲ್ಲಿ ಸಂತ್ರಸ್ತರಿಗೆ ಮೀಸಲಾತಿ ಸಿಗುತ್ತದೆ. ಅಂತಹ ಮೀಸಲಾತಿ ಸೌಲಭ್ಯವನ್ನು ಗ್ರಾಮದ ಕೆಲವೊಂದು ಜನರಿಗೆ ಮಾತ್ರ ದೊರಕಿದ್ದು ಅದರ ಕುರಿತು ಜನರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದು ಕೋಷ್ಟಕ ೯.೫ರಲ್ಲಿ ಕಾಣಬಹುದು.

ಕೋಷ್ಟಕ ೯.೫

ಸರಕಾರ ಉದ್ಯೋಗ ಮೀಸಲಾತಿ ಪ್ರಮಾಣ ಪತ್ರ ನೀಡಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೪೬	೭.೯೩
೨	ಇಲ್ಲ	೫೨೬	೯೦.೬೯
೩	ತಿಳಿದಿಲ್ಲ	೦೮	೧.೩೮
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೫ನ್ನು ಗಮನಿಸಿದಾಗ ಪ್ರತಿಶತ ೮ರಷ್ಟು ಮಾಹಿತಿದಾರರಿಗೆ ಮಾತ್ರ ಉದ್ಯೋಗ ಮೀಸಲಾತಿ ಪ್ರಮಾಣ ಪತ್ರ ದೊರಕಿದೆ ಎಂದರೆ, ಶೇಕಡಾ ೯೧ರಷ್ಟು ಮಾಹಿತಿದಾರರು ಪ್ರಮಾಣ ಪತ್ರ ದೊರಕಿಲ್ಲವೆಂದರು. ಇನ್ನುಳಿದ ೧ ರಷ್ಟು ಮಾಹಿತಿದಾರರು ಅದರ ಬಗೆಗೆ ತಮಗೆ ತಿಳಿದಿಲ್ಲವೆಂದರು.

ಪ್ರವಾಹದಿಂದ ಬಾಧಿತವಾದ ಕುಟುಂಬಗಳಿಗೆ ಸರ್ಕಾರ ವಿವಿಧ ಇಲಾಖೆಯಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಮೀಸಲಾತಿ ಒದಗಿಸುವ ಪ್ರಮಾಣ ಪತ್ರಗಳನ್ನು ಕೆಲವೊಂದು ಕುಟುಂಬಗಳಿಗೆ ಮಾತ್ರ ನೀಡಿದೆ. ಸಂತೋಷ ಕುಲಕರ್ಣಿಯವರು ತಮ್ಮ ಅಜ್ಜನ ಹೆಸರಿನಲ್ಲಿ ಜಮೀನುಗಳು ಇರುವುದರಿಂದ ಮೊಮ್ಮಕ್ಕಳಾದ ಇವರಿಗೆ ಮೀಸಲಾತಿ ಸೌಲಭ್ಯ ದೊರಕಿಲ್ಲವೆಂದರು. ಅಂದರೆ ಮೀಸಲಾತಿ ಸೌಲಭ್ಯ ಮಕ್ಕಳಿಗೆ ಮಾತ್ರ ಅನ್ವಯವಾಗುತ್ತದೆ. ನದಿಯ ದಡದಲ್ಲಿರುವ (ಗಡ್ಡೆಗಳು) ಪ್ರವಾಹದಿಂದ ಬಾಧಿತವಾಗುವ ಜಮೀನುಗಳನ್ನು ಹೊಂದಿರುವ ಕುಟುಂಬಗಳಿಗೆ ಮಾತ್ರ ಈ ಸೌಲಭ್ಯವನ್ನು ಸರಕಾರ ನೀಡಿರುತ್ತದೆ. ಉದ್ಯೋಗದ ಮೀಸಲಾತಿ ಪ್ರಮಾಣ ಪತ್ರ ದೊರೆಯದ ಮಾಹಿತಿದಾರರನ್ನು ಸರಕಾರಿ ಉದ್ಯೋಗ ಮೀಸಲಾತಿಗೆ ಸರಕಾರವನ್ನು ಒತ್ತಾಯಿಸುವುದರ ಕುರಿತು ವಿಚಾರಿಸಿ ಮಾಹಿತಿಯನ್ನು ಪಡೆಯಲಾಗಿ, ಸರಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಪ್ರಮಾಣ ಪತ್ರಕ್ಕಾಗಿ ಸರಕಾರವನ್ನು ಒತ್ತಾಯಿಸುತ್ತೇವೆ ಎಂದು ಪ್ರತಿಶತ ೯೨ರಷ್ಟು ಮಾಹಿತಿದಾರರು ತಿಳಿಸಿದರೆ, ಇನ್ನುಳಿದ ಶೇಕಡಾ ೮ರಷ್ಟು ಮಾಹಿತಿದಾರರಿಗೆ ಪ್ರಮಾಣ ಪತ್ರಕ್ಕಾಗಿ ಒತ್ತಾಯಿಸುವುದಿಲ್ಲ ಎಂದು ತಿಳಿಸಿರುವುದು ಕಂಡು ಬರುತ್ತದೆ.

ಪ್ರವಾಹ ಕುರಿತಾಗಿ ಅಧಿಕಾರಿಗಳು ಜನರಿಗೆ ಮುಂಚಿತವಾಗಿ ತಿಳಿಸಬೇಕು. ಗ್ರಾಮ ಮುಳಗಡೆ ವಿಷಯ ಮುಂಚಿತವಾಗಿ ಜನರಿಗೆ ತಿಳಿದಿರಬೇಕು. ಗ್ರಾಮ ಮುಳಗಡೆ ಕುರಿತ ಅಭಿಪ್ರಾಯಗಳನ್ನು ಸಂಗ್ರಹಿಸಬೇಕೆಂಬ ನಿಯಮಗಳಿವೆ. ಸರಕಾರದ ಅಧಿಕಾರಿಗಳು, ಜನಪ್ರತಿನಿಧಿಗಳು, ಗ್ರಾಮ ಮುಖಂಡರು ಈ ಕಾರ್ಯವನ್ನು ಮಾಡಬೇಕು. ಯಾರ ಮುಖಾಂತರ ಗ್ರಾಮ ಮುಳಗಡೆ ಮಾಹಿತಿ ಗ್ರಾಮದ ಜನತೆಗೆ ದೊರೆಯಿತು ಎಂಬ ಮಾಹಿತಿ ಪಡೆದು ಕೋಷ್ಟಕ ೯.೬ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೯.೬

ಪ್ರವಾಹದಿಂದ ಗ್ರಾಮ ಮುಳಗಡೆ ವಿಷಯ ಯಾರಿಂದ ತಿಳಿಯಿತು?

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಸರಕಾರದ ಸುತ್ತೋಲೆಗಳಿಂದ	೧೮೨	೩೧.೩೮
೨	ಸಭೆ ಸಮಾರಂಭಗಳಿಂದ	೨೦೦	೩೪.೪೮
೩	ಜನಪ್ರತಿನಿಧಿಗಳಿಂದ	೦೬	೧.೦೪
೪	ಗ್ರಾಮ ಮುಖಂಡರಿಂದ	೧೯೨	೩೩.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೬ನ್ನು ಗಮನಿಸಿದಾಗ ಗ್ರಾಮದ ಮುಳಗಡೆ ವಿಷಯ ಸರಕಾರದ ಸುತ್ತೋಲೆಗಳಿಂದ ತಿಳಿಯಿತೆಂದು ಪ್ರತಿಶತ ೩೧.೩೮ರಷ್ಟು, ಸಭೆ, ಸಮಾರಂಭಗಳಿಂದ ಎಂದು ೩೪.೪೮, ಜನಪ್ರತಿನಿಧಿಗಳಿಂದೆಂದು ೧.೦೪ ಮತ್ತು ಗ್ರಾಮ ಮುಖಂಡರಿಂದೆಂದು ಪ್ರತಿಶತ ೩೩.೧೦ ರಷ್ಟು ಮಾಹಿತಿದಾರರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸರಕಾರಕ್ಕೆ ಮತ್ತು ಜನಪ್ರತಿನಿಧಿಗಳಿಗೆ ಸ್ಥಳಾಂತರದ ಕುರಿತು ಜನರು ತಮ್ಮ ವಿಚಾರಗಳನ್ನು ತಿಳಿಸಬೇಕು. ಇದರಿಂದ ಸ್ಥಳಾಂತರದ ಸ್ಥಳ ನಿಗದಿಗೆ ಸಹಾಯವಾಗುತ್ತದೆ. ಪುನರ್ವಸತಿ ಸ್ಥಳಗಳನ್ನು ಆಯ್ಕೆ ಮಾಡುವಲ್ಲಿ ಜನರು ಅಭಿಪ್ರಾಯಗಳನ್ನು ಸಂಗ್ರಹಿಸುವದಿಲ್ಲವೆಂದು ಕೋಠಾರಿಯವರು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಸ್ಥಳಾಂತರದ ಕುರಿತಾದ ವಿವಿಧ ಅಧ್ಯಯನಗಳಲ್ಲಿ ಇದರ ಕೊರತೆ ಇದ್ದ ಕಾರಣ ಜನರನ್ನು ಗ್ರಾಮ ಪುನರ್ವಸತಿ ಬಗೆಗೆ ನಿಮ್ಮ ವಿಚಾರಗಳನ್ನು ಜನಪ್ರತಿನಿಧಿಗಳಿಗೆ/ಸರ್ಕಾರಕ್ಕೆ ತಿಳಿಸಿದ್ದೀರಾ? ಎಂದು ಪ್ರಶ್ನಿಸಿದಾಗ, ಪ್ರತಿಶತ ೫೧ರಷ್ಟು ಮಾಹಿತಿದಾರರು ತಮ್ಮ ವಿಚಾರಗಳನ್ನು ತಿಳಿಸಿದ್ದೇವೆ ಎಂದರೆ, ಶೇಕಡಾ ೪೯ರಷ್ಟು ಮಾಹಿತಿದಾರರು ತಿಳಿಸಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಅಧ್ಯಯನದಲ್ಲಿ ಅರ್ಧದಷ್ಟು ಮಾಹಿತಿದಾರರು ಸ್ಥಳಾಂತರ, ಪುನರ್ವಸತಿ ಮತ್ತು ಪರಿಹಾರ ಮುಂತಾದ ವಿಷಯಗಳ ಕುರಿತು ಸರಕಾರ ಜನಪ್ರತಿನಿಧಿಗಳಿಗೆ ತಮ್ಮ ವಿಚಾರಗಳನ್ನು ತಿಳಿಸಿದ್ದೇವೆ ಎಂದರು. ಜನರು ಕೊಡಮಾಡಿದ ವಿಚಾರಗಳಿಗೆ ಸರಕಾರ ಮತ್ತು ಜನಪ್ರತಿನಿಧಿಗಳು ಅವುಗಳಿಗೆ ಮಾನ್ಯತೆ ಕೊಟ್ಟಿರುವರೇ ಎಂಬುದರ ಕುರಿತು ಮಾಹಿತಿ ಪಡೆದು ಕೋಷ್ಟಕ ೯.೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೯.೭

ನಿಮ್ಮ ವಿಚಾರಗಳಿಗೆ ಮನ್ನಣೆ ದೊರೆಯಿತೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೨೫	೨೧.೫೫
೨	ಇಲ್ಲ	೧೬೯	೨೯.೧೪
೩	ತಿಳಿದಿಲ್ಲ	೨೮೬	೪೯.೩೧
	ಒಟ್ಟು	೫೮೦	೧೦೦.೦೦

ಕೋಷ್ಟಕ ೯.೭ನ್ನು ಗಮನಿಸಿದಾಗ ಪ್ರತಿಶತ ೨೧.೫೫ರಷ್ಟು ಮಾಹಿತಿದಾರರು ಮನ್ನಣೆ ದೊರೆಕಿದೆ ಎಂದರೆ, ಶೇಕಡಾ ೨೯.೧೪ ಇಲ್ಲವೆಂದರು, ಇನ್ನುಳಿದ ಪ್ರತಿಶತ ೪೯.೩೧ರಷ್ಟು ಮಾಹಿತಿದಾರರು ತಮಗೆ ಅದರ ಬಗೆಗೆ ಏನೂ ತಿಳಿದಿಲ್ಲವೆಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಪ್ರವಾಹ ಪೀಡಿತ ಗ್ರಾಮದಲ್ಲಿ ಮನೆಗಳ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ. ಮನೆಗಳ ಉದ್ದ, ಅಗಲ, ಮೇಲ್ಛಾವಣಿ ಮುಂತಾದ ವಿಷಯಗಳನ್ನು ಆಧರಿಸಿ ಇಂಜಿನಿಯರುಗಳು ಮೌಲ್ಯಮಾಪನ ಮಾಡುತ್ತಿದ್ದಾರೆ. ಮನೆಗಳ ಮೌಲ್ಯಮಾಪನ ಕ್ರಮಗಳ ಕುರಿತು ಜನರಿಗೆ ಏನಾದರೂ ಮಾಹಿತಿ ಇದೆಯೆ ಎಂಬುದರ ಕುರಿತು ಪ್ರಶ್ನೆಗಳನ್ನು ಕೇಳಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿ, ಪ್ರತಿಶತ ೧.೦೩ರಷ್ಟು ಮಾಹಿತಿದಾರರಿಗೆ ಮಾತ್ರ ಇದರ ಬಗೆಗ ಮಾಹಿತಿ ಇದ್ದು ಉಳಿದ ೯೮.೯೭ರಷ್ಟು ಮಾಹಿತಿದಾರರಿಗೆ ಅದರ ಬಗೆಗೆ ಮಾಹಿತಿ ಇಲ್ಲದಿರುವುದು ತಿಳಿಯುತ್ತದೆ.

ಆಧುನಿಕ ಜಗತ್ತಿನಲ್ಲಿ ಭ್ರಷ್ಟಾಚಾರ ಒಂದು ಪದ್ಧತಿಯಾಗಿ, ಸಾಮಾಜಿಕ ಮನ್ನಣೆ ಪಡೆದ ವಿಧಾನವಾಗಿ, ಅನಿವಾರ್ಯದ ಚಟುವಟಿಕೆಯಾಗಿ, ಒಂದು ಹಕ್ಕಿನ ರೂಪವಾಗಿ, ಸ್ವಾಭಾವಿಕ ಚಟುವಟಿಕೆಯಾಗಿದೆ. ಭ್ರಷ್ಟಾಚಾರವೆಂದರೆ ಕೇವಲ ಲಂಚ ಸ್ವೀಕರಿಸುವುದು ಮಾತ್ರವಾಗಿರದೆ ಕೆಲಸಕ್ಕಾಗಿ ಹಣ ಪಡೆಯುವುದು, ಶಾಸನ ಬಾಹಿರ ಕಾರ್ಯಗಳನ್ನು ಮಾಡುವುದು, ಮಾಡಿದ ಕಾರ್ಯಕ್ಕೆ ಅತಿ ಹೆಚ್ಚಿನ ಸಂಭಾವನೆ ಕೇಳುವದು. ಅದರಲ್ಲೂ ಸ್ಥಳಾಂತರ, ಸರಕಾರದಿಂದ ಪರಿಹಾರವನ್ನು ಪಡೆದುಕೊಳ್ಳುವಾಗ ಇದರ ತೀವ್ರತೆ ಹೆಚ್ಚಿಗಿರುತ್ತದೆ. ಮಣಿ ಪದ್ಮಾ ಜೆನಾ (೨೦೦೬) ಅವರು ಕಂದಾಯ ಇಲಾಖೆಯಲ್ಲಿನ ಲಂಚಗುಳಿತನ ಸ್ಥಳಾಂತರಗೊಂಡ ಜನರ ದುಃಖಕ್ಕೆ ಮತ್ತೊಂದು ಕಾರಣ. ಇಲಾಖೆಯ ಆಸ್ತಿಗಳ ಮೌಲೀಕರಣ ಸರಿಯಾಗಿ ಮಾಡದೇ ಸಮಸ್ಯೆ ಸೃಷ್ಟಿಸುತ್ತಾರೆಂದು ತಿಳಿಸಿದ್ದಾರೆ. ಇದರ ಕುರಿತು ಜನರಿಂದ ಮಾಹಿತಿ ಪಡೆಯಲಾಯಿತು. ಇವರ ಕುರಿತು ಯಾರು ನಿರ್ಧಿಷ್ಟವಾಗಿ ಹೇಳಲು ಇಚ್ಛೆಪಡಲಿಲ್ಲ. ಆದರೆ ನಡೆದಿದೆ ಎಂಬ ಮಾತನ್ನು ತಿಳಿಸಿದರು. ಕೆಲವೊಬ್ಬರು ಶೇಕಡಾವಾರರು ಕೇಳುತ್ತಿದ್ದಾರೆಂದರೆ, ಇನ್ನೂ ಕೆಲವೊಂದು

ಜನರು ಕುಟುಂಬಕ್ಕೆ ಇಂತಿಷ್ಟು ಎಂದು ಹೇಳಿದರು. ಅಧಿಕಾರಿಗಳು ಕೇಳದಿದ್ರೂ ನಾವೇ ಕೊಡಬೇಕು ಅಂತ ಅನಿಸುತ್ತಿದೆ ಎನ್ನುತ್ತಾರೆ. ಈ ಕುರಿತು ಮಾಹಿತಿದಾರರಿಂದ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ೯.೮ರಲ್ಲಿ ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೯.೮

ಮನೆಗಳ ಸರಿಯಾದ ಮೌಲ್ಯಮಾಪನಕ್ಕಾಗಿ ತಮ್ಮಿಂದ ಲಂಚ-ರುಶುವತ್ತುಗಳನ್ನು ಕೇಳುತ್ತಿದ್ದಾರೆಯೆ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೪೮	೮.೨೮
೨	ಇಲ್ಲ	೫೩೨	೯೧.೭೨
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೮ರಲ್ಲಿ ಪ್ರತಿಶತ ೮ರಷ್ಟು ಮಾಹಿತಿದಾರರು ಇದಕ್ಕೆ ಸಮ್ಮತಿಸಿದರೆ ಉಳಿದ ಶೇಕಡಾ ೫೨ರಷ್ಟು ಮಾಹಿತಿದಾರರು ಕೇಳುತ್ತಿಲ್ಲವೆಂದು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಸಮಾಜದ ಒಳ್ಳೆಯದಕ್ಕಾಗಿ ಕೆಲವೊಂದು ಜನರು ತ್ಯಾಗ ಮಾಡಬೇಕೆಂದು ಸರಕಾರ ಮತ್ತು ಅಧಿಕಾರಿಗಳ ವಾದ ಈ ಕೆಲವೊಂದು ಜನರ ಗ್ರಾಮೀಣ ಪ್ರದೇಶದ ಬಡವರು ಮತ್ತು ಪರಿಶಿಷ್ಟ ಜಾತಿಯ ಜನರಾಗಿರುತ್ತಾರೆಂದು ಭಾರತದ ಪರಿಸರ ಕುರಿತಾದ ನಾಗರಿಕ ವರದಿ (೧೯೮೫) ತಿಳಿಸುತ್ತದೆ. ಕೆಲವೊಂದು ಜನರಲ್ಲಿ ಇಂತಹ ಭಾವನೆಗಳಿರಬಹುದು. ಇಂತಹ ಭಾವನೆಗಳು ಕುರಿತು ಜನರನ್ನು ವಿಚಾರಿಸಿ ಮಾಹಿತಿಯನ್ನು ಕೋಷ್ಟಕ ೯.೯ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೯.೯

ಪ್ರವಾಹದ ಕಾರಣ ಗ್ರಾಮ ಬಿಡುವುದನ್ನು ನೀವು ತ್ಯಾಗ ಎಂದು ತಿಳಿದಿದ್ದೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೨೨	೩.೭೯
೨	ಇಲ್ಲ	೫೫೮	೯೬.೨೧
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೯ ಅವಲೋಕಿಸಿದಾಗ ಪ್ರತಿಶತ ೩.೭೯ ರಷ್ಟು ಮಾಹಿತಿದಾರರು ತ್ಯಾಗವೆಂದು ತಿಳಿದಿದ್ದೇವೆಂದು ತಿಳಿಸಿದರೆ, ಉಳಿದ ಶೇಕಡಾ ೯೬.೨೧ ರಷ್ಟು ಮಾಹಿತಿದಾರರು ಇಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನೈಸರ್ಗಿಕ ವಿಕೋಪಗಳು, ಅಭಿವೃದ್ಧಿ ಕಾರ್ಯಗಳಿಂದಾದ ಸ್ಥಳಾಂತರಗಳಿಗೆ ಪರಿಹಾರ, ಪುನರ್ವಸತಿ ಒದಗಿಸುವದು ಸರಕಾರದ ಆದ್ಯ ಕರ್ತವ್ಯ. ಆದರೆ ಅಧಿಕಾರಿಗಳು ಯೋಜನೆಗಳನ್ನು

ಸಿದ್ದಪಡಿಸುವಾಗ ಯೋಜನೆಯ ಭೌತಿಕ ಕಾರ್ಯಗಳಿಗೆ ಕೊಡುವ ಮಹತ್ವವನ್ನು ಪರಿಹಾರ ಪುನರ್ವಸತಿಗೆ ನೀಡುವುದಿಲ್ಲ. ವಾಲ್ಟರ್ ಫರ್ನಾಂಡಿಸ್ (೨೦೦೫) ಅವರು ದೇಶದಲ್ಲಿ ಪುನರ್ವಸತಿ ಹಕ್ಕು ಎಂದು ಪರಿಗಣಿಸಿರುವ ಕಾನೂನಿನ ಕೊರತೆ ಇದೆ ಎಂದಿದ್ದಾರೆ. ಸರಕಾರದ ಪರಿಹಾರ ಪುನರ್ವಸತಿ ಪಡೆದುಕೊಳ್ಳಲು ಜನರ ವಿಚಾರವೇನು ಎಂಬುದರ ಕುರಿತು ಜನರ ಅಭಿಪ್ರಾಯಗಳನ್ನು ಪಡೆದುಕೊಂಡಾಗ, ಪ್ರತಿಶತ ೯೯.೬೬ರಷ್ಟು ಮಾಹಿತಿದಾರರು ಪುನರ್ವಸತಿ ಕೇಳುವುದು ಹಕ್ಕು ಎಂದು ತಿಳಿದಿದ್ದೇವೆಯೆಂದರೆ, ಕೇವಲ ೦.೩೪ ಮಾಹಿತಿದಾರರು ಸರಕಾರದ ಯೋಜನೆಗಳಾಗಿರುವುದರಿಂದ ಹಾಗೇ ತಿಳಿಯಬಾರದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸರಕಾರಗಳು ವಿವಿಧ ಯೋಜನೆಗಳಲ್ಲಿ ಬಾಧಿತವಾದ ಜನರಿಗೆ ಪರಿಹಾರಗಳನ್ನು ಹಣದ ರೂಪದಲ್ಲಿ, ಬಾಂಡಗಳ ಮಾದರಿಯಲ್ಲಿ, ಭೂಮಿಯ ರೂಪದಲ್ಲಿ, ಇನ್ನು ಕೆಲವೊಂದು ಯೋಜನೆಗಳಲ್ಲಿ ಉದ್ಯೋಗ ನೀಡುವ ಭರವಸೆಗಳನ್ನು ನೀಡಿರುವುದನ್ನು ಕಾಣಬಹುದು. ಪರಿಹಾರಗಳನ್ನು ಹಣದ ರೂಪದಲ್ಲಿ ನೀಡುವುದು ಸರಿಯಲ್ಲ, ಪರಿಹಾರ ಹಣದಿಂದ ಯಾವುದೇ ಆಸ್ತಿ ಹೊಂದಲು ಸಾಧ್ಯವಿಲ್ಲವೆಂದು (ಶಂಕರ ವೆಂಕಟೇಶ್ವರ, ೨೦೦೭) ತಿಳಿಸಿದ್ದಾರೆ. ಬಾಧಿತ ಜನರು ತಮ್ಮ ಆಸ್ತಿ ಹಾನಿಗಳಿಗೆ ಯಾವ ರೀತಿ ಪರಿಹಾರ ಅಪೇಕ್ಷಿಸುತ್ತಾರೆ ಎಂಬುದನ್ನು ತಿಳಿಯಲು ಮಾಹಿತಿ ಪಡೆದು ಅವರಿಂದ ಬಂದ ಪ್ರತಿಕ್ರಿಯೆಯನ್ನು ಕೋಷ್ಟಕ ೯.೧೦ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೯.೧೦

ಸ್ಥಳಾಂತರಕ್ಕಾಗಿ ಯಾವ ರೀತಿ ಪರಿಹಾರ ಬಯಸುತ್ತೀರಿ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹಣ	೨೬೨	೪೫.೧೭
೨	ಭೂಮಿ ಮತ್ತು ಉದ್ಯೋಗ	೩೧೮	೫೪.೮೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೦ರಲ್ಲಿ ಪ್ರತಿಶತ ೪೫ರಷ್ಟು ಮಾಹಿತಿದಾರರು ಹಣದ ರೂಪದ ಪರಿಹಾರ ಬಯಸಿದರೆ, ಶೇಕಡಾ ೫೫ರಷ್ಟು ಭೂಮಿ ಮತ್ತು ಉದ್ಯೋಗ ರೂಪದ ಪರಿಹಾರ ಬಯಸಿರುವದು ತಿಳಿಯುತ್ತದೆ.

ದೇಶದ ವಿವಿಧ ಯೋಜನೆಗಳನ್ನು ಅವಲೋಕಿಸಿದಾಗ ಬಾಧಿತ ಜನರಿಗೆ ಸರಕಾರಗಳು ಸರಿಯಾದ ಪುನರ್ವಸತಿ ನೀಡದೆ ಇರುವುದು ತಿಳಿಯುತ್ತದೆ. ಇದು ಸರಕಾರಗಳ ಪ್ರಮುಖ ಕಾರ್ಯವಾದರೂ ಸಹಿತ ಇದಕ್ಕೆ ಹೆಚ್ಚಿನ ಮಹತ್ವ ನೀಡುವುದಿಲ್ಲ. ದೇಶದ ಕೆಲವೊಂದು

ಯೋಜನೆಗಳಲ್ಲಿ ಮಾತ್ರ ಯೋಗ್ಯ ಪರಿಹಾರ ಪುನರ್ವಸತಿ ನೀಡಲಾಗಿದೆ ಎಂದು (ಸ್ಮಿತ, ಕೋಠಾರಿ, ೧೯೯೬) ತಿಳಿಸಿದ್ದಾರೆ. ಫರ್ನಾಂಡಿಸ್ ಮತ್ತು ಥುಕರಲ್ (೧೯೮೯) ಅವರು ದೇಶದಲ್ಲಿ ಸ್ಥಳಾಂತರಗೊಂಡ ಜನರಲ್ಲಿ ಶೇಕಡಾ ೨೫ರಷ್ಟು ಜನರು ಮಾತ್ರ ಪುನರ್ವಸತಿಗೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಕಾರಣ ಇದರ ಬಗೆಗೆ ಜನರು ಸರಕಾರದ ಮೇಲೆ ಯಾವ ರೀತಿ ವಿಶ್ವಾಸವಿಟ್ಟಿದ್ದಾರೆ ಎಂದು ತಿಳಿಯುವ ಪ್ರಯತ್ನ ಮಾಡಲಾಯಿತು ಇದರ ಕುರಿತು ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಿ ಕೋಷ್ಟಕ ೯.೧೧ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೯.೧೧

ಸರಕಾರ ನಿಮಗೆ ಸರಿಯಾದ ಪುನರ್ವಸತಿ ನೀಡಬಹುದೆಂದು ನಿರೀಕ್ಷಿಸಿದ್ದೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೨೨೭	೩೯.೧೪
೨	ಇಲ್ಲ	೩೫೩	೬೦.೮೬
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೧ನ್ನು ಗಮನಿಸಿದಾಗ ಪ್ರತಿಶತ ೩೯ರಷ್ಟು ಮಾಹಿತಿದಾರರು ಸಮ್ಮತಿ ಸೂಚಿಸಿದರೆ, ಉಳಿದ ಶೇಕಡಾ ೬೧ರಷ್ಟು ಮಾಹಿತಿದಾರರು ಸರಕಾರ ಸರಿಯಾದ ಪುನರ್ವಸತಿ ನೀಡುವ ಭರವಸೆ ಇಟ್ಟುಕೊಂಡಿಲ್ಲ ಎಂದು ತಿಳಿಸಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಸರಕಾರಗಳಿಂದ ಸರಿಯಾದ ಪರಿಹಾರ ಮತ್ತು ಪುನರ್ವಸತಿ ಪಡೆಯಬೇಕಾದರೆ ಗ್ರಾಮದಲ್ಲಿಯ ನಾಯಕರೂ ಪ್ರಮುಖ ಪಾತ್ರ ವಹಿಸಬೇಕು. ಜನತೆಯ ಬಗೆಗೆ ಕಾಳಜಿ ಹೊಂದಿದ ನಾಯಕರಿದ್ದರೆ ಗ್ರಾಮದ ಯಾವುದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು, ಸರಕಾರ ಮತ್ತು ಅಧಿಕಾರಿಗಳ ಮೇಲೆ ಒತ್ತಡ ತಂತ್ರ ಅನುಸರಿಸಬಹುದು. ಗ್ರಾಮದ ಪುನರ್ವಸತಿ ಬಗೆಗೆ ಸಮಗ್ರ ಮಾಹಿತಿಯನ್ನು ಹೊಂದಿದ ನಾಯಕತ್ವದ ಕುರಿತು ಮಾಹಿತಿ ಪಡೆದು ಕೋಷ್ಟಕ ೯.೧೨ರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೯.೧೨

ಗ್ರಾಮದಲ್ಲಿ ಪುನರ್ವಸತಿ ಬಗೆಗೆ ಸಮಗ್ರ ಮಾಹಿತಿ ನೀಡುವ ನಾಯಕರಿದ್ದಾರೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೪೮	೨೫.೫೨
೨	ಇಲ್ಲ	೪೩೨	೭೪.೪೮
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೨ರಲ್ಲಿ ಪುನರ್ವಸತಿ ಬಗೆಗೆ ಮಾಹಿತಿ ಹೊಂದಿದ ನಾಯಕರ ಇದ್ದಾರೆಂದು ಪ್ರತಿಶತ ೨೬ರಷ್ಟು ಮಾಹಿತಿದಾರರು ತಿಳಿಸಿದರೆ, ಇನ್ನುಳಿದ ೭೪ರಷ್ಟು ಮಾಹಿತಿದಾರರು ನಾಯಕತ್ವದ ಕೊರತೆ ಇದೆ ಎಂದು ಅಭಿಪ್ರಾಯ ಪಟ್ಟರು. ಜನಪ್ರತಿನಿಧಿಗಳು ಜನರ ಅಭಿವೃದ್ಧಿಗೆ ಸ್ಪಂದಿಸುತ್ತಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಗ್ರಾಮಗಳಲ್ಲಿ ನಾಯಕರಿಗೆ ಹೆಚ್ಚಿನ ಗೌರವ ಆದರಗಳು ಕಂಡುಬರುತ್ತವೆ. ಈ ನಾಯಕರು ಗ್ರಾಮಸ್ಥರಿಗೆ ಸೌಲಭ್ಯಗಳನ್ನು ಕಲ್ಪಿಸಿ ಕೊಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಗ್ರಾಮಗಳಲ್ಲಿ ಪಕ್ಷ ರಾಜಕೀಯ ಪ್ರವೇಶ ಮಾಡಿರುವುದರಿಂದ ನಾಯಕರುಗಳ ಸಂಖ್ಯೆ ಹೆಚ್ಚುತ್ತಿದೆ. ನಿಸ್ವಾರ್ಥದಿಂದ ಗ್ರಾಮದ ಜನತೆ ಸಲುವಾಗಿ ಕಾರ್ಯ ನಿರ್ವಹಿಸುವವರ ಪ್ರಮಾಣ ಕಡಿಮೆ ಕಾಣುತ್ತೇವೆ. ಪಕ್ಷಾತೀತ, ಧರ್ಮಾತೀತ ನಾಯಕರುಗಳ ಕೊರತೆ ಎದ್ದು ಕಾಣುತ್ತಿದೆ. ಯಾವುದೇ ಕಾರ್ಯ ಮಾಡಬೇಕಾದರೆ ಅದರಿಂದ ತಮಗೇನು ಲಾಭವೆಂದು ವಿಚಾರಿಸುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಸಾಧ್ಯವಾಗುತ್ತದೆ. ನಾಯಕರ ಪಾತ್ರದ ಕುರಿತು ಮಾಹಿತಿದಾರರಿಂದ ಮಾಹಿತಿ ಪಡೆದು ಕೋಷ್ಟಕ ೯.೧೩ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೯.೧೩

ಗ್ರಾಮದ ನಾಯಕರು ನಿಮ್ಮ ಪರವಾಗಿ ಮಾತನಾಡುತ್ತಾರೇನು?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೪೮	೨೫.೫೨
೨	ಇಲ್ಲ	೪೩೨	೭೪.೪೮
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೩ರಲ್ಲಿ ಪ್ರತಿಶತ ೨೫.೫೨ರಷ್ಟು ಮಾಹಿತಿದಾರರು ಮೇಲಿನ ಉಲ್ಲೇಖವನ್ನು ಅನುಮೋದಿಸಿದರೆ, ಉಳಿದ ೭೪.೪೮ರಷ್ಟು ಮಾಹಿತಿದಾರರು ವಿರೋಧಿಸಿರುವುದು ತಿಳಿಯುತ್ತದೆ.

ಪ್ರತಿಯೊಂದು ಸಮುದಾಯವು ತಮ್ಮದೆ ಆದ ನಾಯಕರುಗಳನ್ನು ಹೊಂದಿರುತ್ತದೆ. ಅವರು ತಮ್ಮ ಸಮುದಾಯಗಳ ಹಿತಾಸಕ್ತಿ ಕಾಪಾಡಿಕೊಳ್ಳುತ್ತಾರೆ. ಸಮುದಾಯಗಳು ತಮ್ಮ ನಾಯಕರುಗಳನ್ನು ಹೊಂದಿದ್ದರೆ ಅವರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಇದರ ಕುರಿತು ಮಾಹಿತಿದಾರರಿಗೆ ಸಂದರ್ಶಿಸಿ ಅವರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೋಷ್ಟಕ ೯.೧೪ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೯.೧೪

ನಿಮ್ಮ ಸಮುದಾಯಗಳಲ್ಲಿ ನಾಯಕರಿದ್ದಾರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೮೫	೩೧.೯೦
೨	ಇಲ್ಲ	೩೯೫	೬೮.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೪ರಲ್ಲಿ ಪ್ರತಿಶತ ೩೨ರಷ್ಟು ಮಾಹಿತಿದಾರರು ತಮ್ಮ ಸಮುದಾಯಗಳಲ್ಲಿ ನಾಯಕರಿದ್ದಾರೆ ಎಂದರೆ, ಉಳಿದ ಶೇಕಡಾ ೬೮ ಮಾಹಿತಿದಾರರು ತಮ್ಮ ಸಮುದಾಯಗಳಲ್ಲಿ ನಾಯಕರಿಲ್ಲವೆಂದರು.

ಸಮುದಾಯಗಳಲ್ಲಿ ನಾಯಕರಿರುವುದು ಸಹಜ. ಈ ನಾಯಕರು ಕೀರ್ತಿಗಾಗಿ ಮುಂದಿರದೇ ಜನರ ಕೆಲಸಕ್ಕಾಗಿ ಮುಂದಿದ್ದಾಗ ಮಾತ್ರ ಅವರಿಗೆ ಗ್ರಾಮಗಳಲ್ಲಿ ಅಧಿಕ ಗೌರವ ಕಂಡು ಬರುತ್ತದೆ. ಸಮುದಾಯ ನಾಯಕರು ಸಮುದಾಯದ ಜನರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದಾರೆಯೆ ಎಂದು ತಿಳಿಯಲು ಮಾಹಿತಿದಾರರಿಂದ ಮಾಹಿತಿಯನ್ನು ಪಡೆದು ಕೋಷ್ಟಕ ೯.೧೫ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೯.೧೫

ಸಮುದಾಯ ನಾಯಕರು ನಿಮ್ಮ ಪರವಾಗಿ ಮಾತನಾಡುತ್ತಾರೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೮೫	೩೧.೯೦
೨	ಇಲ್ಲ	೩೯೫	೬೮.೧೦
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೫ರಲ್ಲಿ ಪ್ರತಿಶತ ೩೨ರಷ್ಟು ಮಾಹಿತಿದಾರರು ಸಮುದಾಯ ನಾಯಕರು ತಮ್ಮ ಪರವಾಗಿ ಮಾತನಾಡುತ್ತಾರೆ ಎಂದರೆ, ಶೇಕಡಾ ೬೮ರಷ್ಟು ಮಾಹಿತಿದಾರರು ಇಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಗ್ರಾಮ ಮತ್ತು ಸಮುದಾಯಗಳ ನಾಯಕತ್ವದ ಬಗೆಗೆ ವಿಚಾರಿಸಿದ ನಂತರ ಕುಟುಂಬಗಳಲ್ಲಿ ಪರಿಹಾರ ಪುನರ್ವಸತಿ ಬಗೆಗೆ ಮಾಹಿತಿ ಹೊಂದಿದವರ ಕುರಿತು ವಿಚಾರಿಸಲಾಯಿತು. ತಮ್ಮ ಕುಟುಂಬಗಳಲ್ಲಿ ಮಾಹಿತಿ ಹೊಂದಿದವರಿದ್ದರೆ ತಮಗೆ ಎದುರಾಗುವ

ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ ಎಂಬ ನಂಬಿಕೆಯಿಂದ ಇದರ ಕುರಿತು ವಿಚಾರಿಸಿ ಅವರಿಂದ ಬಂದ ವಿಚಾರಗಳನ್ನು ಕೋಷ್ಟಕ ೯.೧೬ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೯.೧೬

ಕುಟುಂಬಗಳಲ್ಲಿ ಪುನರ್ವಸತಿ ಬಗೆಗೆ ಮಾಹಿತಿ ಹೊಂದಿದವರು ಇದ್ದಾರೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೭೩	೧೨.೫೯
೨	ಇಲ್ಲ	೫೦೭	೮೭.೪೧
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೧೬ರಲ್ಲಿ ಪ್ರತಿಶತ ೧೩ರಷ್ಟು ಮಾಹಿತಿದಾರರು ಪುನರ್ವಸತಿ ಬಗೆಗೆ ಮಾಹಿತಿ ಹೊಂದಿದವರು ಇದ್ದಾರೆಂದರೆ, ಇನ್ನುಳಿದ ಹೆಚ್ಚಿನ ಶೇಕಡಾ ೮೭ರಷ್ಟು ಮಾಹಿತಿದಾರರು ಇಲ್ಲವೆಂದು ತಿಳಿಸಿದರು.

ಸ್ಥಳಾಂತರಗಳ ಕುರಿತು ಅನೇಕ ಅಧ್ಯಯನಗಳನ್ನು ಅವಲೋಕಿಸಿದಾಗ ಅಭಿವೃದ್ಧಿ ಯೋಜನೆಗಳಿಂದ ಬಾಧಿತ ಜನರು ತಮ್ಮ ಗ್ರಾಮಗಳನ್ನು ಬಿಡಲು ಹಿಂದೇಟು ಹಾಕುತ್ತಾರೆ. ಮೂಲ ವಾಸಸ್ಥಳಗಳನ್ನು ಬಿಟ್ಟು ಹೋಗುವುದು ಮನಸ್ಸಿಗೆ ನೋವನ್ನು ಕೊಡುವ ಸಂಗತಿ ಎಂದು ಥುಕರಲ್, ೧೯೯೫ ತಿಳಿಸುತ್ತಾರೆ. ಪ್ರವಾಹದಿಂದಾ ಬೇಸತ್ತು ಬೇರೆ ಕಡೆ ಸ್ಥಳಾಂತರಗೊಳ್ಳಲು ಬಯಸುತ್ತೀರಾ? ಎಂದು ಸಂತ್ರಸ್ತರನ್ನು ವಿಚಾರಿಸಿದಾಗ, ಪ್ರತಿಶತ ೯೯ರಷ್ಟು ಮಾಹಿತಿದಾರರು ಸ್ಥಳಾಂತರಗೊಳ್ಳಬಯಸಿದರೆ, ಶೇಕಡಾ ೧ರಷ್ಟು ಮಾಹಿತಿದಾರರು ಮಾತ್ರ ಸ್ಥಳಾಂತರಗೊಳ್ಳಬಯಸುವುದಿಲ್ಲ ಎಂದಿದ್ದಾರೆ. ಹೆಚ್ಚಿನ ಜನರು ಸ್ಥಳಾಂತರಗೊಳ್ಳಬಯಸಲು ಗ್ರಾಮದ ಜನರು ಎದುರಿಸುತ್ತಿರುವ ಸಮಸ್ಯೆಗಳೇ ಕಾರಣ. ಹೆಚ್ಚಿನ ಸಂತ್ರಸ್ತರು ಸ್ಥಳಾಂತರಗೊಳ್ಳಲು ಬಯಸುತ್ತಿರುವುದಕ್ಕೆ ಇನ್ನೊಂದು ಕಾರಣವೆಂದರೆ ಗ್ರಾಮ ಮುಳಗಡೆಯಾಗುವುದಿಲ್ಲ ಪರಿಹಾರ ಮೊತ್ತವನ್ನಷ್ಟು ಪಡೆದುಕೊಳ್ಳಬೇಕೆಂಬ ಇಚ್ಛೆ ಹೊಂದಿರುವುದು.

ಪ್ರವಾಹದಿಂದ ಬಾಧಿತವಾದ ಹೆಚ್ಚಿನ ಮಾಹಿತಿದಾರರು ಸ್ಥಳಾಂತರಗೊಳ್ಳಬಯಸಿರುವುದು ತಿಳಿಯುತ್ತದೆ. ಹಾಗಾದರೆ ಇವರು ಎಲ್ಲಿ ಸ್ಥಳಾಂತರಗೊಳ್ಳಬಯಸುತ್ತಾರೆ ಅಂದರೆ ತಾವು ಇಚ್ಛಿಸದ ಸ್ಥಳಗಳಲ್ಲಿ ಹೋಗಬಯಸುತ್ತಾರೋ ಅಥವಾ ಸರಕಾರ ಎಲ್ಲಿ ಪುನರ್ವಸತಿ ಸ್ಥಳ ನಿರ್ಧಾರ ಮಾಡುತ್ತದೆ ಅಲ್ಲಿಗೆ ಹೋಗಬಯಸುತ್ತಾರೋ ಎಂಬುದನ್ನು ಮಾಹಿತಿದಾರರಿಂದ ಮಾಹಿತಿ ಪಡೆದುಕೊಂಡಾಗ, ಪ್ರತಿಶತ ೯೮.೭೯ರಷ್ಟು ಮಾಹಿತಿದಾರರು ತಾವು ಇಚ್ಛಿಸಿದ ಸ್ಥಳಗಳಲ್ಲಿ ಸ್ಥಳಾಂತರ ಹೊಂದ ಬಯಸಿರುವುದು ತಿಳಿಯುತ್ತದೆ. ಸರಕಾರ ಎಲ್ಲಿ ಸ್ಥಳ

ನಿಗಧಿಪಡಿಸಿರುತ್ತದೆಯೋ ಅಲ್ಲಿಗೆ ನಾವು ಹೋಗುತ್ತೇವೆಂದು ಶೇಕಡಾ ೧.೨೧ ಮಾತ್ರ ತಿಳಿಸಿದ್ದಾರೆ. ಇದರಿಂದ ಎಲ್ಲ ಮಾಹಿತಿದಾರರಿಂದ ತಾವು ಇಚ್ಛಿಸಿದ ಸ್ಥಳಗಳಲ್ಲಿಯೇ ಪುನರ್ವಸತಿ ಕಂಡುಕೊಳ್ಳಲು ಬಯಸಿರುವುದು ತಿಳಿಯುತ್ತದೆ.

ಸರಕಾರ ಗ್ರಾಮವನ್ನು ನಿಯೋಜನೆಗೊಳಿಸಲು ಎರಡು ಸ್ಥಳಗಳನ್ನು ಸೂಚಿಸುತ್ತಿದೆ. ಒಂದು ಐದು ಕಿ.ಮೀ ಸಮೀಪದ ಕೋಳಿಗುಡ್ಡ ಗ್ರಾಮದ ಬಳಿ, ಇನ್ನೊಂದು ನದಿ ಆಚೆಗಿನ ಸುಟ್ಟಟ್ಟಿ ಸಮೀಪ. ಗ್ರಾಮದಲ್ಲಿ ಎರಡೂ ವಿಚಾರಗಳನ್ನು ಅನುಮೋದಿಸುವ ಜನರಿದ್ದಾರೆ. ಯೋಜಿತ ಪ್ರದೇಶದ ಕುರಿತು ಜನರ ಅಭಿಪ್ರಾಯವೇನೆಂದು ಎಂಬುದರ ಕುರಿತು ಮಾಹಿತಿ ಪಡೆದು ಕೋಷ್ಟಕ ೯.೧೭ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೯.೧೭

ನಿಯೋಜಿತ ಪ್ರದೇಶ ಎಲ್ಲಿ ಇದ್ದರೆ ಯೋಗ್ಯ?

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹತ್ತಿರ (ಕೋಳಿಗುಡ್ಡ)	೪೩೮	೭೫.೫೨
೨	ದೂರ (ಸುಟ್ಟಟ್ಟಿ)	೧೪೨	೨೪.೪೮
	ಒಟ್ಟು	೫೮೦	೧೦೦.೦೦

ಕೋಷ್ಟಕ ೯.೧೭ರಲ್ಲಿ ಪ್ರತಿಶತ ೭೫.೫೨ರಷ್ಟು ಮಾಹಿತಿದಾರರು ಸಮೀಪದ ಕೋಳಿಗುಡ್ಡ ಪ್ರದೇಶ ಆಯ್ಕೆ ಮಾಡಿದರೆ, ಉಳಿದ ಶೇಕಡಾ ೨೪.೪೮ರಷ್ಟು ಮಾಹಿತಿದಾರರು ನದಿ ಆಚೆಗಿನ ಸುಟ್ಟಟ್ಟಿಯನ್ನು ಸೂಚಿಸಿದ್ದಾರೆ.

ಶಿಕ್ಷಣ, ಉದ್ಯೋಗ ಅವಕಾಶಗಳು, ನಗರದ ಆಕರ್ಷಣೆ ಮುಂತಾದ ಕಾರಣಗಳಿಂದ ಗ್ರಾಮೀಣ ಪ್ರದೇಶದ ಜನರು ನಗರ ಪ್ರದೇಶಗಳಿಗೆ ವಲಸೆ ಬರುವುದು ಸಾಮಾನ್ಯವಾಗಿ ಬಿಟ್ಟಿದೆ. ಸ್ಥಳಾಂತರಗಳ ಕುರಿತಾದ ಯೋಜನೆಗಳನ್ನು ಗಮನಿಸಿದಾಗ ಬಾಧಿತ ಜನರು ನಗರ ಪ್ರದೇಶಗಳಲ್ಲಿ ವಾಸಿಸುವ ಇಚ್ಛೆ ಪಡಿಸಿರುವುದು ತಿಳಿಯುತ್ತದೆ. ಖವಟಕೊಪ್ಪ ಗ್ರಾಮದ ಜನರು ಸಮೀಪದ ನಗರಗಳಿಗೆ ಹೋಗಲು ಇಚ್ಛಿಸುತ್ತಾರೆಯೇ ಎಂಬುದರ ಕುರಿತು ವಿಚಾರಿಸಿ ಮಾಹಿತಿಯನ್ನು ಕೋಷ್ಟಕ ೯.೧೮ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೯.೧೮

ಸಮೀಪದ ನಗರಗಳಿಗೆ ಸ್ಥಳಾಂತರಗೊಳ್ಳಲು ಬಯಸುತ್ತೀರಾ?

ಕ್ರಸಂ	ವಿವರ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೪೧	೨೪.೩೧
೨	ಇಲ್ಲ	೪೩೯	೭೫.೬೯
	ಒಟ್ಟು	೫೮೦	೧೦೦.೦೦

ಕೋಷ್ಟಕ ೯.೧೮ರಲ್ಲಿ ಪ್ರತಿಶತ ೨೪ರಷ್ಟು ಮಾಹಿತಿದಾರರು ಸಮೀಪದ ನಗರಗಳಿಗೆ ಸ್ಥಳಾಂತರಗೊಳ್ಳಲು ಇಚ್ಛೆ ವ್ಯಕ್ತಪಡಿಸಿದರು. ಇವರು ಪರಿಶಿಷ್ಟ ಜಾತಿ ಮತ್ತು ಜಮೀನು ಇಲ್ಲದವರು ಮತ್ತು ಕೆಲವೊಂದು ಶ್ರೀಮಂತ ವರ್ಗ ಉಳಿದ ಶೇಕಡಾ ೭೬ರಷ್ಟು ಮಾಹಿತಿದಾರರು ಇದಕ್ಕೆ ಇಚ್ಛೆ ವ್ಯಕ್ತಪಡಿಸಲಿಲ್ಲ.

ಪುನರ್ವಸತಿ ಕೇಂದ್ರಗಳನ್ನು ನಿರ್ಧರಿಸುವಾಗ ಸರಕಾರಗಳು, ಗ್ರಾಮದ ಮೂಖಂಡರು ಏಕ ಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುತ್ತಾರೆ. ಪುನರ್ವಸತಿ ಕೇಂದ್ರದ ಕುರಿತು ಕ್ಷೇತ್ರದ ಶಾಸಕರು ಮತ್ತು ಮತ್ತು ಗ್ರಾಮದ ಮುಖಂಡರ ಮಧ್ಯೆ ಭಿನ್ನಾಭಿಪ್ರಾಯವಿದ್ದಂತೆ ತೋರುತ್ತದೆ. ಶಾಸಕರು ಮತ್ತು ಅವರ ಬೆಂಬಲಿಗರು ಪುನರ್ವಸತಿಗೆ ಸುಟ್ಟಟ್ಟಿ ಮಡ್ಡಿ ಸೂಕ್ತ ಎನ್ನುತ್ತಿದ್ದಾರೆ. ಆದರೆ ಗ್ರಾಮದ ಜಮೀನುಗಳ ಮುಳಗಡೆ ಬಗೆಗೆ ಸರಕಾರ ಮಾಹಿತಿ ನೀಡಿಲ್ಲ ಕಾರಣ ಕೆಲವು ಮುಖಂಡರು ಮತ್ತು ಜನರು ತಮ್ಮ ಜಮೀನುಗಳನ್ನು ನೋಡಿಕೊಳ್ಳಲು ಸಹಾಯಕವಾಗುವ ಕೋಳಿಗುಡ್ಡ ನಿಯೋಜಿತ ಪ್ರದೇಶ ಯೋಗ್ಯವಾಗುವದೆಂದು ತಿಳಿಸುತ್ತಾರೆ. ಈ ಗೊಂದಲಗಳ ಕಾರಣ ಪುನರ್ವಸತಿ ಕೇಂದ್ರ ಇನ್ನೂ ನಿರ್ಧಾರವಾಗಿಲ್ಲ. ಕೋಳಿಗುಡ್ಡದಲ್ಲಿ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಬೇಕಾದರೆ ವೈಯಕ್ತಿಕ ಮಾಲಿಕತ್ವದ ಜಮೀನುಗಳನ್ನು ವಶಪಡಿಸಿಕೊಳ್ಳಬೇಕಾಗುತ್ತದೆ. ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ ಕಾನೂನಿನ ತೊಡಕು ಎದುರಿಸುತ್ತಿದೆ. ಕಾರಣ ಭೂಮಿ ವಶಪಡಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಇದರ ಕುರಿತು ಜನರಿಂದ ಮಾಹಿತಿ ಪಡೆದು ಕೋಷ್ಟಕ ೯.೧೯ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಠಕ ೬.೧೯

ನಿಮ್ಮ ಗ್ರಾಮದ ಪ್ರಮುಖರು ವಿಚಾರಿಸಿದ ನಿಯೋಜಿತ ಪ್ರದೇಶ ತಮಗೆ ಇಷ್ಟವಾಗಿದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೪೪೬	೭೬.೯೦
೨	ಇಲ್ಲ	೯೨	೧೫.೮೬
೩	ನಿರ್ಧರಿಸಿಲ್ಲ	೪೨	೭.೨೪
	ಒಟ್ಟು	**೫೮೦**	**೧೦೦.೦೦**

ಕೋಷ್ಠಕ ೬.೧೯ರಲ್ಲಿ ಗ್ರಾಮ ಮುಖಂಡರು ನಿರ್ಧರಿಸಿದ ನಿಯೋಜಿತ ಪ್ರದೇಶ ತಮಗೆ ಇಷ್ಟವಾಗಿದೆಯೆಂದು ಪ್ರತಿಶತ ೭೬.೯೦ರಷ್ಟು ಮಾಹಿತಿದಾರರು ತೃಪ್ತಿ ವ್ಯಕ್ತಪಡಿಸಿದರೆ, ಶೇಕಡಾ ೧೫.೮೬ರಷ್ಟು ಮಾಹಿತಿದಾರರು ತಮಗೆ ಇಷ್ಟವಿಲ್ಲವೆಂದು ಇನ್ನುಳಿದ ಶೇಕಡಾ ೭.೨೪ರಷ್ಟು ಮಾಹಿತಿದಾರರು ಇನ್ನೂ ನಿಯೋಜಿತ ಪ್ರದೇಶ ಯಾವುದು ಎಂಬುದು ನಿರ್ಧಾರವಾಗಿಲ್ಲವೆಂದರು.

ಸ್ಥಳಾಂತರಗಳು ಮನಸ್ಸಿಗೆ ನೋವನ್ನುಂಟು ಮಾಡುವ ಸಂಗತಿಗಳು. ಆದರೆ ಗ್ರಾಮದ ಜನರು ಪ್ರವಾಹಕ್ಕೆ ಬೇಸತ್ತು ಬೇರೆ ಕಡೆ ಸ್ಥಳಾಂತರಗೊಳ್ಳಲು ಇಚ್ಛೆ ವ್ಯಕ್ತಪಡಿಸಿದ್ದಾರೆ. ಒಬ್ಬ ಮಹಿಳೆ ಶೌಚಾಲಯಗಳನ್ನು ಹೊಂದಿದ ಪುನರ್ವಸತಿ ಒದಗಿಸಿದರೆ ಒಳ್ಳೆಯದೆಂದು ತಿಳಿಸುತ್ತಾರೆ. ಕೆಳವರ್ಗದ ಜನರು 'ನಾವು ಎಲ್ಲಿಯಾದರು ದುಡಿದು ತಿನ್ನುವದಿದೆ, ಉತ್ತಮ ವಾಸಸ್ಥಳಗಳು ಸಿಕ್ಕರೆ ಸಾಕು' ಎನ್ನುವ ಹಂತಕ್ಕೆ ಬಂದಿದ್ದಾರೆ. ಇಂತಹ ಸ್ಥಿತಿಯಲ್ಲಿ ನಿಯೋಜಿತ ಸ್ಥಳಗಳಲ್ಲಿ ಅವರು ನೆಮ್ಮದಿಯಿಂದ ಇರುವುದರ ಕುರಿತು ತಿಳಿಯಲು ಕೋಷ್ಠಕ ೬.೨೦ರಲ್ಲಿ ಮಾಹಿತಿದಾರರಿಂದ ಮಾಹಿತಿ ಪಡೆದು ಸಂಗ್ರಹಿಸಲಾಗಿದೆ.

ಕೋಷ್ಠಕ ೬.೨೦

ನಿಯೋಜಿತ ಪ್ರದೇಶದಲ್ಲಿ ತಾವು ನೆಮ್ಮದಿಯಿಂದ ಇರಬಹುದೆಂದು ಭಾವಿಸಿದ್ದೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೧೨೦	೨೦.೬೯
೨	ಇಲ್ಲ	೪೬೦	೭೯.೩೧
	ಒಟ್ಟು	**೫೮೦**	**೧೦೦.೦೦**

ಕೋಷ್ಠಕ ೬.೨೦ರಲ್ಲಿ ಪ್ರತಿಶತ ೨೦.೬೯ರಷ್ಟು ಮಾಹಿತಿದಾರರು ನಿಯೋಜಿತ ಪ್ರದೇಶಗಳಲ್ಲಿ ನೆಮ್ಮದಿಯಿಂದ ಇರಬಹುದೆಂದರೆ, ಉಳಿದ ಪ್ರತಿಶತ ೭೯.೩೧ರಷ್ಟು

ಮಾಹಿತಿದಾರರು ಸಂಶಯ ವ್ಯಕ್ತಪಡಿಸಿದರು. ಬೇರೆ ಕಡೆ ನಾವ ಹ್ಯಾಂಗ ನೆಮ್ಮದಿಯಿಂದ ಇರಲು ಸಾಧ್ಯ ಎಂದು ಪ್ರತಿಕ್ರಿಯಿಸಿದರು.

ಭಾರತೀಯ ಸಾಮಾಜಿಕ ಜೀವನದಲ್ಲಿ ಜಾತಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಜಾತಿಯ ಪ್ರಭಾವವನ್ನು ಕಾಣುತ್ತೇವೆ. ಗ್ರಾಮೀಣ ಪ್ರದೇಶದಲ್ಲಿ ಜಾತಿ ಆಧರಿತ ಸ್ಥಾನಮಾನಗಳು, ಸಂಘಟನೆಗಳಿರುತ್ತವೆ. ಒಂದೇ ಜಾತಿಯ ಜನರು ಒತ್ತಟ್ಟಿಗೆ ಇರುತ್ತಾರೆ. ಪರಿಶಿಷ್ಟ ಜಾತಿ, ವರ್ಗದ ೨೯ನೇ ವರದಿ ಪ್ರಕಾರ ೧೯೯೦ರ ವರೆಗೆ ದೇಶದ ಜನಸಂಖ್ಯೆಯ ಶೇಕಡಾ ೭.೫ರಷ್ಟಿರುವ ಪ.ಜಾತಿ, ಪಂಗಡದ ಜನರು ಶೇಕಡಾ ೪೦ರಷ್ಟು ಸ್ಥಳಾಂತರಗೊಂಡಿದ್ದಾರೆ. ಆದರೆ ಸ್ಥಳಾಂತರಗಳಿಂದ ಸಾಮಾಜಿಕ, ಆರ್ಥಿಕ, ಮಾನಸಿಕ ತೊಂದರೆಗಳನ್ನು ಅನುಭವಿಸುತ್ತಾರೆಂದು ಕ್ರಿಸ. ಡೆ. ವ್ಹೇಟ್ ತಿಳಿಸಿದ್ದಾರೆ. ತಮ್ಮ ತಮ್ಮ ಜಾತಿಯ ಜನರು ಒತ್ತಟ್ಟಿಗೆ ಇರ ಬಯಸುತ್ತಾರೆಯೇ ಎಂಬುದರ ಕುರಿತು ಮಾಹಿತಿ ಪಡೆಯಲಾಗಿ, ಪ್ರತಿಶತ ೯೮.೯೭ರಷ್ಟು ಮಾಹಿತಿದಾರರು ತಮ್ಮ ಜಾತಿಯ ಜನರು ಒತ್ತಟ್ಟಿಗಿರಲು ಬಯಸುವುದಾಗಿ ತಿಳಿಸಿದರೆ, ಶೇಕಡಾ ೧.೦೩ರಷ್ಟು ಮಾಹಿತಿದಾರರು ಮಾತ್ರ ಬಯಸುವದಿಲ್ಲವೆಂದು ತಿಳಿಸಿದರು.

ನಿಯೋಜಿತ ಪ್ರದೇಶ ಇನ್ನೂ ನಿರ್ಧಾರವಾಗಿಲ್ಲ. ನಿರ್ಧಾರದ ಹಂತದಲ್ಲಿದೆ. ಹೆಚ್ಚಿನ ಮಾಹಿತಿದಾರರು ತಮ್ಮ ಜಾತಿಯ ಜನರು ಒತ್ತಟ್ಟಿಗೆ ಇರಲು ತಿಳಿಸಿರುವುದನ್ನು ಕಂಡುಕೊಂಡು ನಿಯೋಜಿತ ಪ್ರದೇಶದಲ್ಲಿ ಜಾತಿವಾರು ಪ್ರದೇಶಗಳನ್ನು ಗುರುತಿಸುವುದರ ಕುರಿತು ಮಾಹಿತಿ ಪಡೆದುಕೊಂಡಾಗ, ಶೇಕಡಾ ನೂರಕ್ಕೆ ನೂರರಷ್ಟು ಮಾಹಿತಿದಾರರು ನಿಯೋಜಿತ ಪ್ರದೇಶದಲ್ಲಿಯ ಜಾತಿವಾರು ಪ್ರದೇಶಗಳ ಬಗ್ಗೆ ತಮಗೇನು ತಿಳಿದಿಲ್ಲವೆಂದರು.

ಗ್ರಾಮೀಣ ಸಮುದಾಯಗಳಲ್ಲಿ ಸಾಮಾಜಿಕ ಸಂಬಂಧಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಾಮಾಜಿಕ ವಿಮೆಯಾಗಿ ಕಾರ್ಯನಿರ್ವಹಿಸುತ್ತವೆ. ವಿವಿಧ ಜಾತಿ, ಉದ್ಯೋಗ, ನಿರ್ವಹಿಸುವ ಜನರಲ್ಲಿ ಒಳ್ಳೆಯ ಸಂಬಂಧಗಳಿರುತ್ತವೆ. ವೈವಾಹಿಕ ಸಂಬಂಧಗಳು ಗ್ರಾಮದಲ್ಲಿ ಇಲ್ಲವೆ ಸಮೀಪದ ಗ್ರಾಮಗಳ ಜೊತೆ ಇರುತ್ತವೆ. ಸ್ಥಳಾಂತರಗಳಿಂದ ಇವುಗಳಿಗೆ ಬಾಧಿತವಾಗುವ ಭಯವಿರುತ್ತದೆ. ಇದರ ಕುರಿತು ವಿಚಾರಿಸಿ ಮಾಹಿತಿಯನ್ನು ಕೋಷ್ಟಕ ೬.೨೧ರಲ್ಲಿ ಕಲೆ ಹಾಕಲಾಗಿದೆ.

ಕೋಷ್ಟಕ ೯.೨೧

ನಿಯೋಜಿತ ಪ್ರದೇಶದಲ್ಲಿ ನಿಮ್ಮ ಸಾಮಾಜಿಕ ಸಂಬಂಧಗಳಿಗೆ ಬಾಧಕವಾಗುವ ಭಯ ಇದೆಯೇ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೫೬೯	೯೮.೧೦
೨	ಇಲ್ಲ	೧೧	೧.೯೦
	ಒಟ್ಟು	೫೮೦	೧೦೦.೦೦

ಕೋಷ್ಟಕ ೯.೨೧ರಲ್ಲಿ ಪ್ರತಿಶತ ೯೮.೧೦ರಷ್ಟು ಮಾಹಿತಿದಾರರು ನಿಯೋಜಿತ ಪ್ರದೇಶದಲ್ಲಿ ತಮ್ಮ ಸಾಮಾಜಿಕ ಸಂಬಂಧಗಳಿಗೆ ಬಾಧಕವಾಗುತ್ತದೆ ಎಂದರೆ, ಉಳಿದ ಶೇಕಡಾ ೧.೯೦ರಷ್ಟು ಮಾತ್ರ ಬಾಧಕವಾಗುವುದಿಲ್ಲವೆಂದರು.

ಗ್ರಾಮೀಣ ಪ್ರದೇಶದಲ್ಲಿ ನೆರೆಹೊರೆ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾಜಿಕ ವಿಮೆಯಾಗಿ ಕಾರ್ಯ ನಿರ್ವಹಿಸುತ್ತದೆ. ಕುಟುಂಬಗಳ ಸುಖದುಃಖದಲ್ಲಿ ಪಾಲ್ಗೊಳ್ಳುತ್ತಾರೆ. ನೆರೆಹೊರೆ ಯಾವುದೇ ಜಾತಿ, ಧರ್ಮಗಳಿಗೆ ಸಿಮೀತವಾಗಿರುವುದಿಲ್ಲ. ಗ್ರಾಮ ಸಮುದಾಯಗಳಲ್ಲಿ ಅನೌಪಚಾರಿಕ ಸಾಮಾಜಿಕ ಸಂಬಂಧಗಳ ಸಾಲ, ವಸ್ತುಗಳ ವಿನಿಮಯ, ಪರಸ್ಪರ ಸಹಾಯ, ಕೃಷಿ, ಕಟ್ಟಡಗಳ ನಿರ್ಮಾಣ, ಮಕ್ಕಳ ಪಾಲನೆ, ಪೋಷಣೆ ಕಾರ್ಯಗಳಲ್ಲಿ ಸಹಾಯಕವಾಗುತ್ತದೆಂದು (ಡೊನಾಲ್ಡ್ ರಾಕ್ಸ್ ಮತ್ತು ಇಮ್ಯಾನುಲ್ ಜಿಮೆನೆಜ (೧೯೯೨) ತಿಳಿಸಿದ್ದಾರೆ. ಒಮ್ಮೊಮ್ಮೆ ನೆರೆಹೊರೆ ಜೊತೆ ಸಂಘರ್ಷಗಳಾಗಿರುತ್ತವೆ. ಕಾರಣ ಜನರು ನಿಯೋಜಿತ ಪ್ರದೇಶಗಳಲ್ಲಿ ಯಾರು ತಮ್ಮ ನೆರೆಹೊರೆ ಇರಬೇಕೆಂದು ಬಯಸುತ್ತಾರೆ ಎಂಬುದನ್ನು ತಿಳಿಯಲು ಪ್ರಯತ್ನಿಸಿ ಮಾಹಿತಿದಾರರಿಂದ ಮಾಹಿತಿಯನ್ನು ಪಡೆದುಕೊಂಡಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಗ್ರಾಮದಲ್ಲಿ ಇರುವ ನೆರೆಹೊರೆ ನಿಯೋಜಿತ ಪ್ರದೇಶದಲ್ಲಿಯೂ ಇರಲಿ ಎಂದು ಅಭಿಪ್ರಾಯಪಟ್ಟರು.

ಮಾಹಿತಿದಾರರನ್ನು ಪರಿಹಾರ ಹೇಗಿರಬೇಕೆಂಬುದನ್ನು ಪ್ರಶ್ನಿಸಿದಾಗ ಮುಳುಗಡೆಯಾಗಲಿರುವ ಮನೆಗಳಿಗೆ ಹಣಕಾಸಿನ ಪರಿಹಾರ ಕೊಡಬೇಕು. ಪ್ರವಾಹದಿಂದ ಭೂಮಿ ನೀರಿನ ಹೊಂಡಗಳಾಗಿ ಫಲವತ್ತತೆ ಕಳೆದುಕೊಳ್ಳುತ್ತಿದ್ದು ಜವಳು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಉದ್ಯೋಗ ಅವಕಾಶಗಳು ದೊರೆಯುತ್ತಿಲ್ಲ ಕಾರಣ ಭೂಮಿ ಮತ್ತು ಉದ್ಯೋಗದ ಪರಿಹಾರ ಬೇಕೆಂದು ಜನರು ಅಭಿಪ್ರಾಯಪಡುತ್ತಾರೆ. ಮೇಧಾ ಪಾಟ್ಕರ್ (೧೯೯೮) ಅವರು ಸ್ಥಳಾಂತರ ಮತ್ತು ಅಭಿವೃದ್ಧಿ ಜೊತೆ, ಜೊತೆಯಾಗಿರಬೇಕು. ಕಾನೂನುಗಳು ಬಲವಂತರ ಕೈಯಲ್ಲಿವೆ. ಆದಿವಾಸಿಗಳು, ದಲಿತರು, ಹಿಂದುಳಿದ ಜನರು, ರೈತರಿಗೆ ಅನುಕೂಲವಾಗುವ

ಬದಲಾವಣೆ ಬೇಕಿದೆ. ಯೋಜನೆಗಳಿಂದಾಗುವ ಲಾಭಾಂಶಗಳು ಯೋಜನೆಗಳಿಂದ ಪ್ರಭಾವಿತವಾಗುವ ಜನರಿಗೆ ತಲುಪುವಂತಾಗಬೇಕೆಂದು ತಿಳಿಸುತ್ತಾರೆ. ಸರಕಾರ ಇದರ ಕುರಿತು ಏನಾದರು ಮಾಹಿತಿ ಪಡೆದುಕೊಂಡಿದೆಯೇ ಎಂಬುದರ ಕುರಿತು ವಿಚಾರಿಸಿದಾಗ, ಪ್ರತಿಶತ ನೂರಕ್ಕೆ ನೂರರಷ್ಟು ಮಾಹಿತಿದಾರರು ಸರಕಾರ ಪರಿಹಾರ ಯಾವ ಸ್ವರೂಪದ್ದು ಇರಬೇಕು ಎಂಬುದರ ಕುರಿತು ಅಭಿಪ್ರಾಯ ಕೇಳಿಲ್ಲವೆಂದು ತಿಳಿಸಿದರು.

ಪರಿಹಾರ ವಿತರಣಾ ಕಾರ್ಯವನ್ನು ಸರಕಾರ ಎರಡು ವಿಧಗಳ ಮುಖಾಂತರ ಹಂಚಿಕೆ ಮಾಡುತ್ತದೆ. ಒಂದು ಅಧಿಕಾರಿಗಳ ಮುಖಾಂತರ ಮತ್ತೊಂದು ಬ್ಯಾಂಕಗಳ ಮುಖಾಂತರ. ಜನರು ತಮಗೆ ದೊರೆಯುವ ಪರಿಹಾರದ ಮೊತ್ತವನ್ನು ಯಾವ ರೀತಿಯಾಗಿ ವಿತರಿಸಲು ಇಚ್ಛಿಸುತ್ತಾರೆ ಎಂಬುದರ ಕುರಿತು ವಿಚಾರಿಸಿದಾಗ, ಒಬ್ಬರು ಮಾಹಿತಿದಾರರನ್ನು ಹೊರತುಪಡಿಸಿ ಎಲ್ಲರೂ ಬ್ಯಾಂಕುಗಳ ಮುಖಾಂತರ ಪರಿಹಾರ ವಿತರಣೆಯಾಗಬೇಕೆಂದು ಇಚ್ಛೆ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ.

ಸರಕಾರಗಳು ಪುನರ್ವಸತಿ ಕೇಂದ್ರಗಳನ್ನು ನಿರ್ಧರಿಸಿ, ಮನೆಗಳನ್ನು ನಿರ್ಮಿಸಿ ಕೊಡುವ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತದೆ. ಇಲ್ಲವೆ ಖಾಸಗಿಯವರಿಗೆ ಗುತ್ತಿಗೆ ನೀಡುತ್ತದೆ. ಗುತ್ತಿಗೆದಾರರು ನಿರ್ಮಿಸಿದ ಮನೆಗಳು ಕೆಲವೊಮ್ಮೆ ಉದ್ಘಾಟನೆಗಿಂತಲೂ ಮುಂಚಿತವಾಗಿಯೇ ಬಿದ್ದು ಹೋದ ಉದಾಹರಣೆಗಳಿವೆ. ಸರಕಾರಿ ಕಾಮಗಾರಿಗಳ ಗುಣಮಟ್ಟ ಕಾಪಾಡಲು ನೂರಾರು ಹುದ್ದೆಗಳನ್ನು ಸೃಷ್ಟಿಸಿದರೂ ತಿಂಗಳಿಗೆ ೬೦ ಲಕ್ಷ ರೂಪಾಯಿ ಸಂಬಳ ರೂಪದಲ್ಲಿ ಖರ್ಚು ಮಾಡಿದರೂ ಸರಕಾರಿ ಕಾಮಗಾರಿಗಳು ಕಳಪೆ ಆಗುತ್ತಿವೆ. ಗುಣ ನಿಯಂತ್ರಣ ಕಾರ್ಯ ಪಡೆಯೆಂಬ ಬಿಳಿ ಆನೆಯನ್ನು ಸರಕಾರ ಸಾಕುತ್ತಿದೆ. (ವಿ.ಕ. ಫೆ. ೨೦೧೨) ವೈ. ಗು. ಜಗದೀಶ ತಿಳಿಸಿದ್ದಾರೆ. ಕಾರಣ ಬಾದಿತ ಜನರು ನಿಯೋಜಿತ ಪ್ರದೇಶದಲ್ಲಿ ತಾವೇ ಮನೆಗಳನ್ನು ನಿರ್ಮಿಸಿಕೊಳ್ಳುತ್ತಾರೆಯೋ ಅಥವಾ ಸರಕಾರದ ಜವಾಬ್ದಾರಿಗೆ ಬಿಡುತ್ತಾರೋ ಎಂಬುದರ ಕುರಿತು ವಿಚಾರಿಸಲಾಗಿ, ಒಬ್ಬ ಮಾಹಿತಿದಾರರನ್ನು ಹೊರತು ಪಡಿಸಿ ಎಲ್ಲರೂ ನಿಯೋಜಿತ ಪ್ರದೇಶಗಳಲ್ಲಿ ತಾವೇ ಮನೆಗಳನ್ನು ನಿರ್ಮಿಸಿಕೊಳ್ಳುವುದಾಗಿ ತಿಳಿಸಿದರು.

ಮನೆಗಳ ನಿರ್ಮಾಣದ ಕುರಿತು ಮಾಹಿತಿದಾರರನ್ನು ವಿಚಾರಿಸಿದಾಗ ನಿಯೋಜಿತ ಪ್ರದೇಶಗಳಲ್ಲಿ ತಾವೇ ಮನೆಗಳನ್ನು ನಿರ್ಮಿಸಿಕೊಳ್ಳುವುದಾಗಿ ತಿಳಿಸಿದರು. ನಂತರ ಅವರನ್ನು ಯಾವ ತೆರನಾದ ಮನೆಗಳನ್ನು ಕಟ್ಟಿಕೊಳ್ಳಲು ಇಚ್ಚಿಸುತ್ತಾರೆ ಎಂಬುದರ ಕುರಿತು ವಿಚಾರಿಸಲಾಯಿತು. ಯೋಜನೆಗಳಿಂದ ಪ್ರಭಾವಿತ ಜನರು ಬಂದಂತಹ ಪರಿಹಾರದ ಮೊತ್ತವನ್ನು ಮನೆಗಳಿಗೆ ತೊಡಗಿಸಿರುವುದನ್ನು ಎಸ್.ಟಿ. ಬಾಗಲಕೋಟ (೨೦೦೮) ತಿಳಿಸಿದ್ದಾರೆ. ಆದರೆ

ಸರಕಾರದ ಪರಿಹಾರದ ಹಣದಿಂದ ಮನೆಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಮತ್ತು ಪರಿಹಾರ ಕ್ರಮ ಅವೈಜ್ಞಾನಿಕವಾಗುತ್ತದೆಂದು ಆರ್. ಉಮಾ ಮಹೇಶ್ವರಿ (೨೦೦೮) ತಿಳಿಸಿದ್ದಾರೆ. ಕಾರಣ ಇಂತಹ ಮನೋಧೋರಣೆ ತಿಳಿಯಲು ಮನೆಯ ಸ್ವರೂಪದ ಬಗೆಗ ವಿಚಾರಿಸಿ ಮಾಹಿತಿಯನ್ನು ಕೋಷ್ಟಕ ೯.೨೨ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೯.೨೨
ಯಾವ ಸ್ವರೂಪದ ಮನೆಗಳು ಬೇಕು?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಯಥಾಸ್ಥಿತಿ	೧೭	೨.೯೩
೨	ಬದಲಾವಣೆ	೫೬೩	೯೭.೦೭
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೨೨ರಲ್ಲಿ ಪ್ರತಿಶತ ೩ರಷ್ಟು ಮಾಹಿತಿದಾರರು ಮಾತ್ರ ಮನೆಗಳ ಸ್ವರೂಪ ಯಥಾಸ್ಥಿತಿ ಇರಲಿ ಎಂದರೆ ಇನ್ನುಳಿದ ಶೇಕಡಾ ೯೭ರಷ್ಟು ಮಾಹಿತಿದಾರರು ಬದಲಾವಣೆ ಬಯಸಿ ತಿಳಿಸಿರುವುದು ಕಂಡು ಬರುತ್ತದೆ.

ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಿದ ಮೇಲೂ ಸರಕಾರಗಳು ಮೂಲ ಸೌಕರ್ಯ ಅಭಿವೃದ್ಧಿ ಪಡಿಸುವದಿಲ್ಲವೆಂಬುದನ್ನು ಅಧ್ಯಯನಗಳು ತಿಳಿಸುತ್ತವೆ. ಓರಿಸ್ಸಾದ ಸಾಲಂದಿ ನೀರಾವರಿ ಯೋಜನೆಯಿಂದ ಸ್ಥಳಾಂತರವಾದ ದಶಕಗಳ ನಂತರ ಶಾಲೆ ಕಟ್ಟಿಸಲಾಯಿತೆಂದು ಫರ್ನಾಂಡಿಸ್ ತಿಳಿಸಿದ್ದಾರೆ. ಜನರು ಇತ್ತೀಚಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಅಲ್ಲದೆ ಖಾಸಗಿ ಶಾಲೆಗಳಿಗೆ ಒಲವು ತೋರಿಸುತ್ತಿರುವುದು ತಿಳಿಯುತ್ತದೆ. ಕಾರಣ ಜನರು ಪುನರ್ವಸತಿ ಪ್ರದೇಶಗಳಲ್ಲಿ ಯಾವ ತೆರನಾದ ಶಾಲೆಗಳನ್ನು ತೆರೆಯಲು ಬಯಸುತ್ತಾರೆ ಎಂಬುದನ್ನು ತಿಳಿಯಲು ಅವರನ್ನು ಸಂದರ್ಶಿಸಿ ಅವರಿಂದ ಬಂದ ಪ್ರತಿಕ್ರಿಯೆಗಳನ್ನು ಕೋಷ್ಟಕ ೯.೨೩ರಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೯.೨೩
ಪುನರ್ವಸತಿ ಪ್ರದೇಶಗಳಲ್ಲಿ ಯಾವ ತೆರನಾದ ಶಾಲೆಗಳಿರಬೇಕೆಂದು ಇಚ್ಛಿಸುತ್ತೀರಿ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಸರಕಾರಿ ಶಾಲೆಗಳು	೩೬೦	೬೨.೦೭
೨	ಖಾಸಗಿ ಶಾಲೆಗಳು	೨೨೦	೩೭.೯೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೨೩ನ್ನು ಗಮನಿಸಿದಾಗ ಪ್ರತಿಶತ ೬೨ರಷ್ಟು ಮಾಹಿತಿದಾರರು ಸರಕಾರಿ ಶಾಲೆಗಳಿರಬೇಕೆಂದು ಬಯಸಿದರೆ, ಶೇಕಡಾ ೩೮ರಷ್ಟು ಮಾಹಿತಿದಾರರು ಖಾಸಗಿ

ಶಾಲೆಗಳಿರಬೇಕೆಂದು ತಿಳಿಸಿದ್ದಾರೆ. ಗ್ರಾಮದಲ್ಲಿ ಭೂರಹಿತರು, ಕೂಲಿ ಕಾರ್ಮಿಕರು ಹೆಚ್ಚಿಗಿರುವುದರಿಂದ ಸರಕಾರಿ ಶಾಲೆಗಳಿರಬೇಕೆಂದು ತಿಳಿಸಿರುವುದು ಕಂಡು ಬರುತ್ತದೆ.

ಜನರು ಸಹಿತ ಸ್ಥಳಾಂತರದ ಕುರಿತು ವಿಚಾರಿಸುತ್ತಿಲ್ಲ. ಸ್ಥಳಾಂತರ ಮತ್ತು ಪುನರ್ವಸತಿ ಕುರಿತು ಮಾಹಿತಿದಾರರನ್ನು ಸಮಗ್ರವಾಗಿ ವಿಚಾರಿಸಿದ ನಂತರ ಮಾಹಿತಿದಾರರಲ್ಲಿ ಎಷ್ಟು ಜನರು ಪುನರ್ವಸತಿ ಪ್ರದೇಶಗಳಿಗೆ ಭೇಟಿ ನೀಡಿದ್ದಾರೆ ಎಂಬುದರ ಕುರಿತು ಮಾಹಿತಿ ಪಡೆದು ಕೋಷ್ಟಕ ೯.೨೪ರಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೯.೨೪
ಪುನರ್ವಸತಿ ಹೊಂದುವ ಪ್ರದೇಶಗಳಿಗೆ ಭೇಟಿ ನೀಡಿದ್ದೀರಾ?

ಕ್ರಸಂ	ಪ್ರತಿಕ್ರಿಯೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
೧	ಹೌದು	೨೨೬	೩೮.೯೭
೨	ಇಲ್ಲ	೩೫೪	೬೧.೦೩
	ಒಟ್ಟು	**೫೮೦**	**೧೦೦.೦೦**

ಕೋಷ್ಟಕ ೯.೨೪ರಲ್ಲಿ ಪ್ರತಿಶತ ೩೯ರಷ್ಟು ಮಾಹಿತಿದಾರರು ಮಾತ್ರ ಪುನರ್ವಸತಿ ಪ್ರದೇಶಕ್ಕೆ ಭೇಟ್ಟಿ ನೀಡಿದ್ದರೆ ಇನ್ನುಳಿದ ೬೧ರಷ್ಟು ಮಾಹಿತಿದಾರರು ಪುನರ್ವಸತಿ ಪ್ರದೇಶಗಳಿಗೆ ಭೇಟಿ ನೀಡದಿರುವುದು ತಿಳಿಯುತ್ತದೆ. ಗ್ರಾಮದ ಹೆಚ್ಚಿನ ಜನರಲ್ಲಿ ಗ್ರಾಮ ಮುಳಗಡೆಯಾಗುವುದಿಲ್ಲವೆಂಬ ನಂಬಿಕೆ ಇದ್ದು, ಪುನರ್ವಸತಿ ವಿಷಯದಲ್ಲಿ ನಿರಾಸಕ್ತಿರಾಗಿರುವುದೇ ಪುನರ್ವಸತಿ ಪ್ರದೇಶಗಳಿಗೆ ಭೇಟಿ ನೀಡದಿರಲು ಕಾರಣವಾಗಿದೆ.

ಪ್ರಮುಖ ಸಮಸ್ಯೆಗಳು :

೧) ಸಂತ್ರಸ್ತರಿಗೆ ಸ್ಥಳಾಂತರದ ಬಗ್ಗೆ ಪೂರ್ಣ ಮಾಹಿತಿ ಇಲ್ಲದಿರುವುದು.

೨) ಸ್ಥಳಾಂತರ ಯೋಜನೆಯ ಪರಿಚಯ ಪಡೆಯದಿರುವುದು.

೩) ಸರಕಾರ, ಅಧಿಕಾರಿಗಳು, ಸಂತ್ರಸ್ತರೊಂದಿಗೆ ಸವಿಸ್ತಾರ ಚರ್ಚೆ ನಡೆಸದಿರುವುದು.

೪) ಸಮುದಾಯ ನಾಯಕರುಗಳ ಕೊರತೆ.

೫) ಗ್ರಾಮ ಮುಳಗಡೆಯಾಗುವುದಿಲ್ಲವೆಂಬ ಭಾವನೆ.

೬) ಸಮೀಪದ ಕೋಳಿಗುಡ್ಡಕ್ಕೆ ಸ್ಥಳಾಂತರವಾದರೆ ಒಳ್ಳೆಯದೆಂಬ ಭಾವನೆ.

೭) ಶಾಶ್ವತ ಪರಿಹಾರ ದೊರಕದಿರುವುದು.

ಅಧ್ಯಾಯ : ಹತ್ತು

ಅಧ್ಯಯನದ ಫಲಿತಗಳು

ಅಧ್ಯಾಯ : ಹತ್ತು

ಅಧ್ಯಯನದ ಫಲಿತಗಳು

ಈ ಅಧ್ಯಾಯದಲ್ಲಿ ಅಧ್ಯಯನದ ಪ್ರಮುಖ ಫಲಿತಗಳನ್ನು ದಾಖಲಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ವಿವಿಧ ಕಾರಣಗಳಿಂದ ಪ್ರವಾಹಗಳ ಪ್ರಮಾಣ ಮತ್ತು ತೀವ್ರತೆ ಹೆಚ್ಚಾಗುತ್ತಿದೆ. ಜಲತಜ್ಞರು ನೂರಾರು ವರ್ಷಗಳಲ್ಲಿ ಒಮ್ಮೆ ಇಂತಹ ಪ್ರವಾಹಗಳು ಸಂಭವಿಸುತ್ತವೆಂದು ತಿಳಿಸಿದರೆ ಕರ್ನಾಟಕ ಸರಕಾರ ಮತ್ತು ಸಾಮಾಜಿಕ ಹೋರಾಟಗಾರರು ಸಹ್ಯಾದ್ರಿ ಶ್ರೇಣಿಗಳಲ್ಲಿಯ ವಿಪರೀತ ಮಳೆ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿಯ ಅಣೆಕಟ್ಟುಗಳಿಂದ ಅನಿಯಂತ್ರಿತ ಮತ್ತು ಮಾಹಿತಿ ನೀಡದೆ ನದಿಗೆ ನೀರು ಬಿಡುತ್ತಿರುವುದೇ ಕಾರಣ ಎನ್ನುತ್ತಿದ್ದಾರೆ. ಮಹಾರಾಷ್ಟ್ರ ಸರಕಾರ ಮತ್ತು ಆ ಪ್ರದೇಶದ ಸಾಮಾಜಿಕ ಹೋರಾಟಗಾರರು ಕರ್ನಾಟಕದಲ್ಲಿ ಆಲಮಟ್ಟಿ ಅಣೆಕಟ್ಟು ನಿರ್ಮಿಸಿರುವುದು ಜಲಾನಯನ ಪ್ರದೇಶದಲ್ಲಿ ಪ್ರವಾಹಗಳ ತೀವ್ರತೆ ಹೆಚ್ಚಳಕ್ಕೆ ಕಾರಣವೆಂದು ದೂಷಿಸುತ್ತಿವೆ. ಜಲಾನಯನ ಪ್ರದೇಶದಲ್ಲಿಯ ವಿಪರೀತ ಮಳೆ, ಮಹಾರಾಷ್ಟ್ರ ಅಣೆಕಟ್ಟೆಗಳಿಂದ ಅನಿಯಂತ್ರಿತ ನೀರು ಬಿಡುಗಡೆ ಮತ್ತು ಅಣೆಕಟ್ಟುಗಳ ನಿರ್ಮಾಣ ಪ್ರವಾಹಕ್ಕೆ ಕಾರಣವೆಂದು ಜನರ ಅಭಿಪ್ರಾಯವಾಗಿದೆ. ಈ ಪ್ರದೇಶದ ಪ್ರವಾಹಗಳಿಗೆ ಮೇಲೆ ಸೂಚಿಸಿದ ಯಾವುದೇ ಕಾರಣಗಳಿರಲಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು ಸರಕಾರಗಳ ಪ್ರಮುಖ ಕಾರ್ಯವಾಗಬೇಕು. ಯೋಗ್ಯವಾದ ಜನಪರ ಯೋಜನೆಗಳನ್ನು ಕೈಗೊಳ್ಳಬೇಕು. ಲಕ್ಷ, ಕೋಟಿ ಆಯವ್ಯಯ ಮಂಡಿಸಲು ಹೊರಟಿರುವ ರಾಜ್ಯ ಸರಕಾರ ಪುನರ್ವಸತಿ ಯೋಜನೆಗಳಿಗೆ ಆದ್ಯತೆ ನೀಡಬೇಕು. ಕೇಂದ್ರ ಸರಕಾರ ಒಕ್ಕೂಟ ನೀತಿ ಮನ್ನಿಸಿ ತಾರತಮ್ಯ ನೀತಿ ಅನುಸರಿಸದೆ ಗಂಡಾಂತರ ಸನ್ನಿವೇಶಗಳಲ್ಲಿ ರಾಜ್ಯಗಳಿಗೆ ಸಹಾಯ ಹಸ್ತ ನೀಡಬೇಕೆಂಬುದು ಜನರ ಒಮ್ಮತ. ದೇಶದ ಜನತೆ ಅಭಿವೃದ್ಧಿ ಯೋಜನೆಗಳನ್ನು ವಿರೋಧಿಸುತ್ತಿಲ್ಲ. ಬದಲಿಗೆ ಅಭಿವೃದ್ಧಿ ಯೋಜನೆಗಳಿಂದಾಗುವ ದುಷ್ಪರಿಣಾಮ ವಿರೋಧಿಸುತ್ತಿದ್ದಾರೆ. ಶ್ರೀಮಂತರಿಗೆ,

ಬಂಡವಾಳಶಾಹಿಗಳಿಗೆ ಧಾರಾಳವಾಗಿ ಹಣ ನೀಡುವ ಸರಕಾರಗಳು ಅಭಿವೃದ್ಧಿ ಯೋಜನೆಗಳಿಂದ ಬಾಧಿತವಾಗುವ ಬಡವರು, ಹಿಂದುಳಿದವರು ಮತ್ತು ಗ್ರಾಮೀಣ ಜನರಿಗೆ ಪರಿಹಾರ ನೀಡುವಲ್ಲಿ ಹಿಂದೇಟು ಏಕೆ ಎಂಬುದು ಯಕ್ಷ ಪ್ರಶ್ನೆ.

ಸರಕಾರ ಯೋಜನೆಗಳ ನಿರ್ವಹಣೆಗೆ ಅಧಿಕಾರಿಗಳನ್ನು ನೇಮಕ ಮಾಡಿರುತ್ತದೆ. ಈ ಅಧಿಕಾರಿಗಳು ಬಾಧಿತ ಜನರ ಸಮಸ್ಯೆಗಳ ಪರಿಹಾರಕ್ಕೆ ಇರುತ್ತಾರೆಯೋ ಅಥವಾ ಸಮಸ್ಯೆಗಳ ಸೃಷ್ಟಿಸಲಿಕ್ಕೆ ಇರುತ್ತಾರೆಯೋ ಎಂಬುದು ಜನ ಸಾಮಾನ್ಯರ ಸಂಶಯ. ಮೂಲ ವಾಸಸ್ಥಳಗಳನ್ನು ಬಿಟ್ಟು ಪರಿಚಯವಿಲ್ಲದ ಸ್ಥಳಗಳಿಗೆ ಹೋಗಿ ವಾಸವಾಗುವುದು ನೋವಿನ ಸಂಗತಿಯಾದರೂ, ಸ್ಥಳಾಂತರ ಅನಿವಾರ್ಯವಾಗಿರುತ್ತದೆ. ಇದಕ್ಕೆ ಸಮುದಾಯ ಜನರ ನಂಬಿಕೆ ಏನೆಂದರೆ ಗ್ರಾಮವನ್ನು ಬಿಡುವ ಪ್ರಸಂಗ ಬರುವುದಿಲ್ಲ. ಸಕಾರದಿಂದ ಪರಿಹಾರ ಪಡೆದುಕೊಂಡು ಗ್ರಾಮದಲ್ಲಿಯೇ ವಾಸಿಸಬಹುದು ಎಂಬ ವಿಚಾರ ಇವರದ್ದು. ಪ್ರವಾಹದ ದುಷ್ಪರಿಣಾಮದ ಭವಿಷ್ಯತ್ತಿನ ಕುರಿತು ಸರಕಾರಕ್ಕಾಗಲಿ, ಅಧಿಕಾರಿಗಳಿಗಾಗಲಿ ಮತ್ತು ಜನತೆಗಾಗಲಿ ತಿಳುವಳಿಕೆ ಇಲ್ಲ. ಇದರ ನಿರ್ದಿಷ್ಟ ಪರಿಣಾಮಗಳ ಕುರಿತು ಮಾಹಿತಿ ನೀಡುವುದು. ಪಡೆದುಕೊಳ್ಳುವುದು ಅತಿ ಅವಶ್ಯಕವಾಗಿದೆ. ಸರಕಾರ ಸಮುದಾಯದ ಸ್ಥಳಾಂತರಕ್ಕೆ ಯೋಚಿಸುತ್ತಿದೆ. ಇನ್ನೊಂದು ಕಡೆ ಗ್ರಾಮದ ದಾರಿಗಳನ್ನು ಎತ್ತರಿಸುವುದು, ಸೇತುವೆಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ. ಸರಕಾರದ ನಿರ್ಧಾರ ಏನು ಎಂಬುದು ಜನರಿಗೆ ತಿಳಿಯುತ್ತಿಲ್ಲ. ಜಮೀನುಗಳಲ್ಲಿಯ ನೀರು ಹಳ್ಳಗಳ ಮುಖಾಂತರ ಹರಿದು ನದಿ ಸೇರುತ್ತಿತ್ತು. ಆದರೆ ಜನರು ಹಳ್ಳ ಹರಿಗಳನ್ನು ಮುಚ್ಚಿ ಬೇಸಾಯಕ್ಕೆ ಉಪಯೋಗಿಸುತ್ತಿದ್ದಾರೆ. ಕಾರಣ ಪ್ರವಾಹಗಳಿಂದ ಜಮೀನುಗಳಲ್ಲಿ ನೀರು ನಿಂತು ಜಮೀನುಗಳು ನೀರಿನ ಹೊಂಡಗಳಾಗುತ್ತಿವೆ. ಜವಳು ಪ್ರಮಾಣ ಹೆಚ್ಚಿ ಜಮೀನುಗಳ ಫಲವತ್ತತೆ ಕುಸಿಯುತ್ತಿದೆ. ಸರಕಾರ ಸಮುದಾಯದ ವಾಸಸ್ಥಳಗಳನ್ನು ಮಾತ್ರ ಸ್ಥಳಾಂತರಿಸಲು ಯೋಚಿಸುತ್ತಿದೆ. ಪ್ರವಾಹದಿಂದ ಬಾಧಿತವಾಗುವ ಎಲ್ಲ ಜಮೀನುಗಳ ಸ್ಥಿತಿ ಏನು ಎಂಬುದು ತಿಳಿಯುತ್ತಿಲ್ಲ. ಸಮುದಾಯದ ಜನತೆ ಗ್ರಾಮದ ಸಮೀಪದ ಸ್ಥಳಗಳಲ್ಲಿ ಸ್ಥಳಾಂತರಕ್ಕಾಗಿ ಬಯಸುತ್ತಿದ್ದಾರೆ. ಸಮೀಪದಲ್ಲಿ ಸರಕಾರಿ ಒಡೆತನದ ಭೂ ಪ್ರದೇಶವಿಲ್ಲದ ಕಾರಣ ಖಾಸಗಿ ಒಡೆತನದ ಜಮೀನುಗಳನ್ನು ವಶಪಡಿಸಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಇದಕ್ಕೆ ಕಾನೂನಾತ್ಮಕ ತೊಡಕುಗಳು ಕಾಡುತ್ತಿವೆ. ಕಾರಣ ನದಿಯ ಆಚೆಗಿರುವ ದೂರದ ಸುಟ್ಟಟ್ಟಿ ಮಡ್ಡಿಯನ್ನು ಖವಟಕೊಪ್ಪ ಸ್ಥಳಾಂತರಕ್ಕೆ ಗೊತ್ತು ಪಡಿಸುವ ವಿಚಾರದಲ್ಲಿದೆ. ಅಲ್ಲಿಗೆ ಸ್ಥಳಾಂತರವಾದರೆ ಜಮೀನುಗಳನ್ನು ಹೊಂದಿದ ಜನರು ಸಮಸ್ಯೆ ಎದುರಿಸಬೇಕಾಗುತ್ತದೆ. ಹೀಗಾಗಿ ಜಮೀನುಗಳ ಹೊಂದಿದ ಮತ್ತು ಹೊಂದದಿರುವ ಸಮುದಾಯದ ಜನರಲ್ಲಿ ಪುನರ್ವಸತಿ ಕೇಂದ್ರದ ಕುರಿತು

ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯದ ಕಾರಣ ಸಮೀಕ್ಷೆ ಕಾರ್ಯಕ್ಕೆ ವಿಳಂಬವಾಗುತ್ತಿದೆ. ವಿಳಂಬವೇ ಭ್ರಷ್ಟಾಚಾರಕ್ಕೆ ಕಾರಣವಾಗುತ್ತಿದೆ ಎಂದು ಜನರ ಅಭಿಪ್ರಾಯ. ಸರಕಾರ ಪರಿಹಾರ ಪುನರ್ವಸತಿಗೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಧಾರ ತಿಳಿಸಬೇಕು. ಇಲ್ಲವಾದಲ್ಲಿ ಸಮುದಾಯದ ಜನರು ಇನ್ನಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಗ್ರಾಮ ಮುಳುಗಡೆಯಾಗುತ್ತದೆಂಬ ನಂಬಿಕೆಯಿಂದ ಗ್ರಾಮದಲ್ಲಿ ಜನರು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ. ಜಮೀನುಗಳನ್ನು ಹೊಂದಿದ ಜನರು ಜವಳಾಗುತ್ತಿರುವ ಜಮೀನುಗಳನ್ನು ಸುಧಾರಿಸಬೇಕೋ, ಬೇಡವೋ ಎಂಬ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಈ ಕಾರ್ಯವನ್ನು ಗ್ರಾಮದ ಕೆಲವೊಂದು ಜನರು ಕೈಗೊಂಡರೆ ಸಾಲದು ಇದೊಂದು ಇಡೀ ಗ್ರಾಮಕ್ಕೆ ಸಂಬಂಧಿಸಿದ ಸಮಗ್ರ ಯೋಜನೆಯಾಗಬೇಕು. ಗ್ರಾಮದಲ್ಲಿ ಚಿಕ್ಕ ಚಿಕ್ಕ ಹಿಡುವಳಿದಾರರ ಸಂಖ್ಯೆ ಹೆಚ್ಚಿಗಿರುವುದರಿಂದ ವೈಯಕ್ತಿಕವಾಗಿ ಸವಳು ಜವಳು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಾಧ್ಯವಿಲ್ಲ. ಇದೊಂದು ಸರಕಾರದ ಯೋಜನೆಯಾಗಬೇಕು. ಅಂದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಸಮೀಕ್ಷೆ ಮಾಡದ ವಾಸಸ್ಥಳಗಳನ್ನು ಸಮೀಕ್ಷೆ ಮಾಡಿಸುವುದು, ಆಸ್ತಿಗಳ ಮೌಲ್ಯಮಾಪನವನ್ನು ಹೆಚ್ಚಿಗೆ ಮಾಡಿಸುತ್ತೇವೆಂದು ಹೇಳಿ ಜನರಿಂದ ಹಣ ಪಡೆಯುವ ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಿರುವುದು ಸರ್ವೇಸಾಮಾನ್ಯ. ಕೆಲವೊಂದು ಜನರು ಅವರು ಹಣ ಕೇಳದಿದ್ರೂ ನಾವೇ ಕೊಡುತ್ತೇವೆಂದು ತಿಳಿಸಿದರು. ಶ್ರೀಮಂತರು ತಮ್ಮ ಆಸ್ತಿಪಾಸ್ತಿಗಳಿಗೆ ಹಣಕೊಟ್ಟು ಮೌಲ್ಯಮಾಪನ ಹೆಚ್ಚಿಸಿಕೊಳ್ಳುತ್ತಿದ್ದಾರೆಂದು ಬಡತನದ ಕುಟುಂಬಗಳು ತಿಳಿಸಿದರೆ ನಾವು ಯಾವುದೇ ಹಣ ನೀಡುತ್ತಿಲ್ಲ ನಿಯಮಾನುಸಾರವಾಗಿಯೇ ನಡೆಯುತ್ತಿದೆಂದು ಇವರ ಪ್ರತಿಕ್ರಿಯೆ. ಇದಕ್ಕೆಲ್ಲ ಮೌಲ್ಯಮಾಪನ ನಿಯಮಗಳ ಬಗೆಗೆ ಮಾಹಿತಿ ಇಲ್ಲದಿರುವುದೆ ಪ್ರಮುಖ ಕಾರಣ. ಜನರಿಗೆ ಇದರ ಕುರಿತು ಮಾಹಿತಿ ಒದಗಿಸಬೇಕು. ಇಲ್ಲವಾದಲ್ಲಿ ಪರಿಹಾರ ಧನ ಘೋಷಣೆಯಾದ ನಂತರ ಕಾನೂನಾತ್ಮಕ ಸಮಸ್ಯೆಗಳು ಉದ್ಭವಿಸಿ ಜನರು ನ್ಯಾಯಾಲಯಗಳಿಗೆ ಹೋಗುವುದು, ವಕೀಲರು ಮಧ್ಯೆ ಪ್ರವೇಶಿಸುವುದು, ಜನರು ಶೇಕಡಾವಾರು ಹಣ ನೀಡುವುದು, ಪರಿಹಾರ ವಿಳಂಬದಂತ ಸಮಸ್ಯೆಗಳು ಉದ್ಭವಿಸಬಹುದು. ಇದಕ್ಕೆ ಸಾಧ್ಯವಾದಷ್ಟು ಕಡಿವಾಣ ಹಾಕಬೇಕು.

ಈ ಮೇಲಿನ ಎಲ್ಲ ಸಮಸ್ಯೆಗಳ ಕುರಿತಾದ ಪ್ರಶ್ನೆಗಳನ್ನು ಕೇಳಿ ಮಾಹಿತಿದಾರರಿಂದ ವಿಷಯದ ಕುರಿತು ಮಾಹಿತಿ ಪಡೆಯಲಾಗಿದೆ. ಇವೆಲ್ಲ ಕ್ಷೇತ್ರ ಕಾರ್ಯದಲ್ಲಿ ನಾನು ಕಂಡುಕೊಂಡ ಸತ್ಯಗಳು.

ಹಿಪ್ಪರಗಿ ಯೋಜನೆಯಿಂದ ಸಂಪೂರ್ಣವಾಗಿ ಏಳು ಗ್ರಾಮಗಳು (ಜನವಾಡ, ಮಹೀಷವಾಡಗಿ, ದೊಡವಾಡ, ಖವಟಕೊಪ್ಪ, ಶೇಗುಣಸಿ, ಅಸ್ಕಿ, ತಮದಡ್ಡಿ) ಬಾಧಿತವಾಗುತ್ತವೆ. ಆಣೆಕಟ್ಟು ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು ೨೦೦೪ರಿಂದ ನೀರು ಸಂಗ್ರಹಣೆ ಮಾಡುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ಯೋಜನೆಯಿಂದ ಸಂಪೂರ್ಣವಾಗಿ ಬಾಧಿತವಾಗುವ ಗ್ರಾಮಗಳ ಪುನರ್ವಸತಿ ಕಾರ್ಯ ಪೂರ್ಣಗೊಂಡಿಲ್ಲ. ಕಾರಣ ಮೇಲಿನ ಗ್ರಾಮಗಳು ಮನ್ಸೂನ್ ತಿಂಗಳಲ್ಲಿಯ ಸಹ್ಯಾದ್ರಿ ಶ್ರೇಣಿಗಳಲ್ಲಿಯ ಅತಿಯಾದ ಮಳೆ ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ಮುನ್ಸೂಚಣೆ ಇಲ್ಲದೆ ನದಿಗೆ ನೀರು ಬಿಡುತ್ತಿರುವ ಕಾರಣ ಪ್ರವಾಹಕ್ಕೆ ತುತ್ತಾಗುತ್ತಿವೆ. ಅಥಣಿ ತಾಲೂಕಿನ ಪ್ರವಾಹಕ್ಕೆ ತುತ್ತಾಗುವ ಇನ್ನುಳಿದ ಗ್ರಾಮಗಳ ಪುನರ್ವಸತಿ ಸ್ಥಳ ನಿರ್ಧಾರವಾಗಿದ್ದು ಅವರು ತಮ್ಮ ಮನೆಗಳಿಗೆ ಶಾಶ್ವತ ಪರಿಹಾರ ಪಡೆದುಕೊಂಡಿದ್ದಾರೆ. ಆದರೆ ನಾನು ಅಧ್ಯಯನಕ್ಕೆ ಆಯ್ದುಕೊಂಡ ಖವಟಕೊಪ್ಪ ಗ್ರಾಮದ ಪುನರ್ವಸತಿ ಸ್ಥಳ ಇನ್ನೂ ನಿರ್ಧಾರವಾಗಿಲ್ಲ. ಮನೆಗಳಿಗೆ ಶಾಶ್ವತ ಪರಿಹಾರವೂ ದೊರಕಿಲ್ಲ. ಇದೆ ಕಾರಣಕ್ಕಾಗಿ ಈ ಗ್ರಾಮವನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಗ್ರಾಮದಲ್ಲಿ ವಿವಿಧ ಜಾತಿ, ಉದ್ಯೋಗಗಳನ್ನು ನಿರ್ವಹಿಸುವ ೭೨೦ ಕುಟುಂಬಗಳಿಂದ ಸಗಟು ಅಧ್ಯಯನ ಪದ್ಧತಿಯನ್ನು ಅನುಸರಿಸಿ ಅವುಗಳಲ್ಲಿ ಶೇಕಡಾ ೮೦ ರಷ್ಟು ಅಂದರೆ ೫೭೬ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಪ್ರವಾಹ ಸಂತ್ರಸ್ತರ ಲಿಂಗ, ವಯಸ್ಸು, ಆದಾಯ, ಶಿಕ್ಷಣ, ಕುಟುಂಬದ ಸ್ವರೂಪ, ಭೂ ಹಿಡುವಳಿ ಪ್ರಮಾಣ, ಬೆಳೆಯ ಸ್ವರೂಪ, ಉಳಿತಾಯ, ಸಾಲ ಮುಂತಾದವುಗಳ ಮೇಲೆ ಪ್ರಭಾವ ಬೀರುವ ಕಾರಣ ಇವರ ಸಾಮಾಜಿಕ ಪರಿಸ್ಥಿತಿ ಮತ್ತು ಆರ್ಥಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

೧೦.೨ ಅಧ್ಯಯನದ ಫಲಿತಗಳನ್ನು ಐದು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

೧) ಪ್ರವಾಹ ಸೃಷ್ಟಿಸಿದ ಸಾಮಾಜಿಕ ಸಮಸ್ಯೆಗಳು

೨) ಆರ್ಥಿಕ ಸಮಸ್ಯೆಗಳು

೩) ಪ್ರವಾಹ ಸೃಷ್ಟಿಸಿದ ಪರಿಸರ ಸಂಬಂಧಿತ ಸಮಸ್ಯೆಗಳು

೪) ಪ್ರವಾಹದ ಪರಿಹಾರ ಸಂಬಂಧಿತ ಸಮಸ್ಯೆಗಳು

೫) ಪ್ರವಾಹದ ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳು

೧೦.೨.೧) ಪ್ರವಾಹ ಸೃಷ್ಟಿಸಿದ ಸಾಮಾಜಿಕ ಸಮಸ್ಯೆಗಳು :

ಪ್ರವಾಹ ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರಿತು. ತಿಂಗಳುಗಟ್ಟಲೇ ಗ್ರಾಮ ಬಿಡುವ ಪರಿಸ್ಥಿತಿ ಬಂದಿತ್ತು. ಸಂತ್ರಸ್ತರು ತಮ್ಮ ಅಂತಸ್ತು, ಸ್ಥಾನಮಾನಗಳನ್ನು ಮರೆತು ಸರಕಾರ

ನಿರ್ಮಿಸಿದ ಶೆಡ್‌ಗಳಲ್ಲಿ ವಾಸಿಸಬೇಕಾಯಿತು. ಸರಕಾರದ ಶೆಡ್‌ಗಳಲ್ಲಿ ವಾಸಿಸಲು ಇಷ್ಟಪಡದ ಜನರು ಸಂಬಂಧಿಕರ ಮನೆಗಳಿಗೆ ಹೋದರು. ಎಲ್ಲಿಯೇ ವಾಸ್ತವ್ಯ ಮಾಡಿದರೂ ಯಾರು ನೆಮ್ಮದಿಯಿಂದ ಇರಲಿಲ್ಲ. ಪ್ರವಾಹದ ಪರಿಣಾಮಗಳು ವಿವಿಧ ಧರ್ಮ, ಜಾತಿ, ವರ್ಗದ ಜನರ ಮೇಲೆ ವಿವಿಧ ರೀತಿಯ ಪರಿಣಾಮಗಳನ್ನು ಬೀರಿತು. ಮಹಿಳೆಯರು ಮಕ್ಕಳು ಕುಟುಂಬದ ಹಿರಿಯರು ಪ್ರವಾಹದಿಂದ ತೊಂದರೆಗೆ ಒಳಗಾದರು. ಈ ಎಲ್ಲ ಸಾಮಾಜಿಕ ಜೀವನದ ಮೇಲಾದ ಪರಿಣಾಮಗಳ ಸಾರಾಂಶ ಇಂತಿದೆ.

೧) ಗ್ರಾಮದ ಹೊರವಲಯಗಳ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಪ.ಜಾತಿ, ಮುಸ್ಲಿಂ, ತಳವಾರ ಕುಟುಂಬಗಳು ಪ್ರವಾಹದಿಂದ ಹೆಚ್ಚು ತೊಂದರೆಗೆ ಒಳಗಾದವು. ಸಮಸ್ಯೆಗಳ ಮಧ್ಯೆಯೂ ನೆರೆಹೊರೆ ಸಹಾಯ ಮಾಡಿರುವುದು ತಿಳಿಯುತ್ತದೆ.

೨) ಜಮೀನುಗಳ ಫಲವತ್ತತೆ ಕುಸಿಯುತ್ತಿರುವುದರಿಂದ ಕೃಷಿ ಆಧಾರಿತ ಕುಟುಂಬಗಳ ವೈವಾಹಿಕ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತಿದೆ. ಕೃಷಿಯೇತರ ಉದ್ಯೋಗಗಳಲ್ಲಿ ತೊಡಗಿದ ಜನರ ಮೇಲೆ ಇದರ ಪರಿಣಾಮವಿಲ್ಲ.

೩) ದೀರ್ಘಾವಧಿ ಪ್ರವಾಹದ ಕಾರಣ ಸಾಂಕ್ರಾಮಿಕ ರೋಗಗಳು ಹರಡಿರುವುದನ್ನು ಕಂಡುಕೊಳ್ಳಲಾಗಿದೆ. ಹಿರಿಯರು ಮಾನಸಿಕ ಖಿನ್ನತೆಯಿಂದ ಬಳಲಿದರು. ಸರಕಾರ ಸಂತ್ರಸ್ತರಿಗೆ ವೈದ್ಯಕೀಯ ಸೇವೆ ಒದಗಿಸಿತ್ತು. ವೈದ್ಯಕೀಯ ಸೇವೆ ಕುರಿತು ಅರ್ಧದಷ್ಟು ಮಾಹಿತಿದಾರರು ತೃಪ್ತಿ ವ್ಯಕ್ತಪಡಿಸಿದ್ದಾರೆ.

೪) ಪ್ರವಾಹದಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಯಿತು, ಸರಕಾರ ಮಕ್ಕಳ ಶಿಕ್ಷಣಕ್ಕೆ ಯಾವುದೇ ಕ್ರಮ ಕೈಕೊಳ್ಳದಿರುವುದು.

೫) ಸರಕಾರ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಸ್ನಾನದ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಇಲ್ಲದಿರುವುದು.

೬) ಗ್ರಾಮದ ದೇವಾಲಯಗಳಲ್ಲಿ ಪೂಜಾ ಕಾರ್ಯಗಳನ್ನು ನಡೆಸಲು ಅಸಾಧ್ಯವಾಯಿತು. ಪ್ರವಾಹದ ನಂತರ ದೇವಾಲಯಗಳು ಬಿರುಕು ಬಿಟ್ಟವು. ಇನ್ನು ಕೆಲವೊಂದು ಕುಸಿದು ಬಿದ್ದವು. ಇವುಗಳ ಜೀರ್ಣೋದ್ಧಾರಕ್ಕೆ ಸ್ವಲ್ಪ ಪ್ರಮಾಣದ ಹಣ ದೊರಕಿರುವುದು.

೧೦.೨.೨) **ಪ್ರವಾಹ ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳು :**

ಪ್ರವಾಹದಿಂದ ಬೆಳೆಹಾನಿ, ವಿತ್ತಹಾನಿ, ನಿರುದ್ಯೋಗ, ಆದಾಯ ಕುಸಿತ ಮುಂತಾದ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಪ್ರವಾಹ ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳೆಂದರೆ:

೧) ಗ್ರಾಮದಲ್ಲಿ ಕಬ್ಬು ಪ್ರಮುಖ ಬೆಳೆ. ಪ್ರವಾಹದಿಂದ ಜಮೀನುಗಳಲ್ಲಿ ಅನೇಕ ದಿನಗಳ ಕಾಲ ನೀರು ನಿಂತ ಕಾರಣ ಕಬ್ಬಿನ ಬೆಳೆ ನಾಶವಾಯಿತು. ಅಳಿದುಳಿದ ಕಬ್ಬುಗಳನ್ನು ಸಹಿತ ಕಾರ್ಖಾನೆಯವರು ನುರಿಸಲು ನಿರಾಕರಿಸಿರುವುದು ಅಲ್ಲದೆ ಸರ್ಕಾರ ಬೆಳೆಗಳ ನಾಶಕ್ಕೆ ಎಕರೆಗೆ ಎರಡು ಸಾವಿರ ಮಾತ್ರ ಪರಿಹಾರ ನೀಡಿರುವುದು. ಗ್ರಾಮದ ಶೇಕಡಾ ೪೦ರಷ್ಟು ಜಮೀನುಗಳ ಫಲವತ್ತತೆ ಕುಸಿಯುತ್ತಿರುವುದು. ಆರ್ಥಿಕ ಹೊರೆ ಕಾರಣ ಜಮೀನುಗಳನ್ನು ಸುಧಾರಿಸದೆ ಇರುವುದು. ರಾಸಾಯನಿಕ ಗೊಬ್ಬರದ ಬಳಕೆ ಹೆಚ್ಚುತ್ತಿರುವುದು.

೨) ಗ್ರಾಮದ ಶಾಶ್ವತ ಪುನರ್ವಸತಿಗಾಗಿ ಮನೆಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಮನೆಗಳ ಸಮೀಕ್ಷೆ ವಿಧಾನದ ಕುರಿತು ಸಂತ್ರಸ್ತರಿಗೆ ಮಾಹಿತಿ ಇಲ್ಲದಿರುವುದು. ಜಮೀನುಗಳ ಸಮೀಕ್ಷಾ ಕಾರ್ಯ ಮಾಡದಿರುವುದು.

೩) ಸಂತ್ರಸ್ತರು ಮೂರು ತಿಂಗಳಿಂದ ಆರು ತಿಂಗಳುವರೆಗೆ ನಿರುದ್ಯೋಗ ಅನುಭವಿಸಿದರು. ಸರಕಾರ ನಿರುದ್ಯೋಗಕ್ಕೆ ಯಾವುದೇ ಕ್ರಮ ಕೈಗೊಳ್ಳದಿರುವುದು.

೪) ಸರಕಾರ ಸವಳು-ಜವಳು ಕಾರ್ಯಕ್ರಮ ಹಾಕಿಕೊಳ್ಳಬೇಕು. ಇಲ್ಲವೇ ಜಮೀನುಗಳನ್ನು ಸಮೀಕ್ಷೆ ಮಾಡಿ ಪರಿಹಾರ ನೀಡಬೇಕೆಂಬುದು ಸಂತ್ರಸ್ತರ ಆಶಯ.

೫) ಪ್ರವಾಹದ ಅವಧಿಯಲ್ಲಿ ಮತ್ತು ಪ್ರವಾಹ ನಂತರ ಜಾನುವಾರುಗಳ ಮೇವಿನ ಸಮಸ್ಯೆಯಾಯಿತು. ಸರಕಾರ ಪ್ರವಾಹದ ಅವಧಿಯಲ್ಲಿ ಮಾತ್ರ ಮೇವಿನ ವ್ಯವಸ್ಥೆ ಮಾಡಿತು ಆದರೆ ನಂತರದ ದಿನಗಳಲ್ಲಿ ಸಂತ್ರಸ್ತರು ತೀವ್ರತರವಾದ ಮೇವಿನ ಸಮಸ್ಯೆ ಎದುರಿಸಬೇಕಾಯಿತು. ಜಾನುವಾರುಗಳ ಆರೋಗ್ಯ ನಿರ್ವಹಣೆಗೆ ಸರಕಾರ ಕ್ರಮ ಕೈಗೊಂಡಿತ್ತು. ಗ್ರಾಮದಲ್ಲಿ ಏಳು ಜಾನುವಾರುಗಳು ಸಾವನ್ನಪ್ಪಿರುವುದು ತಿಳಿಯುತ್ತದೆ. ಗ್ರಾಮದ ಹೊರಗಡೆ ಸಾವನ್ನಪ್ಪಿದ ಜಾನುವಾರುಗಳನ್ನು ಹೊರತುಪಡಿಸಿ ಜಾನುವಾರುಗಳ ಸಾವಿಗೆ ಪರಿಹಾರ ದೊರಕಿರುವುದು ತಿಳಿಯುತ್ತದೆ.

೧೦.೨.೩) ಪ್ರವಾಹ ಸೃಷ್ಟಿಸಿದ ಪರಿಸರ ಸಂಬಂಧಿತ ಸಮಸ್ಯೆಗಳು

ಪ್ರವಾಹದಿಂದ ನದಿ ದಡ ಕೊಚ್ಚಿರುವುದು, ಹಳ್ಳಗಳ ಎದುರು ಪ್ರವಾಹದಿಂದ ಜಮೀನುಗಳು ಕೊಚ್ಚಿ ಹೋಗಿರುವುದು ನದಿ ದಡಗಳಲ್ಲಿರುವ ಕೃಷಿ ಪಂಪಸೆಟ್‌ಗಳಿಗೆ ಹಾನಿಯಾಗಿರುವುದು ಮುಂತಾದ ಪರಸರಾತ್ಮಕ ಸಮಸ್ಯೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

೧) ನದಿ ದಡಗಳಲ್ಲಿರುವ ಹುಲ್ಲುಗಾವಲು ಕೊಚ್ಚಿಕೊಂಡು ಹೋಗಿದೆ. ಹಳ್ಳಗಳ ಎದುರು ಪ್ರವಾಹದಿಂದ ಭೂಮಿಯ ಫಲವತ್ತಾದ ಮೇಲ್ಪದರು ಕಿತ್ತುಕೊಂಡು ಹೋಗಿರುವುದು.

೨) ಪ್ರತಿಶತ ನೂರರಷ್ಟು ಸಂತ್ರಸ್ತರು ಕೊಂಕಣ ಪ್ರದೇಶದಲ್ಲಿಯ ವಿಪರೀತ ಮಳೆ ಮತ್ತು ಮಹಾರಾಷ್ಟ್ರ ಸರಕಾರ ಜಲಾನಯನಕ್ಕೆ ಮಾಹಿತಿ ನೀಡದೇ ವಿಪರೀತ ನೀರು ಬಿಟ್ಟಿರುವುದೇ ಪ್ರವಾಹಕ್ಕೆ ಕಾರಣವೆಂದು ತಿಳಿಸಿದ್ದಾರೆ.

೩) ಅಣೆಕಟ್ಟೆಯ ಹಿನ್ನೀರು ಮತ್ತು ಪ್ರವಾಹಗಳ ಕಾರಣ ಜನರು ಶುದ್ಧ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಸರಕಾರ ಶುದ್ಧ ಕುಡಿಯುವ ನೀರಿಗೆ ಯಾವುದೇ ಕ್ರಮ ಕೈಗೊಳ್ಳದಿರುವುದು. ಸಂತ್ರಸ್ತರೂ ಸಹಿತ ಶುದ್ಧ ಕುಡಿಯುವ ನೀರಿಗಾಗಿ ಸರಕಾರವನ್ನು ಒತ್ತಾಯಿಸದೇ ಇರುವುದು.

೪) ಪ್ರವಾಹದ ನಂತರ ಗ್ರಾಮದ ಸುತ್ತಮುತ್ತಲಿನ ಗುಂಡಿಗಳಲ್ಲಿಯ ನೀರನ್ನು ತೆಗೆಯಲು ಸರಕಾರ ಕ್ರಮ ಕೈಕೊಂಡಿತ್ತು. ಸರಕಾರ ಪ್ರವಾಹದ ಸಮಯದಲ್ಲಿ ಯಾಂತ್ರಿಕ ದೋಣಿಗಳ ವ್ಯವಸ್ಥೆ ಮಾಡಿರುವುದು.

೫) ಗ್ರಾಮದ ರಸ್ತೆ, ಸೇತುವೆಗಳನ್ನು ಎತ್ತರಿಸುವುದರಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದೆಂದು ಸರಕಾರದ ವಿಚಾರ. ಈ ಕ್ರಮದಿಂದ ನೀರಿನ ಹರಿವಿಗೆ ತೊಂದರೆಯಾಗಿ ಮತ್ತಷ್ಟು ಸಮಸ್ಯೆ ತೀವ್ರವಾಗುವದೆಂದು ಜನರ ಅಭಿಪ್ರಾಯ.

೬) ಪ್ರವಾಹದಿಂದ ಮನೆಗಳಿಗೆ ಹಾನಿಯಾಗಿರುವುದು. ಮನೆಗಳ ಹಾನಿಗೆ ಸರಕಾರ ಬಾಧಿತ & ಬಾಧಿತವಾಗದೆ ಮನೆಗಳಿಗೆ ರೂ. ೨೦೦೦ ಪರಿಹಾರ ನೀಡಿರುವುದು. ಮನೆಗಳಿಗೆ ಹೆಚ್ಚು ತೊಂದರೆಯಾದ ಸಂತ್ರಸ್ತರು, ಸರಕಾರದ ಪರಿಹಾರದ ಕ್ರಮದ ಕುರಿತು ಅತೃಪ್ತಿ ವ್ಯಕ್ತಪಡಿಸಿರುವುದು.

೧೦.೨.೪) **ಪ್ರವಾಹದ ಪರಿಹಾರ ಸಂಬಂಧಿತ ಸಮಸ್ಯೆಗಳು :**

ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ಯೋಜನೆಗಳಿಗೆ ವಿರೋಧಗಳು ವ್ಯಕ್ತವಾಗುತ್ತಿವೆ. ಇದರ ಅರ್ಥ ಜನರು ಅಭಿವೃದ್ಧಿ ಯೋಜನೆಗಳ ವಿರೋಧವಾಗಿದ್ದಾರೆ ಎಂದು ಕಲ್ಪಿಸಿಕೊಳ್ಳುವುದು ಸರಿಯಾದುದಲ್ಲವೆಂದು ಸಾಮಾಜಿಕ ಹೋರಾಟಗಾರರ ಅಭಿಪ್ರಾಯ. ಅಭಿವೃದ್ಧಿ ಕಾರ್ಯಗಳನ್ನು ವಿರೋಧಿಸುವುದಕ್ಕೆ ಸಂತ್ರಸ್ತರಿಗೆ ಯೋಗ್ಯ ಪರಿಹಾರ ನೀಡದಿರುವುದು ಎಂದಿದ್ದಾರೆ. ಗ್ರಾಮದ ಜನತೆ ಎದುರಿಸಿದ ಪರಿಹಾರ ಸಂಬಂಧಿಸಿದ ಸಮಸ್ಯೆಗಳು.

ಗ್ರಾಮದ ಜನತೆಗೆ ಇನ್ನೂ ಶಾಶ್ವತ ಪರಿಹಾರ ದೊರಕಿಲ್ಲ. ಪ್ರವಾಹದ ಸಮಯದಲ್ಲಿ ಸಂತ್ರಸ್ತರಿಗೆ ದೊರೆತ ತಾತ್ಕಾಲಿಕ ಪರಿಹಾರದಲ್ಲಾದ ನ್ಯೂನ್ಯತೆಗಳ ಕುರಿತು ವಿಚಾರಿಸಿ ವಿಷಯ ಸಂಗ್ರಹಿಸಲಾಗಿದೆ.

೧) ಸರಕಾರದ ತಾತ್ಕಾಲಿಕ ಪರಿಹಾರ ಧನ (ರೂ. ೧೦೦೦) ಪ್ರತಿಶತ ೯೭ರಷ್ಟು ಸಂತ್ರಸ್ತರಿಗೆ ತಲುಪಿದೆ. ಪರಿಹಾರದ ಮೊತ್ತ ಕಡಿಮೆ ಇರುವುದರಿಂದ ಪರಿಹಾರದ ವಿತರಣೆಯಿಂದ ವಂಚಿತರಾದ ಕುಟುಂಬದ ಸದಸ್ಯರಲ್ಲಿ ಯಾವುದೇ ಅಸಮಾಧಾನ ಇಲ್ಲದಿರುವುದು. ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕಿತ್ತು ಎಂಬುದು ಜನರ ವಿಚಾರ. ಪರಿಹಾರದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ವಿತರಿಸಬೇಕೆಂಬುದು ಜನರ ಅಭಿಪ್ರಾಯ.

೨) ಪ್ರವಾಹದ ನಂತರ ಸರಕಾರ ಪಡಿತರ ವ್ಯವಸ್ಥೆ ಮುಖಾಂತರ ಸೀಮೆ ಎಣ್ಣೆ, ಗೋಧಿ, ಅಕ್ಕಿ ನೀಡಿರುವುದು ತಿಳಿಯುತ್ತದೆ. ಇವುಗಳ ಪ್ರಮಾಣವನ್ನು ಹೆಚ್ಚಿಸಬೇಕೆಂಬುದು ಜನರ ವಿಚಾರ.

೩) ಗ್ರಾಮದ ಪ್ರಮುಖರು ಪರಿಹಾರ ಧನ ವಿತರಿಸುವಲ್ಲಿ ಯಾವುದೇ ಪಾತ್ರ ವಹಿಸಲಿಲ್ಲ ಎಂಬುದು ಸಂತ್ರಸ್ತರ ಅಭಿಪ್ರಾಯ. ಪರಿಹಾರ ವಿತರಣೆಯಲ್ಲಿ ಯಾವುದೇ ತಾರತಮ್ಯಗಳು ಆಗದಿರುವುದನ್ನು ತಿಳಿಸಿದ್ದಾರೆ.

೪) ಗ್ರಾಮವಾಸಿಗಳಲ್ಲದವರಿಗೆ ಯಾವುದೇ ಪರಿಹಾರ ಧನ ದೊರಕಿಲ್ಲದಿರುವುದು.

೧೦.೨.೫) ಪ್ರವಾಹದ ಸ್ಥಳಾಂತರ ಮತ್ತು ಪುನರ್ವಸತಿ ಸಮಸ್ಯೆಗಳು :

ಪ್ರವಾಹದಿಂದ ಸಂಪೂರ್ಣವಾಗಿ ಬಾಧಿತವಾಗುವ ಅಥಣಿ ತಾಲೂಕಿನ ಗ್ರಾಮವಿದು. ಸರಕಾರ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರಿಸಿ ಪುನರ್ವಸತಿ ಒದಗಿಸಲು ಯೋಚಿಸಿದೆ. ಸರಕಾರದ ಸ್ಥಳಾಂತರ ಮತ್ತು ಪುನರ್ವಸತಿ ಕುರಿತು ಸಂತ್ರಸ್ತರ ವಿಚಾರಗಳನ್ನು ಸಂಗ್ರಹಿಸಲಾಗಿದೆ.

೧) ಗ್ರಾಮವನ್ನು ಶಾಶ್ವತವಾಗಿ ಸ್ಥಳಾಂತರಿಸುವುದು ಎಲ್ಲ ಜನರಿಗೆ ಮಾಹಿತಿ ಇರುವುದು. ಸ್ಥಳಾಂತರಿಸುವ ವಿಷಯ ತಿಳಿದಿದ್ದರೂ ಪ್ರತಿಶತ ೯೦ರಷ್ಟು ಜನರು ಬೇರೆ ಕಡೆಗೆ ಜಮೀನುಗಳನ್ನು ಖರೀದಿಸದೆ ಇರುವುದು ಕಂಡು ಬರುತ್ತದೆ. ರೈತರು ಖರೀದಿಸಿದ ಜಮೀನುಗಳ ಪ್ರಮಾಣವೂ ಅತೀ ಕಡಿಮೆ. ಗ್ರಾಮಗಳ ಮುಳಗಡೆ ವಿಷಯ ಸುತ್ತಮುತ್ತಲಿನ ಗ್ರಾಮಗಳ ಮೇಲೂ ಬೀರಿದ್ದೂ ಜಮೀನುಗಳ ಬೆಲೆಗಳು ಗಗನಕ್ಕೇರಿ ಸಾಮಾನ್ಯ ಜನರು ಜಮೀನುಗಳನ್ನು ಖರೀದಿಸಲು ಅಸಾಧಯವಾದ ಸ್ಥಿತಿ ನಿರ್ಮಾಣವಾಗಿದೆ.

೨) ಸ್ಥಳಾಂತರದ ನಂತರ ಪ್ರತಿಶತ ೬೦ರಷ್ಟು ಸಂತ್ರಸ್ತರು ಉದ್ಯೋಗಕ್ಕಾಗಿ ಸರಕಾರವನ್ನು ಅವಲಂಭಿಸಿರುವುದು. ಪ್ರತಿಶತ ೬ರಷ್ಟು ಜನರಿಗೆ ಮಾತ್ರ ಸರಕಾರ ಉದ್ಯೋಗ ಮೀಸಲಾತಿ ಪ್ರಮಾಣ ಪತ್ರಗಳನ್ನು ನೀಡಿದೆ.

೩) ಭೂಮಿ ಮತ್ತು ಉದ್ಯೋಗ ರೂಪದ ಪರಿಹಾರಗಳನ್ನು ನೀಡಿದರೆ ಸೂಕ್ತ ಎಂಬುದು ಸಂತ್ರಸ್ತರ ವಿಚಾರ.

೪) ಗ್ರಾಮದ ಸಮಸ್ಯೆಗಳಿಗೆ ಸ್ಪಂದಿಸುವ ನಾಯಕರುಗಳ ಕೊರತೆ ಕಾಣುತ್ತದೆ.

೫) ಸಮೀಪದ ಕೋಳಿಗುಡ್ಡದಲ್ಲಿ ಪುನರ್ವಸತಿ ಒದಗಿಸಿದರೆ ಸೂಕ್ತ ಎಂಬುದು ಸಂತ್ರಸ್ತರ ಅಭಿಪ್ರಾಯ. ಏಕೆಂದರೆ ಸರಕಾರ ಶಾಶ್ವತ ಪುನರ್ವಸತಿಗೆ ವಿಚಾರಿಸುತ್ತಿದ್ದರೂ ಜಮೀನುಗಳನ್ನು ಸಮೀಕ್ಷೆ ಮಾಡುತ್ತಿಲ್ಲ. ಇದರಿಂದ ಜಮೀನುಗಳನ್ನು ನೋಡಿಕೊಳ್ಳಲು ಸೂಕ್ತವಾಗುವ ಸ್ಥಳವೆಂದರೆ ಕೋಳಿಗುಡ್ಡ ಎಂಬುದು ಜನರ ಅಭಿಪ್ರಾಯ. ನಿಯೋಜಿತ ಪುನರ್ವಸತಿ ಪ್ರದೇಶದಲ್ಲಿ ಗ್ರಾಮದಲ್ಲಿ ಇರುವ ನೆರೆಹೊರೆ ಇರಲಿ ಎಂಬುದು ಸಂತ್ರಸ್ತರ ಅಭಿಪ್ರಾಯ. ನಿಯೋಜಿತ ಸ್ಥಳದಲ್ಲಿ ತಾವೇ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಬಯಸಿದ್ದು ಸರಕಾರದ ನಿರ್ಮಾಣ ಕಾರ್ಯದಲ್ಲಿ ನಂಬಿಕೆ ಇಲ್ಲದಿರುವುದು ಕಂಡು ಬರುತ್ತದೆ.

೬) ಪುನರ್ವಸತಿ ಪ್ರದೇಶಗಳಲ್ಲಿ ಶಾಲೆ, ದವಾಖಾನೆ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಬೇಕೆಂಬುದು ಜನರ ಅಭಿಪ್ರಾಯ. ನಿಯೋಜಿತ ಪ್ರದೇಶದಲ್ಲಿ ಪ್ರತಿಶತ ೬೩ರಷ್ಟು ಸಂತ್ರಸ್ತರು ಸರಕಾರಿ ಶಾಲೆಗಳಿರಬೇಕೆಂದು ತಿಳಿಸಿದ್ದಾರೆ.

೧೦.೩ ಪ್ರಾಕಲ್ಪನೆಗಳ ಪರಿಶೀಲನೆ

ಪ್ರಾಕಲ್ಪನೆ: ಒಂದು

ಪ್ರವಾಹವು ಬಾಧಿತ ಜನರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಮೇಲೆ ಪರಿಣಾಮ ಬೀರಿದೆ.

ಮೇಲಿನ ವಿಷಯಗಳ ಕುರಿತು ೫ ಮತ್ತು ೬ನೇ ಅಧ್ಯಾಯಗಳಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಪ್ರವಾಹ ಸಾಮಾಜಿಕ ಅಂಶಗಳಾದ ಕುಟುಂಬ, ನೆರೆಹೊರೆ ಜಾತಿ, ವಿವಾಹ, ಮಕ್ಕಳ, ಮಹಿಳೆಯರು ಮತ್ತು ಹಿರಿಯರ ಮೇಲೆ ಪರಿಣಾಮ ಬೀರಿದೆ ಎಂಬುದು ೫.೮, ೫.೧.೧, ೫.೨.೧, ೫.೫.೩, ೫.೪, ೫.೫ಗಳಲ್ಲಿ ಕಂಡುಕೊಳ್ಳಬಹುದು.

ಪ್ರವಾಹ ಆರ್ಥಿಕ ಅಂಶಗಳ ಮೇಲೆ ಪರಿಣಾಮ ಬೀರಿದೆ. ಆರ್ಥಿಕ ಅಂಶಗಳಾದ ಭೂಮಿ, ಬೆಳೆ, ಸಾಗುವಳಿ ಪದ್ಧತಿ, ಇಳುವರಿ, ಕೂಲಿದರಗಳು, ಉದ್ಯೋಗ, ಸಾಲ, ರಸಗೊಬ್ಬರಗಳ ಬಳಕೆ, ಜನ-ಜಾನುವಾರುಗಳ ಮೇಲಿನ ಪರಿಣಾಮಗಳ ಕುರಿತು ಅಧ್ಯಾಯ ೬ರಲ್ಲಿ ಚರ್ಚಿಸಲಾಗಿದೆ. ಮೇಲಿನ ಆರ್ಥಿಕ ಅಂಶಗಳ ಮೇಲೆ ಪ್ರವಾಹ ಪರಿಣಾಮ ಬೀರಿದೆ ಎಂಬುದು ೬.೨ ರಿಂದ ೬.೧೬ರ ವರೆಗಿನ ಕೋಷ್ಟಕಗಳನ್ನು ಗಮನಿಸಿದಾಗ ಪ್ರವಾಹ ಆರ್ಥಿಕ ಅಂಶಗಳ ಮೇಲೆ ಪರಿಣಾಮ ಬೀರಿದೆ ಎಂಬುದು ತಿಳಿಯುತ್ತದೆ.

ಪ್ರಾಕಲ್ಪನೆ : ಎರಡು

ಪ್ರವಾಹದಿಂದ ಶೈಕ್ಷಣಿಕ ಮತ್ತು ಧಾರ್ಮಿಕ ಕಾರ್ಯಗಳು ಕುಂಠಿತಗೊಂಡವು.

ದೀರ್ಘಾವಧಿ ಪ್ರವಾಹದ ಕಾರಣ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಯಿತು. ಮೂರು ವಾರಗಳ ವರೆಗೆ ಶಾಲೆಗಳು ಪ್ರಾರಂಭವಾಗಲಿಲ್ಲ. ಮೂರರಿಂದ ಆರು ತಿಂಗಳವರೆಗೆ ಗ್ರಾಮಗಳ ಹೊರಗಡೆ ವಾಸ ಮಾಡಿದ ಪರಿಶಿಷ್ಟ ಜಾತಿಯ ಮಕ್ಕಳು ಶಾಲೆಗಳಿಂದ ದೂರ ಉಳಿಯಬೇಕಾಯಿತು. ಸರ್ಕಾರ ಇದಕ್ಕೆ ಯಾವುದೇ ಕ್ರಮ ಕೈಕೊಳ್ಳಲಿಲ್ಲ ಎಂಬುದು ಕೋಷ್ಟಕ ೫.೩ರಲ್ಲಿ ತಿಳಿದು ಬರುತ್ತದೆ.

ಧಾರ್ಮಿಕ ಕಾರ್ಯಗಳಿಗೂ ತೊಂದರೆಯಾಯಿತು. ಪ್ರವಾಹ ಬಂದು ಹೋಗುವವರೆಗೆ ಪೂಜಾ ಕಾರ್ಯಗಳನ್ನು ನಡೆಸಲು ಸಾಧ್ಯವಾಗಲಿಲ್ಲ ಎಂಬುದು ಕೋಷ್ಠಕ ೫.೬.೨ದಿಂದ ತಿಳಿಯುತ್ತದೆ.

ಪ್ರಾಕಲ್ಪನೆ: ಮೂರು

ಗ್ರಾಮದ ಮುಖಂಡರು/ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಪರಿಹಾರ ಮತ್ತು ಪುನರ್ವಸತಿ ಒದಗಿಸುವಲ್ಲಿ ಯಾವುದೇ ಪಾತ್ರ ನಿರ್ವಹಿಸಿಲ್ಲ.

ಗ್ರಾಮದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ ಗ್ರಾಮದ ಮುಖಂಡರು ಪ್ರಮುಖ ಪಾತ್ರ ವಹಿಸಬೇಕು. ನಿಸ್ವಾರ್ಥದಿಂದ ಗ್ರಾಮದ ತೊಂದರೆಗಳಿಗೆ ಸ್ಪಂಧಿಸುವ ಮುಖಂಡರುಗಳನ್ನು ಹೊಂದಿದ್ದರೆ ಗ್ರಾಮದ ಯಾವುದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಖವಟಕೊಪ್ಪ ಗ್ರಾಮದ ಮುಖಂಡರು ಪರಿಹಾರ ಮತ್ತು ಪುನರ್ವಸತಿ ಒದಗಿಸುವಲ್ಲಿ ಯಾವುದೇ ಪಾತ್ರ ನಿರ್ವಹಿಸಿಲ್ಲ ಎಂಬ ಊಹೆ ನನ್ನದಾಗಿತ್ತು. ಇದು ಕೋಷ್ಠಕ ೬.೧೩ ರಿಂದ ತಿಳಿದು ಬರುತ್ತದೆ. ಪ್ರಾಕಲ್ಪನೆ : ನಾಲ್ಕು

ಪ್ರವಾಹ ಪೀಡಿತ ಜನರಿಗೆ ಸರ್ಕಾರವು ಶಾಶ್ವತ ಪುನರ್ವಸತಿ ಕೇಂದ್ರಗಳನ್ನು ಗುರುತಿಸಿಲ್ಲ.

ಯಾವುದೇ ಯೋಜನೆ ಪೂರ್ಣಗೊಳ್ಳುವ ಆರು ತಿಂಗಳು ಮುಂಚಿತವಾಗಿ ಪುನರ್ವಸತಿ ಒದಗಿಸಬೇಕೆಂಬುದು ಉಚ್ಛ ನ್ಯಾಯಾಲಯ ತಿಳಿಸಿದ್ದರೂ ಸರ್ಕಾರಗಳು ಸಂತ್ರಸ್ತರಿಗೆ ಸ್ಥಳಾಂತರದ ಕುರಿತು ಯಾವುದೇ ಕ್ರಮ ಕೈಕೊಳ್ಳುವುದಿಲ್ಲ. ಹಿಪ್ಪರಗಿ ಅಣೆಕಟ್ಟು ೨೦೦೪ರಲ್ಲಿ ಪೂರ್ಣಗೊಂಡು ನೀರಿನ ಸಂಗ್ರಹಣೆ ಜಾರಿಯಲ್ಲಿದೆ. ಆದರೆ ಇನ್ನೂ ಈ ಯೋಜನೆಯಿಂದ ಮುಳಗಡೆಯಾಗುವ ಗ್ರಾಮಗಳಿಗೆ ಸರ್ಕಾರ ಪುನರ್ವಸತಿ ಒದಗಿಸಿಲ್ಲ ಎಂಬುದನ್ನು ಅಧ್ಯಾಯ ೮ರಲ್ಲಿ ಕಾಣಬಹುದು.

ಪ್ರಾಕಲ್ಪನೆ :ಐದು

ಪ್ರವಾಹ ಪೀಡಿತ ಜನರಿಗೆ ಸರಕಾರದ ಶಾಶ್ವತ ಪರಿಹಾರ ಧನ ಇನ್ನೂ ಸರಿಯಾಗಿ ದೊರೆತಿಲ್ಲ.

ಗ್ರಾಮವನ್ನು ಶಾಶ್ವತವಾಗಿ ಸ್ಥಳಾಂತರಿಸಲು ಸರಕಾರ ಮನೆಗಳ ಸಮೀಕ್ಷೆ ಕಾರ್ಯವನ್ನು ನಡೆಸಿದ್ದು, ಮನೆಗಳಿಗೆ ದೊರೆಯುವ ಶಾಶ್ವತ ಪರಿಹಾರ ಇನ್ನೂ ಸಂತ್ರಸ್ತರಿಗೆ ದೊರೆತಿಲ್ಲ ಎಂಬುದು ನನ್ನ ಊಹೆಯಾಗಿತ್ತು. ನನ್ನ ಊಹೆ ಸರಿ ಎಂಬುದನ್ನು ಅಧ್ಯಾಯ ೮ರಲ್ಲಿ ಕಂಡುಕೊಳ್ಳಬಹುದು.

ಪ್ರಾಕಲ್ಪನೆ : ಆರು

ಪ್ರವಾಹ ಸಂಬಂಧಿತ ಸಮಸ್ಯೆಗಳಿಗೆಲ್ಲ ಸರಕಾರವೇ ಪರಿಹಾರ ದೊರಕಿಸಬೇಕೆಂಬ ಜನಸಾಮಾನ್ಯರ ಮನೋಭಾವ.

ಪ್ರವಾಹದಿಂದ ದೇವಾಲಯಗಳ ಕಟ್ಟಡಕ್ಕೆ ಪರಿಣಾಮ ಬೀರಿತ್ತು. ಗ್ರಾಮದಲ್ಲಿ ಸವಳು–ಜವಳು ಪ್ರಮಾಣ ಹೆಚ್ಚಳವಾಗುತ್ತಿದೆ. ಇವುಗಳನ್ನು ಸರಿಪಡಿಸುವುದಕ್ಕೆ ಜನರು ಸರಕಾರವನ್ನು ಅವಲಂಭಿಸುತ್ತಿರುವುದು ತಿಳಿಯುತ್ತದೆ. ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರಕಾರವನ್ನು ಒತ್ತಾಯಿಸುತ್ತಿರುವುದು ಕೋಷ್ಟಕ ೫.೬.೧ರಲ್ಲಿ ಕಂಡುಕೊಂಡರೆ, ಸವಳು–ಜವಳು ತೆಗೆಯಲು ಸರಕಾರ ಯಾವುದೇ ಯೋಜನೆ ಹಾಕಿಕೊಂಡಿಲ್ಲ ಎಂಬುದು ಕೋಷ್ಟಕ ೬.೧೬ರಲ್ಲಿ ಕಂಡುಕೊಳ್ಳಬಹುದು.

ಪ್ರಾಕಲ್ಪನೆ : ಏಳು

ಸರಕಾರ ಸಮೀಕ್ಷೆ ಮಾಡಿದಷ್ಟು ಕ್ಷೇತ್ರ ಮುಳಗಡೆ ಆಗಿಲ್ಲವೆಂಬ ರೈತರ/ಸರಕಾರದ ನಂಬಿಕೆ.

ಗ್ರಾಮದ ಸ್ಥಳಾಂತರ ಮತ್ತು ಪುನರ್ವಸತಿ ಕುರಿತು ರೈತರ ಮತ್ತು ಸರಕಾರದ ಅನಿಸಿಕೆಗಳು ಮೇಲಿನಂತೆ ಇರುವುದನ್ನು ಅಧ್ಯಯನದುದ್ದಕ್ಕೂ ಕಂಡುಕೊಳ್ಳಲಾಗಿದೆ.

೧೦.೪ ಪ್ರಮುಖವಾದ ಸಲಹೆಗಳು

ಅಧ್ಯಯನದಲ್ಲಿ ಕಂಡುಕೊಂಡ ಸಮಸ್ಯೆಗಳನ್ನು ಅವಲೋಕಿಸಿದ ನಂತರ ಪ್ರವಾಹದಿಂದಾಗುವ ಸಮಸ್ಯೆಗಳನ್ನು ಮಿತಗೊಳಿಸಲು ಇಲ್ಲವೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕೆಲವೊಂದು ಸಲಹೆಗಳನ್ನು ನೀಡಲಾಗಿದೆ. ಇದೊಂದು ಸಂಕೀರ್ಣವಾದ ಸಮಸ್ಯೆಯಾಗಿದ್ದು ಇದಕ್ಕೆ ಪರಿಹಾರ ಕಂಡುಕೊಳ್ಳಲು ಸರಕಾರಕ್ಕೆ, ಅಧಿಕಾರಿಗಳಿಗೆ ಮತ್ತು ವ್ಯಕ್ತಿಗಳಿಗೆ ಕೆಲವೊಂದು ಪ್ರಮುಖ ಸಲಹೆಗಳನ್ನು ನೀಡಲಾಗಿದೆ. ಕೆಲವೊಂದು ಪ್ರವಾಹ ಪೂರ್ವ ಮತ್ತು ನಂತರ ತೆಗೆದುಕೊಳ್ಳುವ ತಾತ್ಕಾಲಿಕ ಕ್ರಮಗಳಾಗಿದ್ದರೆ ಇನ್ನೂ ಕೆಲವೊಂದು ಸರಕಾರ ಕೈಗೊಳ್ಳಬಹುದಾದ ಶಾಶ್ವತ ಕ್ರಮಗಳನ್ನು ಸೂಚಿಸಲಾಗಿದೆ. ಅವುಗಳನ್ನು

೧) ಮುನ್ನೆಚ್ಚರಿಕೆ ಕ್ರಮಗಳು

೨) ಪ್ರವಾಹ ಸಂದರ್ಭದಲ್ಲಿಯ ಕ್ರಮಗಳು

೩) ಪ್ರವಾಹ ನಂತರದ ಕ್ರಮಗಳು

೪) ಪುನರ್ವಸತಿ ಕ್ರಮಗಳಾಗಿ ವಿಂಗಡಿಸಲಾಗಿದೆ

೧೦.೪.೧)ಮುನ್ನೆಚ್ಚರಿಕೆ ಕ್ರಮಗಳು :

ಅಧ್ಯಯನ ಸಂದರ್ಭದಲ್ಲಿ ಗ್ರಾಮದ ಜನರು ಸೂಚಿಸಿದ ಕೆಲವೊಂದು ಮುನ್ನೆಚ್ಚರಿಕೆ ಕ್ರಮಗಳು:

೧) ಕೃಷ್ಣಾ ನದಿ ಅಂತರ್‌ರಾಜ್ಯ ನದಿಯಾಗಿರುವುದರಿಂದ ಮಳೆಗಾಲದಲ್ಲಿ ಜಲಾನಯನ ಪ್ರದೇಶಗಳಲ್ಲಿಯ ನದಿಯ ನೀರಿನ ಹರಿವು, ಪ್ರವಾಹದ ಮುನ್ಸೂಚನೆ, ಎಚ್ಚರಿಕೆಗಳನ್ನು ನೀಡುವಾಗ ಎರಡು ರಾಜ್ಯಗಳ ಮಧ್ಯೆ ಮಾಹಿತಿ ವಿನಿಮಯವಾಗುತ್ತಿರುವಂತೆ ಕ್ರಮಕೈಗೊಳ್ಳುವುದು.

೨) ರಾಜ್ಯಗಳ ಅಣೆಕಟ್ಟುಗಳಲ್ಲಿಯ ನೀರಿನ ಸಂಗ್ರಹ, ಬಿಡುಗಡೆ ಮುಂತಾದ ಕಾರ್ಯಗಳ ಮೇಲೆ ಕೇಂದ್ರ ಸರಕಾರ ನಿಗಾವಹಿಸುವುದು.

೩) ಎರಡೂ ರಾಜ್ಯಗಳಿಗೆ ಅನ್ವಯವಾಗುವ ಒಪ್ಪಿಕೊಳ್ಳುವ ರೀತಿಯಲ್ಲಿ ಕಾನೂನುಗಳು ಜಾರಿಯಾಗುವುದು.

೪) ಪ್ರವಾಹ ಮಾಹಿತಿ ಕೇಂದ್ರಗಳನ್ನು ಹೆಚ್ಚಿಸುವುದು.

